₹ 6 @vishwavaninews epaper.vishwavani.news vishwavani.news ಬೆಂಗಳೂರು । ಹುಬ್ಬಳ್ಳಿ । ಮಂಗಳೂರು । ದಾವಣಗೆರೆ । ಕಲಬುರಗಿ । ಬೆಳಗಾವಿ ಬುಧವಾರ 05.11.2025 ಸಂಪುಟ: 10 ಸಂಚಿಕೆ: 294 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಭಾರತೀಯ ಸೇನೆ ಮತ್ತು ದೇಶದ ಉನ್ನತ ಹುದ್ದೆಗಳು ಕೇವಲ ಶೇ. 10 ರಷ್ಟು ಜನರಿಂದ ನಿಯಂತ್ರಿಸಲ್ಪಡುತ್ತಿವೆ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಬಿಹಾರ ಚುನಾವಣಾ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕ ನೀಡಿರುವ ಈ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಇದು ದೇಶವನ್ನು ವಿಭಜಿಸುವ ಹೇಳಿಕೆ ಎಂದು ಬಿಜೆಪಿ ಖಂಡಿಸಿದೆ.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 05.11.2025 ಸಂಪುಟ: 10 ಸಂಚಿಕೆ: 294 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ರಣಜಿ: ಕರ್ನಾಟಕಕ್ಕೆ ಗೆಲುವಿನ ಬೋನಸ್

ಮಾಯಾಂಕ್ ಅಗರ್ವಾಲ್ ನಾಯಕತ್ವದ ಕರ್ನಾಟಕ ತಂಡವು ಮಂಗಳವಾರ ತಿರುವನಂತಪುರದಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ಕೇರಳವನ್ನು ಇನ್ನಿಂಗ್ಸ್ ಮತ್ತು 164 ರನ್‌ಗಳಿಂದ ಮಣಿಸಿ ಬೋನಸ್ ಅಂಕದೊಂದಿಗೆ ಗೆಲುವು ಸಾಧಿಸಿದೆ. ರಾಜ್ಯದ ಪರ ಮೊಹ್ಸಿನ್ ಖಾನ್ 6 ವಿಕೆಟ್ ಪಡೆದು ಮಿಂಚಿದರು.

ಸೊಂಪಾದ ಪುಟಗಳು

ಬಿಹಾರ ಜೆಡಿಯು ಕಚೇರಿಯೊಳಗೆ ಕಾಪುವಿನ ಹುಡುಗ!

ಜನಪಥ
ರಾಘವ ಶರ್ಮ ನಿಡ್ಲೆ 6

ವೀರಪ್ಪನ್ ಬದುಕಿದ್ದರೆ ಹೀಗೆ ಆಗುತ್ತಿರಲಿಲ್ಲವಂತೆ.... !

ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ



ನಿಮ್ಮ ಮಿದುಳು ಎಂಬುದು ನೀರಿನ ಟ್ಯಾಂಕ್ ಇದ್ದಂತೆ. ಅದರೊಳಗೆ ನೀರಿದ್ದರೆ ಮಾತ್ರ ನಲ್ಲಿ ತಿರುಗಿಸಿದಾಕ್ಷಣ ನೀರು ಬೀಳುತ್ತದೆ. ನಮ್ಮ ಮಿದುಳಿನಲ್ಲಿ ಉತ್ತಮ ವಿಚಾರ, ಜ್ಞಾನವನ್ನು ತುಂಬಿಕೊಂಡರೆ ಮಾತ್ರ ಅದು ಹೊರಬರುತ್ತದೆ. ಬ್ಯಾಂಕಿನಲ್ಲಿ ಡೆಪಾಸಿಟ್ ಇದ್ದರೆ ಮಾತ್ರ ಹಣ ತೆಗೆಯಬಹುದು

ವಕ್ರತುಂಡೋಕ್ತಿ



ನೀವು ನಿಮ್ಮ ಹತ್ತು ಪಾಸ್ ವರ್ಡ್ ಗಳನ್ನು ಸರಿಯಾಗಿ ನೆನಪಿಟ್ಟುಕೊಂಡಿದ್ದೀರಿ ಅಂದ್ರೆ ನಿಮ್ಮ ಜ್ಞಾಪಕಶಕ್ತಿ ಚೆನ್ನಾಗಿದೆ ಎನ್ನಬಹುದು.

ಒಲಿಂಪಿಕ್ಸ್ ಸಿದ್ಧತೆ: 10 ಲಕ್ಷ ರು. ನೆರವು

ಬೆಂಗಳೂರು: 2028ರ ಲಾಸ್ ಏಂಜಲೀಸ್ ಒಲಿಂಪಿಕ್ ಗಮನದಲ್ಲಿಟ್ಟುಕೊಂಡು, ರಾಜ್ಯ ಸರಕಾರವು ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ಒಲಿಂಪಿಕ್ ಪದಕ ಯೋಜನೆಯನ್ನು ಪ್ರಾರಂಭಿಸಿದೆ. ಈ ಯೋಜನೆಯಡಿ 60 ಕ್ರೀಡಾಪಟುಗಳನ್ನು ಗುರುತಿಸಿ ಪ್ರತಿ ಯೊಬ್ಬರಿಗೂ 3 ವರ್ಷಗಳ ವರೆಗೆ ಪ್ರತಿ ವರ್ಷ 10 ಲಕ್ಷ ರು. ಹಣವನ್ನು ಯುವಜನ ಕ್ರೀಡಾ ಇಲಾಖೆಯಿಂದ ನೀಡಲಾಗುತ್ತದೆ. ಈ ಯೋಜನೆಗೆ ಒಟ್ಟು 6 ಕೋಟಿ ರು. ಅನುದಾನ ಮೀಸಲಿಡಲಾಗಿದೆ. ಹೊಸ ಮಾರ್ಗಸೂಚಿಗಳ ಪ್ರಕಾರ, ಕ್ರೀಡಾಪಟು ಗಳು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು.

ಜಾಗತಿಕ ಪ್ರಭಾವಿಗಳ ಪಟ್ಟಿಯಲ್ಲಿ ಜೋಶಿ

ಬೆಂಗಳೂರು: ಜಗತ್ತಿನಲ್ಲಿ ಹವಾಮಾನ ಸುಸ್ಥಿರತೆ ವಿಷಯದಲ್ಲಿ ಅಂತಾರಾಷ್ಟ್ರೀಯ ನಿಯತಕಾಲಿಕೆ ಟೈಮ್ ಸಿದ್ಧಪಡಿಸಿರುವ

ನೂರು ಪ್ರಭಾವಿಗಳ ಪಟ್ಟಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಥಾನ ಪಡೆದಿದ್ದಾರೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಎನ್ನುವ ದಾಖಲೆ ಯನ್ನು ಜೋಶಿ ಅವರು ನಿರ್ಮಿಸಿದ್ದಾರೆ. ವಿಶ್ವದ ಹವಾಮಾನ ಬದಲಾವಣೆ ತಡೆದು ಸುಸ್ಥಿರತೆ ಕಾಪಾಡುತ್ತಿರುವವರ ಕುರಿತು ಟೈಮ್ ಸಿದ್ಧಪಡಿಸಿರುವ ಈ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ವಿಶ್ವಪ್ರಸಿದ್ಧರ ಪಟ್ಟಿಯಲ್ಲಿ ಸಚಿವ ಜೋಶಿ ಸ್ಥಾನ ಪಡೆದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಟನ್ ಕಬ್ಬಿನ ಬೆಲೆ 3500 ರು. ನಿಗದಿಗೆ ಆಗ್ರಹ | ಬೆಳಗಾವಿ, ವಿಜಯಪುರ ಸೇರಿ ಉತ್ತರ ಕರ್ನಾಟಕದಲ್ಲಿ ಹೆದ್ದಾರಿ ತಡೆ, ಬಂದ್ | ಬಿಜೆಪಿ ನಾಯಕ ಬಿವೈವಿ ಹೋರಾಟದಲ್ಲಿ ಭಾಗಿ

ಕಬ್ಬಿಗರ ಆಕ್ರೋಶ ತೀವ್ರ

ಬೆಂಗಳೂರು/ಬೆಳಗಾವಿ/ವಿಜಯಪುರ: ಪ್ರಸ್ತುತ 1 ಟನ್ ಕಬ್ಬಿಗಿರುವ 3150 ರು. ಬೆಲೆಯನ್ನು 3500 ರು.ಗೇರಿಸಬೇಕೆಂದು ಕಬ್ಬು ಕಾರ್ಖಾನೆಗಳು ಹಾಗೂ ರಾಜ್ಯ ಸರಕಾರದ ವಿರುದ್ಧ ಬೆಳೆಗಾರರು ನಡೆಸುತ್ತಿರುವ ಹೋರಾಟ ಮಂಗಳವಾರ 6ನೇ ದಿನಕ್ಕೆ ಕಾಲಿಟ್ಟಿದೆ. ಸೋಮವಾರ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ ಮೇಲೆ ರೈತರು ಕಲ್ಲು ತೂರಾಟ ನಡೆಸಿದ್ದರು. ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಗುರ್ಲಾಪುರದಲ್ಲಿ ರೈತರೊಬ್ಬರು ವಿಷ ಸೇವಿಸಿ ಆಸ್ಪತ್ರೆಗೆ ದಾಖಲಾಗಿದ್ದರು. ಇದರ ನಂತರ ಪ್ರತಿಭಟನೆ ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿದೆ. ಗುರ್ಲಾಪುರದಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ಮಂಗಳವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜೇಯಂದ್ರ, ಭಾಗವಹಿಸಿ, ರೈತರಿಗೆ ಬೆಂಬಲ ನೀಡಿದ್ದಾರೆ.

ಮಾಜಿ ಸಚಿವ ಎಚ್.ವೈ.ಮೇಟಿ ನಿಧನದ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಮಂಗಳವಾರ ಪ್ರತಿಭಟನೆ ನಡೆದಿಲ್ಲ ಎನ್ನಲಾಗಿದೆ. ಆದರೆ ಬೆಳಗಾವಿಯ ಜಿಲ್ಲೆಯ ಬಹುತೇಕ ತಾಲೂಕುಗಳಿಗೆ ಪ್ರತಿಭಟನೆ ವ್ಯಾಪಿಸಿದೆ. ಬೆಳಗಾವಿ ನಗರದ ಚನ್ನಮ್ಮ ವೃತ್ತದಲ್ಲಿ ನ್ಯಾಯವಾದಿಗಳು ಮಾನವ ಸರಪಳಿ ನಿರ್ಮಿಸಿ ರೈತರಿಗೆ ಬೆಂಬಲ ಘೋಷಿಸಿದ್ದಾರೆ. ಅಥಣಿ ತಾಲೂಕಿನಲ್ಲಿ ಕನ್ನಡಪರ ಸಂಘಟನೆಗಳು ರೈತರನ್ನು ಬೆಂಬಲಿಸಿ ಪಟ್ಟಣ ಬಂದ್ ಮಾಡಿದ್ದು ವಾಹನ ಸಂಚಾರ ಸ್ಥಗಿತಗೊಂಡಿದೆ.

ಗೋಕಾಕ್ ಅಥಣಿ ರಸ್ತೆ ವಿವಿಧ ಸ್ಥಳಗಳಲ್ಲಿ ಬಂದ್ ಮಾಡಲಾಗಿದೆ. ದರೂರ ಸೇತುವೆ ಮೇಲಿನ ಸಂಚಾರ ಬಂದ್ ಮಾಡಿ ರೈತರು ಪ್ರತಿಭಟನೆ ನಡೆಸುತ್ತಿದ್ದು ವಾಹನ ಸವಾರರು ಕಂಗಾಲಾಗಿದ್ದಾರೆ. ಅಷ್ಟೇ ಅಲ್ಲದೆ ಬೈಲಹೊಂಗಲ, ಸವದತ್ತಿ, ಯರಗಟ್ಟಿ, ಹುಕ್ಕೇರಿ, ಗೋಕಾಕ್, ರಾಮದುರ್ಗ ಸೇರಿದಂತೆ ಬೆಳಗಾವಿಗೆ ಹೊಂದಿ ಕೊಂಡ ಉತ್ತರ ಕನ್ನಡ, ವಿಜಯಪುರ, ಬಾಗಲ ಕೋಟೆ ಗಡಿ ಭಾಗದಲ್ಲಿ ರೈತರ ಪ್ರತಿಭಟನೆ ಕಿಚ್ಚು ವ್ಯಾಪಿಸಿದೆ. ಇನ್ನು ಅಥಣಿಯಲ್ಲಿ ಪ್ರತಿಭಟನೆ ನಡೆಸಿದ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಮಹಾದೇವ ಮಡಿವಾಳ, ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಶಾಲಾಕಾಲೇಜುಗಳಿಗೆ ರಜೆ: ರೈತರ ಪ್ರತಿಭಟನೆ ಹಿನ್ನಲೆಯಲ್ಲಿ ಕೆಲವು ಕಡೆ ಹೆದ್ದಾರಿ ಬಂದ್ ಆಗಿರುವ ಕಾರಣ ಬೆಳಗಾವಿಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಬುಧವಾರ ಪರಿಸ್ಥಿತಿ ನೋಡಿಕೊಂಡು ತರಗತಿಗಳನ್ನು ಪ್ರಾರಂಭಿಸು ವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.

ಕಬ್ಬು ಬೆಳೆಗಾರರ ಸಮಸ್ಯೆ ಬಗೆಹರಿಸಲು ತ್ವರಿತ ಕ್ರಮ ಕೈಗೊಳ್ಳುವಂತೆ ಸಕ್ಕರೆ ಸಚಿವ ಶಿವಾನಂದ ಪಾಟೀಲ್‌ಗೆ ತಿಳಿಸಲಾಗಿದೆ. ದರ ನಿಗದಿಗೆ ಸಂಬಂಧಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಪರಿಸ್ಥಿತಿ ಬಿಗಡಾಯಿಸಿದರೆ ಪೊಲೀಸ್ ಇಲಾಖೆಗೆ ಸವಾಲಿನ ಪರಿಸ್ಥಿತಿ ಎದುರಾಗಬಹುದು.

-ಡಾ.ಜಿ.ಪರಮೇಶ್ವರ್, ಗೃಹಸಚಿವ

ರೈತರು ಮಾಡುತ್ತಿರುವ ಪ್ರತಿಭಟನೆ ಗಮನಕ್ಕೆ ಇದೆ. ಡಿಸಿ ಅವರು ರೈತರ ಜತೆ ನಿರಂತರ ಸಂಪರ್ಕದಲ್ಲಿ ಇದ್ದಾರೆ. ಅವಶ್ಯಕತೆ ಬಿದ್ದರೆ ನಾವು ಹೋಗಿ ಭೇಟಿ ಮಾಡುತ್ತೇವೆ. ನಮ್ಮ ಪರವಾಗಿ ಜಿಲ್ಲಾಧಿಕಾರಿ ಭೇಟಿ ಮಾಡುತ್ತಿದ್ದಾರೆ.

-ಸತೀಶ್ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ಬೇಡಿಕೆಗಳೇನು?

1. ಮಹಾರಾಷ್ಟ್ರದಲ್ಲಿ ಟನ್ ಕಬ್ಬಿಗೆ 3600 ರು. ಬೆಲೆಯಿದೆ. ಅದೇ ಮಾದರಿಯಲ್ಲಿ ರಾಜ್ಯದಲ್ಲೂ ಬೆಲೆ ಹೆಚ್ಚಳವಾಗಬೇಕು
2. ಕಬ್ಬಿನ ಕಾರ್ಖಾನೆಗಳೇ ಸ್ವತಃ ಕಬ್ಬನ್ನು ಕಟಾವು ಮಾಡಿಕೊಳ್ಳಬೇಕು: ರೈತರ ಆಗ್ರಹ
3. ಕಾರ್ಖಾನೆಯಲ್ಲಿನ ಡಿಜಿಟಲ್ ತೂಕ ಯಂತ್ರದಲ್ಲಾಗುತ್ತಿರುವ ಮೋಸ ನಿಲ್ಲಬೇಕು
4. ಕಬ್ಬನ್ನು ನುರಿದಾಗ ಸಿಗುವ ಉಪ ಉತ್ಪನ್ನಗಳಲ್ಲೂ ರೈತರಿಗೆ ಸೂಕ್ತ ಹಣ ಸಿಗಬೇಕು
5. ಕಬ್ಬು ಹಂಗಾಮು ಆರಂಭಕ್ಕೆ ಮುನ್ನವೇ ಸೂಕ್ತ ದರ ನಿಗದಿಯಾಗಬೇಕು
6. ರೈತರಿಗೆ ಸರಕಾರದಿಂದ ಅಗತ್ಯ ನೆರವು ಸಿಗಬೇಕು, ವೈಜ್ಞಾನಿಕ ವ್ಯವಸ್ಥೆ ಬೇಕು

ಸಿಎಂ ಕಗ್ಗಂಟಿನಿಂದ ದೂರವಿರಲು ಹೈ ತೀರ್ಮಾನ ಬೆಂಗಳೂರು ಟೆಕ್ ಶೃಂಗಕ್ಕೂ ಗೈರು ಹಾಜರಿ ಸಾಧ್ಯತೆ

ರಾಜ್ಯಕಾರಣದಿಂದ ರಾಹುಲ್ ಅಂತರ?

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಸಂಪುಟ ಪುನಾರಚನೆ, ನಾಯಕತ್ವ ಬದಲಾವಣೆ ಗೊಂದಲಗಳಿಗೆ ಪರಿಹಾರವಾಗಿ

ರಾಹುಲ್ ಗಾಂಧಿ ಅವರತ್ತ ರಾಜ್ಯ ನಾಯಕರು ನೋಡುತ್ತಿದ್ದಾರೆ. ಆದರೆ ರಾಹುಲ್ ಗಾಂಧಿ ಅವರು ಸದ್ಯಕ್ಕೆ ರಾಜ ರಾಜಕಾರಣದಿಂದ ಅಂತರ ಕಾಯ್ದುಕೊಳ್ಳುತ್ತಿದ್ದಾರೆಯೇ ಎನ್ನುವ ಅನುಮಾನ ಶುರುವಾಗಿದೆ.

ಬಿಹಾರ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿರುವ ರಾಹುಲ್ ಗಾಂಧಿ ಅವರು, ಫಲಿತಾಂಶದ ಬಳಿಕ ಬೆಂಗಳೂರಿಗೆ ಬರಲಿದ್ದಾರೆ ಎನ್ನಲಾಗಿದೆ. ನ.19 ಅಥವಾ 20ರಂದು ಬೆಂಗಳೂರಿನ ಟೆಕ್ ಸಮಿಟ್, ನೂರು ಕಾಂಗ್ರೆಸ್ ಭವನಗಳ ಶಂಕುಸ್ಥಾಪನೆ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎನ್ನಲಾಗಿತ್ತು. ಆದರೆ ರಾಜ್ಯಕ್ಕೆ ಬಂದರೆ ಇಲ್ಲಿರುವ ಗೊಂದಲಗಳಿಗೆ 'ತಾರ್ತಿಕ' ಅಂತ್ಯ ಕಾಣಿಸಬೇಕಾಗುತ್ತದೆ. ಸದ್ಯದ ಪರಿಸ್ಥಿತಿಯಲ್ಲಿ ಸ್ಪಷ್ಟ ತೀರ್ಮಾನಕ್ಕೆ ಬರುವುದು ಕಷ್ಟಸಾಧ್ಯ ಎನ್ನುವ ಕಾರಣಕ್ಕೆ ಅಂತರ ಕಾಯ್ದುಕೊಳ್ಳಲು ತೀರ್ಮಾನಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಹಲವು ಸಚಿವರು ರಾಹುಲ್ ಗಾಂಧಿ ಅವರನ್ನು ಇಲಾಖಾವಾರು ಕಾರ್ಯಕ್ರಮಗಳಿಗೆ ಆಹ್ವಾನಿಸಲು ಉತ್ಸುಕತೆ ತೋರಿದ್ದಾರೆ. ಆದರೆ ರಾಜ್ಯದ ಯಾವುದೇ ಕಾರ್ಯಕ್ರಮದಲ್ಲಿ ಭಾಗ ವಹಿಸಲು ರಾಹುಲ್ ಆಸಕ್ತಿ ತೋರುತ್ತಿಲ್ಲ ಎನ್ನಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕಕ್ಕೆ ರಾಹುಲ್ ಗಾಂಧಿ ಆಗಮಿಸಿದರೆ, ಸಿದ್ದರಾಮಯ್ಯ ಅಥವಾ ಡಿ.ಕೆ.ಶಿವಕುಮಾರ್ ಪರವಾಗಿ ನಿಲ್ಲಬೇಕಾದ ಅನಿವಾರ್ಯತೆ ಸೃಷ್ಟಿಯಾಗುತ್ತದೆ. ಆದರೆ ಕಾಂಗ್ರೆಸ್‌ನ ಈಗಿನ ಪರಿಸ್ಥಿತಿಯಲ್ಲಿ ಇಬ್ಬರಲ್ಲಿ ಯಾರನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

ಸಂದೇಶವೇನು?

- ಬೆಂಗಳೂರಿಗೆ ಬರುವ ಬಗ್ಗೆ ಖಚಿತಪಡಿಸದ ರಾಹುಲ್
- ಬಿಹಾರ ಚುನಾವಣೆವರೆಗೆ ದೆಹಲಿಯತ್ತ ಬರಬೇಡಿ
- ಸಿದ್ದು, ಡಿಕೆಶಿ ಬಿಕ್ಕಟ್ಟಿಗೆ ಕೈಹಾಕದಿರಲು ಲೆಕ್ಕಾಚಾರ?

ದೆಹಲಿಗೆ ಬರಬೇಡಿ ಎಂದ ಹೈಕಮಾಂಡ್?

ಇದರೊಂದಿಗೆ ರಾಜ್ಯ ಕಾಂಗ್ರೆಸ್‌ನ ಹಲವು ನಾಯಕರು ದೆಹಲಿ ಪರೇಡ್ ನಡೆಸಲು ಸಿದ್ಧತೆ ನಡೆಸಿಕೊಂಡಿದ್ದರು. ಆದರೆ ಬಿಹಾರ ಚುನಾವಣೆಯ ಬ್ಯುಸಿಯಲ್ಲಿ ದೆಹಲಿ ನಾಯಕರು ಇರುವುದರಿಂದ ಸದ್ಯ ಯಾರೂ ದೆಹಲಿಗೆ ಬರಬೇಡಿ ಎನ್ನುವ ಸ್ಪಷ್ಟ ಸಂದೇಶವನ್ನು ರವಾನಿಸಿದ್ದಾರೆ. ಈಗಾಗಲೇ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸೋಮವಾರ ದೆಹಲಿ ಭೇಟಿಗೆ ಮುಂದಾಗಿದ್ದರು. ಅಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಭೇಟಿಗೆ ಸಮಯ ಕೇಳಿದರು. ಆದರೆ ಎಲ್ಲಾ ನಾಯಕರು ಬಿಹಾರ ಚುನಾವಣೆಯಲ್ಲಿ ತೊಡಗಿಸಿಕೊಂಡಿದ್ದು ಭೇಟಿಗೆ ಸಮಯವಿಲ್ಲ ಎಂದು ಹೈಕಮಾಂಡ್ ಸಂದೇಶ ರವಾನಿಸಿದೆ.

ಶಾಸಕ ಮೇಟಿ ನಿಧನ

ಬೆಂಗಳೂರು: ಮಾಜಿ ಸಚಿವ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ವೈ.ಮೇಟಿ (79)

ಬೆಂಗಳೂರಿನಲ್ಲಿ ಮಂಗಳವಾರ ಕೊನೆಯುಸಿರೆಳೆದಿದ್ದಾರೆ. ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದ ಮೇಟಿ ಅವರು ಚಿಕಿತ್ಸೆ ಫಲಕಾರಿಯಾಗದೇ ನಿಧನ ಹೊಂದಿದ್ದಾರೆ. ಮೇಟಿ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಶಿವರಾಜ ತಂಗಡಗಿ, ಶಿವಾನಂದ ಪಾಟೀಲ್, ಎಂ.ಬಿ. ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ನ.7ಕ್ಕೆ ಹಾಕಿ ಉತ್ಸವ

ದೆಹಲಿ: 1925, ನ.7ರಂದು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ ಭಾರತ ಹಾಕಿ ಒಕ್ಕೂಟ (ಐಎಚ್‌ಎಫ್) ಆರಂಭವಾಗಿ

ಶುಕ್ರವಾರಕ್ಕೆ (ನ.7) 100 ವರ್ಷವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಹಾಕಿ ಇಂಡಿಯಾ ಸಂಸ್ಥೆಯೊಂದಿಗೆ ಸೇರಿ ದೇಶಾದ್ಯಂತ ಹಾಕಿ ಶತಮಾನೋತ್ಸವ ಆಚರಿಸಲಿದೆ. ದೆಹಲಿಯ ಧ್ಯಾನ್‌ಚಂದ್ ಹಾಕಿ ಮೈದಾನದಲ್ಲಿ ದಿನಪೂರ್ತಿ ಕಾರ್ಯಕ್ರಮಗಳು ನಡೆಯಲಿವೆ. ದೇಶದ 550ಕ್ಕೂ ಅಧಿಕ ಜಿಲ್ಲೆಗಳಲ್ಲಿ ಪುರುಷ-ಮಹಿಳಾ ತಂಡಗಳ ನಡುವೆ ಪ್ರತ್ಯೇಕವಾಗಿ 1400ಕ್ಕೂ ಅಧಿಕ ಹಾಕಿ ಪಂದ್ಯಗಳು ನಡೆಯಲಿವೆ. 36000ಕ್ಕೂ ಅಧಿಕ ಆಟಗಾರರು ಪಾಲ್ಗೊಳ್ಳಲಿದ್ದಾರೆ.

ರೈಲು ಡಿಕ್ಕಿ: 6 ಸಾವು

ಬಿಲಾಸ್‌ಪುರ: ಛತ್ತೀಸ್‌ಗಢದ ಬಿಲಾಸ್‌ಪುರ ಜಿಲ್ಲೆಯ ಬಿಲಾಸ್‌ಪುರ-ಕಟ್ನಿ ವಿಭಾಗದ ಲಾಲ್ ಖಾದನ್ ಪ್ರದೇಶದ

ಬಳಿ ನಿಲುಗಡೆಯಾಗಿದ್ದ ಸರಕು ಸಾಗಣೆ (ಗೂಡ್ಸ್) ರೈಲಿಗೆ ಅದೇ ಮಾರ್ಗದಲ್ಲಿ ವೇಗವಾಗಿ ಸಾಗಿಬಂದ 'ಕೋರ್ಬಾ ಪ್ಯಾಸೆಂಜರ್' ರೈಲು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಸಾವಿಗೀಡಾಗಿದ್ದಾರೆ. 20 ಕ್ಕೂ ಹೆಚ್ಚು ಮಂದಿಗೆ ಗಾಯಗೊಂಡಿದ್ದಾರೆ ಎಂದು ಬಿಲಾಸ್‌ಪುರ ಪೊಲೀಸ್ ವರಿಷ್ಠಾಧಿಕಾರಿ ರಜನೀಶ್ ಸಿಂಗ್ ದೃಢಪಡಿಸಿದ್ದಾರೆ. ಎರಡೂ ರೈಲು ಗಾಡಿಗಳ ಮುಖಾಮುಖಿ ಡಿಕ್ಕಿಯ ರಭಸಕ್ಕೆ ಪ್ಯಾಸೆಂಜರ್ ರೈಲಿನ ಮುಂಭಾಗದ 2 ಬೋಗಿಗಳು ಗೂಡ್ಸ್ ರೈಲಿನ ಬೋಗಿಗಳ ಮೇಲೇರಿವೆ.

ಹಿಂದುಜಾ ಅಧ್ಯಕ್ಷ ನಿಧನ

ನವದೆಹಲಿ: ಹಿಂದುಜಾ ಸಮೂಹದ ಅಧ್ಯಕ್ಷ, ಬ್ರಿಟನ್ನಿನ ಶ್ರೀಮಂತ ಉದ್ಯಮಿಗಳಲ್ಲೊಬ್ಬರಾಗಿದ್ದ ಗೋಪಿಚಂದ್ ಪಿ.



ಹಿಂದುಜಾ ಲಂಡನ್ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು. ಹಿಂದುಜಾ 1950ರಲ್ಲಿ ಕುಟುಂಬ ವ್ಯವಹಾರಕ್ಕೆ ಸೇರಿದರು. ಇಂಡೋ-ಮಧ್ಯಪ್ರಾಚ್ಯ ವ್ಯಾಪಾರ ಕಾರ್ಯಾಚರಣೆಯಿಂದ ಕಂಪನಿಯನ್ನು ಅಂತಾರಾಷ್ಟ್ರೀಯ ಸಂಸ್ಥೆಯಾಗಿ ಪರಿವರ್ತಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಬಾಂಬೆ ಜೈ ಹಿಂದ್ ಕಾಲೇಜಿನಿಂದ ಪದವಿ ಪಡೆದ ಗೋಪಿಚಂದ್, ಹಲವು ವಾರಗಳಿಂದ ಅನಾರೋಗ್ಯಕ್ಕೊಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

30ಕ್ಕೆ ಕೆಎಸ್‌ಸಿಎ ಚುನಾವಣೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಚುನಾವಣೆ ನ.30ಕ್ಕೆ ನಡೆಯಲಿದೆ. 2025-28ರ ಅವಧಿಗೆ ಪದಾಧಿಕಾರಿಗಳ ಆಯ್ಕೆಯಾಗಲಿದೆ. ನಾಮಪತ್ರ ಸಲ್ಲಿಕೆ ನವೆಂಬರ್ 12ರಂದು ಆರಂಭವಾಗಲಿದ್ದು, ನ.15 ಅಂತಿಮ ದಿನವಾಗಿದೆ. ನ.17ಕ್ಕೆ ಸ್ವೀಕೃತ ನಾಮಪತ್ರಗಳ ಪಟ್ಟಿ ಪ್ರಕಟವಾಗಲಿದೆ. ಬಿಸಿಸಿಐಯಲ್ಲಿ ಪ್ರಸ್ತುತ ಖಜಾಂಚಿಯಾಗಿರುವ ರಘುರಾಮ್ ಭಟ್ ನೇತೃತ್ವದ ಆಡಳಿತ ಮಂಡಳಿಯ ಅಧಿಕಾರಾವಧಿ ಸೆ.30ರಂದು ಕೊನೆಗೊಂಡಿತ್ತು. ಈ ಹಿನ್ನೆಲೆಯಲ್ಲಿ ನೂತನ ಅಧ್ಯಕ್ಷ, ಕಾರ್ಯದರ್ಶಿಗಳ ಆಯ್ಕೆ ನಡೆಯಲಿದೆ.

ಧಾರವಾಡ ಪೀಠದಲ್ಲಿ ಸರಕಾರದ ಅಪೀಲು ವಿಚಾರಣೆ

ಸಂಘ ಪಥ: ತೀರ್ಪು ಮೀಸಲು

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಖಾಸಗಿ ಸಂಸ್ಥೆಗಳು ಯಾವುದೇ ಚಟುವಟಿಕೆ ನಡೆಸುವ ಮುನ್ನಾ ಪೂರ್ವಾನುಮತಿ ಪಡೆಯುವುದರ ಸಂಬಂಧ ತೀರ್ಪನ್ನು ಹೈಕೋರ್ಟ್‌ನ ಧಾರವಾಡ ವಿಭಾಗೀಯ ಪೀಠ ಕಾಯ್ದಿರಿಸಿದೆ. ಪೂರ್ವಾನುಮತಿ ಪಡೆದೇ ಖಾಸಗಿ ಸಂಸ್ಥೆಗಳು ಮೆರವಣಿಗೆ, ಪಥಸಂಚಲನದಂತಹ ಕಾರ್ಯಕ್ರಮಗಳನ್ನು ನಡೆಸಬೇಕೆಂದು ರಾಜ್ಯ ಸರಕಾರ ಆದೇಶಿಸಿತ್ತು. ಇದನ್ನು ಏಕಸದಸ್ಯ ಪೀಠ ರದ್ದು ಮಾಡಿತ್ತು. ಇದರ ವಿರುದ್ಧ ರಾಜ್ಯ ಸರಕಾರ ಮೇಲ್ಮನವಿ ಸಲ್ಲಿಸಿತ್ತು.

ಈ ಆದೇಶದಲ್ಲಿ ನಿರ್ದಿಷ್ಟವಾಗಿ ಆರ್‌ಎಸ್‌ಎಸ್ ಎಂದು ಹೇಳದಿದ್ದರೂ, ಆದೇಶದ ನಿಬಂಧನೆಗಳು ಅದರ ಪಥ ಸಂಚಲನ ಸೇರಿದಂತೆ ಹಿಂದೂ ಬಲಪಂಥೀಯ ಸಂಘಟನೆಯ ಚಟುವಟಿಕೆಗಳ ಮೇಲೆ ಪರಿಣಾಮ ಬೀರುವ ಗುರಿ ಹೊಂದಿವೆ. ಸರಕಾರದ ನಿಲುವು ನಾಗರಿಕರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಅಕ್ಟೋಬರ್ 28ರಂದು ಹೊರಡಿಸಿದ ಮಧ್ಯಂತರ ಆದೇಶದಲ್ಲಿ ಏಕಸದಸ್ಯ ಪೀಠದ ನ್ಯಾಯಾಧೀಶರು ಹೇಳಿದ್ದರು.

ಚಿತ್ತಾಪುರ: ಇಂದು ಶಾಂತಿಸಭೆ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿರುವ ಚಿತ್ತಾಪುರದ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಬುಧವಾರ ನಿರ್ಣಾಯಕ ದಿನವಾಗಿದ್ದು, ಹೈಕೋರ್ಟ್ ಸೂಚನೆಯಂತೆ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಎರಡನೇ ಶಾಂತಿ ಸಭೆ ನಡೆಯಲಿದೆ. ಚಿತ್ತಾಪುರದಲ್ಲಿ ಪಥಸಂಚಲನಕ್ಕೆ ಅನುಮತಿ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳುವ ನಿಟ್ಟಿನಲ್ಲಿ ಈ ಸಭೆ ಅತ್ಯಂತ ಮಹತ್ವ ಪಡೆದಿದೆ.

ಭಾರೀ ಗೊಂದಲಕ್ಕೆ ಕಾರಣವಾಗಿದ್ದ ಆರ್‌ಎಸ್‌ಎಸ್ ಪಥ ಸಂಚಲನ ಯಾದಗಿರಿ ಜಿಲ್ಲೆಯ ಕೆಂಭಾವಿಯಲ್ಲಿ ಮಂಗಳವಾರ ಸುಸೂತ್ರವಾಗಿ ನಡೆಯಿತು. 800ಕ್ಕೂ ಅಧಿಕ ಸ್ವಯಂಸೇವಕರು ದಂಡ ಹಿಡಿದು ಗಣವೇಷದಲ್ಲಿ 4 ಕಿಮೀ ಕ್ರಮಿಸಿದರು.

ರೇಣುಕಾ ಹತ್ಯೆ: ಸುಪ್ರೀಂಗೆ ಪವಿತ್ರಾ ಅರ್ಜಿ

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾಮೀನು ರದ್ದುಗೊಳಿಸಿರುವ ಸರ್ವೋಚ್ಚ ನ್ಯಾಯಾಲಯ ತನ್ನ ತೀರ್ಪನ್ನು ಮರು ಪರಿಶೀಲಿಸಬೇಕೆಂದು ಆರೋಪಿ ಪವಿತ್ರಾ ಗೌಡ ಅರ್ಜಿ ಸಲ್ಲಿಸಿದ್ದಾರೆ. ಈ ಹಿಂದೆ ಹೈಕೋರ್ಟ್ ನೀಡಿದ್ದ ಜಾಮೀನು ರದ್ದುಗೊಳಿಸಿ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿತ್ತು. ಆದೇಶ ಪರಿಶೀಲನೆ ಕೋರಿ ಸುಪ್ರೀಂಗೆ ಕೊಲೆ ಆರೋಪಿ ಪವಿತ್ರಾ ಗೌಡ ಅರ್ಜಿ ಸಲ್ಲಿಕೆ ಮಾಡಿದ್ದಾರೆ.

ನ.11 ಮಾಲೂರು ಮರು ಮತಎಣಿಕೆ

ಬೆಂಗಳೂರು/ಕೋಲಾರ: ತೀವ್ರ ಕುತೂಹಲಕ್ಕೆ ಕಾರಣವಾಗಿರುವ

ಮಾಲೂರು ವಿಧಾನ ಸಭೆ ಕ್ಷೇತ್ರದ ಮರು ಮತ ಎಣಿಕೆ ನ.11 ರಂದು ನಡೆಯಲಿದೆ. ಈ ಕುರಿತಂತೆ ಕರ್ನಾಟಕ ಚುನಾವಣಾ ಆಯೋಗವು, ಕೋಲಾರ ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾಧಿಕಾರಿಗೆ ಪತ್ರದ ಮೂಲಕ ಸೂಚನೆ ನೀಡಿದೆ. ಮಾಲೂರು ವಿಧಾನಸಭೆ ಕ್ಷೇತ್ರದ ಮರು ಮತ ಎಣಿಕೆಗೆ ಆಗ್ರಹಿಸಿ ಕೋರ್ಟ್ ಮೆಟ್ಟಿಲೇರಿದ್ದ ಪರಾಜಿತ ಅಭ್ಯರ್ಥಿ ಮಂಜುನಾಥ್ ಗೌಡ, ತಹಶೀಲ್ದಾರ್ ಕೆಲ ಚುನಾವಣಾ ಸಾಮಗ್ರಿಗಳನ್ನು ಅಕ್ರಮ ವಾಗಿ ವಶಕ್ಕೆ ಪಡೆದಿದ್ದರ ವಿರುದ್ಧ ಧ್ವನಿ ಎತ್ತಿದ್ದರು. ಅಲ್ಲದೇ ಈ ಬಗ್ಗೆ ಪತ್ರ ಬರೆದು ಚುನಾವಣಾ ಆಯೋಗದ ಗಮನಕ್ಕೆ ತಂದಿದ್ದರು. ಇದರ ಬೆನ್ನಲ್ಲೇ ಇದೀಗ ಚುನಾವಣೆ ಆಯೋಗವು ಸಹ ಕೋಲಾರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದೆ.

ಏನಿದು ಪ್ರಕರಣ?: ಕೋಲಾರ ಜಿಲ್ಲೆಯ ಮಾಲೂರು ಶಾಸಕ ಕಾಂಗ್ರೆಸ್‌ನ ಕೆ.ವೈ.ನಂಜೇಗೌಡ ಆಯ್ಕೆಯನ್ನು ಕರ್ನಾಟಕ ಹೈಕೋರ್ಟ್ ಅಸಿಂಧುಗೊಳಿಸಿತ್ತು. ಮುಂದಿನ ನಾಲ್ಕು ವಾರಗಳಲ್ಲಿ ಹೊಸದಾಗಿ ಮತ ಎಣಿಕೆ ನಡೆಸಬೇಕೆಂದು ನಿರ್ದೇಶಿಸಿತ್ತು. ನಂಜೇಗೌಡ ಆಯ್ಕೆ ಯಾಗಿರುವುದನ್ನು ಅನೂರ್ಜಿತ ಗೊಳಿಸುವಂತೆ ಕೋರಿ 248 ಮತಗಳಿಂದ ಸೋತಿದ್ದ ಬಿಜೆಪಿಯ ಅಭ್ಯರ್ಥಿ ಮಂಜು ನಾಥ್ ಗೌಡ ಸಲ್ಲಿಸಿದ್ದ ಅರ್ಜಿಮೇರೆಗೆ ನ್ಯಾಯಮೂರ್ತಿ ಆರ್.ದೇವದಾಸ್ ಅವರ ಏಕಸದಸ್ಯ ಪೀಠ ಈ ತೀರ್ಪು ನೀಡಿತ್ತು.

ತಮಿಳುನಾಡು, ಪ.ಬಂಗಾಳಗಳಲ್ಲಿ ವಿರೋಧ

12 ರಾಜ್ಯಗಳಲ್ಲಿ ಮತದಾರರ ವಿಶೇಷ ಪರಿಷ್ಕರಣೆ ಶುರು

ದೆಹಲಿ: ಒಂಬತ್ತು ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶ ಸೇರಿ ದೇಶದ ಒಟ್ಟು 12 ರಾಜ್ಯಗಳಲ್ಲಿ ನ.4ರಿಂದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಆರಂಭವಾಗಿದೆ. ಇದರಡಿ ಮನೆಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಸಂಗ್ರಹಿಸಲಾಗುವುದು. ಈ ಪ್ರಕ್ರಿಯೆ ಡಿಸೆಂಬರ್ 4ರವರೆಗೆ ನಡೆಯಲಿದ್ದು, ಅಂತಿಮ ಮತದಾರರ ಪಟ್ಟಿ 2026ರ ಫೆಬ್ರವರಿ 7ರಂದು ಪ್ರಕಟವಾಗಲಿದೆ. ಮತದಾರರ ಪಟ್ಟಿ ಪರಿಷ್ಕರಣೆಯನ್ನು ತಮಿಳುನಾಡು ಮತ್ತು ಪಶ್ಚಿಮ ಬಂಗಾಳಗಳು ವಿರೋಧಿಸಿವೆ. ಡಿಎಂಕೆ ಸುಪ್ರೀಮ್ ಕೋರ್ಟ್ ಮೊರೆ ಹೋಗಿದ್ದರೆ, ಪಶ್ಚಿಮ ಬಂಗಾಳದಲ್ಲಿ ಆಡಳಿತದಲ್ಲಿರುವ ಟಿಎಂಸಿ ಪಕ್ಷವು ಪ್ರತಿಭಟನೆ ನಡೆಸುತ್ತಿದೆ.

ಮಮತಾ ಪ್ರತಿಭಟನೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಆರಂಭವಾ ಗಿರುವ ಮತಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆ ವಿರೋಧಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಂಗಳವಾರ ಕೋಲ್ಕತ್ತಾದ ಬೀದಿಗಿಳಿದು ಬೃಹತ್ ಪ್ರತಿಭಟನೆ ನಡೆಸಿದರು. ಮಂಗಳವಾರದಿಂದಲೇ ಪಶ್ಚಿಮ ಬಂಗಾಳದಲ್ಲಿ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಆರಂಭವಾಗಿದೆ. ಇದು ಕೇಂದ್ರ ಬಿಜೆಪಿ ಸರಕಾರ, ಚುನಾವಣಾ ಆಯೋಗದ ಸಂಚು ಎಂದು ಮಮತಾ ದೂರಿದ್ದಾರೆ.

ಬಾಲ್ಯವಿವಾಹ, ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ತಾಲೂಕು ಮಟ್ಟದಲ್ಲಿ ಕಾರ್ಯಪಡೆ

19ಕ್ಕೆ ರಾಜ್ಯಾದ್ಯಂತ ಅಕ್ಕ ಪಡೆ ಜಾರಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಾಲ್ಯವಿವಾಹ ನಿಯಂತ್ರಣಕ್ಕೆ ಹತ್ತು ಹಲವು ಕ್ರಮವಹಿಸಿದರೂ, ಹಲವು ಜಿಲ್ಲೆಗಳಲ್ಲಿ ಬಾಲ್ಯ ವಿವಾಹ ಪ್ರಕರಣ ಬೆಳಕಿಗೆ ಬರುತ್ತಿವೆ. ಇದಕ್ಕೆ ಶಾಶ್ವತವಾಗಿ ತಡೆಯಲು ಪ್ರತ್ಯೇಕ ಕಾರ್ಯಪಡೆಯನ್ನು ರಚಿಸಲು ರಾಜ್ಯ ಸರಕಾರ ಮುಂದಾಗಿದೆ. ಈ ಹಿಂದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು 'ಅಕ್ಕ' ಪಡೆಯ ಮೂಲಕ ಬಾಲ್ಯ ವಿವಾಹ ತಡೆಯಲು ಕ್ರಮವಹಿಸುವುದಾಗಿ ಘೋಷಿಸಿ ದ್ದರು. ಇದೀಗ ಈ ಕಾರ್ಯಪಡೆಗೆ ನ.19ರಂದು ಅಧಿಕೃತವಾಗಿ ಚಾಲನೆ ನೀಡಲು ತೀರ್ಮಾನಿಸ ಲಾಗಿದೆ. ಕಾಯಪಡೆ ರಚಿಸುವ, ಕಾರ್ಯ ವ್ಯಾಪ್ತಿ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಗೃಹ ಸಚಿವ ಡಾ.ಜಿ.

ಪರಮೇಶ್ವರ ಅವರೊಂದಿಗೆ ಚರ್ಚಿಸಿದ್ದಾರೆ.

ಪರಮೇಶ್ವರ್ ನಿವಾಸಕ್ಕೆ ಮಂಗಳವಾರ ಭೇಟಿ ನೀಡಿದ ಲಕ್ಷ್ಮೀ ಹೆಬ್ಬಾಳ್ಕರ್ ಅವರು, ಅಕ್ಕ ಪಡೆಯ ಮೂಲಕ ಯಾವ ರೀತಿಯಲ್ಲಿ ಕಾರ್ಯ ನಿರ್ವಹಣೆ ಮಾಡಬಹುದು? ಎನ್ನುವ ಬಗ್ಗೆ ಚರ್ಚೆ ನಡೆಸಿದ್ದಾರೆ. ತಾಲೂಕು ಮಟ್ಟದಲ್ಲಿ ಈ ಕಾರ್ಯ ಪಡೆಗಳನ್ನು ರಚಿಸಲಾಗುತ್ತಿದ್ದು, ಅಕ್ಕ ಪಡೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಇದಕ್ಕೆ ಗೃಹ ಇಲಾಖೆ ಹಾಗೂ ಸ್ಥಳೀಯ ಪೊಲೀಸರ ನೆರವು ಅಗತ್ಯ ಎನ್ನುವ ಮಾತುಗಳನ್ನು ಚರ್ಚಿಸಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಈ ಪಡೆಯ ನಿರ್ವಹಣೆ ಮಾಡಿದರೂ, ಸ್ಥಳೀಯ ಪೊಲೀಸ್ ಠಾಣೆಯ ಮಹಿಳಾ ಪೊಲೀಸರ ನೇತೃತ್ವದಲ್ಲಿ ಕಾರ್ಯನಿರ್ವಹಿಸಲಿದೆ. ಮಹಿಳಾ ಪೊಲೀಸರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು, ಎನ್‌ಸಿಸಿ ಕೆಡೆಟ್‌ಗಳು ಸಹಕಾರ ನೀಡಲಿದ್ದಾರೆ. ಮುಂದಿನ ದಿನದಲ್ಲಿ ಪೊಲೀಸ್ ಇಲಾಖೆಯ ಮಾದರಿಯಲ್ಲಿಯೇ 'ಅಕ್ಕ' ಪಡೆಯಿಂದ ಪ್ರತ್ಯೇಕ ಗಸ್ತು ವಾಹನಗಳನ್ನು ನಿಯೋಜಿಸಲಾಗುವುದು. ಬಸ್ ನಿಲ್ದಾಣ, ಶಾಲಾ ಕಾಲೇಜು, ಮಾರುಕಟ್ಟೆ ಹಾಗೂ ಇತರ ಜನ ಸಂದಣಿ ಪ್ರದೇಶಗಳಲ್ಲಿ ಗಸ್ತು ವಾಹನಗಳನ್ನು ನಿಯೋಜಿಸಲಾಗುತ್ತದೆ ಎಂದು ವಿವರಿಸಿದರು.

ಅಕ್ಕ ಪಡೆ 2023ರಲ್ಲಿ ಬೀದರ್‌ನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿ ಯಶಸ್ವಿಯಾಗಿದೆ. ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಮೈಸೂರು, ಬೆಳಗಾವಿ, ಮಂಗಳೂರು ಜಿಲ್ಲೆಗಳಲ್ಲಿ 2ನೇ ಹಂತದ ಪ್ರಾಯೋಗಿಕ ಪಡೆಗಳನ್ನು ಆರಂಭಿಸಲಾಗಿತ್ತು. ಇದೀಗ ರಾಜ್ಯಾದ್ಯಂತ ವಿಸ್ತರಿಸಲು ಇಲಾಖೆ ಮುಂದಾಗಿದೆ.

ಉದ್ದೇಶಗಳೇನು?

- ಬಾಲ್ಯ ವಿವಾಹ ತಡೆ ಹಾಗೂ ಪೋಕ್ಸೋ ಕಾಯಿದೆಯ ಬಗ್ಗೆ ಜಾಗೃತಿ
- ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ತಡೆಯಲು ಬಿಗಿ ಕ್ರಮ
- ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಳ ತಡೆಯಲು ಜಾಗೃತಿ ಕಾರ್ಯ

ಜನನಾಯಕ, ಸ್ನೇಹಜೀವಿ, ಸರ್ವಸಮುದಾಯದ
ಹಿತಚಿಂತಕ, ವಿದ್ಯಾರ್ಥಿ ಮಿತ್ರ, ಯುವ ಸಂಘಟನಾ
ಚತುರ, ಶಿಕಾರಿಪುರ ಕ್ಷೇತ್ರದ ಜನಪ್ರಿಯ ಶಾಸಕರು
ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾದ
ಸನ್ಮಾನ್ಯ ಶ್ರೀ
ಬಿ.ವೈ. ವಿಜಯೇಂದ್ರ
ಅವರಿಗೆ
ಜನ್ಮದಿನದ
ಶುಭಾಶಯಗಳು
ಶುಭ ಕೋರುವವರು
ಸಿ. ಮುನಿರಾಜು
ರಾಜ್ಯ ಕಾರ್ಯದರ್ಶಿ, ಬಿಜೆಪಿ ಕರ್ನಾಟಕ
ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ
ಮಾಜಿ ಅಧ್ಯಕ್ಷರು
ಉಪನಗರ ವರ್ತುಲ ರಸ್ತೆ (ಎಸ್‌ಟಿಆರ್), ಯೋಜನಾ ಪ್ರಾಧಿಕಾರ
ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ.

ಕಾಂಗ್ರೆಸ್‌ನ ಹಿರಿಯ ನಾಯಕ ಇನ್ನಿಲ್ಲ | ಗ್ರಾಪಂನಿಂದ ಸಂಸತ್‌ವರೆಗೆ ರಾಜಕೀಯ ಪಯಣ

ಶಾಸಕ ಎಚ್.ವೈ.ಮೇಟಿ ಇನ್ನು ನೆನಪು ಮಾತ್ರ

ಅಭಿಷೇಕ ಪಾಟೀಲ ಬಾಗಲಕೋಟೆ

ಅನೇಕ ದಿನಗಳಿಂದ ಶ್ವಾಸಕೋಶ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಎಚ್.ವೈ.ಮೇಟಿ (79) ಮಂಗಳವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಅಕ್ಟೋಬರ್ 9 ರಂದು ಜನ್ಮದಿನ ಆಚರಿಸಿಕೊಂಡಿದ್ದ ಶಾಸಕ ಎಚ್.ವೈ.ಮೇಟಿ ಅವರಿಗೆ ಅಂದು ರಾತ್ರಿಯಿಂದಲೇ ಆರೋಗ್ಯದಲ್ಲಿ ಸಮಸ್ಯೆ ಕಾಣಿಸಿಕೊಂಡಿತ್ತು. ಬಾಗಲಕೋಟೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರಿಗೆ ಈಚೆಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನ.4 ರಂದು ಬೆಳಗ್ಗೆ ಚಿಕಿತ್ಸೆ ಫಲಿಸದೇ ಇಹ ಲೋಕ ತ್ಯಜಿಸಿದ್ದಾರೆ. ಪತ್ನಿ ಲಕ್ಷ್ಮೀ, ಗಂಡು ಮಕ್ಕಳಾದ ಉಮೇಶ ಹಾಗೂ ಮಲ್ಲಿಕಾರ್ಜುನ, ಹೆಣ್ಣು ಮಕ್ಕಳಾದ ಬಾಯಕ್ಕ ಹಾಗೂ ಮಹಾದೇವಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

21ನೇ ವಯಸ್ಸಿಗೆ ರಾಜಕಾರಣಕ್ಕೆ ಪದಾರ್ಪಣೆ: 1946ರ ಅಕ್ಟೋಬರ್ 9 ರಂದು ಜನಿಸಿದ್ದ ಮೇಟಿ ಅವರ ಪೂರ್ಣ ಹೆಸರು ಹುಲ್ಲಪ್ಪ ಯಮನಪ್ಪ ಮೇಟಿ. ಪ್ರಾಥಮಿಕ ಶಾಲಾ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿದ ಅವರು, ಪ್ರೌಢಶಾಲಾ ಶಿಕ್ಷಣವನ್ನು ವಿಜಯಪುರ ತಾಲೂಕಿನ ಬಸವನ ಬಾಗೇವಾಡಿಯಲ್ಲಿ ಪೂರ್ಣಗೊಳಿಸಿದ್ದಾರೆ. 9ನೇ ತರಗತಿವರೆಗೂ ಶಿಕ್ಷಣ ಪಡೆದಿರುವ ಮೇಟಿ ಅವರು ತಮ್ಮ 21ನೇ ವಯಸ್ಸಿಗೆ ರಾಜಕಾರಣ ಪ್ರವೇಶಿಸಿದರು. 1985ರಲ್ಲಿ ಬಾಗಲಕೋಟೆ ಒಕ್ಕಲುತನ ಹುಟ್ಟುವಳಿ ಮಾರುಕಟ್ಟೆಯ ಅಧ್ಯಕ್ಷರಾಗಿದ್ದ ಅವರು, 1985-90 ರ ಅವಧಿಯಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾದರು. ಅಂದಿನ ಬಾಗಲಕೋಟೆ ಶಾಸಕರಾಗಿದ್ದ ಜಿ.ವಿ.ಮಂಟೂರ ಶಿಷ್ಯರಾಗಿದ್ದ ಮೇಟಿ ಅವರಿಗೆ ಮುಂದೆ ಮಂಟೂರ ಅವರಿಂದಲೇ ಗುಳೇದಗುಡ್ಡ ವಿಧಾನಸಭೆಗೆ ಟಿಕೆಟ್ ದೊರಕಿತು. ಅಲ್ಲಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾದರು.

5 ಬಾರಿ ಶಾಸಕ, 2 ಬಾರಿ ಮಂತ್ರಿ: ಅಖಂಡ ವಿಜಯಪುರ ಜಿಲ್ಲೆಯಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರವಾಗಿತ್ತು. 1989, 1994 ಜನತಾದಳದಿಂದ ಸ್ಪರ್ಧಿಸಿದ್ದರು. ನಂತರದಲ್ಲಿ 2004ರಲ್ಲಿ ಗುಳೇದಗುಡ್ಡ ವಿಧಾನಸಭಾ ಮತಕ್ಷೇತ್ರದಲ್ಲಿ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದ ಮೇಟಿ ಅವರು ಒಟ್ಟು ಮೂರು ಬಾರಿ ಶಾಸಕರಾಗಿದ್ದರು. ನಂತರ ಕ್ಷೇತ್ರ ಪುನರ್ ವಿಂಗಡನೆ ಸಂದರ್ಭದಲ್ಲಿ ಗುಳೇದಗುಡ್ಡ ಮತಕ್ಷೇತ್ರ ಬಾದಾಮಿಯಲ್ಲಿ ಸೇರ್ಪಡೆಗೊಂಡಿತು. ತದನಂತರದಲ್ಲಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಿಂದ 2008, 2013, 2018 ಹಾಗೂ 2023ರಲ್ಲಿ ಸ್ಪರ್ಧಿಸಿ, ಅದರಲ್ಲಿ 2013 ಹಾಗೂ 2023ರಲ್ಲಿ ಗೆದ್ದರು. ಈ ಅವಧಿಯಲ್ಲಿ ಒಮ್ಮೆ ಅರಣ್ಯ ಸಚಿವ ಹಾಗೂ ಅಬಕಾರಿ ಸಚಿವರಾಗಿ ಕೆಲಸ ಮಾಡಿದ್ದಾರೆ.

ಮೊದಲ ಕಾಂಗ್ರೆಸ್ಸೇತರ ಸಂಸದ: ಬಾಗಲಕೋಟೆ ಲೋಕಸಭಾ ಕ್ಷೇತ್ರ ಪ್ರಾರಂಭವಾದಾಗಿನಿಂದ ಪ್ರತಿ ಬಾರಿ ಕಾಂಗ್ರೆಸ್ ಪಕ್ಷದವರೇ ಸಂಸದರಾಗುತ್ತಿದ್ದರು. 1996ರಲ್ಲಿ ಮೇಟಿ ಅವರು ಅರಣ್ಯ ಖಾತೆ ಸಚಿವರಾಗಿದ್ದ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಹಾಗೂ ಇಂದಿನ ಸಿಎಂ ಸಿದ್ದರಾಮಯ್ಯ ಅವರ ಸೂಚನೆಯಂತೆ ಬಾಗಲಕೋಟೆ ಲೋಕಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಅಂದಿನ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಿದ್ದು ನ್ಯಾಮಗೌಡ ಅವರನ್ನು ಸೋಲಿಸುವ ಮೂಲಕ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸಂಸದರಾದ ಕೀರ್ತಿ ಮೇಟಿ ಅವರಿಗೆ ಸಲ್ಲುತ್ತದೆ.

ಸಿಎಂ ಸಿದ್ದರಾಮಯ್ಯ ಅತ್ಯಾಪ್ತ: ಎಚ್.ವೈ.ಮೇಟಿ ಅವರು ತಮ್ಮ ಸಮುದಾಯದ ನಾಯಕರಾಗಿದ್ದ ಸಿಎಂ ಸಿದ್ದರಾಮಯ್ಯ ಅವರ ಅತ್ಯಾಪ್ತರಾಗಿದ್ದರು. ಸಿದ್ದರಾಮಯ್ಯ ಜನತಾದಳ ಬಿಟ್ಟು, ಸ್ವಂತ ಪಕ್ಷ ಕಟ್ಟಿದಾಗ ಅವರೊಂದಿಗೆ ನೂತನ ಪಕ್ಷವನ್ನು ಸೇರ್ಪಡೆಗೊಂಡರು. ನಂತರದಲ್ಲಿ ಅವರೊಂದಿಗೆ ಕಾಂಗ್ರೆಸ್ ಸೇರ್ಪಡೆಗೊಂಡರು. ಅವಕಾಶ ಸಿಕ್ಕಾಗಲೆಲ್ಲ ಸಿದ್ದರಾಮಯ್ಯ ಅವರು ಮೇಟಿ ಅವರಿಗೆ ಸಚಿವ ಸ್ಥಾನ ನೀಡುತ್ತಲೇ ಬಂದಿದ್ದಾರೆ. ಶಾಸಕ ಮೇಟಿ ಹಾಗೂ ಸಿಎಂ ಸಿದ್ದರಾಮಯ್ಯ ಅವರು ಅತ್ಯಂತ ಆಪ್ತರಾಗಿರುವುದರಿಂದಲೇ ಬಾಗಲಕೋಟೆಯಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಪ್ರಾರಂಭಿಸಲು ಸರಕಾರದಿಂದ ಅನುದಾನ ತರಲು ಸಾಧ್ಯವಾಯಿತು.

ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ ಶಾಸಕ ಎಚ್.ವೈ.ಮೇಟಿ ಅವರ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ.

ತಿಮ್ಮಾಪುರದಲ್ಲಿ ಅಂತ್ಯಸಂಸ್ಕಾರ ಇಂದು: ಸಿಎಂ ಭಾಗಿ

ಶಾಸಕ ಎಚ್.ವೈ.ಮೇಟಿ ಅವರ ಮೃತದೇಹ ಬುಧವಾರ ಬೆಳಗ್ಗೆ 4ಕ್ಕೆ ಬಾಗಲಕೋಟೆಗೆ ಆಗಮಿಸಲಿದೆ. ಬೆಳಗ್ಗೆ 6 ರಿಂದ 10ರ ವರೆಗೆ ಬಾಗಲಕೋಟೆಯಲ್ಲಿರುವ ಜಿಲ್ಲಾ ಕ್ರೀಡಾಂಗಣದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ನಂತರ ಮಧ್ಯಾಹ್ನ 2ಕ್ಕೆ ಬಾಗಲಕೋಟೆ ತಾಲೂಕಿನ ಸ್ವ-ಗ್ರಾಮವಾದ ತಿಮ್ಮಾಪುರದಲ್ಲಿರುವ ಅವರ ಜಮೀನಿನಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ. ಅಂತ್ಯಸಂಸ್ಕಾರದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕ ಸಚಿವರು, ಶಾಸಕರು, ಮಾಜಿ ಶಾಸಕರು ಪಾಲ್ಗೊಳ್ಳಲಿದ್ದಾರೆ.

ಎಚ್. ವೈ. ಮೇಟಿ ಅವರು ಅನಾರೋಗ್ಯದಿಂದ ನಿಧನ ಹೊಂದಿರುವ ಸುದ್ದಿ ಕೇಳಿ ದುಃಖವಾಯಿತು. ಮೇಟಿಯವರು ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಅವರು ನನಗೆ ಅತ್ಯಂತ ಆತ್ಮೀಯರಾಗಿದ್ದರು. ನನಗೆ ಅವರೊಂದಿಗೆ ಕೆಲಸ ಮಾಡುವ ಅವಕಾಶವೂ ದೊರೆತಿತ್ತು. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ಭಗವಂತ ಅವರ ಕುಟುಂಬ ವರ್ಗ ಹಾಗೂ ಅಭಿಮಾನಿಗಳಿಗೆ ಕರುಣಿಸಲಿ, ಮೃತರ ಆತ್ಮಕ್ಕೆ ಚಿರ ಶಾಂತಿ ನೀಡಲಿ.

– ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ಪುಸ್ತಕ ಬಿಡುಗಡೆ ಮುಂದೂಡಿಕೆ: ಡಿಕೆ

ಬೆಂಗಳೂರು: ಮಾಜಿ ಸಚಿವರು ಹಾಗೂ ಕಾಂಗ್ರೆಸ್ ಶಾಸಕ ಎಚ್.ವೈ ಮೇಟಿ ಅವರ ನಿಧನಕ್ಕೆ ಸಂತಾಪ ಸೂಚಿಸಿರುವ ಡಿಸಿಎಂ ಡಿ ಕೆ ಶಿವಕುಮಾರ್ ಅವರು, ಬುಧವಾರ ನಿಗದಿಯಾಗಿದ್ದ ನೀರಿನ ಹೆಜ್ಜೆ' ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ತಿಳಿಸಿದರು.

ಸುದ್ದಿಗಾರರೊಂದಿಗೆ ಮ ಆತನಾಡಿದ ಅವರು, ಮೇಟಿ ಅವರ ಆರೋಗ್ಯದಲ್ಲಿ ಏರುಪೇರಾಗಿತ್ತು. ಅವರ ನಿಧನದ ಸುದ್ದಿ ಬಹಳ ದುಃಖ ತಂದಿದೆ. ಅವರ ಕುಟುಂಬ ಸದಸ್ಯರಿಗೆ ನನ್ನ ಸಂತಾಪಗಳು. ಮುಖ್ಯಮಂತ್ರಿಗಳು ನನಗೆ ಕರೆ ಮಾಡಿ ಬಾಗಲಕೋಟೆಗೆ ಹೋಗುವ ಬಗ್ಗೆ ಚರ್ಚೆ ಮಾಡಿದರು. ಹೀಗಾಗಿ ಮತ್ತೆ ಮುಖ್ಯಮಂತ್ರಿಗಳೊಂದಿಗೆ ಚರ್ಚೆ ಮಾಡಿ ನೀರಿನ ಹೆಜ್ಜೆ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಮುಂದಿನ ದಿನಾಂಕ ನಿಗದಿ ಮಾಡಲಾಗುವುದು ಎಂದು ತಿಳಿಸಿದರು. ಮೇಟಿ ಅವರು ನನಗೆ ಬಹಳ ಆತ್ಮೀಯರು. ಸಿದ್ದರಾಮಯ್ಯ ಅವರ ಜತೆಯಲ್ಲೇ ನಮ್ಮ ಪಕ್ಷಕ್ಕೆ ಸೇರಿ ಶಾಸಕರಾಗಿ ಹಾಗೂ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಈಗ ಬಿಟಿಡಿಎ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ. ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ಸದಸ್ಯರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ಮೇಟಿ ನಿಷ್ಠಾವಂತ ರಾಜಕಾರಣಿ: ಸಿಎಂ

ಬೆಂಗಳೂರು: ನಿಷ್ಠಾವಂತ ರಾಜಕಾರಣಿಯಾಗಿದ್ದ ಎಚ್.ವೈ ಮೇಟಿಯವರು ನನಗೆ ಅತ್ಯಂತ ಆಪ್ತರಾಗಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೇಟಿ ಅವರ ಪಾರ್ಥಿವ ಶರೀರದ ದರ್ಶನ ಪಡೆದ ಬಳಿಕ ಮಾತನಾಡಿದ ಅವರು, ನಾನು ಮೂರು ದಿನಗಳ ಹಿಂದೆ ಅವರನ್ನು ಭೇಟಿ ಮಾಡಿ ಅವರ ಆರೋಗ್ಯವನ್ನು ವಿಚಾರಿಸಿದ್ದು, ವೈದ್ಯರೂ ಅವರ ಆರೋಗ್ಯದಲ್ಲಿ ಚೇತರಿಕೆ ಕಾಣುತ್ತಿದೆ ಎಂದು ತಿಳಿಸಿದ್ದರು. ಆದರೆ ಮೇಟಿಯವರು ಇಷ್ಟುಬೇಗ ಇಹಲೋಕ ತ್ಯಜಿಸುತ್ತಾರೆಂದು ಭಾವಿಸಿರಲಿಲ್ಲ. ಅತ್ಯಂತ ನಿಷ್ಠಾವಂತ ರಾಜಕಾರಣಿಯಾಗಿದ್ದು, ನನಗೆ ಅತ್ಯಂತ ಆಪ್ತರಾಗಿದ್ದರು. ಮೇಟಿಯವರು ಅರಣ್ಯ ಸಚಿವರಾಗಿ, ಸಂಸದರಾಗಿ ಉತ್ತಮ ಸೇವೆ ಸಲ್ಲಿಸಿದ್ದರು. ಮೂಲತಃ ಕೃಷಿಕರಾಗಿದ್ದ ಮೇಟಿಯವರು ರಾಜಕೀಯ ಕ್ಷೇತ್ರದಲ್ಲಿಯೂ ಸಕ್ರಿಯರಾಗಿದ್ದರು. 1989 ರಲ್ಲಿ ಗುಳೇದಗುಡ್ಡ ಕ್ಷೇತ್ರದಿಂದ ಶಾಸಕರಾಗಿ ಸ್ಪರ್ಧಿಸಿ ಮೂರು ಬಾರಿ ಶಾಸಕರಾಗಿದ್ದರು.

ಜನಪರ ಕಾಳಜಿಯಿಂದ ಸೇವೆ ಸಲ್ಲಿಸುತ್ತಿದ್ದ ಮೇಟಿಯವರು ಮಂತ್ರಿಯಾಗಿರಲಿ, ಸಂಸದರಾಗಿ, ಶಾಸಕರಾಗಿರಲಿ, ಪಕ್ಷಕ್ಕೆ ನಿಷ್ಠೆಯಿಂದ ದುಡಿಯುವಂತಹ ಪ್ರಾಮಾಣಿಕ ವ್ಯಕ್ತಿಯಾಗಿದ್ದರು ಎಂದರು.

ಜನರೊಂದಿಗೆ ಒಡನಾಟ ಹಾಗೂ ಜನಪ್ರಿಯತೆಯಿಂದ ಬಾಗಲಕೋಟೆ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. ಅಂತಹ ನಿಷ್ಠಾವಂತ ನಾಯಕನೊಬ್ಬನ ಸಾವು ದುಃಖ ತಂದಿದ್ದು, ನನಗೆ ವೈಯಕ್ತಿಕ ನಷ್ಟವಾಗಿದೆ. ಬುಧವಾರ ಎರಡು ಗಂಟೆಯ ಸುಮಾರಿಗೆ ಸಕಲ ಸರಕಾರಿ ಗೌರವದೊಂದಿಗೆ ನಡೆಯುವ ಅಂತ್ಯಕ್ರಿಯೆಯಲ್ಲಿ ಭಾಗವಹಿಸುವುದಾಗಿ ಹೇಳಿದರು.

ಶಾಸಕ ಎಚ್.ವೈ.ಮೇಟಿ ಅವರು ಕೊನೆಯುಸಿರೆಳೆದಿದ್ದಾರೆಂದು ವಿಷಯ ತಿಳಿದು ದುಃಖಿತರಾಗಿದ್ದೇವೆ. ಅವರೊಬ್ಬ ಸರಳ ಸೌಜನ್ಯ ವ್ಯಕ್ತಿತ್ವದ ರಾಜಕಾರಣಿ. ಎಲ್ಲರನ್ನೂ ಆತ್ಮಬಂಧುಗಳ ರೂಪದಲ್ಲಿ ಆತ್ಮೀಯವಾಗಿ ಕಾಣುತ್ತಿದ್ದವರು. ಕಳೆದೊಂದು ದಶಕದಿಂದ ಜಗದ್ಗುರು ಸಿದ್ದರಾಮೇಶ್ವರ ಮಹಾಸಂಸ್ಥಾನ ಭೋವಿ ಗುರುಪೀಠದ ಅಭಿವೃದ್ಧಿಗೆ ಯೋಜನೆಗಳನ್ನು ಚರ್ಚಿಸುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶ್ರೀ ಪೀಠಕ್ಕೆ ಬಂದಾಗ ಅವರ ಉಸ್ತುವಾರಿ ಸ್ಮರಣೀಯವಾದದ್ದು. ಅವರ ನಿಧನದಿಂದ ನಾಡು ಬಡವಾಗಿದೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಮೇಟಿಯವರ ಕುಟುಂಬಸ್ಥರು ಹಾಗೂ ಅಭಿಮಾನಿಗಳಿಗೆ ಈ ದುಃಖ ಭರಿಸುವ ಶಕ್ತಿ ಸಿಗಲೆಂದು ಪ್ರಾರ್ಥಿಸುತ್ತೇವೆ.

-ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಭೋವಿ ಗುರುಪೀಠದ ಜಗದ್ಗುರುಗಳು

2013ರಲ್ಲಿ ಕಾಂಗ್ರೆಸ್ ಸರಕಾರದಲ್ಲಿ ಶಾಸಕ ಎಚ್.ವೈ.ಮೇಟಿ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿರುತ್ತಿರುವುದು.

ಎಚ್.ವೈ.ಮೇಟಿ ಅವರು ಅನಾರೋಗ್ಯದಿಂದ ನಿಧನರಾದ ಸುದ್ದಿ ತಿಳಿದು ದುಃಖವಾಯಿತು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ. ಅವರ ಕುಟುಂಬ, ಸ್ನೇಹಿತರು ಹಾಗೂ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

– ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ

ಎಚ್.ವೈ.ಮೇಟಿ ಅವರ ನಿಧನಕ್ಕೆ ಸಂತಾಪ ಕೋರುವೆ. ರಾಜಕಾರಣದಲ್ಲಿ ಸುದೀರ್ಘ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದ ಅವರ ಅಗಲಿಕೆಯಿಂದ ಅವರ ಕುಟುಂಬ ಹಾಗೂ ಅಪಾರ ಅಭಿಮಾನಿ ವರ್ಗಕ್ಕೆ ಉಂಟಾಗಿರುವ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲಿ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

– ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಶಾಸಕರಾದ ಎಚ್.ವೈ.ಮೇಟಿ ಅವರ ನಿಧನಕ್ಕೆ ನನ್ನ ಸಂತಾಪಗಳು. ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ, ಅವರ ಕುಟುಂಬ, ಬಂಧು ವರ್ಗ, ಸ್ನೇಹಿತರು ಹಾಗೂ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಆರ್.ಅಶೋಕ, ವಿಧಾನಸಭೆ ಪ್ರತಿಪಕ್ಷ ಪಕ್ಷ ನಾಯಕ

ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವ ಶಕ್ತಿ ಎಚ್.ವೈ. ಮೇಟಿ ಅವರಿಗೆ ಇತ್ತು. ಅವರ ಸಮಾಜದಲ್ಲೂ ಅವರಿಗೆ ಅವರದ್ದೇ ಆದ ಸ್ಥಾನಮಾನ ಇತ್ತು. ಮೇಟಿ ಅವರ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ದುಃಖ ಭರಿಸುವ ಶಕ್ತಿಯನ್ನು ಆ ದೇವರು ಕೊಡಲಿ ಎಂದು ಪ್ರಾರ್ಥಿಸುವೆ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ.

– ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಸರಳ ಸಜ್ಜನಿಕೆಯ ಸೌಮ್ಯ ಸ್ವಭಾವದ ರಾಜಕಾರಣಿಯಾಗಿದ್ದ ಶಾಸಕ ಎಚ್.ವೈ.ಮೇಟಿ ಅವರ ನಿಧನ ದಿಗ್ಭ್ರಮೆಗೊಳಿಸಿದೆ. ಜಿಲ್ಲೆಯಲ್ಲಿ ಯಾವುದೇ ಸಮಸ್ಯೆಗೆ ಪರಿಹಾರಕ್ಕೆ ಅವರು ಅಭಿಪ್ರಾಯ ನೀಡುತ್ತಿದ್ದರು. ಅಷ್ಟು ಜಾಣ ಹಾಗೂ ಅಷ್ಟೇ ಹಠವಾದಿ. ಅವರ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ದುಃಖ ತಡೆದುಕೊಳ್ಳುವ ಶಕ್ತಿ ನೀಡಲಿ.

-ಆರ್.ಬಿ.ತಿಮ್ಮಾಪುರ ಅಬಕಾರಿ ಸಚಿವ

ಕರ್ನಾಟಕ ಸರ್ಕಾರ – ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪ ವಿಭಾಗ, ಚನ್ನಗಿರಿ.

ಸಂಖ್ಯೆ: :ಸಅಸಂ.ಚನ್ನಗಿರಿ:ಟೆಂಡರ್.ಸಿ.ಆರ್–01/2025–26–3 ದಿ:27.10.2025.

ಅಲ್ಪಾವಧಿ ಟೆಂಡರ್ ಇ–ಪ್ರೊಕ್ಯೂರ್ ಮೆಂಟ್ ಪೋರ್ಟ್‌ಲ್ ಮೂಲಕ ಕಾಲ್–2)

2025–26ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ "Advance work including raising of 10X16 Seedlings in limits of the Deputy Conservator of Forests, Bhadravathi Division, Bhadravathi for the year 2025-26" ಈ ಕುರಿತು ಸಂಬಂಧಪಟ್ಟ ಅರ್ಹ ಗುತ್ತಿಗೆದಾರರಿಂದ ನಿರ್ವಹಿಸಲು https://kppp.karnataka.gov.in ಪೋರ್ಟಲ್ ಮುಖಾಂತರ ದಿ:11.11.2025ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಿ ಟೆಂಡರ್ ಕಾಲ್–2 ಅಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಕಾಮಗಾರಿಯ ಅಂದಾಜು ಮೊತ್ತ:–176.42500 ಲಕ್ಷಗಳು 1. "Advance work including raising of 10X16 Seedlings in limits of the Deputy Conservator Forests, Bhadravathi Division, Bhadravathi for the year 2025-26" *) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11–11–2025 16:00
*) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 12–11–2025 16.30.
*)ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 12–11–2025 17:00

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಚನ್ನಗಿರಿ ಉಪವಿಭಾಗ, ಚನ್ನಗಿರಿ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/08/11/1182

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕೋಲಾರ

ಕೆಪಿಪಿಪಿ ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: 09/2025–26, ದಿನಾಂಕ: 16.10.2025

2022–23ನೇ ಸಾಲಿನಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಕೋಲಾರ ಜಿಲ್ಲಾ ವ್ಯಾಪ್ತಿಗೆ ಅನುಮೋದನೆಯಾದ (ಮನೆಮನೆಗೆ ನಳ ಸಂಪರ್ಕಕಲ್ಪಿಸುವ) ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೊಂದಾಯಿತ ಅರ್ಹ ಹಾಗೂ ಕೆಪಿಪಿಪಿನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆಯಲ್ಲಿ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿ ಕ್ರ.ಸಂ.27 ರ ಇಂಡೆಂಟ್ ಸಂಖ್ಯೆ: **RWSSD/2023-24/WS/WORK_INDENT1323/CALL-2** ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಕಂಡ ದಿನಾಂಕದಂದು ಮುಂದೂಡಿ ಪ್ರಕಟಿಸಲಾಗಿದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸುವ **ಕಡೆಯ ದಿನಾಂಕ: 11.11.2025 ರಂದು 17.30 ಗಂಟೆಯವರೆಗೆ ಇರುತ್ತದೆ.** ಹೆಚ್ಚಿನ ವಿವರಗಳಿಗೆ ಕೆಪಿಪಿಪಿ ವೆಬ್‌ಸೈಟ್ –**https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ. ಮತ್ತು ನೈ ವಿಭಾಗ, ಕೋಲಾರ.

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:341/ಕೆಎಸ್‌ಎಂಸಿಎ/2025–26

ಎಸ್‌ಟಿಗೆ ಕುರುಬರ ಸೇರ್ಪಡೆಗೆ ಉಗ್ರಪ್ಪ ವಿರೋಧ

ಹೊಸಪೇಟೆ: ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಕುರುಬ ಸಮುದಾಯವನ್ನು ಸೇರಿಸುವ ಪ್ರಯತ್ನಕ್ಕೆ ಮತ್ತೊಮ್ಮೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಮಾಜಿ ಸಂಸದ ವಿ.ಎಸ್. ಉಗ್ರಪ್ಪ, ಹೆಚ್ಚುವರಿ ಮೀಸಲಾತಿಯನ್ನೂ ಜತೆಗೆ ತಂದರೆ ಹಂಚಿಕೊಂಡು ಬದುಕೋಣ ಎಂದು ಹೇಳಿದ್ದಾರೆ.

ಹೊಸಪೇಟೆ ತಾಲೂಕು ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ಮಂಗಳವಾರ ಹಮ್ಮಿಕೊಂಡ ಮೀಸಲಾತಿ ಕುರಿತ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ತಟ್ಟೆಗೆ ಕೈ ಹಾಕಬೇಡಿ ಎಂಬುದನ್ನು ನಾವೆಲ್ಲ ಸ್ಪಷ್ಟವಾಗಿ ಹೇಳಿದ್ದೇವೆ, ಮುಖ್ಯಮಂತ್ರಿ ಅವರಿಗೂ ಇದರ ಮನವರಿಕೆ ಆಗಿದೆ, ಹೀಗಿದ್ದರೂ ಎಸ್‌ಟಿಗೆ ಸೇರಿಸಲೇಬೇಕು ಎಂದಾದರೆ ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲೇಬೇಕು ಎಂದರು.

ಕುರುಬ ಸಮುದಾಯ ಎಸ್‌ಟಿಗೆ ಒಳಪಡುತ್ತದೆಯೇ ಎಂಬುದರ ಬಗೆಗೆ ಮೊದಲಾಗಿ ಕುಲಶಾಸ್ತ್ರೀಯ ಅಧ್ಯಯನ ಆಗಬೇಕು. ಗೊಲ್ಲ, ಬಸ್ತರು ಮೊದಲಾದ ಸಮಯದಾಯಗಳಲ್ಲೂ ಇದೇ ರೀತಿಯ ಅಧ್ಯಯನ ಆಗಬೇಕು. ಅದರ ಹೊರತಾಗಿ ಈಗಿನ ಸ್ಥಿತಿಯಲ್ಲೇ ಎಸ್‌ಟಿಗೆ ಸೇರಿಸುವ ಪ್ರಯತ್ನವನ್ನು ಖಂಡಾತುಂಡವಾಗಿ ವಿರೋಧಿಸಲಾಗುವುದು ಎಂದು ಎಚ್ಚರಿಸಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಯಾವ ಕಾರಣಕ್ಕೂ ವರ್ಗಾವಣೆ ಮಾಡುವಂತಿಲ್ಲ ಎಂಬ ಸ್ಪಷ್ಟ ಸೂಚನೆ ಇದೆ. ಆ ಹಣದಲ್ಲಿ ಭ್ರಷ್ಟಾಚಾರ ಆದರೆ ಜೈಲು ಶಿಕ್ಷೆ ಸಹ ವಿಧಿಸಬಹುದಾಗಿದೆ. ಆದರೆ ದಲಿತ ಹಕ್ಕುಗಳ ಹೋರಾಟಗಾರರು ಎನ್ನಿಸಿಕೊಂಡವರು ಇದನ್ನು ಪ್ರಶ್ನಿಸುವುದೇ ಇಲ್ಲ.

– ವಿ.ಎಸ್.ಉಗ್ರಪ್ಪ ಮಾಜಿ ಸಂಸದ

ಹಗರಣ ಯಾಕೆ ಪ್ರಶ್ನಿಸಲಿಲ್ಲ

ವಾಲ್ಮೀಕಿ ಅಭಿವೃದ್ಧಿ ನಿಗಮದ ₹187 ಕೋಟಿ ಪೈಕಿ ₹91 ಕೋಟಿ ಆಂಧ್ರಕ್ಕೆ ಹೋಯಿತು, ಅಲ್ಲಿಂದ ಇನ್ನೆಲ್ಲಿಗೋ ಬಂತು. ನೀವು ಇದನ್ನು ಯಾಕೆ ಪ್ರಶ್ನಿಸಲಿಲ್ಲ? ಸಮುದಾಯದ ಸ್ವಾಮೀಜಿ ಸಹ ಯಾಕೆ ಪ್ರಶ್ನಿಸಲಿಲ್ಲ? ಅಮಾಯಕ ಚಂದ್ರಶೇಖರ ಎಂಬಾತ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಕ್ಕೆ ವಿಷಯ ಬಯಲಾಯಿತು. ತಕ್ಷಣ ನಾನು ಸಿಎಂಗೆ ಪತ್ರ ಬರೆದು ಕೂಲಂಕಷ ತನಿಖೆ ಆಗಲೇಬೇಕು ಎಂದಿದ್ದಕ್ಕೆ ತನಿಖೆ ಆಯಿತು. ನಿಗಮದ ದುಡ್ಡು ವಿದ್ಯಾರ್ಥಿವೇತನ, ಹಾಸ್ಟೆಲ್, ಕೊಳವೆಬಾವಿ ಮೊದಲಾದ ಯೋಜನೆಗಳಿಗೆ ಇರುವಂತದ್ದು. ಅದರೆ ಸಮಾಜ ಈಗಲೂ ಆ ವಿಷಯದಲ್ಲಿ ಚಕಾರ ಎತ್ತುತ್ತಿಲ್ಲ. ಇದು ನಮ್ಮ ಸಮಾಜಕ್ಕೆ ನಾವೇ ಮಾಡುತ್ತಿರುವ ದ್ರೋಹ ಎಂದು ಉಗ್ರಪ್ಪ ಹೇಳಿದರು.

ವಿರಾಮ
ಪ್ರತಿ ಭಾನುವಾರ

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಸಿ/ಟೆಂಡರ್ ಪ್ರಕಟಣೆ ಸಂಖ್ಯೆ: 13/2025–26 ದಿ: 4–11–2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)
(ಐಟಂವಾರು : ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ಪಿರಿಯಾಪಟ್ಟಣ ತಾಲ್ಲೂಕಿನ 6 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ. 100.00 ಲಕ್ಷಗಳಿದ್ದು, ಈ ಕಾಮಗಾರಿಗೆ ನಿಗದಿತ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಟೆಂಡರ್ ಕರೆಯಲಾಗಿದೆ.

ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ: **13–11–2025 ಅಪರಾಹ್ನ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ: **14–11–2025ರ ಅಪರಾಹ್ನ 4.30 ಗಂಟೆಗೆ** ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: **http://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ. ಕಾರಣಾಂತರಗಳಿಂದ ಯಾವುದೇ ಬದಲವಣೆಗಳಾದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಕುಶಾಲನಗರ, ಸೋಮವಾರಪೇಟೆ ತಾ.,
ಕೊಡಗು ಜಿಲ್ಲೆ–571234

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/80/2025–26 ದಿನಾಂಕ: 04–11–2025

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ಗೋರಿನಬೆಲೆ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ಶ್ರೀ ಎಂ.ಕೆ. ನಾಗರಾಜು ಬಿನ್ ಕೆಂಪಹನುಮಯ್ಯ, 2) ಶ್ರೀ ತೀರ್ಥೇಶ್ ಎಮ್. ಆರ್. ಬಿನ್ ರಾಜಣ್ಣ. ಎಂ.ಜಿ	ನೆಲಮಂಗಲ / ಕಸಬಾ / ಗೋರಿನಬೆಲೆ	150	0-37	ವ್ಯವಸಾಯ	ವಸತಿ
		151/1	1-00		
		151/12	0-24		

ಷರಾ:– ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛೆಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/3576/2025–26

ಟೈಮ್ 100 ಹವಾಮಾನ ಪಟ್ಟಿಯಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ

ಜಾಗತಿಕ ಪ್ರಭಾವಿ ಪಟ್ಟಿಯಲ್ಲಿ ಜೋಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಗತ್ತಿನಲ್ಲಿ ಹವಾಮಾನ ಸುಸ್ಥಿರತೆ ವಿಷಯದಲ್ಲಿ ಅಂತಾರಾಷ್ಟ್ರೀಯ ಮ್ಯಾಗಜಿನ್ ಟೈಮ್ ಸಿದ್ಧಪಡಿಸಿರುವ ನೂರು ಪ್ರಭಾವಿಗಳ ಪಟ್ಟಿಯಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಥಾನ ಪಡೆದಿದ್ದಾರೆ. ಈ ಪಟ್ಟಿಯಲ್ಲಿ ಸ್ಥಾನ ಪಡೆದ ಮೊದಲ ಭಾರತೀಯ ಎನ್ನುವ ದಾಖಲೆಯನ್ನು ಜೋಶಿ ಅವರು ನಿರ್ಮಿಸಿದ್ದಾರೆ.

ವಿಶ್ವದ ಹವಮಾನ ಬದಲಾವಣೆ ತಡೆದು ಸುಸ್ಥಿರತೆ ಕಾಪಾಡುತ್ತಿರುವವರ ಕುರಿತು ಟೈಮ್ ಸಿದ್ಧಪಡಿಸಿರುವ ಈ ಪಟ್ಟಿಯಲ್ಲಿ ಸ್ಥಾನ ಪಡೆಯುವ ಮೂಲಕ ವಿಶ್ವಪ್ರಸಿದ್ಧರ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಕೇಂದ್ರ ಸರಕಾರದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ಅವರೀಗ ವಿಶ್ವದ ಪ್ರಮುಖ ಪ್ರಭಾವಿ ನಾಯಕರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ.

ಧಾರವಾಡ ಲೋಕಸಭಾ ಕ್ಷೇತ್ರದಿಂದ ಸತತ 5ನೇ ಬಾರಿ ಸಂಸದರಾಗಿ ದಾಖಲೆ ನಿರ್ಮಿಸಿದ ಪ್ರಲ್ಹಾದ್ ಜೋಶಿ ಇದೀಗ ಈ ವರ್ಷದ ಟೈಮ್100 ಹವಾಮಾನ ಪಟ್ಟಿಯಲ್ಲಿ ಪ್ರಭಾವಿ ನಾಯಕನ ಸ್ಥಾನ ಪಡೆದ ಮೊದಲ ಭಾರತೀಯ ರಾಜಕಾರಣಿ ಎಂಬ ಹೊಸ ದಾಖಲೆಯನ್ನೂ ಬರೆದಿದ್ದಾರೆ

ಪ್ರತಿಕೂಲ ಪರಿಸ್ಥಿತಿಯಲ್ಲಿ ಜಗತ್ತಿನ ಹವಾಮಾನ ಸುಸ್ಥಿರತೆಗಾಗಿ ಸಚಿವ ಪ್ರಲ್ಹಾದ್ ಜೋಶಿ ಅವರ ಸಾರಥ್ಯದಲ್ಲಿ ಸೌರಶಕ್ತಿ ಹಾಗೂ ನವೀಕರಿಸಬಹುದಾದ ಇಂಧನ ಉತ್ಪಾದನೆಗೆ ಭಾರತ ದಿಟ್ಟ ಹೆಜ್ಜೆಯಿರಿಸಿದೆ. ಇದಕ್ಕಾಗಿ ನೂರಾರು ರಾಷ್ಟ್ರಗಳೂ ಭಾರತದೊಂದಿಗೆ ಕೈ ಜೋಡಿಸಿವೆ. ಸೌರಶಕ್ತಿ ಮತ್ತು ನವೀಕರಿಸಬಹುದಾದ ಇಂಧನ ವಲಯದಲ್ಲಿ ಭಾರತದ ಸಾಧನೆ ವಿಶ್ವಕ್ಕೆ ಮಾದರಿಯಾಗುತ್ತಿದೆ. ಯುರೋಪಿಯನ್ ಒಕ್ಕೂಟ ಸೇರಿದಂತೆ ವಿವಿಧ ದೇಶಗಳ ಪ್ರತಿನಿಧಿಗಳು ಸಚಿವ ಪ್ರಲ್ಹಾದ್ ಜೋಶಿ ಅವರನ್ನು ಭೇಟಿ ಮಾಡಿ ಸೌರಶಕ್ತಿ ಉತ್ಪಾದನೆಯಲ್ಲಿ ಭಾರತದ ತಾಂತ್ರಿಕತೆ, ತಂತ್ರಜ್ಞಾನ ಹಂಚಿಕೆಗೆ ಪ್ರಸ್ತಾಪಿಸಿದ್ದಾರೆ. ಈ ಹಿನ್ನಲೆಯಲ್ಲಿ ಪ್ರಲ್ಹಾದ್ ಜೋಶಿ ಅವರಿಗೆ ಈ ಸ್ಥಾನ ಸಿಕ್ಕಿದೆ.

ಭಾರತದ ಕೋಟ್ಯಂತರ ಮನೆಗಳಲ್ಲಿ ಸೌರ ಬೆಳಕು ಚೆಲ್ಲಿದ 'ಸೂರ್ಯಘರ್' ಮತ್ತು ರೈತ ಸಮುದಾಯವನ್ನು ಸಬಲೀಕರಣಗೊಳಿಸುತ್ತಿರುವ 'ಪಿಎಂ ಕುಸುಮ್' ಯೋಜನೆಯನ್ನು 50ಕ್ಕೂ ಹೆಚ್ಚು ರಾಷ್ಟ್ರಗಳು ತಮ್ಮಲ್ಲೂ ಅಳವಡಿಸಿಕೊಳ್ಳಲು ಉತ್ಸಾಹ ತೋರಿದ್ದರು. 2024ರಲ್ಲಿ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದ ಹೊಣೆ ಹೊತ್ತ ಪ್ರಲ್ಹಾದ್ ಜೋಶಿ ಅವರು ರಾಷ್ಟ್ರೀಯ ಹಸಿರು ಹೈಡ್ರೋಜನ್ ಮಿಷನ್, ಪಿಎಂ ಕುಸುಮ್, ಸೂರ್ಯಘರ್ ಸೇರಿದಂತೆ ಭಾರತದ ಹಸಿರು ಇಂಧನ ಪರಿವರ್ತನೆಯಲ್ಲಿ ಮಹತ್ತರ ಪಾತ್ರ ನಿರ್ವಹಿಸುತ್ತಿದ್ದಾರೆ. 2030ರ ವೇಳೆಗೆ 500 ಗಿಗಾವ್ಯಾಟ್ ಪಳೆಯುಳಿಕೆಯೇತರ ಇಂಧನ ಸಾಮರ್ಥ್ಯ ತಲುಪುವ ಭಾರತದ ಗುರಿಯನ್ನು ಐದು ವರ್ಷ ಮೊದಲೇ ಸಾಧಿಸಿದರು.

ಈ ಎಲ್ಲ ಸಾಧನೆಗೆ ಇದೀಗ ಟೈಮ್ ಸಿದ್ಧಪಡಿಸಿರುವ ಹವಮಾನ ಕ್ಷೇತ್ರದ 100 ಪ್ರಭಾವಿಗಳಲ್ಲಿ ಪ್ರಲ್ಹಾದ್ ಜೋಶಿ ಅವರಿಗೆ ಸ್ಥಾನ ದೊರೆಕಿದೆ. ಪ್ರಲ್ಹಾದ್ ಜೋಶಿ ಅವರೊಂದಿಗೆ ಟೇಲರ್ ನೋರಿಸ್,ಕ್ಯಾಥಿ ಹುಚೇಲ್, ಗಿಲಿಯನ್ ಮಾರ್ಟಿನ್, ಗ್ಯಾವಿನ್ ನ್ಯೂಸೋಮ್, ಅಲೋಕ್ ಶರ್ಮಾ, ಜಸ್ಟೀನ್ ಜಾನ್ಸನ್ ಸೇರಿದಂತೆ 100 ಮಂದಿ ಈ ಪ್ರತಿಷ್ಠಿತ ಗೌರವವನ್ನು ಹಂಚಿಕೊಂಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪಶ್ಚಿಮಘಟ್ಟಗಳ ಬಗ್ಗೆ ಚಿತ್ರಕಲೆ ಪ್ರದರ್ಶನ ನಾಳೆ

ಬೆಂಗಳೂರು: ಇಕೋ ವಾಚ್ ಮತ್ತು ಕರ್ನಾಟಕ ರಾಜ್ಯ ಪಶ್ಚಿಮ ಘಟ್ಟ ಸಂರಕ್ಷಣಾ ಸಮಿತಿ ವತಿಯಿಂದ ನ.6ರಿಂದ 10ರವರೆಗೆ ದಕ್ಷಿಣ ಭಾರತದ ಪಶ್ಚಿಮಘಟ್ಟಗಳ ಕುರಿತು ಚಿತ್ರಕಲೆ ಪ್ರದರ್ಶನ ಹಾಗೂ ನ.10ರಂದು ರಾಷ್ಟ್ರಮಟ್ಟದ ಪರಿಸರ ತಜ್ಞರ ಚರ್ಚೆ ಕಾರ್ಯಕ್ರಮವನ್ನು ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಲಾಗಿದೆ. ಚಿತ್ರಕಲಾ ಪ್ರದರ್ಶನವನ್ನು ಸಾಹಿತಿ ಗಿರೀಶ್ ಕಾಸರವಳ್ಳಿ ಹಾಗೂ ಜಯಂತ್ ಕಾಯ್ಕಿಣಿ ಉದ್ಘಾಟಿಸಲಿದ್ದು, ಚಿತ್ರಗಾರರಾದ ಎಸ್.ಜಿ ವಾಸುದೇವ್ ಹಾಗೂ ರೇಖಾರಾವ್ ಹೆಬ್ಬಾರ್ ಸೇರಿದಂತೆ 65ಕ್ಕೂ ಹೆಚ್ಚು ಚಿತ್ರಗಾರರು ತಮ್ಮ ಚಿತ್ರಕಲೆಯ ಪ್ರದರ್ಶನವನ್ನು ಪ್ರದರ್ಶಿಸುತ್ತಾರೆ. ನ.10ರಂದು ನಡೆಯುವ ಸಂವಾದ ಕಾರ್ಯಕ್ರಮವನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ಉದ್ಘಾಟಿಸಲಿದ್ದು, ಕಾರ್ಯಕ್ರಮ ದಲ್ಲಿ ಕರ್ನಾಟಕ ಪಶ್ಚಿಮ ಘಟ್ಟದ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಮೊಹಮ್ಮದ್ ತಬ್ರೇಜ್ ಆಲಂ ,ಅರಣ್ಯ ಇಲಾಖೆಯ ನಿವೃತ್ತ ಪಿ.ಸಿ.ಸಿ.ಎಫ್ ಅವನಿ ಕುಮಾರ ವರ್ಮ ಸೇರಿದಂತೆ ಪಶ್ಚಿಮ ಘಟ್ಟ ಹೊಂದಿರುವ ರಾಜ್ಯದ ಪರಿಸರವಾದಿಗಳು ಭಾಗಿಯಾಗಲಿದ್ದಾರೆ ಎಂದು ಪರಿಸರವಾದಿ ಸುರೇಶ್ ಹೆಬ್ಳೀಕರ್ ತಿಳಿಸಿದ್ದಾರೆ.

ಕಾರ್ಮಿಕರಿಗೆ 3 ದಿನ ರಜೆ ನೀಡಿ: ಡಿಕೆ ಪತ್ರ

ಬೆಂಗಳೂರು: ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಮತದಾನ ಮಾಡಲು ಕಾರ್ಮಿಕರಿಗೆ ಮೂರು ದಿನಗಳ ವೇತನ ಸಹಿತ ರಜೆ ನೀಡುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಯಮಿದಾರರಿಗೆ ಮನವಿ ಮಾಡಿದ್ದಾರೆ. ಈ ಕುರಿತು ಪತ್ರ ಬರೆದಿರುವ ಡಿ.ಕೆ.ಶಿವಕುಮಾರ್ ಬಿಹಾರ ರಾಜ್ಯದ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು ನ.6, 11ರಂದು ಮತದಾನವಾಗಲಿದೆ. ಬೆಂಗಳೂರು ಮತ್ತು ಕರ್ನಾಟಕದ ವಿವಿಧ ಭಾಗಗಳಲ್ಲಿ ಬಿಹಾರದ ನಿವಾಸಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಎಲ್ಲಾ ಕಂಪನಿಗಳು, ವಾಣಿಜ್ಯ ಉದ್ಯಮಿಗಳು, ಹೋಟೆಲ್ಗಳು, ಗುತ್ತಿಗೆದಾರರು, ಬಿಲ್ಡರ್‌ಗಳು, ಅಂಗಡಿ ಮುಂಗಟ್ಟುಗಳು ಹಾಗೂ ಇತರ ಉದ್ದಿಮೆದಾರರು ಬಿಹಾರದ ವಿಧಾನಸಭೆ ಚುನಾವಣೆಯಲ್ಲಿ ಮತ ಚಲಾಯಿಸಲು ಅನುಕೂಲವಾಗುವಂತೆ ರಾಜ್ಯದಲ್ಲಿ ನೆಲೆಸಿರುವವರಿಗೆ ಕನಿಷ್ಠ ಮೂರು ದಿನಗಳ ವೇತನ ಸಹಿತ ರಜೆ ನೀಡಬೇಕು. ಈ ಮೂಲಕ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಮೆಟ್ರೋಗಿಂತ 40 ಪಟ್ಟು ಕಡಿಮೆ ದಕ್ಷತೆಯ ಯೋಜನೆಗೆ ಆದ್ಯತೆ ನೀಡುವುದರ ಹಿಂದಿನ ತಾರ್ಕಿಕತೆ ಏನು?

ಸುರಂಗ: ತಾಂತ್ರಿಕ ಪ್ರಶ್ನೆ ಎತ್ತಿದ ಸಂಸದ

ಬೆಂಗಳೂರು: ಸುರಂಗ ಮಾರ್ಗದ ಚರ್ಚೆಗಳು ಸದ್ಯಕ್ಕೆ ತಣ್ಣಗಾಗುವ ಲಕ್ಷಣಗಳು ಕಾಣುತ್ತಿಲ್ಲ. ಬೆಂಗಳೂರಿನಲ್ಲಿ ಟನಲ್ ರಸ್ತೆ ವಿಚಾರವಾಗಿ ಸಂಸದ ತೇಜಸ್ವಿ ಸೂರ್ಯ ಅವರು ಕೆಲ ತಾಂತ್ರಿಕ ಪ್ರಶ್ನೆಗಳ ಹಾಕಿದ್ದು, ಇವುಗಳಿಗೆ ಉತ್ತರ ಕೊಡಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಸವಾಲು ಹಾಕಿದ್ದಾರೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿ, ಟನಲ್‌ನ ತಾಂತ್ರಿಕ ವಿಚಾರಗಳ ಬಗ್ಗೆ ಡಿ.ಕೆ.ಶಿವಕುಮಾರ್ ಮಾತನಾಡುವುದಿಲ್ಲ. ವೈಯಕ್ತಿಕ ನಿಂದನೆ ಮಾಡುವ ಕೆಲಸ ಆಗುತ್ತಿದೆ. ಟನಲ್ ರಸ್ತೆಯಲ್ಲಿ ಎರಡು ಹಾಗೂ ಮೂರು ಚಕ್ರದ ವಾಹನಗಳಿಗೆ ಅವಕಾಶ ಇಲ್ಲ. ಇದು ಯಾವ ರೀತಿ ನ್ಯಾಯ, ಅವರು ತೆರಿಗೆ ಕಟ್ಟುವುದಿಲ್ಲವೇ? ಶ್ರೀಮಂತರಿಗೆ ಮಾತ್ರ ಸುರಂಗ ರಸ್ತೆನಾ ಎಂದು ಪ್ರಶ್ನಿಸಿದ್ದಾರೆ.

ಅಲ್ಲದೆ, ಹಳದಿ ಮಾರ್ಗದಲ್ಲಿ ಶೇ.37ರಷ್ಟು ಟ್ರಾಫಿಕ್ ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ಹೀಗಿದ್ದರೂ ಟನಲ್‌ಗೆ ಯಾಕೆ ಬೆಂಬಲ ಕೊಡುತ್ತಿದ್ದೀರಾ? ಡಿಪಿಆರ್ ಪ್ರಕಾರ ಮುಂದೆ ಈಗಿನ ಖರ್ಚಿಗಿಂತ ಶೇ.25 ಹೆಚ್ಚಳ ಆಗಲಿದೆ. ಕೇಂದ್ರ ಸರಕಾರ ಅಟಲ್ ಟನಲ್‌ಗೆ 9 ಕಿಮೀ 3200 ಕೋಟಿ ರು. ವೆಚ್ಚದಲ್ಲಿ ಮಾಡಿದ್ದಾರೆ. ಇಲ್ಲಿ ಯಾವ ಪರ್ವತ ಇದೆ. ಕಿ.ಮೀಗೆ 1050 ಕೋಟಿ ರು. ಖರ್ಚು ಮಾಡುತ್ತಿದ್ದೀರಿ ?ಎಂದು ಪ್ರಶ್ನೆ ಮಾಡಿದ್ದಾರೆ.

ಪ್ರಮುಖ ತಾಂತ್ರಿಕ ಪ್ರಶ್ನೆಗಳು: ಬೆಂಗಳೂರಿನ ಒಟ್ಟು ವಾಹನಗಳಲ್ಲಿ ಖಾಸಗಿ ಕಾರುಗಳು ಕೇವಲ ಶೇ.19ರಷ್ಟಿವೆ (ಸಾರಿಗೆ ಇಲಾಖೆಯ ಡೇಟಾ 31.08.2025 ರಂತೆ). ರಾಜ್ಯದ ನೀತಿಗಳು ಈ ಸಣ್ಣ ಶೇಕಡಾವಾರು ಅಥವಾ ಹೆಚ್ಚಿನ ಪ್ರಯಾಣಿಸುವ ಜನಸಂಖ್ಯೆ ಪೂರೈಸುವತ್ತ ಗಮನಹರಿಸಬೇಕೇ? ನಗರ ಚಲನಶೀಲತೆಯ ನಿಜವಾದ ಉದ್ದೇಶ ಏನಾಗಿರಬೇಕು? ಇದಲ್ಲದೆ ಡಿಪಿಆರ್ ಅಧ್ಯಯನಗಳ ಪ್ರಕಾರ ಸುರಂಗ ರಸ್ತೆಯು ಪ್ರತಿ ದಿಕ್ಕಿಗೆ ಗಂಟೆಗೆ 1,800 ಪ್ರಯಾಣಿಕರನ್ನು ಮಾತ್ರ ಸಾಗಿಸುತ್ತದೆ ಎಂದು ಅಂದಾಜಿಸಲಾಗಿದೆ. ಆದರೆ ಮೆಟ್ರೋ ಸುಮಾರು 69,000 ಪ್ರಯಾಣಿಕರನ್ನು ಸಾಗಿಸುತ್ತದೆ. ಹಾಗಾದರೆ, ಮೆಟ್ರೋಗಿಂತ 40 ಪಟ್ಟು ಕಡಿಮೆ ದಕ್ಷತೆಯ ಯೋಜನೆಗೆ ಆದ್ಯತೆ ನೀಡುವುದರ ಹಿಂದಿನ ತಾರ್ಕಿಕತೆ ಏನು?

ಸುರಂಗ ರಸ್ತೆಯ ಡಿಪಿಆರ್‌ನಲ್ಲಿ 22 ಚಾಕ್ ಪಾಯಿಂಟ್‌ಗಳನ್ನು ಉಲ್ಲೇಖಿಸಲಾಗಿದೆ, ಇವು ಮತ್ತೆ ದಟ್ಟಣೆಗೆ ಗುರಿಯಾಗುತ್ತವೆ. ಇದು ಸುರಂಗವನ್ನು ನಿರ್ಮಿಸುವ ಉದ್ದೇಶವನ್ನೇ ವಿಫಲಗೊಳಿಸುವುದಿಲ್ಲವೇ? ಡಿಪಿಆರ್ ಪ್ರಕಾರ ಸುರಂಗ ಜೋಡಣೆಯು ನಗರದ ಪ್ರಮುಖ ಪರಿಸರ ತಾಣಗಳಾದ ಲಾಲ್‌ಬಾಗ್ ಮತ್ತು ಹೆಬ್ಬಾಳದ ಕೆರೆಯ ಸಮೀಪದಲ್ಲಿ ಹಾದುಹೋಗುತ್ತದೆ. ಬೆಂಗಳೂರು ಭೂಕಂಪನ ವಲಯ 2 ರ ಅಡಿಯಲ್ಲಿ ಬರುತ್ತದೆ. ಈ ನಿಟ್ಟಿನಲ್ಲಿ ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ಅಧ್ಯಯನ ಏಕೆ ನಡೆಸಲಾಗಿಲ್ಲ, ಅಥವಾ ಯಾವುದೇ ಭೂವೈಜ್ಞಾನಿಕ ಮತ್ತು ಭೂಕಂಪಶಾಸ್ತ್ರೀಯ ಅಧ್ಯಯನ ಏಕೆ ನಡೆಸಲಾಗಿಲ್ಲ ಎಂದು ಪ್ರಶ್ನಿಸಿದ್ದಾರೆ.

ಇದಲ್ಲದೆ, ರಾಜ್ಯ ಸರಕಾರದ ನಗರಾಭಿವೃದ್ಧಿ ಇಲಾಖೆಯಿಂದ ರಚಿಸಲ್ಪಟ್ಟ ತಜ್ಞರ ಸಮಿತಿಯು ಯೋಜನೆಯ ಡಿಪಿಆರ್‌ನಲ್ಲಿ ಸಂಚಾರ ನಿರ್ವಹಣಾ ಯೋಜನೆಯ ಕೊರತೆ ಮತ್ತು ಸಾಕಷ್ಟು ಅಧ್ಯಯನಗಳು ಮತ್ತು ಮಣ್ಣಿನ ದತ್ತಾಂಶ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಎತ್ತಿ ತೋರಿಸಿದೆ. ಈ ಕಾಳಜಿಗಳನ್ನು ಪರಿಹರಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ? ಸುರಂಗ ರಸ್ತೆಯೊಂದಿಗೆ ಪ್ರಯಾಣದ ಸಮಯವು 2031 ರಲ್ಲಿ ಕೇವಲ 13 ನಿಮಿಷಗಳು ಮತ್ತು 2041 ರಲ್ಲಿ 15 ನಿಮಿಷಗಳು ಮಾತ್ರ ಉಳಿತಾಯವಾಗಿದೆ. ಪ್ರತಿ ವರ್ಷ ವಾಹನ ಮಾಲೀಕತ್ವ ಹೆಚ್ಚುತ್ತಿರುವುದರಿಂದ, ಪ್ರಯಾಣದ ಸಮಯ ಹೆಚ್ಚಾಗುವ ನಿರೀಕ್ಷೆಯಿದೆ. ಹಾಗಾದರೆ, ಹಕ್ಕಿನ ಆಧಾರವೇನು? ಯೋಜನೆಗೆ 50 ತಿಂಗಳ ಯೋಜನೆಯ ಕಾಲಮಿತಿ ನಿಗದಿಪಡಿಸಲಾಗಿದೆ. ಹೀಗಿದ್ದರೂ ತಜ್ಞರ ಸಮಿತಿಯು ವೇಳಾಪಟ್ಟಿಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ. ಬೆಂಗಳೂರಿನಲ್ಲಿ ಮೆಟ್ರೋ ಮತ್ತು ಇತರ ಪ್ರಮುಖ ಮೂಲಸೌಕರ್ಯ ಯೋಜನೆಗಳು ಸರಾಸರಿ ನಾಲ್ಕು ವರ್ಷಗಳ ವಿಳಂಬವಾಗಿದೆ. ಈ ಯೋಜನೆಗೆ ನಿರೀಕ್ಷಿತ ವಾಸ್ತವಿಕ ಅನುಷ್ಠಾನ ಸಮಯ ಎಷ್ಟು? ಈಗಾಗಲೇ ಹೆಚ್ಚು ದುಬಾರಿಯಾಗಿರುವ ಸುರಂಗ ಯೋಜನೆಯ ವಿಳಂಬದಿಂದಾಗಿ ನಿರೀಕ್ಷಿತ ವೆಚ್ಚವು ಹೆಚ್ಚಾಗಬಹುದೆಂದು ರಾಜ್ಯ ಸರಕಾರ ಅಂದಾಜು ಮಾಡಿದೆಯೇ? ಎಂದು ಪ್ರಶ್ನಿಸಿದ್ದಾರೆ.

ಇವಿ ಕ್ಷೇತ್ರದಲ್ಲಿ ಭಾರತವು ಇನ್ನೂ ಸ್ವಾವಲಂಬಿಯಾಗಿಲ್ಲ

ಬೆಂಗಳೂರು: ವಿದ್ಯುತ್ ವಾಹನಗಳ ತಯಾರಿಕೆಯಲ್ಲಿ ಭಾರತ ಇನ್ನೂ ಸ್ವಾವಲಂಬಿಯಾಗಿಲ್ಲ. ಬ್ಯಾಟರಿ ತಯಾರಿಕೆಯಲ್ಲಿ ಬಳಸುವ ಲಿಥಿಯಮ್ ಹಾಗೂ ಕೊಬಾಲ್ಟ್‌ನ್ನು ಇನ್ನು ಬೇರೆ ದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದೇವೆ. ಅದರಿಂದ ಯುವ ತಂತ್ರಜ್ಞರು ಸ್ಥಳೀಯ ಕಚ್ಚಾ ಪದಾರ್ಥಗಳಿಂದ ಅಗತ್ಯ ವಸ್ತುಗಳನ್ನು ನಮ್ಮ ನೆಲದಲ್ಲಿಯೇ ಉತ್ಪಾದಿಸುವತ್ತ ಗಮನ ಹರಿಸಬೇಕು ಎಂದು ಡೆಸಿಬಲ್ ಲ್ಯಾಬ್ಸ್ ಸಂಸ್ಥಾಪಕ ಸೂರಜ್ ಎಸ್.ಡಿ ತಿಳಿಸಿದರು.

ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ''ಶಕ್ತಿವಾಹ 3.0'' 5-ದಿನಗಳ ಕಾರ್ಯಾಗಾರದಲ್ಲಿ ಮಾತನಾಡಿದ ಅವರು , ಬಳಸಿದ ವಸ್ತುಗಳನ್ನು ಬಿಸಾಡದೆ ಅವುಗಳ ಪುನರ್‌ಬಳಕೆಗೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು. ಏಕೆಂದರೆ ಭಾರತದ ಅಭಿವೃದ್ಧಿಯ ಭವಿಷ್ಯ ಇದರಲ್ಲಿದೆ. ಪರಿಸರವನ್ನು ಸಂರಕ್ಷಿಸಿಕೊಳ್ಳಲು ತಂತ್ರಜ್ಞಾನದಲ್ಲಿ ಹೊಸ ಆವಿಷ್ಕಾರಗಳನ್ನು ಕೈಗೊಳ್ಳುವ ಪ್ರಕ್ರಿಯೆ ಅನಿವಾರ್ಯವಾಗಿದೆ ಎಂದರು।

ಕಾರ್ಯಕ್ರಮದಲ್ಲಿ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯ ಬೆಂಗಳೂರು ಕ್ಯಾಂಪಸ್‌ನ ಉಪಾಧ್ಯಕ್ಷ ಡಾ. ಸಂದೀಪ್ ಶಾಸ್ತ್ರಿ, ಹರ್ಮನ್ ಅಟೋಮೋಟಿವ್‌ನ ಉಪಾಧ್ಯಕ್ಷ ಡಾ. ಅನೀಶ್ ಚೆರಿಯನ್, ಆಲ್‌ಸ್ಟಾಮ್ ಸಂಸ್ಥೆಯ ಶೈಕ್ಷಣಿಕ ನಿರ್ವಾಹಕ ಡಾ. ಸಂಜೀವ್ ಕೆ.ಸೇರಿದಂತೆ ಇನ್ನಿತರ ಗಣ್ಯರು ಹಾಗೂ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಯಲಹಂಕದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ''ಶಕ್ತಿವಾಹ 3.0'' ಕಾರ್ಯಾಗಾರ ನಡೆಯಿತು.

ಕಂಪ್ಯೂಟರ್ ಆಧಾರಿತ ಶಿಕ್ಷಣ ಅತ್ಯಗತ್ಯ: ಡಾ. ಎ.ಪಿ.ಭಟ್

ಬೆಂಗಳೂರು: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿನ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಆಧಾರಿತ ಶಿಕ್ಷಣ ಅಗತ್ಯವಾಗಿದೆ. ಅದರಲ್ಲೂ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳ ಕಲಿಕೆಯಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಹಾಗೂ ಮುಂದಿನ ಭವಿಷ್ಯದ ನಿರ್ಮಾಣಕ್ಕೆ ಕಂಪ್ಯೂಟರ್ ಆಧಾರಿತ ಶಿಕ್ಷಣ ಅಗತ್ಯ ಎಂದು ಯು.ಎಸ್.ಎ.ಎಂ.ಇ.ಸಿ ಕಾರ್ಯದರ್ಶಿ ಎ.ಪಿ.ಭಟ್ ತಿಳಿಸಿದರು.

ನಾಗಸಂದ್ರದಲ್ಲಿರುವ ವಿಡಿಯಾ ಪೂರ್ಣಪ್ರಜ್ಞಾ ಪದವಿ ಪೂರ್ವ ಕಾಲೇಜಿನಲ್ಲಿ ವರ್ಚುವಲ್ ಲ್ಯಾಬ್ ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನದ ವಿದ್ಯಾರ್ಥಿಗಳು ಸಿಇಟಿ ಮತ್ತು ನೀಟ್ ಅಭ್ಯಾಸ ಪರೀಕ್ಷೆಗಳಿಗೆ ತರಬೇತಿ ಪಡೆಯಲು ಹಾಗೂ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ಬ್ಯಾಂಕಿಂಗ್ ಕ್ಷೇತ್ರದ ಪರೀಕ್ಷೆಗಳಿಗೆ ನಡೆಸಲು ಈ ವರ್ಚುವಲ್ ಲ್ಯಾಬ್ ಅನುಕೂಲವಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಬೌದ್ಧಿಕವಾಗಿ, ತಾಂತ್ರಿಕವಾಗಿ ಮುಂದುವರೆಯಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಕಾರ್ಯದರ್ಶಿ ಗೋಪಾಲ ಶಬರಾಯ, ಪ್ರಾಂಶುಪಾಲ ಎಂ.ಎಸ್ ಉಮೇಶ್ ಕುಮಾರ್, ಶೈಕ್ಷಣಿಕ ನಿರ್ದೇಶಕ ಪ್ರವೀಣ್ ಕುಮಾರ್ ಕಾಲೇಜಿನ ಉಪನ್ಯಾಸಕರು ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ನಾಗಸಂದ್ರದಲ್ಲಿರುವ ವಿಡಿಯಾ ಪೂರ್ಣಪ್ರಜ್ಞಾ ಪದವಿ ಪೂರ್ವ ಕಾಲೇಜಿನಲ್ಲಿ ವರ್ಚುವಲ್ ಲ್ಯಾಬ್ ಉದ್ಘಾಟಿಸಲಾಯಿತು.

ಒಮಾನ್‌ನಲ್ಲಿ ವಿಶ್ವಕರ್ಮ ಪೂಜಾ ಮಹೋತ್ಸವ

ಮಸ್ಕತ್: ವಿಶ್ವ ಬ್ರಾಹ್ಮಣ ಒಕ್ಕೂಟ ಮಸ್ಕತ್ ವತಿಯಿಂದ ವಿಶ್ವಕರ್ಮ ಪೂಜಾ ಮಹೋತ್ಸವ ಹಾಗೂ 35ನೇ ವಾರ್ಷಿಕೋತ್ಸವದ ಸಂಭ್ರಮವನ್ನು ಒಮಾನ್‌ನ ಹೋಟೆಲ್ ಮಸ್ಕತ್ ಹಾಲಿಡೇ ಸಭಾಭವನದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಈ ಮಹೋತ್ಸವವನ್ನು ಒಕ್ಕೂಟದ ಅಧ್ಯಕ್ಷ ರವೀಂದ್ರ ಆಚಾರ್ಯ ಕಳತ್ತೂರು ಅವರ ನೇತೃತ್ವದಲ್ಲಿ ನಡೆಯಿತು. ಸಮಾಜದ ಬಾಂಧವರ ಸಕ್ರಿಯ ಸಹಕಾರದೊಂದಿಗೆ ಯಶಸ್ವಿಯಾಗಿ ನೆರವೇರಿಸಲಾಯಿತು. ವಾಗ್ಮಿ ದಾಮೋದರ ಶರ್ಮಾ ಬಾರ್ಕೂರು ಅವರು ಇಂತಹ ಕಾರ್ಯಕ್ರಮಗಳು ನಾಡು ನುಡಿ ಮತ್ತು ಸಂಸ್ಕೃತಿಯ ಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ ಎಂದರು. ಅವರ ಸಾಹಿತ್ಯ ಶೈಲಿಯ ಪ್ರೇರಣದಾಯಕ ಮಾತುಗಳು ಎಲ್ಲರ ಮನ ಗೆಲ್ಲುವಲ್ಲಿ ಯಶಸ್ವಿಯಾಯಿತು. ಪ್ರಭಾಕರ ಆಚಾರ್ಯ (ಮುಂಬೈ) ಅವರು ಒಕ್ಕೂಟದ ಶ್ರಮ, ಉತ್ಸಾಹ ಹಾಗೂ ಒಗ್ಗಟ್ಟನ್ನು ಮೆಚ್ಚಿಕೊಂಡು ಸಂತೋಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಚಂಡೆವಾದನ ಮತ್ತು ಯಕ್ಷಗಾನ ಕುಣಿತಗಳ ಮೂಲಕ ಅತಿಥಿಗಳಿಗೆ ಭವ್ಯ ಸ್ವಾಗತ ನಂತರ ಕುಂಭ ಕಲಶ ಶಾಸ್ತ್ರೋಕ್ತವಾಗಿ ನಡೆಯಿತು. ವಿವಿಧ ಧಾರ್ಮಿಕ ವಿಧಿವಿಧಾನಗಳಿಂದ ಪೂಜಾ ಕೈಂಕರ್ಯ, ಪ್ರಾರ್ಥನೆ, ಭಜನೆ, ಕುಣಿತ ಭಜನೆ ಹಾಗೂ ಮಹಾ ಪ್ರಸಾದಗಳೊಂದಿಗೆ ಪೂಜಾ ಕಾರ್ಯಕ್ರಮವು ಶ್ರದ್ಧಾಭಕ್ತಿಯಿಂದ ನೆರವೇರಿತು. ಪುರೋಹಿತ ಶ್ರೇಷ್ಠ, ಪ್ರಖರ ವಾಗ್ಮಿ ದಾಮೋದರ ಶರ್ಮಾ, ಪ್ರಭಾಕರ ಆಚಾರ್ಯ ಮುಂಬೈ, ಪುರಂದರ ಪುರೋಹಿತ್, ಪ್ರಶಾಂತ್ ಆಚಾರ್ಯ ನಿಜ್ವಾ, ಪ್ರಭಾಕರ ಮೂಡುಬೆಳ್ಳೆ, ಪ್ರವೀಣ್ ಬುಕ್ಕಿಗುಡ್ಡೆ ಮುಂತಾದ ಗಣ್ಯರನ್ನು ಸನ್ಮಾನಿಸಲಾಯಿತು. ಕಳೆದ ಶೈಕ್ಷಣಿಕ ವರ್ಷದಲ್ಲಿ ಗರಿಷ್ಟ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ವಿಶ್ವಕರ್ಮ ಪೂಜಾ ಮಹೋತ್ಸವ ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷ ರವೀಂದ್ರ ಆಚಾರ್ಯ ಕಳತ್ತೂರು, ಪ್ರಭಾಕರ ಆಚಾರ್ಯ ಸೇರಿದಂತೆ ಮತ್ತಿತರಿದ್ದರು.

ಬ್ಯಾಂಕ್ ಸಾಲ ಜಟಾಪಟಿ: ಲೆಕ್ಕಪತ್ರಕ್ಕಾಗಿ ಹೈಕೋರ್ಟ್ ಮೊರೆ ಹೋದ ಮಲ್ಯ

ಬೆಂಗಳೂರು: ಸಂಪೂರ್ಣ ಸಾಲ ತೀರಿದ್ದರೂ ಈಗಲೂ ಪ್ರಕ್ರಿಯೆ ಮುಂದುವರಿಸಲಾಗುತ್ತಿದೆ ಎಂದು ಆರೋಪಿಸಿ ವಿಜಯ್ ಮಲ್ಯ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಏಕಸದಸ್ಯ ಪೀಠ ನಡೆಸಿದೆ.

ರಿಟ್ ಅರ್ಜಿಯಲ್ಲಿ ಬ್ಯಾಂಕ್‌ಗಳಿಂದ ಲೆಕ್ಕಪತ್ರ ಹೇಗೆ ಕೇಳುತ್ತೀರೆಂದು ವಿಜಯ್ ಮಲ್ಯ ಪರ ವಕೀಲ ಸಜನ್ ಪೂವಯ್ಯಗೆ ಕೋರ್ಟ್ ಪ್ರಶ್ನೆ ಮಾಡಿದ್ದು, ಆಕ್ಷೇಪಣೆ ಸಲ್ಲಿಸುವಂತೆ ಬ್ಯಾಂಕ್‌ಗಳ ಪರ ವಕೀಲರಿಗೆ ಸೂಚಿಸಿ ವಿಚಾರಣೆ ನವೆಂಬರ್ 12ಕ್ಕೆ ಮುಂದೂಡಿದೆ.

ವಿಜಯ್ ಮಲ್ಯ ಪರ ವಕೀಲರ ವಾದ: ವಿಜಯ್ ಮಲ್ಯ ಪರ ವಾದಿಸಿದ ಹಿರಿಯ ವಕೀಲ ಸಜನ್ ಪೂವಯ್ಯ, ಸಾಲ ವಸೂಲಿ ಪ್ರಾಧಿಕಾರ ಹೈಕೋರ್ಟ್ ಅಧೀನದಲ್ಲಿ ಬರುತ್ತದೆ. ಬ್ಯಾಂಕ್‌ನವರು ಒಂದು ಹೇಳುತ್ತಾರೆ, ಅಫಿಷಿಯಲ್ ಲಿಕ್ವಿಡೇಟರ್ ಮತ್ತೊಂದು ಹೇಳುತ್ತಾರೆ. ಒಂದು ಕಾಲದಲ್ಲಿ ಯುಎಚ್‌ಬಿಎಲ್ ವಿಶ್ವದಲ್ಲಿ ಪ್ರಸಿದ್ಧ ಕಂಪನಿಯಾಗಿದ್ದು, ಡಾ.ವಿಜಯ್ ಮಲ್ಯ ಇದರ ನಿರ್ದೇಶಕರಾಗಿದ್ದರು. ಅಲ್ಲದೆ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸುವುದು ಸಾಂವಿಧಾನಿಕ ಹಕ್ಕೆಂದು ಹೇಳಿದ್ದಾರೆ.

ಈ ವೇಳೆ ಪ್ರಶ್ನೆ ಮಧ್ಯಪ್ರವೇಶ ಮಾಡಿದ ಪೀಠ, ಸುಪ್ರೀಂನ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಮಲ್ಯ ಹಾಜರಾಗಿಲ್ಲ. ದೇಶದ ವಿವಿಧೆಡೆ ನಡೆದಿರುವ ಕೋರ್ಟ್ ವಿಚಾರಣೆಗೆ ಬಂದಿಲ್ಲ. ಹೀಗಿರುವಾಗ ರಿಟ್ ಸಲ್ಲಿಸುವ ಹಕ್ಕನ್ನು ಹೇಗೆ ಮಂಡಿಸುತ್ತೀರಿ ಎಂದು ಪ್ರಶ್ನಿಸಿದೆ. ವಿಜಯ್ ಮಲ್ಯ ಲಂಡನ್ ಕೋರ್ಟ್‌ನ ಕಾನೂನು ಪ್ರಕ್ರಿಯೆಗೆ ಒಳಪಟ್ಟಿದ್ದಾರೆ ಎಂದು ಈ ವೇಳೆ ಮಲ್ಯ ಪರ ವಕೀಲರು ವಾದಿಸಿದ್ದಾರೆ.

ಬ್ಯಾಂಕ್‌ಗಳ ಪರ ವಕೀಲರ ವಾದ: ಬ್ಯಾಂಕ್‌ಗಳ ಪರ ಹಿರಿಯ ವಕೀಲ ವಿಕ್ರಮ್ ಹುಯಿಲಗೋಳ ವಾದ ಮಂಡಿಸಿದ್ದು, ಮಲ್ಯ ದೇಶ ತೊರೆದು ದೇಶಭ್ರಷ್ಟರಾಗಿದ್ದಾರೆ. ಅವರು ಮುಗ್ದರಾಗಿದ್ದರೆ ಭಾರತಕ್ಕೆ ಮರಳಿ ನ್ಯಾಯಾಂಗದ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಿತ್ತು. ಆದರೆ ತಮಗೆ ಬೇಕಾದಾಗ ಮಾತ್ರ ಕೋರ್ಟ್ ಮುಂದೆ ಬರುತ್ತಾರೆಂದು ಆರೋಪಿಸಿದ್ದಾರೆ. ವಾದ ಪ್ರತಿವಾದ ಆಲಿಸಿದ ಕೋರ್ಟ್ ವಿಚಾರಣೆಯನ್ನ ನವೆಂಬರ್ 12ಕ್ಕೆ ಮುಂದೂಡಿದೆ.

ವಿಶ್ವವಾಣಿ

ಸಂಪಾದಕೀಯ

ಭಯದ ವ್ಯಾಪಾರಿ ಟ್ರಂಪ್

ಕೇಡುಗಾಲ ಬಂದಾಗ ನಾಯಿ ಮೊಟ್ಟೆ ಇಡ್ತಂತೆ ಎಂಬುದೊಂದು ಜಾಣನುಡಿಯನ್ನು ನೀವು ಕೇಳಿರಬಹುದು. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವರ್ತಿಸುತ್ತಿರುವ ರೀತಿ ನೋಡಿದಾಗ ಈ ಮಾತು ನೆನಪಾದರೆ ಅಚ್ಚರಿಯೇನಿಲ್ಲ. ಒಂದಿಡೀ ವಿಶ್ವವೇ ತನ್ನ ಕಣ್ಣ ಇಶಾರೆಗೆ ತಕ್ಕಂತೆ ನರ್ತಿಸಬೇಕು/ವರ್ತಿಸಬೇಕು ಎಂಬ ಜಾಯಮಾನವನ್ನು 'ವಿಶ್ವದ ದೊಡ್ಡಣ್ಣ' ಎಂದು ಕರೆಸಿಕೊಳ್ಳುವ ಅಮೆರಿಕವು ದಶಕಗಳಿಂದಲೂ ತೋರುತ್ತಲೇ ಬಂದಿದೆ. ಆದರೆ, ಟ್ರಂಪ್ ದರ್ಬಾರಿನಲ್ಲಿ ಇದು ಅತಿರೇಕದ ಮಟ್ಟವನ್ನು ಮುಟ್ಟಿದಂತೆ ಕಾಣುತ್ತಿದೆ. 'ಜಗತ್ತನ್ನು 150 ಬಾರಿ ಸ್ಫೋಟಿಸಲು ಸಾಕಾಗುವಷ್ಟು ಪರಮಾಣು ಶಸ್ತ್ರಾಸ್ತ್ರಗಳು ನಮ್ಮಲ್ಲಿವೆ' ಎಂಬ ಅವರ ಇತ್ತೀಚಿನ ಹೇಳಿಕೆ ಈ ಗ್ರಹಿಕೆಗೆ ಕಾರಣ. ಈ ಹೇಳಿಕೆಗೆ ಕಾರಣವಾದ ಅಂಶ ಅಥವಾ ಬೆಳವಣಿಗೆ ಏನೇ ಇರಲಿ, ಟ್ರಂಪ್ ಅವರು ಇತ್ತೀಚೆಗೆ ತೀರಾ ಬೇಜವಾಬ್ದಾರಿಯುತ ನುಡಿ-ನಡೆಗಳನ್ನು ಹೊಮ್ಮಿಸುತ್ತಿರುವುದಕ್ಕೆ ಇದು ಪುರಾವೆಯಾಗಿದೆ. ಜಗತ್ತಿನ ಸಾಕಷ್ಟು ಯುದ್ಧಗಳನ್ನು ತಪ್ಪಿಸಿದ ಶಾಂತಿದೂತ ತಾವೆಂದು ಹೇಳಿಕೊಳ್ಳುತ್ತಾ ನೊಬೆಲ್ ಶಾಂತಿ ಪ್ರಶಸ್ತಿಗಾಗಿ ಇನ್ನಿಲ್ಲದಂತೆ ಹಂಬಲಿಸಿದ ಇದೇ ಟ್ರಂಪ್, ಮತ್ತೊಂದೆಡೆ ಹೀಗೆ ಭಯವನ್ನು ಬಿತ್ತುವ ಮಾತಾಡುವುದು ಅವರ ಇಬ್ಬಂದಿತನಕ್ಕೆ ಸಾಕ್ಷಿಯಾಗಿದೆ. 'ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಶರಣಾರ್ಥಿ' ಎಂಬ ಮಾತಿನ ಸಾಕಾರರೂಪದಂತಿರುವ ಟ್ರಂಪ್, ಒಂದು ಕಾಲಕ್ಕೆ ಪರಮಾಣು ದಾಳಿಯಿಂದಾಗಿ ವಿಶ್ವದ ಕೆಲ ಭಾಗಗಳಿಗೆ ಒದಗಿದ ತೀವ್ರ ಘಾಸಿಯನ್ನು ಮರೆತಂತಿದೆ ಅಥವಾ ಹಾಗೆ 'ಘಾಸಿಮಾಡುವ ಭಯವನ್ನು ಬಿತ್ತುವುದೇ' ಟ್ರಂಪ್ ಅವರ ಉದ್ದೇಶವಾಗಿದ್ದಲ್ಲಿ ಅದು ಖಂಡನಾರ್ಹ. ಜಗತ್ತಿಗೆ ಇಂದು ಬೇಕಿರುವುದು ಪ್ರೀತಿ-ವಾತ್ಸಲ್ಯ, ಮಾನವೀಯತೆಯ ಚಿಲುಮೆ. ಸಾಧ್ಯವಿದ್ದಲ್ಲಿ ಟ್ರಂಪ್ ಅದನ್ನು ಚಿಮ್ಮಿಸಲಿ, ಅದನ್ನು ಬಿಟ್ಟು ಮಾನವಕುಲವನ್ನು ಬತ್ತಿಸುವ ಹುಕಿ ಬೇಡ...

ಸೊಂಪಾದಕೀಯ

ಯಜಮಾನರ ಬಿಡುಗಡೆ

ಚಿತ್ರೋದ್ಯಮದಲ್ಲಿ ಎರಡು ರೀತಿ ಟ್ರೆಂಡ್ ಇದೆ. ಆಗಾಗ ನಟರುಗಳ ಹಳೆಯ ಚಿತ್ರಗಳನ್ನು ಬಿಡುಗಡೆ ಮಾಡೋದು ಮತ್ತು ಯಾವುದಾದರೂ ಒಂದು ಸಿನಿಮಾ ಚೆನ್ನಾಗಿ ಓಡುತ್ತಿರುವಾಗ ಅದರ ಹವಾ ಜಾಸ್ತಿ ಇದ್ದಾಗ ಮತ್ತು ಮುಂದೆ ಮತ್ತೆ ದೊಡ್ಡ ಚಿತ್ರಗಳು ಬರುತ್ತಿವೆ ಎನ್ನುವಾಗ ಅದರ ಗ್ಯಾಪಿನಲ್ಲಿ ತಮ್ಮ ಹೊಸ ಸಿನಿಮಾಗಳನ್ನು ಬಿಡುಗಡೆ ಮಾಡದೆ ಹಳೆಯ ಚಿತ್ರಗಳನ್ನು ಚಿತ್ರಮಂದಿರಗಳಲ್ಲಿ ಕೂರಿಸುತ್ತಾರೆ ನಿರ್ಮಾಪಕರು.

ಅದರಿಂದ ಅವರ ಹೊಸ ಚಿತ್ರ ಒಂದೆರಡು ವಾರಗಳಲ್ಲಿ ಎತ್ತಂಗಡಿ ಆಗೋದು ತಪ್ಪುತ್ತದೆ ಮತ್ತು ಚಿತ್ರಮಂದಿರಗಳಿಗೂ ಹಾಕಿಕೊಳ್ಳಲು ಸಿನಿಮಾ ಅಂತ ಸಿಗುತ್ತದೆ. ಇನ್ನು ಆಯಾ ನಟರ ಅಭಿಮಾನಿಗಳನ್ನು ಹುಚ್ಚೆಬ್ಬಿಸಿ ಇದನ್ನು ಅಭಿಮಾನದ ಪ್ರತೀಕ ಅಂತ ಪ್ರಚಾರ ಮಾಡಿ ಮರು ಬಿಡುಗಡೆಯ ಚಿತ್ರದಲ್ಲಿ ಹಣ ಮಾಡಿಕೊಳ್ಳಲು ಹವಣಿಸುತ್ತಾರೆ. ಇಂಥ ಪ್ರಯತ್ನಗಳಲ್ಲಿ ಚಿಲ್ಲರೆ ಕಾಸು ಕಲೆಕ್ಷನ್ ಮಾಡಿ ನಿರಾಸೆ ಅನುಭವಿಸುವವರೇ ಹೆಚ್ಚು. ಎಲ್ಲೋ ಕೆಲವೊಂದು ಸಿನಿಮಾಗಳು ಮಾತ್ರ ಮರು ಬಿಡುಗಡೆಯಲ್ಲೂ ಸಾಕಷ್ಟು ಹಣ ಸಂಗ್ರಹಿಸಿ, ನಿರ್ಮಾಪಕರಿಗೆ ಖರ್ಚಿಲ್ಲದೆ ಲಾಭ ಮಾಡಿಕೊಡುತ್ತವೆ. ಪುನೀತ್, ಶಿವಣ್ಣ, ದರ್ಶನ್, ಸುದೀಪ್ ಅವರ ಅನೇಕ ಸಿನಿಮಾಗಳು ಈಗಾಗಲೇ ಮರುಬಿಡುಗಡೆಯ ಏಳುಬೀಳುಗಳನ್ನು ಕಂಡಿವೆ. ಈಗ 'ಕಾಂತಾರ' ಚಿತ್ರದ ಯಶಸ್ವಿ ಓಟದ ನಂತರ ಹಲವು ದೊಡ್ಡ ಚಿತ್ರಗಳು ಬಿಡುಗಡೆಗೆ ಕಾದಿವೆ. ಈ ಗ್ಯಾಪಿನಲ್ಲಿ ಈಗ ಮರುಬಿಡುಗಡೆ ಕಾಣುತ್ತಿರುವ ಚಿತ್ರ ಅಂದ್ರೆ ಅದು ವಿಷ್ಣುವರ್ಧನ್ ಅಭಿನಯದ 'ಯಜಮಾನ'. ಬಿಡುಗಡೆ ಆದ ಕಾಲದಲ್ಲಿ ಸೂಪರ್‌ಹಿಟ್ ಎನಿಸಿಕೊಂಡಿದ್ದ ಈ ಚಿತ್ರವನ್ನು ಈಗ ಮರುಬಿಡುಗಡೆ ಮಾಡಿ ಮತ್ತೆ ದುಡ್ಡು ಮಾಡುವ ಆಸೆ ನಿರ್ಮಾಪಕರದ್ದು. ಆದರೆ ಆಗಿನ ಕಾಲವೇ ಬೇರೆ ಈಗಿನ ಕಾಲವೇ ಬೇರೆ. ಬರೀ ಕಥೆ, ಅಭಿನಯ ಅಷ್ಟೇ ಮುಖ್ಯ ಆಗಿರುವ, ನಿರೂಪಣೆಯಲ್ಲಿ ಸಾಕಷ್ಟು ಎಳಸುತನ ಇದ್ದ ಯಜಮಾನದಂಥ ಲೋ ಬಜೆಟ್ ಚಿತ್ರಗಳಿಗೆ ಈಗಿನ ಗ್ರಾಫಿಕ್ಸ್, ಡಿಐ, ಎಐ ಕಾಲದಲ್ಲಿ ಮಾರ್ಕೆಟ್ ಕಮ್ಮಿಯೇ. ಆದರೂ ವಿಷ್ಣು ಹೆಸರಿನಲ್ಲಿ ಒಂದಿಷ್ಟು ಕಾಸು ಮಾಡುವ ಸಾಧ್ಯತೆ ಇದೆ. ಆದರೆ ಈ ಸುದ್ದಿ ಕೇಳಿದ ದರ್ಶನ್, 'ನಂದೂ ಒಂದು ಯಜಮಾನ ಸಿನಿಮಾ ಐತೆ ಕಣ್ರೋ, ನಾನಂತೂ ಬಿಡುಗಡೆ ಆಗಲ್ಲ, ಅದನ್ನಾದ್ರೂ ಬಿಡುಗಡೆ ಮಾಡಿ' ಅಂತ ಜೈಲಿಂದಲೇ ಕೂಗು ಹಾಕಿದ್ದು ಮಾತ್ರ ವರದಿ ಆಗಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನದ ಬಿಡಿಭಾಗಗಳು

ಆಧುನಿಕ ವಾಣಿಜ್ಯ ವಿಮಾನವು ಏಕೆ ಎಂಜಿನಿಯರಿಂಗ್‌ನ ಒಂದು ಮಹೋನ್ನತ ಸಾಧನೆ? ಕಾರಣ, ವಿಮಾನವು ಭೂಮಿಯ ಮೇಲಿನ ಅತ್ಯಂತ ಸಂಕೀರ್ಣ ಯಂತ್ರಗಳಲ್ಲಿ ಒಂದಾಗಿದೆ. ಒಂದು ವಿಮಾನವು ಅದರ ಗಾತ್ರ ಮತ್ತು ವಿನ್ಯಾಸವನ್ನು ಅವಲಂಬಿಸಿ ಸುಮಾರು 5 ಲಕ್ಷದಿಂದ 60 ಲಕ್ಷಕ್ಕೂ ಹೆಚ್ಚು ವೈಯಕ್ತಿಕ ಭಾಗಗಳನ್ನು ಒಳಗೊಂಡಿರಬಹುದು. ಈ ಅಗಾಧ ಸಂಖ್ಯೆಯು ವಿಮಾನ ನಿರ್ಮಾಣದ ನಿಖರತೆ ಮತ್ತು ಆಳವಾದ ವಿನ್ಯಾಸವನ್ನು ಎತ್ತಿ ತೋರಿಸುತ್ತದೆ. ವಿಮಾನವನ್ನು ಐದು ಪ್ರಮುಖ ವಿಭಾಗಗಳಾಗಿ ವಿಂಗಡಿಸಬಹುದು, ಪ್ರತಿಯೊಂದು ಸಹ ಸಾವಿರಾರು ಭಾಗಗಳನ್ನು ಒಳಗೊಂಡಿರುತ್ತದೆ. ವಿಮಾನದ ಪ್ರಾಥಮಿಕ ರಚನೆ ಮತ್ತು ಅಸ್ಥಿಪಂಜರವನ್ನು ಏರ್‌ಫ್ರೇಮ್ ಎಂದು ಕರೆಯುತ್ತಾರೆ. ಇದು ಇಡೀ ವಿಮಾನದ ಸಮಗ್ರತೆಯನ್ನು ಒದಗಿಸುತ್ತದೆ. ದೇಹ (ಫ್ಯೂಸ್‌ಲೇಜ್), ರೆಕ್ಕೆಗಳು (ವಿಂಗ್ಸ್) ಮತ್ತು ಬಾಲದ (ಟೈಲ್) ರಚನೆಯು 50 ಸಾವಿರದಿಂದ ಒಂದು ಲಕ್ಷ ಭಾಗಗಳನ್ನು ಒಳಗೊಂಡಿರುತ್ತದೆ. ಅತ್ಯಂತ ಆಶ್ಚರ್ಯಕರ ಸಂಗತಿಯೆಂದರೆ ಕೇವಲ ತಿರುಪುಮೊಳೆಗಳು, ಬೋಲ್ಟ್‌ಗಳು ಮತ್ತು ರಿವಿಟ್‌ಗಳಂಥ ಫಾಸ್ಟೆನರ್‌ಗಳೇ 10 ಲಕ್ಷದಿಂದ 30 ಲಕ್ಷದವರೆಗೆ ಇರುತ್ತವೆ. ಈ ಸಣ್ಣ ಭಾಗಗಳು ವಿಮಾನದ ಪ್ರತಿಯೊಂದು ಮುಖ್ಯ ಭಾಗವನ್ನು ಒಟ್ಟಿಗೆ ಹಿಡಿದಿಡುತ್ತವೆ ಮತ್ತು ಅವುಗಳ ವೈಫಲ್ಯವು ಗಂಭೀರ ಸಮಸ್ಯೆಯನ್ನು ಉಂಟುಮಾಡಬಹುದು. ಜೆಟ್ ಎಂಜಿನ್ ವಿಮಾನದ ಹೃದಯ. ಪ್ರತಿ ಎಂಜಿನ್ ಸ್ವತಃ ಒಂದು ಸ್ವತಂತ್ರ, ಅತಿ-ಸಂಕೀರ್ಣ ಯಂತ್ರ. CFM56 ನಂಥ ಒಂದು ಟರ್ಬೋಫ್ಯಾನ್ ಎಂಜಿನ್ 25,000ದಿಂದ 30,000ಕ್ಕೂ ಹೆಚ್ಚು ಭಾಗಗಳನ್ನು ಹೊಂದಿದೆ. ಇವುಗಳಲ್ಲಿ ಫ್ಯಾನ್ ಬ್ಲೇಡ್‌ಗಳು, ವಿವಿಧ ಹಂತಗಳ ಟರ್ಬೈನ್ ಬ್ಲೇಡ್‌ಗಳು, ದಹನ ಕೊಠಡಿಗಳು ಮತ್ತು ಇಂಧನ ನಳಿಕೆಗಳು ಸೇರಿವೆ. ಈ ಎಲ್ಲ ಭಾಗಗಳು ಕಠಿಣ ಪರಿಸ್ಥಿತಿಗಳಲ್ಲಿ (ಅತಿ ಹೆಚ್ಚಿನ ಶಾಖ ಮತ್ತು ಒತ್ತಡ) ನಿಖರವಾಗಿ ಕಾರ್ಯನಿರ್ವಹಿಸಬೇಕು. ಲ್ಯಾಂಡಿಂಗ್ ಗೇರ್ ವಿಮಾನದ ಟೇಕ್-ಆಫ್ ಮತ್ತು ಲ್ಯಾಂಡಿಂಗ್‌ಗೆ ಅತ್ಯಗತ್ಯ. ಆಘಾತ ನಿರೋಧಕಗಳು (shock absorbers), ಚಕ್ರಗಳು, ಬ್ರೇಕ್‌ಗಳು ಮತ್ತು ಹೈಡ್ರಾಲಿಕ್ ವ್ಯವಸ್ಥೆಗಳು ಸುಮಾರು ಹತ್ತು ಸಾವಿರ ಭಾಗಗಳನ್ನು ಒಳಗೊಂಡಿರುತ್ತವೆ. ಲ್ಯಾಂಡಿಂಗ್ ಗೇರ್ ಅನ್ನು ಪ್ರತಿ ಲ್ಯಾಂಡಿಂಗ್‌ನ ತೀವ್ರ ಆಘಾತವನ್ನು ತಡೆದುಕೊಳ್ಳಲು ವಿನ್ಯಾಸಗೊಳಿಸಲಾಗಿದೆ. ಏವಿಯಾನಿಕ್ಸ್ ಮತ್ತು ವಿದ್ಯುತ್ ವ್ಯವಸ್ಥೆಗಳು (Avionics Electrical Systems) ವಿಮಾನದ ನರಮಂಡಲ ಮತ್ತು ಮಿದುಳಿನಂತೆ ಕಾರ್ಯನಿರ್ವಹಿಸುತ್ತವೆ. ಒಂದು ದೊಡ್ಡ ವಿಮಾನವು ನೂರು ಮೈಲಿಗೂ ಹೆಚ್ಚು ವಿದ್ಯುತ್ ವೈರಿಂಗ್ ಅನ್ನು ಹೊಂದಿರಬಹುದು. ನ್ಯಾವಿಗೇಷನ್, ಸಂವಹನ, ಹಾರಾಟ ನಿಯಂತ್ರಣ ಮತ್ತು ರೇಡಾರ್ ವ್ಯವಸ್ಥೆಗಳಿಗಾಗಿ ಸಾವಿರಾರು ಸಂವೇದಕಗಳು (sensors), ಕಂಪ್ಯೂಟರ್‌ಗಳು ಮತ್ತು ಮೈಕ್ರೋಚಿಪ್‌ಗಳನ್ನು ಬಳಸಲಾಗುತ್ತದೆ. ಇವು ಪೈಲಟ್‌ಗಳಿಗೆ ವಿಮಾನವನ್ನು ಸುರಕ್ಷಿತವಾಗಿ ನಿರ್ವಹಿಸಲು ನಿರ್ಣಾಯಕ ಮಾಹಿತಿಯನ್ನು ನೀಡುತ್ತವೆ. ಪ್ರಯಾಣಿಕರ ಸೌಕರ್ಯಕ್ಕಾಗಿ ವಿನ್ಯಾಸಗೊಳಿಸಲಾದ ಈ ಭಾಗಗಳು ಸಹ ಗಮನಾರ್ಹ ಸಂಖ್ಯೆಯ ಘಟಕಗಳನ್ನು ಹೊಂದಿರುತ್ತವೆ. ಆಸನ ಕಾರ್ಯವಿಧಾನಗಳು, ಮೇಲ್ಭಾಗದ ಬಿನ್‌ಗಳು, ಗ್ಯಾಲಿಗಳು ಮತ್ತು ಶೌಚಾಲಯಗಳು ಸೇರಿದಂತೆ 50 ಸಾವಿರಕ್ಕೂ ಹೆಚ್ಚು ಭಾಗಗಳು ಇರಬಹುದು. ಸೀಟಿನ ಒಂದು ಸಣ್ಣ ಟ್ರೇ ಟೇಬಲ್ ಸಹ ಹಲವಾರು ಭಾಗಗಳನ್ನು ಹೊಂದಿರುತ್ತದೆ. ಇಷ್ಟು ಲಕ್ಷಾಂತರ ಭಾಗಗಳನ್ನು ಹೊಂದಿರುವುದರಿಂದ, ವಿಮಾನದ ಸುರಕ್ಷತೆಗಾಗಿ ನಿರ್ವಹಣೆ ಅತ್ಯಂತ ಕಠಿಣವಾಗಿರುತ್ತದೆ. ವಿಮಾನಯಾನ ಸಂಸ್ಥೆಗಳು ಸವೆದುಹೋದ ಭಾಗಗಳನ್ನು ಪರಿಶೀಲಿಸಲು ಮತ್ತು ಬದಲಾಯಿಸಲು ಕಟ್ಟುನಿಟ್ಟಾದ ನಿರ್ವಹಣಾ ಪಟ್ಟಿಯನ್ನು ಅನುಸರಿಸುತ್ತವೆ. ಟರ್ಬೈನ್ ಬ್ಲೇಡ್‌ಗಳಂಥ ಕೆಲವು ನಿರ್ಣಾಯಕ ಘಟಕಗಳನ್ನು ಪ್ರತಿ ಕೆಲವು ಸಾವಿರ ಹಾರಾಟಗಳ ನಂತರ ಬದಲಾಯಿಸಬೇಕು, ಏಕೆಂದರೆ ಅವು ಅತಿಯಾದ ಒತ್ತಡಕ್ಕೆ ಒಳಗಾಗುತ್ತವೆ. ಬೋಯಿಂಗ್ 747ನಂಥ ಹಳೆಯ ವಿಮಾನಗಳಲ್ಲಿ 60 ಲಕ್ಷ ಭಾಗಗಳಿದ್ದವು, ಆದರೆ ಆಧುನಿಕ ವಿಮಾನಗಳಲ್ಲಿ ಸಂಯೋಜಿತ ವಸ್ತುಗಳ (composite materials) ಬಳಕೆಯಿಂದಾಗಿ ಈ ಸಂಖ್ಯೆ ಸ್ವಲ್ಪ ಕಡಿಮೆಯಾಗಿದೆ (ಉದಾಹರಣೆಗೆ 787 ಡ್ರೀಮ್‌ಲೈನರ್‌ನಲ್ಲಿ ಸುಮಾರು 23 ಲಕ್ಷ ಭಾಗಗಳು), ಆದರೂ ಸಂಕೀರ್ಣತೆ ಕಡಿಮೆಯಾಗಿಲ್ಲ.

ಬಿಹಾರ ಜೆಡಿಯು ಕಚೇರಿಯೊಳಗೆ ಕಾಪುವಿನ ಹುಡುಗ!

ಬಿಹಾರದಲ್ಲಿ 20 ವರ್ಷಗಳಿಂದ ಜೆಡಿಯು ಅಧಿಕಾರದಲ್ಲಿದ್ದರೂ, ತಮಗಾಗಿ ಪ್ರತ್ಯೇಕ ಮನೆ-ಬಂಗಲೆಗಳನ್ನು ಕಟ್ಟಿಕೊಳ್ಳದೆ, ಅದೇ ಸಣ್ಣ ಕೋಣೆಯಲ್ಲಿ ನಿತ್ಯಕ್ಕೆ ಬೇಕಾಗುವ ಬಟ್ಟೆ-ಸಾಮಗ್ರಿಗಳನ್ನಿಟ್ಟುಕೊಂಡು ಪಕ್ಷ ಮತ್ತು ಜನಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ ಅನಿಲ್ ಪ್ರಸಾದ್ ಹೆಗ್ಡೆ. ಅವರ ಪ್ರಾಮಾಣಿಕತೆ, ಸರಳತೆಯೇ ರಾಜಕೀಯದಲ್ಲಿ ಈ ಮಟ್ಟಕ್ಕೆ ತಂದು ನಿಲ್ಲಿಸಿದೆ.

ಜನಪಥ

ರಾಘವ ಶರ್ಮ ನಿಡ್ಲೆ
vveditoped@gmail.com

ಆಗ ರಾತ್ರಿ 9 ಗಂಟೆ ಆಗಿತ್ತು. ತಮ್ಮ ಬಲಭುಜದ ಮೇಲೆ ಬ್ಯಾಗ್ ಏರಿಸಿಕೊಂಡು ಬಂದ ವ್ಯಕ್ತಿ, ''ತಡವಾಯಿತು. ಬೇಸರ ಮಾಡಿಕೊಳ್ಳಬೇಡಿ. ಇಡೀ ಬಿಹಾರವೇ ಛಟ್ ಪೂಜೆ ಸಂಭ್ರಮದಲ್ಲಿದೆ. ಪೂಜೆಯಲ್ಲಿ ಭಾಗಿಯಾಗಲು ಸ್ನೇಹಿತರೊಬ್ಬರ ಮನೆಗೆ ಹೋಗಿದ್ದೆ'' ಎನ್ನುತ್ತಾ ಪಟನಾದ ವೀರ್‌ಚಂದ್ ಪಟೇಲ್ ಮಾರ್ಗದಲ್ಲಿರುವ ಜೆಡಿಯು ಕೇಂದ್ರ ಕಚೇರಿಯ ತಮ್ಮ ಕೋಣೆಗೆ ನನ್ನನ್ನು ಕರೆದುಕೊಂಡು ಹೋದರು.

ತಿಳಿ ಹಸಿರು ಬಣ್ಣದ ಕುರ್ತಾ ಮತ್ತು ಕೊಂಚ ಕಡು ಹಸಿರು ಬಣ್ಣದ ಪ್ಯಾಂಟ್ ಏರಿಸಿಕೊಂಡಿದ್ದ, ಕುರುಚಲು ಗಡ್ಡದ, ಸಾಮಾನ್ಯ ಕಾರ್ಯಕರ್ತನಂತೆ ಕಾಣುತ್ತಿದ್ದ, ಸಿಎಂ ನಿತೀಶ್ ಕುಮಾರ್‌ಗೆ ಅತ್ಯಂತ ಆಪ್ತರಾಗಿರುವ ಅವರು ಮತ್ಯಾರೂ ಅಲ್ಲ- ಕನ್ನಡಿಗ ಅನಿಲ್ ಪ್ರಸಾದ್ ಹೆಗ್ಡೆ. ಈಚೆಗಷ್ಟೇ ತಮ್ಮ ರಾಜ್ಯಸಭೆ ಅವಧಿ ಪೂರ್ಣಗೊಂಡಿದ್ದರಿಂದ ಮತ್ತೆ ಜೆಡಿಯು ಕಚೇರಿಯ ಸಣ್ಣ ಕೊಠಡಿಯೇ ಅವರ ವಾಸಸ್ಥಾನವಾಗಿಬಿಟ್ಟಿದೆ. ಸದ್ಯ ಪಕ್ಷದ ಚುನಾವಣಾ ರಿಟರ್ನಿಂಗ್ ಆಫೀಸರ್ ಆಗಿರುವ ಅನಿಲ್ ಹೆಗ್ಡೆ, ಜೆಡಿಯು ರಾಷ್ಟ್ರೀಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ ಮತ್ತು ಜೆಡಿಯುನ ಸ್ಥಾಪಕ ಪ್ರಧಾನ ಕಾರ್ಯದರ್ಶಿಯೂ ಹೌದು.

ಬಿಹಾರದಲ್ಲಿ 20 ವರ್ಷಗಳಿಂದ ಜೆಡಿಯು ಅಧಿಕಾರದಲ್ಲಿದ್ದರೂ, ತಮಗಾಗಿ ಪ್ರತ್ಯೇಕ ಮನೆ-ಬಂಗಲೆಗಳನ್ನು ಕಟ್ಟಿಕೊಳ್ಳದೆ, ಅದೇ ಸಣ್ಣ ಕೋಣೆಯಲ್ಲಿ ನಿತ್ಯಕ್ಕೆ ಬೇಕಾಗುವ ಬಟ್ಟೆ-ಸಾಮಗ್ರಿಗಳನ್ನಿಟ್ಟುಕೊಂಡು ಪಕ್ಷ ಮತ್ತು ಜನಸೇವೆಗಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ತಮ್ಮ ಹೆಸರಲ್ಲಿ ಒಂದು ವಾಹನವನ್ನೂ ನೋಂದಾಯಿಸಿಕೊಂಡಿಲ್ಲ. ದೆಹಲಿಯಲ್ಲಿದ್ದಾಗ ಸೋದರ ಕಳುಹಿಸಿಕೊಟ್ಟಿದ್ದ ಕಾರನ್ನು ಬಳಸುತ್ತಿದ್ದರು. ಅವರ ಪ್ರಾಮಾಣಿಕತೆ, ಬದ್ಧತೆ, ಸರಳತೆಯೇ ರಾಜಕೀಯದಲ್ಲಿ ಈ ಮಟ್ಟಕ್ಕೆ ತಂದು ನಿಲ್ಲಿಸಿದೆ ಮತ್ತು ಪಕ್ಷದ ಅಧ್ಯಕ್ಷರಿಂದ ಹಿಡಿದು ಎಲ್ಲಾ ವರ್ಗದ ನಾಯಕರ ವಿಶ್ವಾಸ ಗಳಿಸಲು ಈ ನಡೆಗಳೇ ಕಾರಣ. ಮಂಗಳೂರು ಮೂಲದವರಾಗಿದ್ದು 10 ಬಾರಿ ಸಂಸದರಾಗಿದ್ದ, ಮಾಜಿ ಕೇಂದ್ರ ಸಚಿವ ದಿವಂಗತ ಜಾರ್ಜ್ ಫರ್ನಾಂಡಿಸ್ ಅವರ ಒಡನಾಡಿಯಾಗಿದ್ದ ಅನಿಲ್ ಹೆಗ್ಡೆ, ಜನತಾದಳದ ದಿನಗಳಿಂದಲೇ ನಿತೀಶ್ ಕುಮಾರ್‌ಗೆ ಪರಿಚಿತರು. ಜಾರ್ಜ್ ಅವರಿಗೆ ಅನಾರೋಗ್ಯ ಉಂಟಾಗಿ, ನಂತರ ಅವರ ಪತ್ನಿ ಲೈಲಾ ಕಬೀರ್ ನೋಡಿಕೊಳ್ಳುತ್ತಿದ್ದಾಗ, ನಿತೀಶ್ ಕುಮಾರ್ ಅವರು ಕರೆ ಮಾಡಿ, ನೀನು ನನ್ನೊಂದಿಗೆ ಇರಬೇಕು ಎಂದು ಹೇಳಿದ್ದರಿಂದ, ನಂತರ ಹೆಗ್ಡೆಯವರಿಗೆ ಪಟನಾದ ಜೆಡಿಯು ಕಚೇರಿಯೇ ಮನೆಯಾಗಿಬಿಟ್ಟಿತು.

3 ವರ್ಷಗಳ ಹಿಂದೆ ಅನಿಲ್ ಹೆಗ್ಡೆ ತಮ್ಮ ಕೋಣೆಯಲ್ಲಿದ್ದಾಗ ನಿತೀಶರು ಕರೆಮಾಡಿ, ''ಹೆಗ್ಡೆ ಜೀ, ರಾಜ್ಯಸಭೆ ಸೀಟು ಒಂದು ಖಾಲಿ ಇದೆ. ನಿಮ್ಮನ್ನು ಅಲ್ಲಿಗೆ ಕಳುಹಿಸೋಣ ಎಂದುಕೊಂಡಿದ್ದೇವೆ ಮತ್ತು ಪಕ್ಷವೂ ಅದನ್ನು ನಿರ್ಣಯಿಸಿದೆ'' ಎಂದು ಹೇಳಿದರಂತೆ. ಯಾವತ್ತಿಗೂ ಹುದ್ದೆ, ಸ್ಥಾನಮಾನಗಳ ಬಗ್ಗೆ ತಲೆಕೆಡಿಸಿಕೊಳ್ಳದೆ, ಎಲೆಮರೆಯ ಕಾಯಿಯಂತಿದ್ದ ಅನಿಲ್ ಪ್ರಸಾದ್ ಹೆಗ್ಡೆ, ಪಕ್ಷದ ತೀರ್ಮಾನಕ್ಕೆ ಸಮ್ಮತಿಸಿದರು. 3 ವರ್ಷ ರಾಜ್ಯಸಭೆ ಸದಸ್ಯರಾಗಿ ದಿಲ್ಲಿ-ಬಿಹಾರಗಳಲ್ಲಿ ಓಡಾಡಿ ಬಂದಿರುವ ಅವರು, ಈಗ ವಿಧಾನಸಭೆ ಚುನಾವಣೆಗೆ ರಣನೀತಿ ರೂಪಿಸುವುದು, ಪ್ರಚಾರಕಾರ್ಯದ ರೂಪುರೇಷೆ, ಚುನಾವಣಾ ಆಯೋಗದೊಂದಿಗಿನ ಪಕ್ಷದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದಾರೆ. ''ರಾಜ್ಯಸಭೆ ಸದಸ್ಯತ್ವ ಮುಂದುವರಿಕೆಗೆ ನಿತೀಶರಲ್ಲಿ ಮಾತನಾಡುವ ಅವಕಾಶವಿತ್ತಲ್ಲ. ನೀವು ಯಾಕೆ ಕೇಳಲಿಲ್ಲ?'' ಎಂದು ನಾನು ಕೇಳಿದ್ದಕ್ಕೆ, ''ರಾಜ್ಯಸಭೆಗೆ ಹೋಗಬೇಕು. ಅಧಿಕಾರ ಅನುಭವಿಸಬೇಕು ಎಂದು ಯೋಚಿಸಿದವನಲ್ಲ. ಅಂದು ನಿತೀಶರು ಫೋನ್ ಮಾಡಿದರು. ರಾಜ್ಯಸಭೆಗೆ ಹೋದೆ. ಈಗ ಮತ್ತೆ ಮನೆಗೆ ಬಂದಿದ್ದೇನೆ'' ಎಂದು ನಕ್ಕರು ಅನಿಲ್ ಹೆಗ್ಡೆ.

ದೇಶದ ರೈತ, ಚಮ್ಮಾರ, ನೇಕಾರ ಸೇರಿದಂತೆ ಸಾಂಪ್ರದಾಯಿಕ ಕುಶಲಕರ್ಮಿಗಳ ಬಗ್ಗೆ ಅತೀವ ಕಾಳಜಿ ಹೊಂದಿರುವ ಅನಿಲ್ ಹೆಗ್ಡೆ, ದೇಸಿ ಉತ್ಪನ್ನಗಳನ್ನು ಖರೀದಿಸಿ, ನಿಜಾರ್ಥದಲ್ಲಿ ಈ ಸಮುದಾಯಗಳ ರಕ್ಷಣೆಗೆ ನಿಂತಿದ್ದಾರೆ. ನಂಬಿದ ಸಿದ್ಧಾಂತಕ್ಕೆ ತಕ್ಕಂತೆ ಬದುಕುತ್ತಿರುವ ಅವರು, ಕಳೆದ 40 ವರ್ಷಗಳಿಂದ ಕೈಯಿಂದ ನೂಲು ತೆಗೆದು, ನೇಕಾರರು ನೇಯ್ದ ಬಟ್ಟೆಗಳನ್ನಷ್ಟೇ ಧರಿಸುತ್ತಿದ್ದಾರೆ. ಚಮ್ಮಾರರು ಮಾಡಿದ ಚಪ್ಪಲಿ ಅಥವಾ ಶೂಗಳನ್ನಷ್ಟೇ ಧರಿಸುತ್ತಾರೆ. 'ಪಾಶ್ಚಿಮಾತ್ಯರ ಉತ್ಪನ್ನಗಳನ್ನು ಖರೀದಿಸಿದರೆ ಕುಲಕಸುಬುಗಳನ್ನು ನಂಬಿಕೊಂಡವರು ಏನು ಮಾಡಬೇಕು?' ಎಂದು ಪ್ರಶ್ನಿಸುತ್ತಾರೆ.

ಭಾರತದಲ್ಲಿ ಅಮೆರಿಕನ್ ಕಂಪನಿಗಳ (ತಳೀಯವಾಗಿ ಮಾರ್ಪಡಿಸಿದ) 'ಬಿಟಿ' ಹತ್ತಿಗಳನ್ನು ಬಳಸಲು ರೈತರಿಗೆ ಉತ್ತೇಜಿಸಿದ್ದರಿಂದ ದೇಸಿ ಹತ್ತಿ ಬೀಜದ ಬಳಕೆ ಕಡಿಮೆಯಾಗಿತ್ತು. ಇಲ್ಲಿ 'ಬಿಟಿ' ಹತ್ತಿ ಬೀಜಗಳನ್ನು ರೈತರಿಗೆ ಮಾರಾಟ ಮಾಡುತ್ತಿದ್ದ ಅಮೆರಿಕದ ಮೊನ್ಸಂಟೋ ಕಂಪನಿ, ಈ ಬೀಜಗಳನ್ನು ಒಂದು ಪ್ಯಾಕಿಗೆ ರು. 800ರಂತೆ ಮಾರಾಟ ಮಾಡುತ್ತಿತ್ತು. ಆದರೆ, ಯಾವಾಗ ಭಾರತೀಯ ರೈತರು ತಮ್ಮನ್ನು ಪೂರ್ತಿ ಅವಲಂಬಿಸಿದ್ದಾರೆ ಎಂಬುದು ಈ ಕಂಪನಿಯವರಿಗೆ ಗೊತ್ತಾಯಿತೋ, ಆಗ ಬೆಲೆಯನ್ನು ರು. 2700ಕ್ಕೆ ಏರಿಸಿದರು. ರೈತರು ಆಕ್ರೋಶಗೊಂಡರು. ಅಂದಿನ ಮಹಾರಾಷ್ಟ್ರ ಸರಕಾರ ಕೂಡ ಹೋರಾಟ ಗಮನಿಸಿ, ವಿದೇಶಿ ಬೀಜಗಳನ್ನು ನಿಷೇಧಿಸಿತು. ಕೇಸು ಕೋರ್ಟ್ ಮೆಟ್ಟಿಲೇರಿತು. ಆದರೆ ಕೋರ್ಟು ಬೆಲೆ ಕಡಿಮೆ ಮಾಡುವಂತೆ ಆದೇಶಿಸಿದ್ದರಿಂದ ದರ ತಗ್ಗಿತು. ಬಿಹಾರದಲ್ಲಿ ನಿತೀಶ್ ಕುಮಾರ್ ಕೂಡ ಬಿಟಿ ಹತ್ತಿ ಮತ್ತು 'ಜಿಎಂ' ಮಸ್ಟರ್ಡ್ (ತಳೀಯವಾಗಿ ಮಾರ್ಪಡಿಸಿದ ಸಾಸಿವೆ) ವಿರುದ್ಧ ತಮ್ಮ ಭಾಷಣಗಳಲ್ಲಿ ಪ್ರಸ್ತಾಪಿಸುತ್ತಾ, ಹೋರಾಟಕ್ಕೆ ಕೈಜೋಡಿಸಿದ್ದರು.

2011ರ ವೇಳೆ, ಬಿಟಿ ಹತ್ತಿ ಬೀಜದ ಇಳುವರಿ ಕೂಡ ದೇಸಿ ಬೀಜದಷ್ಟೇ ಇದೆ ಎಂದು ಗೊತ್ತಾದಾಗ, ಅನಿಲ್ ಹೆಗ್ಡೆ ದೇಸಿ ಬೀಜಗಳನ್ನು ಬೇರೆಯವರಿಂದ ಖರೀದಿ ಮಾಡಿ ರೈತರಿಗೆ ನೀಡಲು ಶುರು ಮಾಡಿದರು. ಆಗ ಶೇ.98ರಷ್ಟು ವಿದೇಶಿ ಹತ್ತಿ ಬೀಜಗಳು ಭಾರತದ ರೈತ ಸಮುದಾಯವನ್ನು ಆವರಿಸಿಕೊಂಡಾಗಿತ್ತು. ಅಂದರೆ, ದೇಸಿ ಬೀಜಗಳ ಪ್ರಮಾಣ ಉಳಿದಿದ್ದದ್ದು ಶೇ.2ರಷ್ಟು ಮಾತ್ರ. ಈ ಪ್ರಮಾಣ ಡಬಲ್ ಆಗದಿದ್ದರೆ ದೇಸಿ ಬೀಜಗಳಿಗೆ ಉಳಿಗಾಲ ಇಲ್ಲ ಎಂದು ಯೋಚಿಸಿದ ಹೆಗ್ಡೆ, ಜೈವಿಕ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದ ತಮಿಳುನಾಡಿನ ತುಲಾ ಎಂಬ ಸಂಸ್ಥೆಯನ್ನು ಸಂಪರ್ಕಿಸಿ, ಅವರಿಗೆ ದೇಸಿ ಬೀಜಗಳನ್ನು ಹಂಚಿದರು. ಅದೇ ರೀತಿ, ಪಂಜಾಬ್ ಮತ್ತು ಉತ್ತರ ಭಾರತದ ಕೆಲ ರೈತರಿಗೂ ಉಚಿತವಾಗಿ ಹಂಚಿದರು. ಫಸಲು ಬಂದ ಹತ್ತಿಯನ್ನು ನೂಲು ತೆಗೆಯುವವರಿಗೆ ನೀಡಿ, ಆ ನೂಲನ್ನು ನೇಕಾರರಿಗೆ ನೇಯ್ಗೆಗೆ ನೀಡಲಾಯಿತು. ಅದರಿಂದ ಬಟ್ಟೆಗಳನ್ನು ತಯಾರು ಮಾಡಿದರು. ಅನಿಲ್ ಹೆಗ್ಡೆ ಧರಿಸುತ್ತಿರುವುದು ಈ ಬಟ್ಟೆಗಳನ್ನೇ.

ಇದಕ್ಕೂ ಮುನ್ನ ಅನಿಲ್ ಹೆಗ್ಡೆ, ತಮ್ಮ ಚಿಂತನೆಗಳಿಗೆ ಪೂರಕವಾಗಿ ಯೋಚಿಸುವವರು ಅಮೆರಿಕದ ವರ್ಜೀನಿಯಾದಲ್ಲಿ ಇದ್ದಾರೆ ಎಂಬುದನ್ನು ತಿಳಿದು, ಸ್ವಂತ ಖರ್ಚಿನಲ್ಲಿ ವರ್ಜೀನಿಯಾಕ್ಕೆ ಹೋದರು. ಅಲ್ಲಿ ಕೃಷಿ ವಿಜ್ಞಾನಿ ಡಾ. ಕೇಶವ ಕ್ರಾಂತಿಯವರನ್ನು ಭೇಟಿ ಮಾಡಿ, ನಾಂದೇಡ್‌ನ ಪ್ರದೇಶವೊಂದರಲ್ಲಿ ದೇಸಿ ಹತ್ತಿ ಬೀಜಗಳು ಲಭ್ಯವಿರುವ ಬಗ್ಗೆ ತಿಳಿದುಕೊಂಡರು. ನಾಂದೇಡ್‌ಗೆ ತೆರಳಿ ರು. 25 ಸಾವಿರಕ್ಕೆ 81 ಕಿಲೋ ಹತ್ತಿ ಬೀಜಗಳನ್ನು ಖರೀದಿಸಿ ರೈತರಿಗೆ ಉಚಿತವಾಗಿ ವಿತರಿಸಿದರು.

''ಸಮಾಜದಲ್ಲಿನ ಎಲ್ಲಾ ಪಿಡುಗುಗಳಿಗೆ ನಿರುದ್ಯೋಗ ದೊಡ್ಡ ಕಾರಣವೆಂಬುದು ನನ್ನ ನಂಬಿಕೆ. ಕೇವಲ ಗುಡಿಕೈಗಾರಿಕೆಗೆ ಒತ್ತು ನೀಡುವ ಗಾಂಧಿ ಪ್ರಣೀತ ಅರ್ಥಶಾಸ್ತ್ರದ ಅನುಕರಣೆ-ಆಚರಣೆಯಿಂದ ಮಾತ್ರ ಉದ್ಯೋಗ ಸೃಷ್ಟಿ, ನಿರುದ್ಯೋಗ ನಿವಾರಣೆ ಸಾಧ್ಯವೆಂಬುದನ್ನು 1984ರಲ್ಲಿ ಮಂಗಳೂರಿನಲ್ಲಿ ಸರಕಾರಿ ಕಾಲೇಜಿನಲ್ಲಿ ಓದುತ್ತಿರುವಾಗ, ಜನತಾ ಪಾರ್ಟಿ ಸೇರಿ ಪಕ್ಷದ ತರಬೇತಿ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾಗ ಮನವರಿಕೆಯಾಗಿತ್ತು. ಅಗಿನಿಂದ ಈವರೆಗೆ ಈ ಕಾರಣಕ್ಕಾಗಿ ಕೈಯಿಂದ ನೂಲುವ ಮತ್ತು ಕೈಯಿಂದ ನೇಯ್ದ ಶುದ್ಧ ಖಾದಿ ಬಟ್ಟೆ, ಕೈಯಿಂದ ತಯಾರು ಮಾಡಿದ ಶೂ ಹೊರತುಪಡಿಸಿ ಬೇರೆಯದನ್ನು ನಾನು ತೊಡುವುದಿಲ್ಲ. ನಾವು ಹಿಂದುಳಿದವರ, ಪರಿಶಿಷ್ಟ ಜಾತಿ ಜನಾಂಗದವರ, ಮಹಿಳೆಯರ, ಅಲ್ಪಸಂಖ್ಯಾತರ ಸಬಲೀಕರಣದ ಬಗ್ಗೆ ನರೇಟಿವ್ ಹೆಣೆಯುತ್ತೇವೆ. ನಿರುದ್ಯೋಗ ನಿವಾರಣೆಯ ಜತೆಜತೆಗೆ ಪರಿಸರದ ಬಗ್ಗೆ ಕಾಳಜಿ ವ್ಯಕ್ತಪಡಿಸುತ್ತೇವೆ. ಗುಡಿ ಕೈಗಾರಿಕೆಗಳಲ್ಲಿ ಈ ವರ್ಗದ ಜನರಿಂದ ತಯಾರಿಸಲಾದ ವಸ್ತು, ಬಟ್ಟೆ, ಚಪ್ಪಲಿ ಇತ್ಯಾದಿ ಬಳಸುವ ಮೂಲಕ ಅದಕ್ಕೆ ಪ್ರೋತ್ಸಾಹ ನೀಡಿ ಈ ವರ್ಗದವರನ್ನು ಸಶಕ್ತರನ್ನಾಗಿ ಮಾಡಲು ಹಿಂದೇಟು ಹಾಕುತ್ತೇವೆ. ಒಂದು ಮೀಟರ್ ಖಾದಿ ಬಟ್ಟೆ ಉತ್ಪಾದನೆ ಮಾಡಲು 3 ಲೀ. ನೀರು ಬೇಕಾದರೆ, ಅಷ್ಟೇ ಪ್ರಮಾಣದ ಬಟ್ಟೆಯು ಗಿರಣಿಯಲ್ಲಿ ತಯಾರಾದರೆ 55 ಲೀ. ನೀರು ಅಗತ್ಯ. ಗುಡಿ ಕೈಗಾರಿಕೆಯ ವಸ್ತು, ಖಾದಿ ಬಳಕೆಯಿಂದ 40 ಪಟ್ಟು ಹೆಚ್ಚು ಉದ್ಯೋಗ ಸೃಷ್ಟಿ ಯಾಗುವುದಲ್ಲದೇ, ಈ ವರ್ಗಗಳ ಸಬಲೀಕರಣದ ಜತೆಗೆ ಪರಿಸರ ಕಾಪಾಡುವ ನಿಟ್ಟಿನಲ್ಲಿ ತೊಡಗಿಸಿಕೊಳ್ಳಲು ಸಾಧ್ಯ'' ಎಂದು ಹೇಳುತ್ತಾರೆ ಅನಿಲ್ ಹೆಗ್ಡೆ.

ಜೆಡಿಯು, ಕಾಂಗ್ರೆಸ್ ಪಕ್ಷ ಸೇರಬೇಕೆಂದು ಬಯಸುವವರು, 'ದೇಸಿ ನೇಕಾರರು ನೂಲಿನಿಂದ ನೇಯ್ದ ಸಿದ್ಧಪಡಿಸಿದ ಬಟ್ಟೆಗಳನ್ನೇ ಧರಿಸುತ್ತೇವೆ' ಎಂದು ಪ್ರಮಾಣ ಮಾಡಿದ ಮೇಲಷ್ಟೇ ಅವರಿಗೆ ಪ್ರಾಥಮಿಕ ಸದಸ್ಯತ್ವ ನೀಡಲಾಗುತ್ತಿತ್ತು. ಈಗಲೂ ಈ ಪಕ್ಷಗಳಲ್ಲಿ ಈ ನಿಯಮ ಇದೆ. ಬಹುಶಃ ಅನೇಕರಿಗೆ ಇಂಥದ್ದೊಂದು ನಿಯಮ ಇದೆ ಎನ್ನುವುದೇ ಗೊತ್ತಿರಲಿಕ್ಕಿಲ್ಲ. ಆದರೆ, ಹೆಗ್ಡೆ ಉಳಿದವರಂತೆ ಅಲ್ಲ, ಆ ನಿಯಮವನ್ನು ಚಾಚೂ ತಪ್ಪದೆ ಪಾಲಿಸಿದ್ದಾರೆ.

ಅನಿಲ್ ಹೆಗ್ಡೆ ಬೆಂಗಳೂರಿನಲ್ಲಿದ್ದಾಗ ಬ್ರಿಗೇಡ್ ರೋಡ್ ಪಕ್ಕದಲ್ಲಿರುವ ವಾರ್ಡೀಸ್ ಎಂಬ 150 ವರ್ಷ ಹಳೆಯ ಚಪ್ಪಲಿ ಅಂಗಡಿಯವರಿಗೆ ಚಮ್ಮಾರರು ಮಾಡಿದ ಚಪ್ಪಲಿಗಳನ್ನು ತರಿಸಲು ಹೇಳಿ, ಅದನ್ನು ಖರೀದಿ ಮಾಡುತ್ತಿದ್ದರಂತೆ. ದೆಹಲಿಯಲ್ಲಿದ್ದಾಗ ಕೊನಾಟ್ ಪ್ಲೇಸ್‌ನಲ್ಲಿದ್ದ ಮೋಚಿಗಳಿಂದ (ಚಮ್ಮಾರರು), ಬಿಹಾರದ ಪಟನಾ ರೈಲ್ವೆ ಸ್ಟೇಷನ್‌ನಲ್ಲಿ ಕೂರುತ್ತಿದ್ದ ಚಮ್ಮಾರ ಡೊಮನ್ ದಾಸ್‌ರಿಂದ ಚಪ್ಪಲಿ ಖರೀದಿ ಮಾಡುತ್ತಿದ್ದರು. ಡೊಮನ್ ದಾಸ್ ನಿಧನದ ನಂತರ ಬಿಹಾರದ ಸಮಸ್ತಿಪುರದ ರಾಜೇಂದ್ರ ರಾಮ್ ಎಂಬ ಚಮ್ಮಾರನಿಂದ ಖರೀದಿ ಮಾಡುತ್ತಿದ್ದಾರೆ. ಈ ಚಪ್ಪಲಿ ಅಥವಾ ಶೂಗಳು ರು. 500ಕ್ಕೆ ಲಭ್ಯ. ಸಂಸದರಾಗುವ ಮುನ್ನ ತಾವು ಸಂಪಾದಿಸುತ್ತಿದ್ದ ಹಣವನ್ನು ಅವರು ರೈತರು ಮತ್ತು ಕುಶಲಕರ್ಮಿಗಳ ಏಳಿಗೆಗಾಗಿ ಬಳಸಿದರು. ಸಂಸದ ನಿಧಿಯಲ್ಲೂ ಕೊಂಚ ಪ್ರಮಾಣವನ್ನು ಅವರಿಗೆಂದು ಮೀಸಲಿಟ್ಟಿದ್ದರು.

''ನೀವೀಗ ಬಿಹಾರದವರೇ ಆಗಿಹೋಗಿದ್ದರೂ, ಕನ್ನಡಿಗರು, ತುಳು ಭಾಷಿಕರು ನಿಮಗೆ ಇಷ್ಟ ಎಂದು ಕೇಳಿದ್ದೆ. ಹೌದೇ?'' ಎಂದು ನಾನು ಕೇಳಿದ್ದಕ್ಕೆ, ''ರಾಜಕಾರಣಿಗಳು ಜನರ ಮುಲಾಜಿನಲ್ಲಿ ಇರಬೇಕು, ಜನರು ರಾಜಕಾರಣಿಗಳ ಮುಲಾಜಿನಲ್ಲಿ ಅಲ್ಲ. ಎಲ್ಲಿಯವರೆಗೆ ಜನರು ರಾಜಕಾರಣಿಗಳ ಮುಲಾಜಿನಲ್ಲಿ ಇರುತ್ತಾರೋ ಅಲ್ಲಿಯವರೆಗೆ ಯಾವುದೇ ಭಾಷೆಯವರನ್ನಾಗಲೀ ಪ್ರದೇಶದವರನ್ನಾಗಲೀ ಒಳ್ಳೆಯವರು, ಕೆಟ್ಟವರು ಎಂದು ಪರಿಗಣಿಸುವುದು ನನ್ನ ಪ್ರಕಾರ ತಪ್ಪು ಮತ್ತು ಆತ್ಮವಂಚನೆ'' ಎಂದರು ಹೆಗ್ಡೆ. ಲೋಕಸಭೆಯ ಮಾಜಿ ಸದಸ್ಯ ಜಯಪ್ರಕಾಶ್ ಹೆಗ್ಡೆಯವರ ಸೋದರ ಸಂಬಂಧಿಯಾಗಿರುವ ಅನಿಲ್ ಪ್ರಸಾದ್ ಹೆಗ್ಡೆ, ಕುಂದಾಪುರದ ಸಲ್ವಾಡಿಯವರು. ಆದರೆ ಅವರು ಹುಟ್ಟಿದ್ದು ಉಡುಪಿಯ ಕಾಪುವಿನಲ್ಲಿ ಮತ್ತು ಅವರ ಮಾತೃಭಾಷೆ ತುಳು. ಹೆಗ್ಡೆಯವರ ತಾಯಿಗೆ 86 ವರ್ಷವಾಗಿದ್ದು, ಸಲ್ವಾಡಿಯ ಮನೆಯಲ್ಲಿ ನರ್ಸ್ ಒಬ್ಬರು ನೋಡಿಕೊಳ್ಳುತ್ತಿದ್ದಾರೆ. ಹೆಗ್ಡೆಯವರಿಗೆ ಇಬ್ಬರು ಸೋದರರಿದ್ದಾರೆ. 2 ತಿಂಗಳಿಗೊಮ್ಮೆ ತಮ್ಮ ಸಲ್ವಾಡಿಯ ಮನೆಗೆ ಭೇಟಿ ನೀಡುವ ಅನಿಲ್ ಪ್ರಸಾದ್ ಹೆಗ್ಡೆ, ತಾಯಿಯೊಂದಿಗೆ ಕೆಲ ದಿನಗಳನ್ನು ಕಳೆದು ಮತ್ತೆ ಬಿಹಾರದ ಕರ್ಮಭೂಮಿಗೆ ವಾಪಸಾಗುತ್ತಾರೆ.

''ನೀವ್ಯಾಕೆ ಮದುವೆ ಆಗಲಿಲ್ಲ?'' ಎಂದು ನಾನು ಕೇಳಿದ್ದಕ್ಕೆ, ''ಸಮಾಜವಾದ ಸಿದ್ಧಾಂತ-ತತ್ವ ಹಾಗೂ ವಿಶಾಲ ಉದ್ದೇಶವನ್ನು ಮೈಗೂಡಿಸಿಕೊಂಡು, ನಾನು ನಾಳೆಯ ಬಗ್ಗೆ, ವೈಯಕ್ತಿಕ ಬೇಕು/ಬೇಡಗಳ ಬಗ್ಗೆ ಯೋಚಿಸುತ್ತಾ ಕುಳಿತರೆ ಜನರ ಪರ ಕೆಲಸ ಮಾಡಲು ಸಾಧ್ಯವಾಗುತ್ತದೆಯೇ? ಹೀಗಾಗಿ, ಮದುವೆ ಬಗ್ಗೆ ಆಲೋಚನೆಯನ್ನೇ ಮಾಡಲಿಲ್ಲ'' ಎಂದು ನಗುತ್ತಾ ಮಾತು ಮುಗಿಸಿದರು ಹೆಗ್ಡೆ.

(ಲೇಖಕರು ಹಿರಿಯ ಪತ್ರಕರ್ತರು)

ಹೆಣ್ಮಕ್ಳು ಗೆದ್ದರೋ ಗೆದ್ದರೋ ಕಪ್ ಗೆದ್ದರೋ...!

ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿ, ವಿಶ್ವಕಪ್ ಗೆದ್ದ ಶ್ರೇಯಸ್ಸಿನ ಮೊದಲ ಪಾಲು ನಾಯಕಿ ಹರ್ಮನ್ ಪ್ರೀತ್ ಕೌರ್‌ಗೆ ಸಲ್ಲಬೇಕು. 36ರ ಹರೆಯದ ಕೌರ್ ಹಲವಾರು ಏಳುಬೀಳುಗಳನ್ನು ಕಂಡರೂ, ತಮ್ಮ ನಿರಂತರ-ದಿಟ್ಟ ಹೋರಾಟ, ಸಮರ್ಪಣಾ ಭಾವದ ಫಲವಾಗಿ ಈಗ ಯಶಸ್ಸಿನ ಉತ್ತುಂಗಕ್ಕೇರಿದ್ದಾರೆ.



ವಿಶ್ವವನಿತೆ

ರವೀ ಸಜಂಗದ್ದೆ
vveditoped@gmail.com

ಐಸಿಸಿ ಮಹಿಳಾ ವಿಶ್ವಕಪ್ ಪಂದ್ಯಾಟಗಳ 52 ವರ್ಷಗಳ ಇತಿಹಾಸದಲ್ಲಿ, ಸುವರ್ಣ ಅಕ್ಷರಗಳಲ್ಲಿ ಬರೆಯಬೇಕಾದ ಅಧ್ಯಾಯವೊಂದು ಸೃಷ್ಟಿಯಾಗಿದೆ; ಭಾರತದ ಸಿಂಹಿಣಿಯರು ಈ ಬಾರಿಯ ವಿಶ್ವಕಪ್ ಫೈನಲ್ ಪಂದ್ಯವನ್ನು 52 ರನ್ನುಗಳಿಂದ ಗೆದ್ದಿರುವುದೇ ಈ ಹೊಸ ಅಧ್ಯಾಯ.

ತಾಯ್ನೆಲದಲ್ಲಿ ನಡೆದ ಈ ಪಂದ್ಯಾವಳಿಯಲ್ಲಿ ಹಲವು ಏರಿಳಿತಗಳಿದ್ದವು. ಲೀಗ್ ಹಂತದಲ್ಲಿನ ಸತತ 3 ಸೋಲುಗಳು, ಟೀಕೆಗಳು, ಒತ್ತಡಗಳು, ಪಂದ್ಯ ವೀಕ್ಷಿಸಲು ನೆರೆದಿದ್ದ ಸಾವಿರಾರು ಜನರ ಉದ್ಗಾರಗಳು/ಧಿಕ್ಕಾರಗಳು ಹೀಗೆ ಎಲ್ಲವನ್ನೂ ಸಹಿಸಿಕೊಂಡು, ತಾಳ್ಮೆ, ಸಮರ್ಪಣಾಭಾವ ಮತ್ತು ಪರಿಶ್ರಮವನ್ನು ಹೊಮ್ಮಿಸಿದ್ದರ ಫಲವಾಗಿ, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳನ್ನು ಗೆದ್ದ ಈ ಸಿಂಹಿಣಿಯರು ವಿಶ್ವಕಪ್ ಟ್ರೋಫಿಗೆ ಮುತ್ತಿಕ್ಕುವಂತಾಯಿತು. ಈ ದೃಶ್ಯವನ್ನು ಕಂಡು ದೇಶವೇ ಸಂಭ್ರಮಿಸಿತು.

ಈ ಪಂದ್ಯಾವಳಿಯ ಆರಂಭಕ್ಕೂ ಮುನ್ನ, ಪ್ರಶಸ್ತಿ ಗೆಲ್ಲುವ ಫೇವರಿಟ್ ತಂಡಗಳ ಪಟ್ಟಿಯಲ್ಲಿನ ಮೊದಲ 4 ಸ್ಥಾನಗಳಲ್ಲಿ ಭಾರತ ಇರಲೇ ಇಲ್ಲ! ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಮೊದಲೆರಡು ಸ್ಥಾನಗಳಲ್ಲಿದ್ದರೆ, ನಂತರದ ಸ್ಥಾನಗಳನ್ನು ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ಅಲಂಕರಿಸಿದ್ದವು. 1973ರಲ್ಲಿ ಆರಂಭವಾದ ಮಹಿಳಾ ವಿಶ್ವಕಪ್‌ನಲ್ಲಿ ಇದುವರೆಗೆ ಆಸ್ಟ್ರೇಲಿಯಾ (7 ಬಾರಿ), ಇಂಗ್ಲೆಂಡ್ (4 ಬಾರಿ) ಮತ್ತು ನ್ಯೂಜಿಲೆಂಡ್ (1 ಬಾರಿ) ತಂಡಗಳು ಮಾತ್ರ ಪ್ರಶಸ್ತಿಯನ್ನು ಗೆದ್ದಿದ್ದವು. ಈ ಸಲ, ಮೂರನೆಯ ಬಾರಿ ಫೈನಲ್ ತಲುಪಿದ ಭಾರತ ತಂಡವು, ಚೊಚ್ಚಲ ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವುದರೊಂದಿಗೆ ಮಹಿಳಾ ವಿಶ್ವಕಪ್ ಗೆದ್ದ ನಾಲ್ಕನೆಯ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಪಯಣದ ಹಾದಿಯಲ್ಲಿ ಅನೇಕರಿಂದ ಹೊಮ್ಮಿದ ಪ್ರಯತ್ನ ಮತ್ತು ಹೋರಾಟಗಳು ಅವಿಸ್ಮರಣೀಯ. ಅವುಗಳ ಕಡೆಗೊಮ್ಮೆ ಕಣ್ಣು ಹಾಯಿಸೋಣ:

- ತಂಡವನ್ನು ಯಶಸ್ವಿಯಾಗಿ ಮುನ್ನಡೆಸಿ, ವಿಶ್ವಕಪ್ ಗೆದ್ದ ಶ್ರೇಯಸ್ಸಿನ ಮೊದಲ ಪಾಲು ನಾಯಕಿ ಹರ್ಮನ್ ಪ್ರೀತ್ ಕೌರ್‌ಗೆ ಸಲ್ಲಬೇಕು. 36ರ ಹರೆಯದ ಕೌರ್ ಹಲವಾರು ಏಳುಬೀಳುಗಳನ್ನು ಕಂಡರೂ, ತಮ್ಮ ನಿರಂತರ-ದಿಟ್ಟ ಹೋರಾಟ, ಸಮರ್ಪಣಾ ಭಾವದ ಫಲವಾಗಿ ಈಗ ಯಶಸ್ಸಿನ ಉತ್ತುಂಗಕ್ಕೇರಿದ್ದಾರೆ. ಈ ಬಾರಿಯ ಸೆಮಿಫೈನಲ್ ಪಂದ್ಯದಲ್ಲಿ ಒತ್ತಡದ ರನ್ ಚೇಸಿಂಗ್‌ನಲ್ಲಿ 89 ರನ್ ಬಾರಿಸಿ, ಗೆಲುವಿನ ಆಸೆಯನ್ನು ಜೀವಂತವಾಗಿರಿಸಿದ ಕೀರ್ತಿ ಕೌರ್‌ಗೆ ಸಲ್ಲಬೇಕು. ಫೈನಲ್ ಪಂದ್ಯದಲ್ಲಿ, ಹಿಮ್ಮುಖವಾಗಿ ಹೆಜ್ಜೆಹಾಕಿ ಕ್ಯಾಚ್ ಹಿಡಿದು, ದಕ್ಷಿಣ ಆಫ್ರಿಕಾದ ಹತ್ತನೆಯ ವಿಕೆಟ್ ಬೀಳಿಸುವ ಮೂಲಕ ಭಾರತವನ್ನು ಗೆಲ್ಲಿಸಿದ ಅವರು, ಆ ಕ್ಷಣವನ್ನು ಮೈದಾನವಿಡೀ ಓಡಿ ಸಂಭ್ರಮಿಸಿದ ಪರಿ ವರ್ಣನೆಗೆ ನಿಲುಕದ್ದು! ಮಹಿಳಾ ಏಕದಿನ ನಾಕೌಟ್ ಪಂದ್ಯಗಳಲ್ಲಿ ಹೆಚ್ಚು ರನ್ ಗಳಿಸಿದ್ದ ಬೆಲಿಂಡಾ ಕ್ಲಾರ್ಕ್ ಹೆಸರಲ್ಲಿದ್ದ ಅಪರೂಪದ ದಾಖಲೆಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಂಡು ಕೌರ್ ಬೀಗಿದ್ದಾರೆ.
- ಮಹಿಳಾ ಕ್ರಿಕೆಟ್‌ನ ವಿರಾಟ್ ಕೊಹ್ಲಿ ಎಂದೇ ಜನಜನಿತರಾಗಿರುವ ಸ್ಮೃತಿ ಮಂಧಾನ ಅವರು ತಂಡದ ಮತ್ತೊಬ್ಬ 'ಸ್ಟಾರ್ ಪರ್ಫಾರ್ಮರ್'. ಮಿಥಾಲಿ ರಾಜ್ ಹೆಸರಿನಲ್ಲಿದ್ದ, ವಿಶ್ವಕಪ್ ಆವೃತ್ತಿಯೊಂದರಲ್ಲಿನ ಭಾರತದ ಪರ ಅತಿಹೆಚ್ಚು ರನ್ ಗಳಿಕೆಯನ್ನು (409), 434 ರನ್ನುಗಳನ್ನು ಕಲೆಹಾಕುವ ಮೂಲಕ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡ ಇವರು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಎದುರಾಳಿ ತಂಡದ ಓಪನಿಂಗ್ ಬೌಲರುಗಳನ್ನು ಇನ್ನಿಲ್ಲದಂತೆ ಕಾಡಿದ ಹೆಗ್ಗಳಿಕೆ ಇವರದ್ದು. ನಿರ್ಭೀತ ಆಟಕ್ಕೆ ಮಂಧಾನಾ ಹೆಸರುವಾಸಿ.
- ಜೆಮಿಮಾ ರೋಡ್ರಿಗ್ರಸ್ ಎನ್ನುವ ಹೆಸರೀಗ ದೇಶದಲ್ಲಿ ಹೊಸ 'ಸೆನ್ಸೇಷನ್'. ಈಕೆ ಈಗ 'ನ್ಯಾಷನಲ್ ಕ್ರಷ್'! ಕ್ಷೇತ್ರರಕ್ಷಣೆಯಲ್ಲಿನ ಚುರುಕುತನದ ಜತೆಜತೆಗೆ ಸಂದರ್ಭಾನುಸಾರವಾಗಿ ಸಂಯಮದ ಬ್ಯಾಟಿಂಗ್ ಮಾಡುವ ತಂತ್ರಗಾರಿಕೆಗೆ ಇವರು ಮತ್ತೊಂದು ಹೆಸರು. ಲೀಗ್ ಹಂತದಲ್ಲಿ ಆಸ್ಟ್ರೇಲಿಯಾ ಎದುರು ಜೆಮಿಮಾ ಹಿಡಿದ ಕ್ಯಾಚ್ ಅದ್ಭುತ. ಸೆಮಿಫೈನಲ್ ಪಂದ್ಯದಲ್ಲಿ ಅದೇ ಆಸ್ಟ್ರೇಲಿಯಾ ಎದುರು ಇವರು ಕಟ್ಟಿದ ಇನ್ನಿಂಗ್ಸ್ ಅಜರಾಮರ! ಪೂರ್ಣ 50 ಓವರ್ ಚುರುಕಾದ ಫೀಲ್ಡಿಂಗ್ ನಡೆಸಿ, ಮೂರನೆಯ ಓವರಿನಲ್ಲಿ ಬ್ಯಾಟಿಂಗಿಗೆ ಬಂದು ಕೊನೆವರೆಗೂ ದಣಿವರಿಯದೆ ನಿಂತು, ಬಹುತೇಕ ಸೋಲುವಂತಿದ್ದ ಪಂದ್ಯವನ್ನು ಇವರು ಗೆಲ್ಲಿಸಿದಾಗ, ಪಂದ್ಯ ನೋಡುತ್ತಿದ್ದ ನನ್ನನ್ನೂ ಸೇರಿಸಿ ಎಲ್ಲರ ಕಂಗಳೂ ತೇವವಾಗಿದ್ದು ಸುಳ್ಳಲ್ಲ. ಭಾರತ ಮಹಿಳಾ ಕ್ರಿಕೆಟ್ ತಂಡದ ಹೊಸ 'ಜೈಂಟ್ ಕಿಲ್ಲರ್' ಆಕೆ!

- ಈ ಪಂದ್ಯಾವಳಿಯಲ್ಲಿ ಅಮೋಘ ಆಲ್‌ರೌಂಡರ್ ಆಗಿ ಹೊರಹೊಮ್ಮಿ, ತಂಡದ ಗೆಲುವಿನಲ್ಲಿ 'ಸವ್ಯಸಾಚಿ' ಎನ್ನುವ ಬಿರುದಿಗೆ ಪಾತ್ರರಾದವರು ಎಡಗೈ ಬ್ಯಾಟರ್ ಮತ್ತು ಬಲಗೈ ಆಫ್‌ಸ್ಪಿನ್ನರ್ ದೀಪ್ತಿ ಶರ್ಮಾ. ಮಹಿಳಾ ಏಕದಿನ ಆವೃತ್ತಿಯೊಂದರಲ್ಲಿ 200ಕ್ಕೂ ಹೆಚ್ಚು ರನ್ ಗಳಿಸಿದ ಮತ್ತು 22 ವಿಕೆಟ್ ಪಡೆದ ಮೊದಲ ಆಟಗಾರ್ತಿ ಎಂಬ ವಿನೂತನ ದಾಖಲೆಗಳನ್ನು ತಮ್ಮ ಹೆಸರಿಗೆ ಬರೆಸಿಕೊಂಡವರು ಈಕೆ; ತಮ್ಮ ಈ ಸಾಧನೆಗಾಗಿ 'ಸರಣಿ ಶ್ರೇಷ್ಠ ಆಟಗಾರ್ತಿ' ಪ್ರಶಸ್ತಿ ಪಡೆದಾಕೆ. ಆಸ್ಟ್ರೇಲಿಯಾ ಎದುರಿನ ಸೆಮಿಫೈನಲ್ ಹಣಾಹಣಿಯಲ್ಲಿ ಉತ್ತಮವಾಗಿ ಆಡುತ್ತಿದ್ದ ಜೆಮಿಮಾ ವಿಕೆಟ್ ಉಳಿಸಲು ಈಕೆ ತಾವು ರನೌಟ್ ಆಗಿ 'ಕ್ರೀಡಾಸ್ಫೂರ್ತಿ' ಮೆರೆದುದನ್ನು ಮರೆಯಲಾಗದು. ಈಕೆ ವಿಶ್ವಕಪ್ ನಾಕೌಟ್ (ಸೆಮಿಫೈನಲ್/ಫೈನಲ್) ಹಂತದಲ್ಲಿ ಅರ್ಧಶತಕ ಮತ್ತು 5 ವಿಕೆಟ್ ಗಳಿಸಿದ ಏಕೈಕ ಆಟಗಾರ್ತಿ.
- ಅನ್ಯಾನ್ಯ ಕಾರಣಗಳಿಂದಾಗಿ ಸತತ 3 ವರ್ಷಗಳಿಂದ ಕಳಪೆ ಫಾರ್ಮ್‌ನಲ್ಲಿದ್ದು, ಬಗೆಬಗೆಯ ಟೀಕೆಗೆ ಗುರಿಯಾಗಿದ್ದವರು ಶೆಫಾಲಿ ಶರ್ಮಾ. ಇದರಿಂದಾಗಿ ಈಕೆ ಒಂದೆರಡು ಸಲ ಪಂದ್ಯದಿಂದ ಹೊರಗುಳಿಯಬೇಕಾಯಿತು. ಆದರೆ, ಫೈನಲ್ ಪಂದ್ಯದಲ್ಲಿ 'ಹಸಿವಿನಿಂದ ಬಳಲಿ ಬೇಟೆಗೆ ಸಿದ್ಧವಾಗಿದ್ದ ಸಿಂಹಿಣಿ'ಯಂತೆ ಅವರು ಭಾಸವಾದರು! ಸಿಕ್ಕಿದ ಅಪರೂಪದ, ಅಷ್ಟೇ ಒತ್ತಡದ ಸಂದರ್ಭದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು, ದಕ್ಷಿಣ ಆಫ್ರಿಕಾದ ಬೇಟೆಗೆ ತಮ್ಮ ಕೊಡುಗೆ ನೀಡಿದರು. 'ಲೇಡಿ ಸೆಹ್ವಾಗ್' ಖ್ಯಾತಿಯ ಇವರು ಫೈನಲ್ ಪಂದ್ಯದಲ್ಲಿ 87 ರನ್ ಗಳಿಸಿ, 'ಪಂದ್ಯ ಶ್ರೇಷ್ಠ' ಪ್ರಶಸ್ತಿಗೆ ಭಾಜನರಾದರು. ಜತೆಗೆ, ವಿಶ್ವಕಪ್ ಫೈನಲ್ ಪಂದ್ಯದಲ್ಲಿ (ಪುರುಷ ಮತ್ತು ಮಹಿಳಾ ಎರಡೂ ಪ್ರಕಾರಗಳಲ್ಲಿ) ಅರ್ಧಶತಕ ಸಿಡಿಸಿದ ಅತಿ ಕಿರಿಯ ಬ್ಯಾಟರ್ ಎಂಬ ವಿಶಿಷ್ಟ ದಾಖಲೆಯನ್ನೂ ಮಾಡಿದರು. ಫೈನಲ್ ಪಂದ್ಯದಲ್ಲಿ ಬೌಲಿಂಗ್‌ಗೆ ಇಳಿದು, ನಿರ್ಣಾಯಕ ಹಂತದಲ್ಲಿ 2 ವಿಕೆಟ್ ಗಳಿಸಿ 'ಆಲ್‌ರೌಂಡರ್' ಎನಿಸಿಕೊಂಡರು.
- ತಂಡದ ಗೆಲುವಿನ ಪಯಣದಲ್ಲಿ ಶ್ರಮವಹಿಸಿ ದುಡಿದ ಇನ್ನೂ ಅನೇಕರಿದ್ದಾರೆ. ಬೌಲಿಂಗ್-ಫೀಲ್ಡಿಂಗ್ ವಿಭಾಗದಲ್ಲಿ ಮಿಂಚಿ ಅನುಪಮ ಕೊಡುಗೆ ನೀಡಿದವರಲ್ಲಿ ರೇಣುಕಾ, ಕ್ರಾಂತಿ, ಶ್ರೀಚರಣಿ, ಅಮನ್ ಜೋತ್, ರಾಧಾ ಪ್ರಮುಖರು. ವಿಕೆಟ್ ಹಿಂದೆ ಅತ್ಯುತ್ತಮ ಪ್ರದರ್ಶನ ನೀಡಿದ ರೀಚಾ ಘೋಷ್‌ರನ್ನು 'ಲೇಡಿ ಧೋನಿ' ಎಂದರೆ ತಪ್ಪಾಗಲಾರದು. ಇನ್ನು ತೆರೆಯ ಹಿಂದಿನಿಂದ ಕೋಚ್ ಮತ್ತು ಸಿಬ್ಬಂದಿ ವರ್ಗದಿಂದ ದಕ್ಕಿದ ನಿರಂತರ ಬೆಂಬಲವೂ ತಂಡದ ಗೆಲುವಿಗೆ ಬಲ ನೀಡಿದೆ ಎನ್ನಲಡ್ಡಿಯಿಲ್ಲ. ಸೆಮಿಫೈನಲ್ ಪಂದ್ಯದಲ್ಲಿ ಜೆಮಿಮಾ ರೋಡ್ರಿಗ್ರಸ್ ಅವರು ಆಸ್ಟ್ರೇಲಿಯಾದಿಂದ ಗೆಲುವನ್ನು ಕಸಿದುಕೊಂಡರು. ಅದ್ಭುತ ಫಾರ್ಮ್‌ನಲ್ಲಿದ್ದ ಆಫ್ರಿಕಾ ತಂಡದ ನಾಯಕಿ ಲೌರಾ ಓಲ್ವಾರ್ಡ್ ಅದಾಗಲೇ ಶತಕ ಬಾರಿಸಿ ತಂಡಕ್ಕೆ ಮೇಲುಗೈ ತಂದುಕೊಟ್ಟಿದ್ದ ಸಂದರ್ಭದಲ್ಲಿ, ದೀಪ್ತಿಯವರು ಎಸೆದ 42ನೇ ಓವರಿನ ಮೊದಲ ಚೆಂಡನ್ನು ಬಾರಿಸಿದಾಗ, ಡೀಪ್ ಮಿಡ್‌ವಿಕೆಟ್‌ನಲ್ಲಿದ್ದ ಅಮನ್‌ಜೋತ್ ಓಡೋಡಿ ಬಂದು, ಕೈಯಿಂದ ಜಾರುತ್ತಿದ್ದ ಚೆಂಡನ್ನು ಮೂರನೆಯ ಪ್ರಯತ್ನದಲ್ಲಿ ಬಿದ್ದು ಹಿಡಿದಾಗ, ಭಾರತವು ವಿಶ್ವಕಪ್ ಅನ್ನು ಹಿಡಿದಷ್ಟು ಮಟ್ಟಿಗಿನ ಸಂಭ್ರಮ!

ಭಾರತದ ಮಹಿಳಾ ಕ್ರಿಕೆಟ್ ಕ್ಷೇತ್ರಕ್ಕೆ ಕೊಡುಗೆ ನೀಡಿದ ಮಿಥಾಲಿ ರಾಜ್, ಗೌಹರ್ ಸುಲ್ತಾನಾ, ವೇದಾ ಕೃಷ್ಣಮೂರ್ತಿ, ಜೂಲನ್ ಗೋಸ್ವಾಮಿ, ಅಂಜುಂ ಚೋಪ್ರಾ, ಪೂರ್ಣಿಮಾ ರಾವ್ ಮುಂತಾದವರು ತೋರಿದ never giveup ಮನೋಧರ್ಮದ ಸುಧಾರಿತ ಅವತರಣಿಕೆಯನ್ನು ಈಗಿನ ತಂಡ ಹೊರಹೊಮ್ಮಿಸಿದ ಕಾರಣಕ್ಕೆ ವಿಶ್ವಕಪ್ ಅನ್ನು ದಕ್ಕಿಸಿಕೊಂಡು ಬೀಗಿದೆ.

ಭಾರತದಲ್ಲಿ ಕ್ರಿಕೆಟ್ ಒಂದು ಧರ್ಮ. 1983ರಲ್ಲಿ 'ಫೇವರಿಟ್'ಗಳ ಪಟ್ಟಿಯಲ್ಲೇ ಇಲ್ಲದಿದ್ದ ಕಪಿಲ್‌ದೇವ್ ನೇತೃತ್ವದ ಪುರುಷರ ತಂಡವು, ಆಸ್ಟ್ರೇಲಿಯಾ, ಇಂಗ್ಲೆಂಡ್, ವೆಸ್ಟ್ ಇಂಡೀಸ್‌ನಂಥ ದಿಗ್ಗಜ ತಂಡಗಳನ್ನು ಮಣಿಸಿ, ವಿಶ್ವಕಪ್ ಅನ್ನು ಗೆದ್ದು ಸಂಭ್ರಮಿಸಿತ್ತು. ಅದು ಭಾರತೀಯ ಕ್ರಿಕೆಟ್‌ನಲ್ಲಿ ಹೊಸ ಶಕೆ ಆರಂಭವಾದ ಸುದಿನ. ಮಹಿಳಾ ಕ್ರಿಕೆಟ್ ಪಾಲಿಗೂ ಅಂಥದೇ ಸುದಿನ ಈಗ ಒದಗಿರುವುದು ಹೆಮ್ಮೆಯ ಸಂಗತಿ. ಮಹಿಳಾ ಕ್ರಿಕೆಟ್‌ನ ಭವಿಷ್ಯಕ್ಕೆ ಈ ಗೆಲುವು ಭದ್ರಬುನಾದಿಯಾಗಲಿದೆ.

ಅತ್ಯುನ್ನತ ಸ್ಥಾನವನ್ನು ದಕ್ಕಿಸಿಕೊಳ್ಳುವುದು ಎಷ್ಟು ಕಷ್ಟವೋ, ಸತತವಾಗಿ ಸ್ಥಿರ ಪ್ರದರ್ಶನವನ್ನು ನೀಡಿ ಆ ಸ್ಥಾನವನ್ನು ಕಾಪಾಡಿಕೊಳ್ಳುವುದೂ ಅಷ್ಟೇ ಕಷ್ಟ! ಪುರುಷರ ಕ್ರಿಕೆಟ್‌ಗೆ ಸಿಗುವಷ್ಟೇ ಪ್ರಾಮುಖ್ಯವು ಮಹಿಳಾ ಕ್ರಿಕೆಟ್‌ಗೂ ಸಿಕ್ಕಲ್ಲಿ ಇದು ಸಾಧ್ಯವಾದೀತು. ಈ ನಿಟ್ಟಿನಲ್ಲಿ ಒಂದಿಷ್ಟು ಪ್ರಯತ್ನಗಳಾಗುತ್ತಿದ್ದರೂ ಸಾಗಬೇಕಾದ ದಾರಿ ದೂರವಿದೆ. ಮಹಿಳಾ ಕ್ರಿಕೆಟ್ ಮಾತ್ರವಲ್ಲದೆ ಒಟ್ಟಾರೆಯಾಗಿ ಮಹಿಳಾ ಕ್ರೀಡೆಗಳಿಗೆ ಇನ್ನಷ್ಟು ಅವಕಾಶಗಳು, ಹಣಕಾಸು ನೆರವು ಮತ್ತು ಸಾಂಸ್ಥಿಕ ಬೆಂಬಲ ದಕ್ಕಬೇಕಿದೆ.

ಯಾವುದೇ ಯಶಸ್ಸು ಒಂದಿಷ್ಟು ತ್ಯಾಗಗಳನ್ನು ಬೇಡುತ್ತದೆ. ಮಹಿಳಾ ವಿಶ್ವಕಪ್ ಗೆಲುವಿನ ಹಿಂದೆಯೂ ಆಟಗಾರರು ಬಸಿದ ಬೆವರು, ವಿನಿಯೋಗಿಸಿದ ಪರಿಶ್ರಮ, ಆಪ್ತರಿಂದ ದೂರವಿದ್ದು ಛಲಬಿಡದೆ ಮಾಡಿದ ಕಠಿಣ ಅಭ್ಯಾಸ ಇವೆಲ್ಲವೂ ಇದೆ. ದೇಶದ ಉದ್ದಗಲಕ್ಕೂ ಇಂಥ ಮಹಿಳಾ ಕ್ರಿಕೆಟ್ ಪ್ರತಿಭೆಗಳು ಸಾಕಷ್ಟು ಇದ್ದಿರಬಹುದು; ಪೋಷಕರು ದಿಟ್ಟ ನಿರ್ಧಾರ ತೆಗೆದುಕೊಂಡು ತಂತಮ್ಮ ಮನೆಯ ಹೆಣ್ಣುಮಕ್ಕಳನ್ನು ಈ ನಿಟ್ಟಿನಲ್ಲಿ ತೊಡಗಿಸುವ ಛಾತಿ ತೋರಬೇಕಿದೆ. ಆಗಲೇ ನಿಜವಾದ ಸಾರ್ಥಕತೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಭಟ್ಟರ್ ಸ್ನಾಚ್

- **ಪವಿತ್ರ ವಿ.ಎಂ., ಬೆಂಗಳೂರು**
ಸರ್, ನಮ್ಮ ಮಹತ್ವ ಗೊತ್ತಿಲ್ಲದವರಿಗೆ ಅದನ್ನು ತಿಳಿಸಿಕೊಡುವುದು ಹೇಗೆ?
– **ಎಲ್ಲ ಸಲ ದವಡೆ ಹಲ್ಲು ಉದುರಿಸಬಾರದು!**

- **ಸಾಕ್ಷಿ, ಸುರತ್ಕಲ್**
ಭಟ್ರೇ, ನೀವು ನೋಡದ ದೇಶಗಳು ಇವೆಯಾ?
– **ಎಲ್ಲ ದೇಶಗಳನ್ನೂ ನೋಡಿದ್ದೇನೆ, ನಕಾಶೆಯಲ್ಲಿ!**

- **ಗಣಪತಿ ಶ್ರೀಕರ್, ತುಮಕೂರು**
ಭಟ್ರೇ, ನಮಗೆ ಒಪ್ಪುವ ಡ್ರೆಸ್ ಯಾವುದು ಎಂದು ತಿಳಿದುಕೊಳ್ಳುವುದು ಹೇಗೆ?
– **ಈ ವಿಷಯದಲ್ಲಿ ಅನೇಕರು ಹೆಂಡತಿಗಿಂತ ಗರ್ಲ್‌ಫ್ರೆಂಡ್ ಸಲಹೆ ಪಡೆಯುತ್ತಾರೆ ಎಂದು ಕೇಳಿದ್ದೇನೆ!**

- **ಪಿ.ಶಂಕರ, (ಇಮೇಲ್ ಮೂಲಕ)**
ಭಟ್ರೇ, ಹುಡುಗಿಯರ ಮನಸ್ಸನ್ನು ತಿಳಿಯುವುದು ಹೇಗೆ?
– **ಐಫೋನ್ ಕೊಡಿಸುವೆ ಅಂತ ಹೇಳಿ ನೋಡು!**

- **ಮೋಹನ ಪಿ.ಜನಗೆರೆ**
ಸರ್, ಕೆಲವರು ಕುಳಿತಲ್ಲಿ ಕುಳಿತುಕೊಳ್ಳುವುದಿಲ್ಲವಲ್ಲ?
– **ಅವರಿಗೆ ಆಗಾಗ ಮೊಬೈಲ್ ಕಾಲ್‌ಗಳು ಬರುತ್ತಾವಲ್ಲ!**

- **ಬಸವರಾಜ ಪಾಟೀಲ, ರಾಯಚೂರು**
ಭಟ್ರೇ, ನೀವು ಬಹಳ ಸಿಂಪಲ್ ಅಂತ ನನ್ನ ಸ್ನೇಹಿತೆ ಹೇಳ್ತಾಳಲ್ಲ?
– **ಅದಕ್ಕಾಗಿ ಎಷ್ಟು ಖರ್ಚು ಮಾಡ್ತೇನೆ ಗೊತ್ತಾ ನಿನಗೆ?!**

- **ಉಮೇಶ್ ಎಂ. ಶಿರಾ, ರಾಮನಗರ**
ಭಟ್ರೇ, ಜಪಾನಲ್ಲಿ ಗೂಬೇನ ಪೂಜೆ ಮಾಡ್ತಾರಂತೆ, ನಿಜಾನಾ?
– **ಅವರು ಅದನ್ನು ನಮ್ಮಿಂದ ಕಲಿತಿರಬಹುದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಬಡತನಕ್ಕೆ ಜಾತಿ ಇದೆಯಾ?
– **ನಮ್ಮಲ್ಲಿ ಜಾತಿಗೂ ಬಡತನವಿಲ್ಲ!**

- **ಚಂದ್ರಶೇಖರ ನಾಗೂರು, (ಇಮೇಲ್ ಮೂಲಕ)**
ಸಿಕ್ಕಿಹಾಕಿಕೊಂಡ್ರೆ ಮಾತ್ರ ಕಳ್ಳನಾ?
– **ಸಿಕ್ಕಿಹಾಕಿಕೊಂಡ ಎಷ್ಟು ಜನರನ್ನು ಕಳ್ಳ ಎಂದು ಒಪ್ಪಿಕೊಂಡಿದ್ದೇವೆ, ಮೊದಲು ಹೇಳು!**

- **ವೀರೇಶ ಮಂಗಸೂಳಿ, ಖಾನಾಪುರ**
ಭಟ್ಟರು ಊರಲ್ಲಿದ್ದರೆ ಉಪಸ್ಥಿತಿ, ಹೊರಗೆ ಹೋದರೆ ಅನುಪಸ್ಥಿತಿ. ಆಫೀಸ್‌ನ ಸ್ಥಿತಿ?
– **ಯಥಾಸ್ಥಿತಿ!**

- **ಸರಿತಾ ರವಿ, ಬೆಂಗಳೂರು**
ಭಟ್ರೇ, ಹೆಂಗಸರ ಜೀವನ ಅಡುಗೆ ಮನೆಯಲ್ಲಿ ಕಳೆದು ಹೋಗುತ್ತದಲ್ಲ?
– **ಅದು ನಿಜವಾದರೆ, ಗಂಡಸರ ಜೀವನ ಅಲ್ಲಿ ಉಂಡೇ ಕಳೆದುಹೋಗುತ್ತದೆ!**

ವೀರಪ್ಪನ್ ಬದುಕಿದ್ದರೆ ಹೀಗಾಗುತ್ತಿರಲಿಲ್ಲವಂತೆ...!

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ವೀರಪ್ಪನ್ ಬದುಕಿದ್ದರೆ ಹೀಗಾಗುತ್ತಿರಲಿಲ್ಲವಂತೆ.... ! ನರಹಂತಕ, ದಂತಚೋರ, ನೂರಾರು ಆನೆಗಳ ಹಂತಕ ಎಂಬ ನಾನಾ ವಿಶೇಷಣಗಳಿಂದ ಕರೆಸಿಕೊಂಡ ವೀರಪ್ಪನ್ ಪರ ಮಾತುಗಳು, ಘೋಷಣೆಗಳು, ಆತನನ್ನು ಕ್ಷಮಿಸಬೇಕೆಂಬ ಮಾತುಗಳು ಆತ ಬದುಕಿರುವಾಗಲೇ ಕೇಳಿ ಬಂದಿದ್ದವು. ತಮಿಳುನಾಡಿನಲ್ಲಿ ಅನೇಕ ರಾಜಕೀಯ ನಾಯಕರು ವೀರಪ್ಪನ್ ಪರ ಲಾಬಿ ನಡೆಸಿದ್ದರು. ಒಂದು ವೇಳೆ ಆತ ಬದುಕಿ ಜೈಲು ಸೇರಿರುತ್ತಿದ್ದರೆ, ರಾಜೀವ್ ಹಂತಕರಂತೆ ಆತನಿಗೂ ಕ್ಷಮಾಪಣೆ ನೀಡಬೇಕೆಂಬ ಮಾತು ಕೇಳಿ ಬರುತ್ತಿತ್ತೇನೋ ? ಈಗ ನಮ್ಮ ರಾಜ್ಯದಲ್ಲಿಯೇ ವೀರಪ್ಪನ್ ಪರ ಮಾತುಗಳು ಕೇಳಿ ಬರುತ್ತಿವೆ. ಎರಡು ದಿನಗಳ ಹಿಂದೆ (ನವೆಂಬರ್ 2) ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರ ಸಮ್ಮುಖದಲ್ಲಿಯೇ ಚಾಮರಾಜನಗರದ ರೈತರು 'ವೀರಪ್ಪನ್ ಬದುಕಿದ್ದಾಗಲೇ ನಮ್ಮ ಕಾಡು ಚೆನ್ನಾಗಿತ್ತು' ಎಂದು ಮಾತುಗಳನ್ನಾಡಿದರು. ಹಾಗೆಂದು ಇದು ವೀರಪ್ಪನ್ ಗುಣಗಾನವಲ್ಲ. ಅರಣ್ಯ ಅಧಿಕಾರಿಗಳ ವಿರುದ್ಧ ರೈತರ ಆಕ್ರೋಶದ ಕಟ್ಟೆ ಒಡೆದಾಗ ಕೇಳಿ ಬಂದ ಮಾತಿದು.

ಕಳೆದ ಮೂರ್ನಾಲ್ಕು ತಿಂಗಳಲ್ಲಿ ರಾಜ್ಯದ ನಾನಾ ಜಿಲ್ಲೆಗಳಲ್ಲಿ ವಿಶೇಷವಾಗಿ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಮಾನವ ಮತ್ತು ವನ್ಯಜೀವಿ ಸಂಘರ್ಷ ಏರುತ್ತಲೇ ಸಾಗಿದೆ. ನವೆಂಬರ್ ತಿಂಗಳ ಆರಂಭದಲ್ಲಿಯೇ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಸುಳೆಗಾಲಿ ಗ್ರಾಮದ ಬಳಿ ಎರಡು ಕಾಡಾನೆಗಳು ಅಕ್ರಮವಾಗಿ ಹಾಕಲಾಗಿದ್ದ ವಿದ್ಯುತ್ ಬೇಲಿಗೆ ತಗುಲಿ ಮೃತಪಟ್ಟಿವೆ. ಅಕ್ಟೋಬರ್ ಕೊನೆಯ ವಾರದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ವನ್ಯಜೀವಿ ವಿಭಾಗದ ಕೆರೆಕಟ್ಟೆ ವ್ಯಾಪ್ತಿಯಲ್ಲಿ ಇಬ್ಬರು ರೈತರು ಆನೆ ತುಳಿತಕ್ಕೆ ಸಿಲುಕಿ ಮೃತಪಟ್ಟಿದ್ದಾರೆ. ನಾಗರಹೊಳೆಗೆ ಹೊಂದಿಕೊಂಡಿರುವ ಮೈಸೂರಿನ ಸರಗೂರಿನಲ್ಲಿ ಇಬ್ಬರು ದನಗಾಹಿಗಳು ಹುಲಿಗೆ ಆಹಾರವಾಗಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೋಳೆಯೂರು ವ್ಯಾಪ್ತಿಯಲ್ಲೂ ವೃದ್ಧರೊಬ್ಬರನ್ನು ಹುಲಿ ಬಲಿ ಪಡೆದಿದೆ. ಕಳೆದ ಜೂನ್‌ನಲ್ಲಿ ಮಲೆ ಮಹದೇಶ್ವರ ಬೆಟ್ಟ ಅರಣ್ಯ ಪ್ರದೇಶದಲ್ಲಿ ಒಂದು ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳು ವಿಷಪ್ರಾಶನಕ್ಕೀಡಾಗಿ ಮೃತಪಟ್ಟಿದ್ದವು. ಇದರ ಬೆನ್ನಿಗೇ ಮತ್ತೊಂದು ಹುಲಿ ಶಂಕಾಸ್ಪದವಾಗಿ ಸಾವಿಗೀಡಾಗಿತ್ತು.



ಈ ಹಿನ್ನೆಲೆಯಲ್ಲಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧ್ಯಕ್ಷತೆಯಲ್ಲಿ ಚಾಮರಾಜನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಕಾಡಂಚಿನ ಜನರು, ರೈತರು ಮತ್ತು ಅಧಿಕಾರಿಗಳ ಸಭೆ ಕರೆಯಲಾಗಿತ್ತು. ಅರಣ್ಯ, ಕಂದಾಯ ಮತ್ತು ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದ ಈ ಸಭೆಯಲ್ಲಿ ರೈತ ಮುಖಂಡ ಹೊನ್ನೂರು ಪ್ರಕಾಶ್, '' ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಾಕಷ್ಟು ಅಕ್ರಮ ರೆಸಾರ್ಟ್‌ಗಳು ನಡೆಯುತ್ತಿವೆ. ವೀರಪ್ಪನ್ ಇದ್ದಾಗಲೇ ಕಾಡು ಚೆನ್ನಾಗಿತ್ತು. ಆಗ ಅಕ್ರಮ ಗಣಿಗಾರಿಕೆ– ರೆಸಾರ್ಟ್ ಅವ್ಯವಹಾರಗಳು ನಡೆಯುತ್ತಿರಲಿಲ್ಲ. ಅಧಿಕಾರಿಗಳಿಗಿಂತ ವೀರಪ್ಪನ್ ಪರವಾಗಿರಲಿಲ್ಲ. ನಮ್ಮ ರಾಜ್ಯದಲ್ಲಿ ನಡೆಯುವಷ್ಟು ವನ್ಯಜೀವಿ ಸಂಘರ್ಷ ಬೇರೆ ಯಾವುದೇ ರಾಜ್ಯದಲ್ಲಿ ನಡೆಯುತ್ತಿಲ್ಲ. ಈ ಸಂಘರ್ಷ ಹೆಚ್ಚಾಗಲು ಅರಣ್ಯಾಧಿಕಾರಿಗಳ ನಿರ್ಲಕ್ಷ್ಯವೇ ಕಾರಣ'' ಎಂದು ಸಿಡಿಮಿಡಿ ವ್ಯಕ್ತಪಡಿಸಿದರು.

ರೈತರ ಆರೋಪಗಳಿಗೆ ಕಿವಿಯಾದ ಸಚಿವ ಈಶ್ವರ್ ಖಂಡ್ರೆ, ರಾಜ್ಯದ ಯಾವುದೇ ಅರಣ್ಯ ಪ್ರದೇಶದಲ್ಲಿ ಅಕ್ರಮ ಹೋಮ್ ಸ್ಟೇ , ರೆಸಾರ್ಟ್‌ಗಳಾಗಲಿ, ಅಕ್ರಮ ಕಲ್ಲು ಗಣಿಗಾರಿಕೆಗಾಗಲಿ ಸರಕಾರ ಅವಕಾಶ ನೀಡಿಲ್ಲ. ಸ್ಪಷ್ಟ ದೂರು ಬಂದರೆ ಕಠಿಣ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದ್ದಾರೆ. ಆದರೆ ಈ ವಿಚಾರದಲ್ಲಿ ತಾನು ನಿಸ್ಸಹಾಯಕ ಎನ್ನುವುದು ಸ್ವತ: ಖಂಡ್ರೆ ಸಾಹೇಬರಿಗೂ ಗೊತ್ತು. ಏಕೆಂದರೆ ನಾಗರಹೊಳೆ, ಬಂಡೀಪುರ, ಬಿಳಿಗಿರಿರಂಗನ ಬೆಟ್ಟ, ದಾಂಡೇಲಿ ಅರಣ್ಯದಂಚಿನ ಭಾಗದಲ್ಲಿ, ಕೊಡಗು, ಚಿಕ್ಕಮಗಳೂರು, ಉತ್ತರಕನ್ನಡದ ಜಿಲ್ಲೆಗಳ ವನ್ಯ ಸೂಕ್ಷ್ಮ ಪ್ರದೇಶಗಳಲ್ಲಿ ರೆಸಾರ್ಟ್ ನಿರ್ಮಿಸಿಕೊಂಡವರು, ಎಸ್ಟೇಟ್ ಹೆಸರಿನಲ್ಲಿ ನೂರಾರು ಎಕರೆ ಭೂಮಿ ಕಬಳಿಸಿದವರು, ರಾಜ್ಯದ ನಾನಾ ಜಿಲ್ಲೆಗಳಲ್ಲಿ ಅರಣ್ಯ ಭೂಮಿಯನ್ನು ಬಂಜರು ನೆಲವಾಗಿ ತೋರಿಸಿದ ಗಣಿ ಧಣಿಗಳು ಖಂಡ್ರೆಯವರ ಹಿಡಿತಕ್ಕೆ ಸಿಗುವವರಲ್ಲ. ಇವರು ರಾಜ್ಯದಲ್ಲೂ, ಕೇಂದ್ರದಲ್ಲೂ ಪ್ರಭಾವ ಬೀರಬಲ್ಲವರು. ಇಲ್ಲಿನ ಕೆಲವು ರೆಸಾರ್ಟ್ ಮತ್ತು ಎಸ್ಟೇಟ್‌ಗಳಿಗೆ ಕ್ಯಾಬಿನೆಟ್ ಮಂತ್ರಿಗಳು, ಅಧಿಕಾರಿಗಳು, ಚಿತ್ರೋದ್ಯಮದ ಚಿತ್ರರಂಗದ ಸ್ಟಾರ್ ನಟರು, ಅಂತಾರಾಷ್ಟ್ರೀಯ ಮಟ್ಟದ ಉದ್ಯಮಿಗಳು ಬೇನಾಮಿ ಮಾಲೀಕರು. ಯಾವುದೇ ಪಕ್ಷದ ಸರಕಾರ ಬಂದರೂ ಇವರು ಸದಾ ಪ್ರಭಾವಶಾಲಿಗಳಾಗಿಯೇ ಇರುವವರು. ವನ್ಯಮೃಗಗಳ ಉಪಟಳವನ್ನು ಎದುರಿಸಲಾಗದ ಕಾಡಂಚಿನ ಮಂದಿ ಇವರನ್ನು ಎದುರಿಸಿ ಗೆಲ್ಲುವುದು ದೂರದ ಮಾತು.

ಸದ್ಯ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆಯುವ ನಿಟ್ಟಿನಲ್ಲಿ ಎಂಟು ಅಂಶಗಳ ಕಾರ್ಯಯೋಜನೆಯನ್ನು ರೂಪಿಸಿ, ಜಾರಿಗೆ ತರಲು ನಿರ್ಧರಿಸಲಾಗಿದೆ. ವನ್ಯಜೀವಿಗಳು ನಾಡಿಗೆ ಬರುತ್ತಿರುವ ಬಗ್ಗೆ ಅಧ್ಯಯನ ಮಾಡಿಸಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ವತಿಯಿಂದ ಇಬ್ಬರು ತಜ್ಞರ ಸಮಿತಿ ರಚಿಸಲಾಗಿದೆ. ರೈತರು, ಸಾರ್ವಜನಿಕರು ನೀಡಿರುವ ಎಲ್ಲ ಸಲಹೆ ಕ್ರೋಢೀಕರಿಸಿ, ಚರ್ಚಿಸಿ ಅನುಷ್ಠಾನಕ್ಕೆ ತರಲಾಗುವುದು ಎಂದು ಸಚಿವರು ಭರವಸೆ ನೀಡಿದ್ದಾರೆ. ಅರಣ್ಯ ಪ್ರದೇಶದಲ್ಲಿ ಬೃಹತ್ ಯಂತ್ರೋಪಕರಣಗಳನ್ನು ಬಳಸಿ ನಡೆಸಲಾಗುತ್ತಿರುವ ವಾಣಿಜ್ಯ ಚಟುವಟಿಕೆಗಳು ಮತ್ತು ಸರಕಾರಿ ಯೋಜನೆಗಳ ಬಗ್ಗೆ ರೈತರು ಗಮನ ಸೆಳೆದಿದ್ದಾರೆ. ರೆಸಾರ್ಟ್‌ಗಳ ಹೆಸರಿನಲ್ಲಿ ನಡೆಯುತ್ತಿರುವ ದಂಧೆಗಳ ಬಗ್ಗೆಯೂ ಗಮನ ಸೆಳೆದಿದ್ದಾರೆ. ಈ ಕಾರಣದಿಂದಲೇ ವನ್ಯಜೀವಿಗಳು ನಾಡಿನ ಹಾದಿ ಹಿಡಿಯುತ್ತಿವೆ ಎನ್ನುವುದು ರೈತರು ಮತ್ತು ಕಾಡಂಚಿನ ಜನರ ಆರೋಪ.

ಸಚಿವರ ಭರವಸೆ ಬೆನ್ನಲ್ಲೇ 'ಸೇವ್ ಕಬಿನಿ' ತಂಡವು ನಾಗರಹೊಳೆ ಸುತ್ತಮುತ್ತ ಇರುವ 15 ರೆಸಾರ್ಟ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಮೈಸೂರು ಜಿಲ್ಲೆಯ ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚುತ್ತಿರುವ ವನ್ಯಜೀವಿ–ಮಾನವ ಸಂಘರ್ಷಕ್ಕೆ ಕಬಿನಿ ಹಿನ್ನೀರಿನಲ್ಲಿ ಅಕ್ರಮವಾಗಿ ತಲೆ ಎತ್ತಿರುವ ರೆಸಾರ್ಟ್‌ಗಳೇ ಕಾರಣವೆಂದು ಈ ತಂಡ ಆರೋಪಿಸಿದೆ. ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ನೂರಾರು ರೆಸಾರ್ಟ್‌ಗಳು ಮತ್ತು ಹೋಂಸ್ಟೇಗಳು ತಲೆ ಎತ್ತಿವೆ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಅಕ್ರಮವಾಗಿರಲಿ ಅಥವಾ ಸಕ್ರಮವಾಗಿರಲಿ. ಕಾಡಿನ ಪ್ರದೇಶದಲ್ಲಿ ಯಾವುದೇ ರೆಸಾರ್ಟ್ ಇರಬಾರದು. ಅರಣ್ಯ ಅತಿಕ್ರಮಣದ ಹೆಸರಿನಲ್ಲಿ ಕಾಡಂಚಿನ ರೈತರ ವಿರುದ್ಧ ಕೇಸು ದಾಖಲಿಸುವ ಅರಣ್ಯ ಅಧಿಕಾರಿಗಳು ಈ ರೆಸಾರ್ಟ್‌ಗಳಿಗೆ ಬೆಂಗಾವಲಾಗಿ ನಿಂತಿದ್ದಾರೆ ಎನ್ನುವುದು ಈ ಸಂಘಟನೆಯ ದೂರು.

ರೆಸಾರ್ಟ್‌ಗಳು ಮತ್ತು ಸಫಾರಿ ಚಟುವಟಿಕೆಗಳಿಂದ ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಳವಾಗಿದೆ. ಕಾಡಿನೊಳಗಿನ ಕೆರೆಗಳು ಬತ್ತಿ, ಹುಲ್ಲುಗಾವಲು ನಾಶವಾಗಿ ಪ್ರಾಣಿಗಳು ನಾಡಿಗೆ ಬರುತ್ತಿವೆ. ಅಕ್ರಮ ರೆಸಾರ್ಟ್‌ಗಳಿಗೆ ಅನುಮತಿ ನೀಡಿದ ಅರಣ್ಯ ಇಲಾಖೆ ಅಧಿಕಾರಿಗಳನ್ನು ಜೈಲಿಗೆ ಕಳುಹಿಸಬೇಕು. ಆದರೆ, ಇಲ್ಲಿ ಪ್ರಶ್ನೆ ಮಾಡುವ ರೈತರ ಮೇಲೆಯೇ ಕೇಸ್ ದಾಖಲಿಸಲಾಗುತ್ತಿದೆ ಎಂದು ರೈತ ಮುಖಂಡ ಹೊನ್ನೂರು ಪ್ರಕಾಶ್ ಮತ್ತು ವಕೀಲ ರವಿಕುಮಾರ್ ದೂರುತ್ತಾರೆ. ಈ ದೂರಿನ ಬಗ್ಗೆ ತನಿಖೆ ನಡೆಸಿದರೆ ಅನೇಕ ಕಹಿ ಸತ್ಯಗಳು ಹೊರಬೀಳಬಹುದು. ಆದರೆ ಹಿಂದಿನ ಅನುಭವದ ಆಧಾರದಲ್ಲಿ ತನಿಖೆ ನಡೆಯುವುದಿಲ್ಲ ಎಂದು ಖಚಿತವಾಗಿ ಹೇಳಬಹುದು.

ವಿಶೇಷ ಎಂದರೆ 'ಸೇವ್ ಕಬಿನಿ' ನೀಡಿರುವ ರೆಸಾರ್ಟ್‌ಗಳ ಪಟ್ಟಿಯಲ್ಲಿ ರಾಜ್ಯ ಸರಕಾರ ಸ್ವಾಮ್ಯದ 'ಜಂಗಲ್ ಲಾಡ್ಜಸ್' ಕೂಡ ಇದೆ. ಕಬಿನಿ ಹಿನ್ನೀರು ಪ್ರದೇಶದ ಈ ಪ್ರತಿಷ್ಠಿತ ರೆಸಾರ್ಟ್‌ನಿಂದ ನಡೆಸುವ ಸಫಾರಿಯನ್ನು ಆನಂದಿಸಲು ದೇಶ ವಿದೇಶದಿಂದ ಪ್ರವಾಸಿಗರು ಬರುತ್ತಾರೆ. ಸಫಾರಿ ಚಟುವಟಿಕೆಯಿಂದ ವನ್ಯಜೀವಿಗಳ ಪ್ರಾಣಿ ಸಹಜ ಚಟುವಟಿಕೆಗಳಿಗೆ ಅಡ್ಡಿಯಾಗಿದೆ ಎನ್ನುವುದು ಇತ್ತೀಚಿನ ಆರೋಪ. ಈ ಆರೋಪಕ್ಕೆ ಈಗ ಸಚಿವ ಖಂಡ್ರೆ ಅವರೂ ದನಿಗೂಡಿಸಿದ್ದಾರೆ. ನಾಗರಹೊಳೆಯಲ್ಲಿ ಇನ್ನು ಮುಂದೆ ದಿನದ ಕೊನೆಯ ಸಫಾರಿ ರದ್ದು ಮಾಡಲಾಗುತ್ತದೆ ಎಂದು ಖಂಡ್ರೆ ಅವರು ಹೇಳಿದ್ದಾರೆ. ಅಗತ್ಯ ಬಿದ್ದರೆ ನಾಗರಹೊಳೆ ಸಫಾರಿಯನ್ನು ಶಾಶ್ವತವಾಗಿ ಬಂದ್ ಮಾಡಲಾಗುವುದೆಂಬ ಮಾತನ್ನೂ ಸಚಿವರು ಆಡಿದ್ದಾರೆ.

ಸದ್ಯದ ಮಟ್ಟಿಗೆ ಇದು ದೂರದ ಮಾತು. ಆದರೆ ವನ್ಯಜೀವಿ ಮತ್ತು ಮಾನವ ಸಂಘರ್ಷವನ್ನು ತಡೆಯುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲೇಬೇಕಾಗಿದೆ. ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷ ಪ್ರಮುಖ ಸಮಸ್ಯೆ. ಕಳೆದ 5 ವರ್ಷಗಳಲ್ಲಿ (2020–2025) ರಾಜ್ಯದಲ್ಲಿ 75ಕ್ಕೂ ಹೆಚ್ಚು ಹುಲಿಗಳು ಸಾವನ್ನಪ್ಪಿವೆ. ಇವುಗಳಲ್ಲಿ ಕನಿಷ್ಠ 13 ಹುಲಿಗಳು ಗುಂಡೇಟು, ಉರುಳು, ವಿಷಪ್ರಾಶನ, ವಿದ್ಯುತ್ ಆಘಾತದಂತಹ ಅಸ್ವಾಭಾವಿಕ ಕಾರಣಗಳಿಂದ ಮೃತಪಟ್ಟಿವೆ. 2023–24ರ ವರ್ಷವೊಂದರಲ್ಲಿಯೇ 101 ಆನೆಗಳು ಮೃತಪಟ್ಟಿವೆ. ಇವುಗಳಲ್ಲಿ 15 ಆನೆಗಳು ವಿದ್ಯುತ್ ಸ್ಪರ್ಶ, ಗುಂಡೇಟಿನಂತಹ ಅಸಹಜ ಕಾರಣಗಳಿಂದ ಮೃತಪಟ್ಟಿವೆ. 2021–25 ರ ಅವಧಿಯಲ್ಲಿ ವನ್ಯಜೀವಿಗಳ ದಾಳಿಯಿಂದಾಗಿ ಸುಮಾರು 270ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ವನ್ಯಜೀವಿಗಳ ಸಾವು ಹೆಚ್ಚಳ ಸಂಬಂಧ ಕರ್ನಾಟಕ ಹೈಕೋರ್ಟ್ ಕಳೆದ ವರ್ಷ ಸ್ವಯಂಪ್ರೇರಿತ ಪಿಐಎಲ್ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದೆ.

ದಿನಗಳುರುಳಿದಂತೆಯೇ ರಾಜ್ಯದ ವಿವಿಧೆಡೆಗಳಲ್ಲಿ ವನ್ಯಜೀವಿಗಳು ಜನವಸತಿ ಮತ್ತು ಕೃಷಿ ಭೂಮಿಗೆ ಲಗ್ಗೆ ಇಡುವ ಪ್ರಕರಣಗಳು ಹೆಚ್ಚುತ್ತಲೇ ಸಾಗಿದ್ದು ಭಾರೀ ಪ್ರಮಾಣದಲ್ಲಿ ಬೆಳೆ ಹಾನಿ ಮಾತ್ರವಲ್ಲದೆ ಅಮಾಯಕ ರೈತರು ವನ್ಯಜೀವಿಗಳ ದಾಳಿಗೆ ತುತ್ತಾಗಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಹಾಗೆಯೇ ವನ್ಯಜೀವಿಗಳು ಪ್ರಾಣ ಕಳೆದುಕೊಳ್ಳುತ್ತಿವೆ. ಪ್ರತಿ ವರ್ಷ ರಾಜ್ಯದಲ್ಲಿ ಸರಾಸರಿ 45ರಿಂದ 50 ಮಂದಿ ಕಾಡು ಪ್ರಾಣಿಗಳ ದಾಳಿಗೆ ಬಲಿಯಾಗುತ್ತಿದ್ದಾರೆ. ಅಂದರೆ ಪ್ರತಿ ತಿಂಗಳು ಸರಾಸರಿ ನಾಲ್ವರು ವನ್ಯಜೀವಿಗಳ ದಾಳಿಗೆ ಬಲಿಯಾಗುತ್ತಿದ್ದಾರೆ.

ವನ್ಯಸಂಘರ್ಷದಲ್ಲಿ ಮನುಷ್ಯನಿಗೆ ಮುಖ್ಯ ಎದುರಾಳಿ ಕಾಡಾನೆಗಳು. 5 ವರ್ಷಗಳಲ್ಲಿ 100ಕ್ಕೂ ಹೆಚ್ಚು ಮಂದಿ ಆನೆ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಇದರ ಮೂರುಪಟ್ಟು ಮಂದಿ ತೀವ್ರವಾಗಿ ಗಾಯಗೊಂಡು ಶಾಶ್ವತವಾಗಿ ಅಂಗವೈಕಲ್ಯಕ್ಕೊಳಗಾಗಿದ್ದಾರೆ. ರಾಜ್ಯದ ಮಲೆನಾಡು, ಕರಾವಳಿ ಜಿಲ್ಲೆಗಳು, ಹಳೇ ಮೈಸೂರು ಭಾಗದ ಜಿಲ್ಲೆಗಳು, ಬೆಳಗಾವಿ ಸೇರಿದಂತೆ ಸುಮಾರು 14 ಜಿಲ್ಲೆಗಳು ಇಂದು ಕಾಡಾನೆ ದಾಳಿಯಿಂದ ತತ್ತರಿಸುತ್ತಿವೆ. ಕೊಡಗು, ಹಾಸನ, ಚಿಕ್ಕಮಗಳೂರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹುಲಿ,ಚಿರತೆಗಳ ದಾಳಿ ಮತ್ತು ಸಾವು ವರ್ಷದಿಂದ ವರ್ಷದಿಂದ ಏರುತ್ತಾ ಸಾಗಿದೆ. ಇದರ ಜತೆ ಕಾಡಂಚಿನ ಭಾಗದಲ್ಲಿ ಕಾಡೆಮ್ಮೆ, ಹಂದಿ, ನವಿಲು, ಜಿಂಕೆ, ಕೋತಿ ಮತ್ತಿತರ ನಾನಾ ವನ್ಯಮೃಗಗಳ ಉಪಟಳವಿದೆ.

ಚಾರಿತ್ರಿಕವಾಗಿ ನೋಡಿದರೆ ಪಶ್ಚಿಮ ಘಟ್ಟಕ್ಕೆ ಅತಿ ಹೆಚ್ಚು ಹಾನಿಯಾಗಿರುವುದು ಸರಕಾರಗಳಿಂದಲೇ ಹೊರತು ಇಲ್ಲಿನ ಜನರಿಂದಲ್ಲ. ಸಾವಿರಾರು ಹೆಕ್ಟೇರ್ ದಟ್ಟ ಕಾಡನ್ನು ಕಡಿದು ತೇಗ, ರಬ್ಬರ್, ಅಕೇಶಿಯಾ ನೆಡುತೋಪು ಗಳನ್ನು ಬೆಳೆಸಿದ ಸರಕಾರದ ಮೂರ್ಖ ನಿರ್ಧಾರಗಳಿಂದ ಜನರು ತೊಂದರೆಗೊಳಗಾಗಿದ್ದಾರೆ. ರೈತರು ಬೆಳೆಸಿದ ಕಾಫಿ, ಏಲಕ್ಕಿ, ಕಾಳುಮೆಣಸು, ಅಡಿಕೆ ಇತ್ಯಾದಿ ಬೆಳೆಗಳು ಹಸಿರೀಕರಣವನ್ನು ಹೆಚ್ಚಿಸಿವೆಯೇ ಹೊರತು ಭೂಮಿಯನ್ನು ಬಂಜರು ಮಾಡಿಲ್ಲ. ಆದರೆ ರೆಸಾರ್ಟ್, ವಸತಿ ಮತ್ತು ಹೋಂ ಸ್ಟೇ ನೆಪದಲ್ಲಿ ಮತ್ತು ನಾನಾ ಯೋಜನೆಗಳ ಹೆಸರಿನಲ್ಲಿ ಮಾಡಿರುವ ಅನಾಹುತಗಳನ್ನು ಮರೆ ಮಾಚುವ ಸರಕಾರ ಕಾಡಂಚಿನ ಜನರನ್ನೇ ಅರಣ್ಯನಾಶ ಮತ್ತು ವನ್ಯ ಜೀವಿಗಳ ಸಾವಿಗೆ ಹೊಣೆ ಮಾಡುತ್ತಿದೆ. ವೀರಪ್ಪನ್ ಆಗಲಿ, ನಕ್ಸಲ್ ಸಮಸ್ಯೆಯಾಗಲಿ ವಿಜೃಂಭಿಸಲು ನೆಲದ ಸಮಸ್ಯೆಗಳು. ಇದನ್ನು ಪರಿಹರಿಸಲು ಜನಪರ ಎಂದು ಹೇಳಿಕೊಳ್ಳುವ ಸರಕಾರ ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲೇ ಬೇಕಾಗಿದೆ.

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

'ಗುಟ್ಕಾ ಕಲೆ' ಒಳ್ಳೆಯದೇ?!

ರೈಲು ನಿಲ್ದಾಣಗಳಲ್ಲಿ ಮತ್ತು ರೈಲು ಬೋಗಿಗಳ ಒಳಗೆ–ಹೊರಗೆ ಮೂಡಿರುವ 'ಗುಟ್ಕಾ ಕಲೆ'ಗಳನ್ನು ತೊಡೆದು ಹಾಕಲು ಭಾರತೀಯ ರೇಲ್ವೆಯು ವರ್ಷಕ್ಕೆ 1200 ಕೋಟಿ ರುಪಾಯಿಗಳನ್ನು ಖರ್ಚುಮಾಡುತ್ತದೆಯಂತೆ. ರೈಲು ನಿಲ್ದಾಣ ಮತ್ತು ಬೋಗಿಗಳಲ್ಲಿನ ಅಸ್ವಚ್ಛತೆಯ ಬಗ್ಗೆ ಇಲಾಖೆಯನ್ನು ಟೀಕಿಸುವವರು ಇದನ್ನು ಗಮನಿಸಬೇಕು. ಇದು ಭಾರತೀಯರಲ್ಲಿ ನಾಗರಿಕ ಪ್ರಜ್ಞೆಯು ಪಾತಾಳಕ್ಕೆ ಇಳಿದಿರುವುದಕ್ಕೆ ಒಂದು ಉದಾಹರಣೆ. ನಮ್ಮ ಪರಿಸರವನ್ನು ಸ್ವಚ್ಛವಾಗಿರಿಸಿಕೊಳ್ಳುವ ನಿಟ್ಟಿನಲ್ಲಿ ಜನರು ಸಂಬಂಧಿತ ಇಲಾಖೆಯೊಂದಿಗೆ ಸಹಕರಿಸಿದರೆ ಮಾತ್ರವೇ ಉದ್ದೇಶವು ಸಫಲವಾಗುತ್ತದೆ. 1200 ಕೋಟಿ ರು. ಹಣವನ್ನು ರೈಲ್ವೆ ಅಭಿವೃದ್ಧಿಗೆ ಬಳಸಬಹುದಾಗಿತ್ತು ಎನ್ನುವ ಪ್ರಜ್ಞಾವಂತರ ಅನಿಸಿಕೆಯಲ್ಲಿ ಅರ್ಥವಿಲ್ಲದಿಲ್ಲ.

– ರಮಾನಂದ ಎಸ್., ಬೆಂಗಳೂರು

ಎಚ್ಚರಿಸುವ ಬರಹ

ವಿಶ್ವವಾಣಿಯ ನವೆಂಬರ್ 4ರ ಸಂಚಿಕೆಯಲ್ಲಿ ಪ್ರಕಟವಾದ ಎರಡು ಬರಹಗಳು ಸೂಕ್ತವಾಗಿವೆ. ರಮಾನಂದ ಶರ್ಮರು ಬರೆದಿರುವಂತೆ, ಜನರು ಕಸವನ್ನು ಆಟೋ–ಟಿಪ್ಪರ್‌ಗಳಿಗೆ ಹಾಕಲು ಉದಾಸೀನ ಮಾಡುವುದು, ಮತ್ತೆ ಕೆಲವರು ಎಲ್ಲೆಂದರಲ್ಲಿ ಕಸವನ್ನು ಬಿಸಾಡುವುದು ನಿಜ. ಕಸ ವಿಲೇವಾರಿಗೆ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ'ವು (ಜಿಬಿಎ) ಹಲವು ಕ್ರಮಗಳಿಗೆ ಮುಂದಾಗಿದ್ದರೂ, ಅದರ ಜತೆಗೆ ಕೈಜೋಡಿಸಬೇಕಾದ ಜನರು ಹೀಗೆ ವರ್ತಿಸಿದರೆ ಫಲಿತಾಂಶ ಸೊನ್ನೆಯಾಗುತ್ತದೆ. ಆನಂದರಾಮ ಶಾಸ್ತ್ರೀ ಅವರ ಬರಹವೂ ಸಕಾಲಿಕವಾಗಿದೆ. ಮೊದಲಿಗೆ, ಕಸದ ಗಾಡಿಗಳು ನಿಗದಿತ ಸಮಯಕ್ಕೆ ಸರಿಯಾಗಿ ಬಂದು ಕಸ ಸಂಗ್ರಹ ಮಾಡಬೇಕಾದ್ದು ಅತ್ಯವಶ್ಯಕ. ಅದರಲ್ಲೂ, ಹಸಿ ಕಸದ ಗಾಡಿಗಳು ಪ್ರತಿದಿನ ಬೆಳಗಿನ ಎಂಟೂವರೆ ಒಳಗೆ ಬಂದರೆ, ಕೆಲಸಕ್ಕೆ ಹೋಗುವವರಿಗೆ ಅನುಕೂಲವಾಗುತ್ತದೆ. 'ಜಿಬಿಎ' ಈ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗಲಿ.

– ಬಿ.ಎಸ್.ಮೋಹನ್ ಕುಮಾರ್, ಬೆಂಗಳೂರು

ಸೂಕ್ತ ವ್ಯವಸ್ಥೆ ಕಲ್ಪಿಸಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಇತ್ತೀಚೆಗೆ ನಡೆಸಿದ 'ಕೆ–ಸೆಟ್' ಪರೀಕ್ಷೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಅಭ್ಯರ್ಥಿಗಳು ಬೆಂಗಳೂರಿಗೆ ಆಗಮಿಸಿ ಪರೀಕ್ಷೆಗಳನ್ನು ಬರೆದಿದ್ದಾರೆ. ಈ ಸಂದರ್ಭದಲ್ಲಿ, ಅವರು ತಂದಿದ್ದ ಬ್ಯಾಗ್‌ಗಳನ್ನು ಇಡಲು ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ವ್ಯವಸ್ಥೆ ಮಾಡದೆ ಹೊರಾಂಗಣದಲ್ಲಿಯೇ ಅವನ್ನು ಇಡಲು ಸೂಚಿಸಿದ್ದಾರೆ. 'ಯಾವುದೇ ವಸ್ತುಗಳಿಗೆ ನಾವು ಜವಾಬ್ದಾರರಲ್ಲ' ಎಂದು ಸಹ ಹೇಳಿದ್ದಾರೆ. ದೂರದ ಊರುಗಳಿಂದ ಬರುವ ಅಭ್ಯರ್ಥಿಗಳು ತಮ್ಮ ಕನಿಷ್ಠ ಮೂಲಭೂತ ವಸ್ತುಗಳನ್ನಾದರೂ ಬ್ಯಾಗಿನಲ್ಲಿ ಹೊತ್ತೊಯ್ಯಲೇಬೇಕಾಗುತ್ತದೆ. ಕಳೆದ ಬಾರಿ ಬೇರೆ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಹೋದಾಗ ನಿಗದಿತ ಕೊಠಡಿಯಲ್ಲಿ ಬ್ಯಾಗ್ ಇಡಲು ವ್ಯವಸ್ಥೆ ಮಾಡಿದ್ದರು. ಆದರೆ ಈ ಬಾರಿ ಅಂಥ ವ್ಯವಸ್ಥೆ ಇರಲಿಲ್ಲ. ಯಾಕಿಂಥ ನಿರ್ಲಕ್ಷ್ಯ? ಜತೆಗೆ, ಕೊಠಡಿಗಳಲ್ಲಿನ ಮೇಲ್ವಿಚಾರಕರು ಪರೀಕ್ಷೆಯ ಕೆಲವು ಸೂಚನೆಗಳನ್ನು ತಿಳಿಸುವಾಗ ಇಂಗ್ಲಿಷ್‌ನಲ್ಲಿಯೇ ಹೇಳಿದ್ದಾರೆ. ಅವಶ್ಯವಿದ್ದರಷ್ಟೇ ಇಂಗ್ಲಿಷ್‌ನಲ್ಲಿ ಹೇಳಬೇಕು, ಮಿಕ್ಕಂತೆ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿಯೇ ಸೂಚನೆಗಳನ್ನು ನೀಡಬೇಕು ಅಲ್ಲವೇ? ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ಕುರಿತಾಗಿ ಗಮನಹರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಿ.

– ಅಂಬಿಕಾ ಬಿ.ಟಿ., ಹಾಸನ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಬಿಹಾರದಿಂದ ಬಂಗಾಳದವರೆಗೆ ಹಬ್ಬಿರುವ ಚುನಾವಣೆಯ ಮಾಯೆ...



ಅಕ್ಬರ್‌ನಾಮಾ
ಎಂ.ಜೆ.ಅಕ್ಬರ್
vveditoped@gmail.com

ಭಾರತೀಯ ಕ್ಯಾಲೆಂಡರ್ ವರ್ಷಕ್ಕೆ ಪ್ರಜಾಪ್ರಭುತ್ವವೆಂಬ ಈ ಅದ್ಭುತ ವ್ಯವಸ್ಥೆ ಒಂದು ಹೆಚ್ಚುವರಿ ಋತುವನ್ನು ಸೇರಿಸಿದೆ. ಅದು ಕರಾರುವಾಕ್ಕಾಗಿ ಸಮಯಕ್ಕೆ ಸರಿಯಾಗಿ ಬಂದು ಹೋಗುವ ಋತುವಲ್ಲ; ಆಗಾಗ ಬೇರೆ ಬೇರೆ ಅವಧಿಯಲ್ಲಿ ಬರುವ ಋತು. ಯಾವಾಗಲೂ ಬರುವ ಐದು ಋತುಗಳು ನಮಗೆ ಗೊತ್ತು: ಮಜಾ ಕೊಡುವ ಚಳಿಗಾಲ, ಚೇತೋಹಾರಿ ವಸಂತಕಾಲ, ಗೋಳು ಹೊಯ್ದುಕೊಳ್ಳುವ ಬೇಸಗೆ ಕಾಲ, ಹಠಮಾರಿ ಮಳೆಗಾಲ. ಐದನೆಯ ಋತು ಹಬ್ಬಗಳದು. ಕೊನೆಯ ಮಳೆ ಮತ್ತು ಮೊದಲ ಚಳಿಯ ಸೊಗಸಾದ ಕುಳಿರ್ಗಾಳಿಯ ನಡುವಿನ ಒಂದು ತಿಂಗಳ ಅವಧಿಯಲ್ಲಿ ಹಬ್ಬಗಳ ಅಬ್ಬರ. ಅಕ್ಟೋಬರ್–ನವೆಂಬರ್‌ನಲ್ಲಿ ಈ ಋತು ಬಂದು ಹೋಗುತ್ತದೆ. ದೈನಂದಿನ ಜಂಜಡಗಳನ್ನು ಸಾಧ್ಯವಾದಷ್ಟು ಬದಿಗಿಟ್ಟು ನಮ್ಮ ನಮ್ಮ ಸಾಂಪ್ರದಾಯಿಕ ಮತ್ತು ಧಾರ್ಮಿಕ ನಂಬಿಕೆಗಳನ್ನು ಪೊರೆಯುವ ಹಬ್ಬಗಳನ್ನು ನಾವು ಖುಷಿಯಿಂದ ಆಚರಿಸುತ್ತೇವೆ.

ಈ ಋತುಗಳ ಪಟ್ಟಿಗೆ ಆರನೆಯದನ್ನು ಸೇರಿಸಿದ ನಮ್ಮ ಸಂವಿಧಾನಕ್ಕೆ ಧನ್ಯವಾದ ಹೇಳಬೇಕು. ಅದು ಚುನಾವಣೆಯ ಋತು. ಮೊದಲು ಅರ್ಧ ದಶಕಕ್ಕೊಮ್ಮೆ ಈ ಋತು ಬರುತ್ತಿತ್ತು. ಮತದಾರರು ಚೆಂದದ ಬಟ್ಟೆ ಧರಿಸಿ ತಮ್ಮ ಆಯ್ಕೆಯ ಸ್ವಾತಂತ್ರ್ಯವನ್ನು ಸಂಭ್ರಮಿಸುತ್ತಿದ್ದರು. ಆದರೆ, ಒಳ್ಳೆಯ ಭಾರತೀಯರಿಗೆ ಸಹಜವಾಗಿಯೇ ಒಳ್ಳೆಯ ಆಯ್ಕೆ ಬೇಕು. ಹೀಗಾಗಿ ಚುನಾವಣೆಗಳು ಈಗ ಹೆಚ್ಚು ಕಮ್ಮಿ ವರ್ಷಕ್ಕೊಮ್ಮೆ ಒಂದಲ್ಲಾ ಒಂದು ರಾಜ್ಯದ ವಿಧಾನಸಭೆಗೆ ನಡೆಯುತ್ತವೆ. ಅವುಗಳ ಉದ್ದೇಶ ಸ್ಥಳೀಯವಾಗಿದ್ದರೂ, ವಿಷಯ ರಾಷ್ಟ್ರೀಯವಾಗಿರುತ್ತದೆ. ಚುನಾವಣೆಯ ರಣರಂಗದಲ್ಲಿ ಸಿಟ್ಟು ಮಡುಗಟ್ಟಿದ್ದರಂತೂ ಅದರ ಸದ್ದು ಇಡೀ ದೇಶದ ಕಾಫಿ ಕೆಫೆಗಳು ಹಾಗೂ ಔತಣ ಕೂಟಗಳಿಗೂ ಪ್ರಯಾಣಿಸುತ್ತದೆ. ರಾಜಕೀಯದ ವಿಷಯದಲ್ಲಿ ನಮಗೆ ಪಕ್ಷಪಾತಿಯಾಗುವುದು ಇಷ್ಟ. ಈ ಸಂಗತಿಯೇ ಪ್ರಜಾಪ್ರಭುತ್ವವನ್ನು ಆರೋಗ್ಯದಿಂದ ಇರಿಸುತ್ತದೆ. ಉದಾಸೀನತೆಯೇ ಪ್ರಜಾಪ್ರಭುತ್ವದ ಸಾವು. ವಿಧಾನಸಭೆ ಚುನಾವಣೆಗಳು ಹಗ್ಗ ಬಿಚ್ಚಿದ ಟಗರಿನಂತೆ ದೇಶಾದ್ಯಂತ ಆಗಾಗ ಕುಪ್ಪಳಿಸುತ್ತಿರುತ್ತವೆ. ಅಧಿಕಾರದ ಹಣಾಹಣಿಯಲ್ಲಿ ಕಾವು ಸಹಜ. ದಿನ ಕಳೆದಂತೆ ಚುನಾವಣೆಯ ಬಿಸಿ ಏರುತ್ತಲೇ ಹೋಗುತ್ತದೆ. ಅದು ಸೋತವರ ಸಂಪತ್ತಿನ ಮುಂದೆ ತಣ್ಣಗಾಗುತ್ತದೆ. ಗೆದ್ದವರು ಅದರ ಖುಷಿಯನ್ನು ಅನುಭವಿಸುವುದು ಒಂದೆರಡು ದಿನಗಳಷ್ಟೆ. ನಂತರ ಈ ಗೆಲುವಿಗೆ ತೆತ್ತ ಬೆಲೆಯ ಬಗ್ಗೆ ಮುಂದಿನ ಚುನಾವಣೆ ಬರುವವರೆಗೂ ಯೋಚಿಸುತ್ತಲೇ ಇರುತ್ತಾರೆ.

• • •

ಬಿಹಾರದಲ್ಲಿ ಚುನಾವಣೆ ನಡೆದು ಇಷ್ಟು ಬೇಗ ಐದು ವರ್ಷ ಆಗಿಹೋಯಿತಾ? ಏಕೆ 2025ರ ಚುನಾವಣೆ ಬಿಹಾರದ ಈ ಹಿಂದಿನ ಅನೇಕ ಚುನಾವಣೆಗಳ ನಿರಾಶಾದಾಯಕ ಮರುಹುಟ್ಟಿನಂತೆ ಕಾಣಿಸುತ್ತಿದೆ? ಹೆಸರುಗಳು ಬದಲಾದರೂ ಅದದೇ ರೀತಿಯ ವ್ಯಕ್ತಿಗಳು ಕಾಣಿಸುತ್ತಿದ್ದಾರೆ. ಅವರು ಮಾಡುವ ಭಾಷಣದ ಧ್ವನಿ ಬೇರೆಯಿದ್ದರೂ ವಿಷಯಗಳು ಅವವೇ ಕೇಳಿಸುತ್ತಿವೆ. ಸೋಷಿಯಲ್ ಮೀಡಿಯಾದಲ್ಲಿ ಅದೇ ಹಳೆಯ ಗಿಣಿಪಾಠಗಳೇ ಒಂದಷ್ಟು ಸದ್ದು ಮಾಡುತ್ತಿವೆ. ಅಲ್ಲೋ ಇಲ್ಲೋ ಒಂದಷ್ಟು ಹೊಸತನ, ಮಹತ್ವಾಕಾಂಕ್ಷೆ ಕಾಣಿಸುತ್ತಿರಬಹುದು. ಆದರೆ ಅದರ ಹಿಂದೆಯೂ ಹಣ ಹರಿಯುತ್ತಿದೆ. ಅಂದರೆ ಅಡ್ಡಹೆಸರು ಬದಲಾಗಬಹುದು, ಆದರೆ ರೋಗ ಬದಲಾಗುವುದಿಲ್ಲ.

ಯಾವ ಸ್ಪರ್ಧಿಯ ಬಳಿಯೂ ಜನರ ಮುಂದೆ ಇರಿಸುವುದಕ್ಕೆ ಹೊಸತೇನೂ ಇಲ್ಲದಿರುವುದರಿಂದ ಯಥಾಸ್ಥಿತಿ ಕಾಯ್ದುಕೊಳ್ಳುವುದರಲ್ಲೇ ಲಾಭವಿದೆ. ಇಲ್ಲಿಯವರೆಗಿನ ಚರ್ಚೆಗಳನ್ನೂ ಚುನಾವಣಾ ಪ್ರಚಾರವನ್ನೂ ಗಮನಿಸಿದರೆ, ಬಿಹಾರದಲ್ಲಿ ಆಡಳಿತಾರೂಢ ಪಕ್ಷಗಳು ಮತ್ತು ವಿರೋಧ ಪಕ್ಷಗಳ ನಡುವೆ ಕಾಣಿಸುತ್ತಿರುವ ಒಂದೇ ಒಂದು ವ್ಯತ್ಯಾಸವೆಂದರೆ ವಿರೋಧ ಪಕ್ಷಗಳು ತಾವು ಗೆದ್ದರೆ ಮದ್ಯ ನಿಷೇಧವನ್ನು ರದ್ದುಪಡಿಸುವುದಾಗಿ ಹೇಳುತ್ತಿರುವುದು. ಆದರೆ ನನ್ನ ಪ್ರಕಾರ ಅದಕ್ಕೇನೂ ಹೆಚ್ಚು ಮಹತ್ವವಿಲ್ಲ. ಏಕೆಂದರೆ ಇಷ್ಟು ದಿನ ಮದ್ಯಕ್ಕೆ ನಿಷೇಧವಿದೆ ಎಂದು ಬಿಹಾರದಲ್ಲಿ ಯಾರೂ ಕುಡಿತ ಬಿಟ್ಟಿಲ್ಲ! ಅಂಗಡಿಯಲ್ಲಿ ಮದ್ಯ ಸಿಗದಿದ್ದರೆ ಏನಾಯಿತು, ಕಳ್ಳಭಟ್ಟಿ ಕಾಯಿಸುವವನ ಬಳಿ ಸಿಗುತ್ತದೆಯಲ್ಲ. ಕಾಯ್ದೆ ಕಠಿಣವಾದಷ್ಟೂ ಕಳ್ಳಭಟ್ಟಿ ಕಾಯಿಸುವವನ ದುಡ್ಡಿನಚೀಲ ದೊಡ್ಡದಾಗುತ್ತದೆ ಮತ್ತು ಕಾನೂನುಪಾಲಕರ ಮುಖದಲ್ಲಿ ನಗು ಅರಳುತ್ತದೆ.

ಇನ್ನು ಹದಿನೈದು ದಿನದೊಳಗೆ ಬಿಹಾರದ ರೇಸ್ ಮುಗಿದಿರುತ್ತದೆ. ಹನ್ನೆರಡು ವಾರಗಳ ನಂತರ, ಹೆಚ್ಚು ಕಮ್ಮಿ ಮಾರ್ಚ್ ವೇಳೆಗೆ, ಚಳಿ ಹೋಗಿ ಬೇಸಿಗೆ ಗಟ್ಟಿಯಾಗಿ ಕಾಲೂರುವುದಕ್ಕೂ ಮೊದಲೇ ಬಂಗಾಳದಲ್ಲಿ ಚುನಾವಣೆಯ ಕಾವು ಶುರುವಾಗುತ್ತದೆ.

ಆರನೇ ಋತುವಿಗೆ ಬಿಡುವೇ ಇಲ್ಲ.

• • •

ಬಂಗಾಳದಲ್ಲೂ ಯಾರೋ ಒಬ್ಬರು ಗೆಲ್ಲುತ್ತಾರೆ. ಆದರೆ ಆ ರಾಜ್ಯ ಈಗಾಗಲೇ ಸೋತಂತೆ ಕಾಣಿಸುತ್ತಿದೆ. ಕೆಸರಿನಲ್ಲಿ ಸಿಲುಕಿದವನೊಬ್ಬ ಯಾವ ಭರವಸೆಯೂ ಇಲ್ಲದೆ, ಮೇಲೆದ್ದು ಬರುವ ಆಸಕ್ತಿಯೂ

ಇಲ್ಲದೆ, ಅಲ್ಲೇ ಬಿದ್ದುಕೊಂಡಿರುವಂತೆ ನನಗದು ಕಾಣಿಸುತ್ತದೆ. ನಿಜಕ್ಕೂ ಬೇಸರದ ಸಂಗತಿ. ನನಗೆ ಇನ್ನೂ ಸ್ವಲ್ಪ ಹೆಚ್ಚೇ ಬೇಸರ ಯಾಕೆಂದರೆ ಅದು ನಾನು ಹುಟ್ಟಿದ ರಾಜ್ಯ. ನನ್ನ ಬದುಕಿನ ಅತ್ಯಂತ ಸಂತೋಷಕರ ವರ್ಷಗಳನ್ನು ಕೊಲ್ಕತ್ತಾದಲ್ಲಿ ಕಳೆದಿದ್ದೇನೆ. ನಾನು ಕೊಲ್ಕತ್ತಾದವನು. ಆ ನಗರದ ಇತಿಹಾಸದಲ್ಲೇ ಒಂದು ಜಾದೂ ಇದೆ. ಮಳೆಗಾಲ ಮುಗಿದು, ಫೆಬ್ರವರಿಯ ಚಳಿಗಾಲದ ಇಳಿಸಂಜೆಯಲ್ಲಿ ಕೊಲ್ಕತ್ತಾದಲ್ಲಿ ಹಬ್ಬಗಳ ಶ್ರಾಯ ಶುರುವಾಗುತ್ತದೆ.

ಹಬ್ಬಗಳು ಬರುತ್ತಿದ್ದಂತೆ ಕೊಲ್ಕತ್ತಾದ ಮುಖ್ಯ ರಸ್ತೆಗಳ ಮೇಲೆ ನೇತಾಡುವ ದೀಪಗಳು ಈಗಾಗಲೇ ಆ ನಗರವು ಕಳೆದುಕೊಂಡ ಸೌಂದರ್ಯವನ್ನು ಮರಳಿ ಸೃಷ್ಟಿಸಲಾರವು. ಒಂದು ಕಾಲದಲ್ಲಿ ಅದೊಂದು ಸಾಮ್ರಾಜ್ಯವಾಗಿತ್ತು. ಈಗ ಜಮೀನ್ದಾರನ ಹಳೆಯ ಬಂಗಲೆಯಂತೆ ಅಲ್ಲಿನ ಒಂದೊಂದೇ ಇಟ್ಟಿಗೆ ಕಳಚಿ ಬೀಳುತ್ತಿದೆ. ಕೊಲ್ಕತ್ತಾದ ಆಕರ್ಷಣೆಗಳು ಒಂದೊಂದು ಕಾಲದಲ್ಲಿ ಸಿನಿಮಾ ಪರದೆಯ ಮೇಲೆ ಕುಣಿಯುತ್ತಿದ್ದವು. ನಗರದ ಮೂಲೆ ಮೂಲೆಯಲ್ಲಿ ಉನ್ನತ ಮಟ್ಟದ ಸಾಹಿತ್ಯ, ಕಲೆ ಮತ್ತು ಸಂಗೀತದ ಪರಿಮಳ ಸೂಸುತ್ತಿತ್ತು. ಹಿಂದುಸ್ತಾನಿ ಶಾಸ್ತ್ರೀಯ ಸಂಗೀತದ ದಿಗ್ಗಜ ಉಸ್ತಾದ್ ಅಮಿರ್‌ಖಾನ್ ಒಮ್ಮೆ ''ಕೊಲ್ಕತ್ತಾದ ಪ್ರೇಕ್ಷಕರು ನಿಮ್ಮ ಪ್ರತಿಭೆಯನ್ನು ಗುರುತಿಸುವವರೆಗೂ ನೀವು ದೊಡ್ಡ ಸಂಗೀತಗಾರ ಆಗಲು ಸಾಧ್ಯವಿಲ್ಲ'' ಎಂದು ಹೇಳಿದ್ದರು. ಕೊಲ್ಕತ್ತಾದಲ್ಲಿ ಶಿಷ್ಟಾಚಾರವನ್ನು ತಿಳಿದಿದ್ದ ಉನ್ನತ ಮಟ್ಟದ ಸಾಮಾಜಿಕ ವ್ಯವಸ್ಥೆಯೊಂದಿತ್ತು. ಅಲ್ಲಿನ ರಸ್ತೆಯುದ್ದಕ್ಕೂ ಅದ್ಭುತವಾದ ಮನರಂಜನೆ ಮತ್ತುಅಪರೂಪದ ತಿಂಡಿ ತಿನಿಸುಗಳು ಸಿಗುತ್ತಿದ್ದವು. ಅಲ್ಲಿನ ಫುಟ್‌ಪಾತುಗಳಲ್ಲಿ ಇಂಥದ್ದೊಂದು ಇಲ್ಲ ಎಂಬುದೇ ಇರಲಿಲ್ಲ. ಅದರ ನಡುವೆಯೇ ಬಹಳ ಚಾಣಾಕ್ಷತನದ ಅಪರಾಧ ಚಟುವಟಿಕೆಗಳು ಕೂಡ ರಾಜಾರೋಷವಾಗಿ ನಡೆಯುತ್ತಿದ್ದವು. ಆತ್ಮಗೌರವಕ್ಕೆ ಜಾಣತನ ಬಹಳ ಮುಖ್ಯ. ಕೊಲ್ಕತ್ತಾದ ಕ್ರಿಮಿನಲ್‌ಗಳು ಕೂಡ ಕುತೂಹಲ ಮೂಡಿಸುವಂತಿರುತ್ತಿದ್ದರು.

ಕೊಲ್ಕತ್ತಾದ ನರಮಂಡಲದೊಳಗೆ ದೊಡ್ಡ ದೊಡ್ಡ ಮೊಹಲ್ಲಾಗಳು, ವಸತಿ ಪ್ರದೇಶಗಳಿವೆ. ಅವುಗಳಿಗೆ ವಿಶಿಷ್ಟವಾದ ಜನಲಕ್ಷಣವಿದೆ. ಅಂಥ ಒಂದು ಪ್ರದೇಶದಲ್ಲಿರುವ ನನ್ನ ಸಹೋದರಿಯ ಮನೆಗೆ ಇತ್ತೀಚೆಗೆ ಹೋಗಿದ್ದೆ. ಅಲ್ಲಿಂದ ಬರುವಾಗ ನನ್ನನ್ನು ಖಿನ್ನತೆ ಆವರಿಸಿಕೊಂಡಿತ್ತು. ಆ ಪ್ರದೇಶ ಇಂದಿಗೂ 20ನೇ ಶತಮಾನದ ಯಾವುದೋ ದಶಕದಲ್ಲಿ ಸಿಲುಕಿಕೊಂಡಂತಿದೆ. ಸಾಮಾನ್ಯ ನಗರ ಪ್ರದೇಶಗಳಲ್ಲಿ ನಾವು ನೋಡುವ ಯಾವ ಸೌಕರ್ಯಗಳೂ ಅಲ್ಲಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ಮುಂಬೈ ನಗರ ತನ್ನನ್ನು ತಾನೇ ಮರುನಿರ್ಮಾಣ ಮಾಡಿಕೊಂಡಿದೆ. ಮದ್ರಾಸ್ ನಗರ ಹೊಸ ಆರ್ಥಿಕತೆಯ ತವರಾಗಿದೆ. ಬೆಂಗಳೂರು ನಗರ ಟ್ರಾಫಿಕ್ ಜಾಮ್‌ನ ತವರಾಗಿ ರೂಪುಗೊಂಡಿದ್ದರೂ ಯಾರೊಬ್ಬರು ಕೂಡ ಆ ನಗರವನ್ನು ಬಿಟ್ಟು ಹೋಗಲು ಬಯಸುವುದಿಲ್ಲ. ಹೈದರಾಬಾದ್ ನಗರ ಗಗನಚುಂಬಿ ಕಟ್ಟಡಗಳ ಮೇಳವಾಗಿದೆ. ದೆಹಲಿಯಂತೂ ಎಷ್ಟು ದೈತ್ಯಾಕಾರವಾಗಿ ಬೆಳೆದಿದೆ ಅಂದರೆ, ಅದಕ್ಕೊಂದು ಸರ್ಜರಿ ಮಾಡಲೇಬೇಕು. ಆದರೆ ಕೊಲ್ಕತ್ತಾ ನಗರ ಮಾತ್ರ ಹಿಂದೆ ಎಲ್ಲಿತ್ತೋ ಅಲ್ಲೇ ಇದೆ. ಹೊಸ ಟೌನ್‌ಶಿಪ್‌ಗಳು ಬಂದಿದ್ದರೂ ಅವು ಕೂಡ ಕಿಕ್ಕಿರಿದು ತುಂಬಿ, ಅಸ್ತವ್ಯಸ್ತವಾಗಿ ಬೆಳೆದು ನಲುಗುತ್ತಿವೆ. ಜನರು ದಿಕ್ಕಾಪಾಲಾಗಿ ಬದುಕುತ್ತಿದ್ದಾರೆ! ರಸ್ತೆ, ಓಣಿಗಳು ಕಿರಿದಾಗಿವೆ. ಹೇಗೋ ಜೀವನ ನಡೆಯಬೇಕಲ್ಲಾ ಎಂಬ ಏಕೈಕ ಕಾರಣದಿಂದ ಅಲ್ಲಿನ ಜನರು ನಗುತ್ತಾ ಮಾತನಾಡುತ್ತಾರೆ. ಆದರೆ, ಚುನಾವಣೆಯಿಂದ ಏನೂ ಬದಲಾಗುವುದಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ.

ಕೊಲ್ಕತ್ತಾ ನಗರ ಬಹುಶಃ ಸುಸ್ತಾಗಿ ಏದುಸಿರು ಬಿಡುತ್ತಿರಬಹುದು. ಆದರೆ ಅದಕ್ಕಿಂತ ಅಪಾಯಕಾರಿ ಸಂಗತಿ ಏನೆಂದರೆ, ದೇಶದ ಪೂರ್ವಭಾಗವು ಅಭಿವೃದ್ಧಿಯ ಸೂಚ್ಯಂಕದಲ್ಲಿ ರಾಷ್ಟ್ರೀಯ ಸರಾಸರಿಗಿಂತ ಬಹಳ ಕೆಳಮಟ್ಟದಲ್ಲಿದೆ. ಕೊಲ್ಕತ್ತಾದ ಪ್ರತಿಯೊಂದು ರಸ್ತೆಯೂ ಅಲ್ಲಿನ ನಿರುದ್ಯೋಗಿ ಯುವಕರು ಊರು ಬಿಟ್ಟು ಓಡಿಹೋಗುವುದಕ್ಕೆಂದೇ ಚಾಚಿಕೊಂಡು ಮಲಗಿದಂತೆ ತೋರುತ್ತಿವೆ. ಭವಿಷ್ಯ ಅರಸಿಕೊಂಡು ಯುವಕರು ನಗರ ಬಿಟ್ಟು ಹೋಗುವುದಕ್ಕೆಂದೇ ಅಲ್ಲಿ ರಸ್ತೆಗಳನ್ನು ನಿರ್ಮಿಸಿದ್ದಾರಾ? ಕೈಗಳಿಗೆ ಕೆಲಸವೇ ಇಲ್ಲದಿದ್ದರೆ ಯುವಕರು ಏನು ಮಾಡಬೇಕು?

ಯುವಕರಿಗೆ ಕಾಲದ ಮಾಪನ ಬೇರೆಯದೇ ರೀತಿಯಲ್ಲಿರುತ್ತದೆ. ವಯಸ್ಸಾದವರಿಗೆ ಐದು ವರ್ಷ ಕಳೆಯಲು ಒಂದು ದಶಕ ಬೇಕಾಗಬಹುದು. ಆದರೆ ಯುವಕರಿಗೆ ಐದು ವರ್ಷವೆಂಬುದು ಅತ್ತಿತ್ತ ನೋಡುತ್ತಿದ್ದಂತೆ ಬಹುಬೇಗ ಕಳೆದುಹೋಗುತ್ತದೆ. ಈ ದಶಕದ ಅಂತ್ಯದಲ್ಲಿ ನಮ್ಮ ದೇಶದ ಶೇ.60ರಷ್ಟು ಮತದಾರರು 35ವರ್ಷಕ್ಕಿಂತ ಕೆಳಗಿನವರಾಗಿರುತ್ತಾರೆ. ಅವರ ಪೈಕಿ ಶೇ.90ರಷ್ಟು ಜನರು 21ನೇ ಶತಮಾನದ ಯುವಕರಾಗಿರುತ್ತಾರೆ. 1960ರ ದಶಕದಲ್ಲಿ, ಅಂದರೆ ಸ್ವಾತಂತ್ರ್ಯ ಲಭಿಸಿ ಇನ್ನೂ ಎರಡು ದಶಕ ಕಳೆಯುವುದಕ್ಕೂ ಮೊದಲು, ಸ್ವತಂತ್ರ ಭಾರತದ ಮೊದಲ ತಲೆಮಾರಿನ ಜನರು ಆಡಳಿತ ವ್ಯವಸ್ಥೆಯ ಬಗ್ಗೆ ತಾಳ್ಮೆ ಕಳೆದುಕೊಂಡಿದ್ದರು. ನಕ್ಸಲೀಯರು ನಡೆಸುತ್ತಿದ್ದ ನರಮೇಧ ಮತ್ತು ನಾನಾ ಕಾರಣಕ್ಕೆ ನಡೆಯುತ್ತಿದ್ದ ಮತೀಯ ಹಿಂಸಾಚಾರಗಳು ಕೊಲ್ಕತ್ತಾ ನಗರವನ್ನು ಮತ್ತು ಅರ್ಧಕ್ಕರ್ಧ ಬಂಗಾಳವನ್ನು ಅರಾಜಕತೆಗೆ ತಳ್ಳಿತ್ತು.

ಬೆಂಕಿ ಹಚ್ಚುವ ಸೂಡಿ ಈಗ ಮತ್ತೆ ಅತ್ತಿತ್ತ ತೊನೆದಾಡುತ್ತಿದೆ. ಯಾವ ಕಿಡಿ ಎಲ್ಲಿ ಬೆಂಕಿಯನ್ನು ಹಚ್ಚುತ್ತದೆಯೋ ಗೊತ್ತಿಲ್ಲ. ಯಾವ ಜ್ವಾಲೆ ಇನ್ನೆಲ್ಲಿ ಕಾಳ್ಗಿಚ್ಚಿಗೆ ಕಾರಣವಾಗುವುದೋ ಗೊತ್ತಿಲ್ಲ. ಯಾವ ದಾವಾಗ್ನಿ ಯಾರನ್ನು ಸುಡಲಿದೆಯೋ ಗೊತ್ತಿಲ್ಲ.

• • •

ಆರನೇ ಋತುವಿನಿಂದ ಅಧಿಕಾರ ಪಡೆಯುವ ಸನ್ನಾಹದಲ್ಲಿರುವವರಿಗಾಗಿ ಒಂದು ದಂತಕತೆಯಿದೆ. ಅದರ ಅರ್ಥ ಏನೆಂಬುದರ ಬಗ್ಗೆ ಇನ್ನಷ್ಟು ಚರ್ಚೆಯ ಅಗತ್ಯವಿರಬಹುದು. ಬಾಗ್ದಾದ್‌ನ ಪ್ರಸಿದ್ಧ ಸುಲ್ತಾನ ಹರೂನ್ ಅಲ್ ರಶೀದ್‌ನ ಮೊಮ್ಮಗ ಸೂಫಿ ಸಂತನಾಗಿ ರೂಪಾಂತರಗೊಂಡಿದ್ದ. ಸುಲ್ತಾನ್ ತಾತನಿಗೆ ಬಹಳ ಸಿಟ್ಟು ಬಂದಿತ್ತು. ''ರಾಜರ ನಡುವೆ ನನ್ನ ಘನತೆಗೆ ಮಸಿ ಬಳಿದುಬಿಟ್ಟೆ'' ಎಂದು ಮೊಮ್ಮಗನಿಗೆ ಬೈದ. ಅದಕ್ಕೆ ಮೊಮ್ಮಗ ಹೇಳಿದ: ''ಸೂಫಿಗಳ ನಡುವೆ ನೀವು ನನ್ನ ಘನತೆಗೆ ಮಸಿ ಬಳಿದುಬಿಟ್ಟಿರಿ''.

• • •

ಈ ಕ್ಷಣ ನಿಮ್ಮ ಜತೆಗೆ ಖುಷಿಖುಷಿಯಾಗಿ ಮಾತನಾಡುತ್ತಿದ್ದ ಅತ್ಯಾಪ್ತ ಸ್ನೇಹಿತನೊಬ್ಬ ಇನ್ನೊಂದು ಕ್ಷಣದಲ್ಲಿ ನೋವಿನಿಂದ ಕುಸಿದು, ಮತ್ತೊಂದು ಕ್ಷಣಕ್ಕೆ ಜೀವ ಬಿಟ್ಟುಬಿಟ್ಟರೆ ಅದಕ್ಕಿಂತ ದೊಡ್ಡ ದುಃಖ ಇನ್ನೇನಿದೆ? ತರಾತುರಿಯಲ್ಲಿ ಘಟಿಸಿದ ಈ ಮೂರು ಕ್ಷಣದ ಬೆಳವಣಿಗೆಯನ್ನು ನಿಮ್ಮ ಕಣ್ಣು ಕೂಡ ಸರಿಯಾಗಿ ದಾಖಲಿಸಿಕೊಂಡಿರುವುದಿಲ್ಲ. ನಿಮ್ಮ ಮನಸ್ಸಿಗೆ ಅದು ಸರಿಯಾಗಿ ಅರ್ಥವಾಗಿರುವುದಿಲ್ಲ. ನಿಜ ಹೇಳಬೇಕೆಂದರೆ ಅಲ್ಲಿ ಏನು ನಡೆಯಿತು ಎಂಬುದೇ ನಿಮಗೆ ಸರಿಯಾಗಿ ಗೊತ್ತಾಗಿರುವುದಿಲ್ಲ. ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ನಗು, ಪ್ರೀತಿ, ಒಡಾಟ, ಸಾಹಸ, ಉಪಕಾರ, ಉಪದ್ವ್ಯಾಪ, ಕೋಪ ಇತ್ಯಾದಿಗಳನ್ನೆಲ್ಲ ಮೂರು ಕ್ಷಣಗಳು ಕೊಚ್ಚಿಕೊಂಡು ಹೋಗಿರುತ್ತವೆ. ನಂತರ ನೆನಪಿನ ಅಂಗಳದಲ್ಲಿ ಅವು ಶಾಶ್ವತವಾಗಿ ನೆಲೆಸುತ್ತವೆ. ಆ ಮೂರನೇ ಕ್ಷಣ ಎಲ್ಲವನ್ನೂ ಬದಲಿಸಿರುತ್ತದೆ. ಅದು ನಿಮ್ಮನ್ನು ಕೂಡ ಬದಲಾಯಿಸಿರುತ್ತದೆ.

ನಂತರ ಬದುಕು ನಿಮಗೆ ಮೊದಲಿಗಿಂತ ಹೆಚ್ಚು ಅಮೂಲ್ಯವಾಗಿ ಕಾಣಿಸಬಹುದು ಅಥವಾ ಲೆಕ್ಕಕ್ಕೇ ಇಲ್ಲದಂತೆ ಅನ್ನಿಸಬಹುದು. ಆದರೆ ಮರೆತಿದ್ದ ನೆನಪುಗಳೆಲ್ಲ ಮತ್ತೆ ಜೀವ ತಳೆದು ನಿಮ್ಮನ್ನು ಮುತ್ತಿಕೊಳ್ಳುವುದು ಮಾತ್ರ ನಿಜ. ಯಾವಾಗಲೂ ಕರಗುತ್ತಾ ಹೋಗುವ ಸಂಪತ್ತು ನೆನಪು. ಭೂತದಿಂದ ಭವಿಷ್ಯದ ಕಡೆಗೆ ಸಾಗುವಾಗ ಆ ನೆನಪುಗಳು ಮಾತ್ರ ವಾಸ್ತವವೇ? ಏಕೆಂದರೆ ಕಾಲ ಯಾವತ್ತೂ ವರ್ತಮಾನವನ್ನುಗುರುತಿಸುವುದಿಲ್ಲ. ವರ್ತಮಾನವನ್ನು ಗುರುತಿಸಲು ಗಡಿಯಾರ ಯಾವ ಕ್ಷಣದಲ್ಲೂ ನಿಲ್ಲುವುದಿಲ್ಲ, ಅದು ಸದಾಕಾಲ ಭೂತದಿಂದ ಭಷ್ಯಕ್ಕೆ ಓಡುತ್ತಿರುತ್ತದೆ.

ನೆನಪೆಂಬುದು ನಮ್ಮನ್ನು ತಿರುಚಿ ತೋರಿಸುವ ಕನ್ನಡಿಯಿದ್ದಂತೆ. ಅದೊಂದು ಊಸರವಳ್ಳಿ. ಅದು ಖುಷಿಯನ್ನೂ ತರಬಹುದು, ನೋವನ್ನೂ ತರಬಹುದು. ನಮ್ಮ ಅಸ್ತಿತ್ವವನ್ನು ನಿಜವಾಗಿಸುವುದೇ ನೆನಪುಗಳು. ನೋವಿನ ಹಾಸಿಗೆಯಲ್ಲಿ ಕುಳಿತ ಆ ಜೀವ ಗೆಳೆಯನಂತೆ ನೆನಪುಗಳು ವರ್ತಿಸುತ್ತವೆ. ನೆನಪು ಯಾವತ್ತೂ ವೈಯಕ್ತಿಕ. ಅದನ್ನು ಹಂಚಿಕೊಂಡು ನೋವು ಕಡಿಮೆ ಮಾಡಿಕೊಳ್ಳುತ್ತೇನೆ ಎಂದು ಕೆಲವರು ಹೇಳುವುದುಂಟು. ಆದರೆ ಆ ನೆನಪು ನಿಮಗೆ ತಟ್ಟುವ ರೀತಿಯಲ್ಲೇ ಬೇರೆಯವರಿಗೆ ತಟ್ಟುವುದಿಲ್ಲ ಎಂಬುದನ್ನು ನೆನಪಿಡಿ.

'ಮೈ ಡಿಯರ್ ಫ್ರೆಂಡ್ ಸುನೀಲ್, ಹೋಗಿ ಬಾ!' 'ಗುಡ್‌ಬೈ' ಎಂದು ಹೇಳುವುದಕ್ಕಿಂತ 'ಹೋಗಿ ಬಾ' ಎಂದು ಹೇಳುವುದು ನನಗೆ ಇಷ್ಟ. ಏಕೆಂದರೆ ವಿದಾಯ ಶಾಶ್ವತ. 'ಹೋಗಿ ಬಾ' ಎಂದು ಹೇಳುವುದರಲ್ಲಿ ಅದೇನೋ ಆಶಾಭಾವನೆಯಿದೆ. ಈ ಜಗತ್ತಿನಲ್ಲಿ ದೈವಿಕ ಹಾಸ್ಯವೆಂಬುದು ಯಾವತ್ತೂ ನಿರ್ದಿಷ್ಟವಾದ ತೆರೆ ಎಳೆಯುವುದರೊಂದಿಗೆ ಅಂತ್ಯವಾಗುವುದಿಲ್ಲ. ಹಾಗೇನಾದರೂ ಆದರೆ ಬದುಕು ದೈವಿಕ ದುರಂತವಾಗಿಬಿಡುತ್ತದೆ. ಅಥವಾ, ಇಷ್ಟೆಲ್ಲ ಉನ್ಮಾದದಿಂದ ಮಾತನಾಡುವುದು ಅರ್ಥಹೀನವೇ ಇರಬಹುದು. ಏಕೆಂದರೆ ಹುಟ್ಟಿದವರು ಸಾಯಲೇಬೇಕು. ಎಲ್ಲರ ಬದುಕೂ ತಾತ್ಕಾಲಿಕ ಮತ್ತು ಕ್ಷಣಿಕ. ಇಂಥ ವಿಷಯಗಳಲ್ಲಾದರೂ ನಾವು ಪ್ರಾಚೀನ ಋಷಿಮುನಿಗಳ ಉಪದೇಶವನ್ನು ಕೇಳಬೇಕು. ಅವರು ಮಾಯೆಯ ಬಗ್ಗೆ ನಮ್ಮನ್ನು ಎಚ್ಚರಿಸಿದರು. ಸಹಜ ಸ್ಥಿತಿಯನ್ನು ಮರೆಸಿ ಭ್ರಮೆಯಲ್ಲಿ ನಮ್ಮನ್ನು ಮುಳುಗಿಸುವುದೇ ಮಾಯೆ. ಆ ಮೂರನೇ ಕ್ಷಣ ನಮಗೆ ಬಂದೆರಗುವವರೆಗೂ ಕಾಲದ ಮಾಯೆಯಲ್ಲಿ ಹೀಗೇ ಸಾಗುತ್ತಿರಬೇಕು.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 183

ಶೂನ್ಯ ಬಡ್ಡಿ ಆಸೆ ತೋರಿಸಿ ವಂಚನೆ

ಬೆಂಗಳೂರು: ಶೂನ್ಯ ಬಡ್ಡಿ ಆಸೆ ತೋರಿಸಿ ಅಡಮಾನ ಇಟ್ಟ ಕೆಜಿಗಟ್ಟಲೆ ಚಿನ್ನದ ಜತೆ ನಕಲಿ ಕಂಪನಿಯವರು ಪರಾರಿಯಾಗಿದ್ದ ಘಟನೆ ಬೆಳಕಿಗೆ ಬಂದಿದೆ. ವಿದ್ಯಾರಣ್ಯಪುರದ ಎಮಿರೇಟ್ ಎಂಬ ಕಂಪನಿಯಲ್ಲಿ ಚಿನ್ನ ಅಡಮಾನ ಇಟ್ಟವರಿಗೆ 11 ತಿಂಗಳು ಬಡ್ಡಿ ಇಲ್ಲದೇ ಸಾಲ ಕೊಡಲಾಗುತ್ತಿತ್ತು. ಚಿನ್ನಾಭರಣದ ಮೌಲ್ಯದ ಶೇ.50 ರಿಂದ 60 ರಷ್ಟು ಸಾಲ ಕೊಡುತ್ತಿದ್ದರು. ಅಡಮಾನವಿಟ್ಟ 11 ತಿಂಗಳವರೆಗೆ ಯಾವುದೇ ಕಾರಣಕ್ಕೂ ಚಿನ್ನ ಬಿಡಿಸಿಕೊಳ್ಳಲು ಅವಕಾಶವಿರಲಿಲ್ಲ. ಬಡ್ಡಿ ಇಲ್ಲವಲ್ಲ ಎಂದು ನಂಬಿ ಚಿನ್ನ ಅಡಮಾನವಿಟ್ಟು ಸಾಕಷ್ಟು ಜನ ಸಾಲ ಪಡೆದಿದ್ದರು. 11 ತಿಂಗಳ ನಂತರ ಕಂಪನಿ ಬಳಿ ಹೋಗಿ ನೋಡಿದಾಗ ಚಿನ್ನದ ಜತೆ ಆರೋಪಿಗಳು ಪರಾರಿಯಾಗಿದ್ದರು. ಸಿಸಿಬಿ ಆರ್ಥಿಕ ಅಪರಾಧ ದಳದ ಅಧಿಕಾರಿಗಳು ಸಲಾಮ್, ಅಜಿತ್ ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ. ಕೇರಳ, ಮಂಗಳೂರಿನಲ್ಲಿ ಹಲವರಿಗೆ ವಂಚಿಸಿದ್ದ ಬಂಧಿತರಿಂದ 1.8 ಕೋಟಿ ಮೌಲ್ಯದ 1 ಕೆಜಿ 450 ಗ್ರಾಂ ಚಿನ್ನಾಭರಣ, ಐದು ಕೆಜಿ ಬೆಳ್ಳಿ, ಚಿನ್ನ ಕರಗಿಸುವ ಯಂತ್ರ ವಶಕ್ಕೆ ಪಡೆಯಲಾಗಿದೆ. ಜನರಿಂದ ನಾಲ್ಕು ಕೆಜಿಗೂ ಹೆಚ್ಚು ಚಿನ್ನ ಲಪಟಾಯಿಸಲಾಗಿತ್ತು. ಆರೋಪಿಗಳನ್ನು ಬಂಧಿಸಿ ಪೊಲೀಸರು ಜೈಲಿಗಟ್ಟಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನೋಟಿನ ಮಳೆ ಸುರಿಸುವುದಾಗಿ ಹೇಳಿ ವಂಚನೆ: 10 ಮಂದಿ ಸೆರೆ

ಅಪರಾಧ ಸುದ್ದಿಗಳು

ಬೆಂಗಳೂರು: ನೋಟಿನ ಮಳೆ ಸುರಿಸುವುದಾಗಿ ಅಮಾಯಕರನ್ನು ವಂಚಿಸುತ್ತಿದ್ದ ಜಾಲವನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಯಲಿಗೆಳೆದಿದ್ದಾರೆ.

ಈ ಹಿಂದೆ ಚಲಾವಣೆಯಿಂದ ಹಿಂಪಡೆಯಲಾದ 2 ಸಾವಿರ ರು. ಮುಖಬೆಲೆಯ ಅಸಲಿ ನೋಟುಗಳ ಸೀರೀಸ್ ನಂಬರ್ ತಿರುಚಿರುವ ನಕಲಿ ನೋಟುಗಳ ಕುರಿತು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕರು ನೀಡಿದ್ದ ದೂರಿನನ್ವಯ ತನಿಖೆ ಕೈಗೊಂಡಿದ್ದ ಪೊಲೀಸರು ಮೋಹನ್, ಶ್ರೀನಿವಾಸ್ ಮೂರ್ತಿ, ರಾಜು, ಬಸವರಾಜ್, ಮುನಿಶಾಮಪ್ಪ, ಮಲ್ಲಿಕಾರ್ಜುನ್, ರಾಮಕೃಷ್ಣ, ಪಳ್ಳಿ ಮುರುಳೀಧರ್, ರಾಮಚಂದ್ರ ಹಾಗೂ ಮುಬಾರಕ್ ಎಂಬ ಆರೋಪಿಗಳನ್ನು ಬಂಧಿಸಿದ್ದಾರೆ.

ಚಲಾವಣೆಯಿಂದ ಹಿಂಪಡೆಯಲಾದ ಎರಡು ಸಾವಿರ ಮುಖಬೆಲೆಯ 70 ಅಸಲಿ ನೋಟುಗಳ ಸೀರೀಸ್ ನಂಬರ್‌ಗಳನ್ನು ತಿರುಚಿ ಬ್ಯಾಂಕ್‌ಗೆ ಸಲ್ಲಿಕೆಯಾಗಿರುವ ನಕಲಿ ನೋಟುಗಳ ಬಗ್ಗೆ ಹಲಸೂರು ಗೇಟ್ ಠಾಣೆ ಪೊಲೀಸರಿಗೆ ಆರ್‌ಬಿಐ ವ್ಯವಸ್ಥಾಪಕರು ದೂರು ನೀಡಿದ್ದರು. ತನಿಖೆ ಕೈಗೊಂಡ ಪೊಲೀಸರು ಆ ನೋಟುಗಳನ್ನು ಬ್ಯಾಂಕ್‌ಗೆ ಡೆಪಾಸಿಟ್ ಮಾಡಿದ್ದವನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಕಮಿಷನ್ ಆಸೆಗೆ ಕೃತ್ಯ ಎಸಗಿರುವುದು ಬಯಲಾಗಿತ್ತು. ಸ್ವಾಮೀಜಿಗಳ ವೇಷ ಧರಿಸಿ ಅಮಾಯಕರನ್ನು ಭೇಟಿಯಾಗುತ್ತಿದ್ದ ಬಸವರಾಜ್, ಮಲ್ಲಿಕಾರ್ಜುನ್ ಹಾಗೂ ಮನಿಶಾಮಪ್ಪ 2 ಸಾವಿರ ರು. ಮುಖಬೆಲೆಯ ಪ್ರಸ್ತುತ ಚಲಾವಣೆಯಲ್ಲಿರದ ನಿಗದಿತ ಸೀರೀಸ್‌ನ ನೋಟುಗಳನ್ನು (ಉದಾಹರಣೆಗೆ, 2018ನೇ ಸಾಲಿನ ಎಚ್‌ಎಸ್ ಸೀರೀಸ್‌ನ 2 ಸಾವಿರ ಮುಖಬೆಲೆಯ 100 ನೋಟುಗಳು) ಕೊಟ್ಟರೆ ಹಣದ ಮಳೆ ಸುರಿಸುವುದಾಗಿ ನಂಬಿಸುತ್ತಿದ್ದರು. ಆ ನೋಟುಗಳು ಸಿಗುವ ಸ್ಥಳವನ್ನೂ ಅವರೇ ಹೇಳುತ್ತಿದ್ದರು. ನಂಬರ್ ತಿರುಚಿ ಎಂದು ನೋಟುಗಳನ್ನು ಒದಗಿಸುವ ಕೆಲಸವನ್ನು ಮುಬಾರಕ್ ಮಾಡುತ್ತಿದ್ದ. ಹಣದ ಆಸೆಗೆ ಮೂರರಷ್ಟು ನೀಡಿ ಆ ನೋಟುಗಳನ್ನು ಪಡೆದುಕೊಳ್ಳುತ್ತಿದ್ದ ಅಮಾಯಕರು ಸ್ವಾಮೀಜಿಗಳ ಬಳಿ ಬರುತ್ತಿದ್ದರು. ಆಗ ಒಂದು ಪೂಜೆ ಮಾಡಬೇಕು ಹಾಗೂ ಒಬ್ಬರೇ ಬರಬೇಕೆಂದು ನದಿ, ಕೆರೆಗಳ ಬಳಿ ಕರೆದುಕೊಂಡು ಹೋಗುತ್ತಿದ್ದ ನಕಲಿ ಸ್ವಾಮೀಜಿಗಳು, ಕೆಲವು ನೋಟುಗಳು ಮುಕ್ಕಾಗಿವೆ, ಅವುಗಳನ್ನು ಹಿಡಿದುಕೊಂಡು ಹೊಳೆಯಲ್ಲಿ ಮುಳುಗಿ ಏಳಬೇಕು ಎಂದು ಸೂಚಿಸುತ್ತಿದ್ದರು. ನೀರಿನಲ್ಲಿ ಮುಳುಗಿ ಏಳುವಷ್ಟರಲ್ಲಿ ಆ ದುಡ್ಡಿನೊಂದಿಗೆ ನಕಲಿ ಸ್ವಾಮೀಜಿಗಳು ಪರಾರಿಯಾಗುತ್ತಿದ್ದರು.

ಈ ರೀತಿ ವಂಚಿಸಿದ ನೋಟುಗಳನ್ನು ಏಜೆಂಟ್‌ಗಳ ಮೂಲಕ ಡೆಪಾಸಿಟ್ ಮಾಡಿಸಿ, 20, 30 ಸಾವಿರ ರು. ಕಡಿಮೆ ಹಣ ಪಡೆದುಕೊಳ್ಳುತ್ತಿದ್ದರು. ಈ ರೀತಿ ಸೀರೀಸ್ ನಂಬರ್ ತಿರುಚಲ್ಪಟ್ಟ 2 ಸಾವಿರ ಮುಖಬೆಲೆಯ 70 ನೋಟುಗಳು ಬ್ಯಾಂಕ್‌ಗೆ ಡೆಪಾಸಿಟ್ ಆಗಿದ್ದವು. ಆರ್‌ಬಿಐ ಅಧಿಕಾರಿಗಳು ನೀಡಿದ ದೂರಿನನ್ವಯ ತನಿಖೆ ಕೈಗೊಂಡ ಪೊಲೀಸರು ಬೆಂಗಳೂರು, ಯಾದಗಿರಿ, ಹಾವೇರಿ, ಆಂಧ್ರ ಪ್ರದೇಶ, ತಮಿಳುನಾಡಲ್ಲಿ ವಿಸ್ತರಿಸಿಕೊಂಡಿದ್ದ ವಂಚಕ ಜಾಲದ ಆರೋಪಿಗಳನ್ನು ಬಂಧಿಸಿದ್ದಾರೆ. ಹಾಗೂ ಆರೋಪಿಗಳಿಂದ 18 ಲಕ್ಷ ರು. ಮೌಲ್ಯದ 2 ಸಾವಿರ ಮುಖಬೆಲೆಯ ನೋಟುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ವಶಕ್ಕೆ ಪಡೆಯಲಾದ ನೋಟುಗಳು ತಿರುಚಲ್ಪಟ್ಟಿವೆಯೋ ಇಲ್ಲವೋ ಎಂಬುದರ ಕುರಿತು ಪರಿಶೀಲನೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

IN THE COURT OF THE XXVIII ADDL CITY CIVIL AND SESSIONS JUDGE AT BENGALURU (CCH-29)
O.S No. 25180/2025

BETWEEN ; MARY ABRAHAM W/o Abraham Mathew D/o Late V.M Mathew, Aged about 55 years, Residing at 9A, Nikunjam Fortune, Jawahar Nagar, Kowdiar, Trivandrum, Kerala 695 003 ...Plaintiff
AND : BINESH MATHEW & ANR ...Defendants

SUMMONS TO DEFENDANT NO.2

To, Elizabeth Mathew Aged about 53 years, D/o Late V.M Mathew, Residing at, No 32. 4th Main Road Behind Binny Mills Ganganagar Extension Bangalore 560032. **Also, No.11,** Kristal Onyx, Karyavattom, Thrippadapuram Road, Trivandrum, Kerala 695 581.

Whereas, the Plaintiff above named filed the above suit against the you and another under order VII rule 1 R/w section 26 of Code of Civil Procedure, for the relief of partition and permanent Injunction of the suit schedule property. You hereby summoned to appear before this Hon'ble Court either in person or through a Pleader on the **26/11/2025 at 11.00 AM** to defend the above case, failing which the matter will be, heard and decided in your absence.

Given under my hand and seal of the court, this 31st day of October 2025.

SUIT SCHEDULE PROPERTY: All that piece and parcel of building bearing No.32, 4th Main Road, Hebbal Mile, Gangenahalli, Bengaluru, measuring 2240 square Feet and having built up area of 1100 square Feet and bounded on:- **East by :** Property of Ramadevara Temple, **West by :** Road, **North by :** Property bearing No.38, **South by :** Property bearing No.36.

By Order Of The Court, Deputy Registrar, City Civil Court, Mayohall Unit, Bangalore

SIJI MALAYIL ASSOCIATES
Office at No.S-501, 5th Cross, South Block, Manipal Center, M.G Road, Bengaluru-42

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE
DISPUTE NO. DRB-IZONE/CHITS/72/2025-2026

DISPUTANT : M/s. DHANALAKSHMI SRINIVASAN CHIT FUNDS (KAR) PVT. LTD.. Registered Office at # 32, 2nd Floor, 'B' Main Road, 8th B Cross, 'B' Sector, Near Ganapathi Temple, Yelahanka New Town, Bengaluru-580004.
Branch : BASAVESHWARANAGAR, Represented by its Foreman & Branch Manager, **Mr. J. RAJKUMAR**

OPPONENTS : Mr. JE TRIMURTHY & ORS.

1. Mr. JE TRIMURTHY, S/o Late J. Eswaraiah, Major, #2-1-28, J. V. Street, Mukkadipeta, Hindupur, Sri Sathya Sai District, ANDHRA PRADESH-515 201
ALSO AT : Mr. J. E. TRIMURTHY, S/o Late J. Eswaraiah, Major, Proprietor. M/s Manoj Enterprises, No. 4/1/1650/0/B Near and Opp. Narayana School, Balaji Talkies Road, Hindupur, Sri Sathya Sai District, ANDHRA PRADESH-515 201

2. Mr. J. V. ANILKUMAR, S/o Mr. J. E. Venkataswamy, Major. No. 12-1-1YZ/A, JVS Nilaya, Near Chaithanya School. Bangalore Road. Hindupur, Sri Sathya Sai District, ANDHRA PRADESH-515 201
ALSO AT : Mr J VANILKUMAR, S/o Mr. J. E. Venkataswamy, Major, Proprietor, Mis. JVS Palace, Lepakshi Road, Near Sreekantapuram, Hindupur, Sni Sathya Sai District. ANDHRA PRADESH-515 201

3. Mr. B. S. DIWAKAR, S/o Late B. S. Adimurthy, Major, No. 14-4-26, Boyapet, Hindupur, Sri Sathya Sai District, ANDHRA PRADESH-515 201
ALSO AT : Mr. B. S. DIWAKAR, S/o Late B. S. Adimurthy, Major, Proprietor, M/s. SLV Bricks, Thumukunta Check Post, Hindupur, Sri Sathya Sai District, ANDHRA PRADESH-515 201

4.Mr. J. G. VENKATESH BABU, S/o J. V. Govindappa, Major, No. 2-1-25. J V Street Mukkadipeta. Hindupur Sri Sathya Sai District, ANDHRA PRADESH-515 201.

5. Mr. J. T. MANOJ KUMAR S/o J. E. Trimurthy Major No. 2-1-28, J V Street, Mukkadipeta, Hindupur Sri Sathya Sai District. ANDHRA PRADESH-515/201

6. Mr. M. BHASKAR, S/o N. Muniyappa, Major No. 06-7-5/B. DL Road Shankarappa Street, W Sri Sathya Sai District ANDHRA PRADESH-515 201

SUIT NOTICE BY PAPER PUBLICATION TO OPPONENT Nos 1 to 6

WHEREAS, the Disputant has filed the above dispute Uls 64 (1) of The Chit Funds Act, 1982 before The Deputy Registrar of Chits, I Zone, Bangalore for recovery of a sum of Rs. **14,21,470/-** along with interest at 24% p.a. and the Court Costs from the Opponents and the above dispute has been referred to me for adjudication and disposal

Notice sent to Opponent Nos. 1 to 6 by R.P.AD have been returned unserved. Therefore, the Opponent Nos. 1 to 6 named above are therefore hereby directed to appear before me at the Disputant Company situated at BASAVESH WARANAGAR at # 172, Suprabha Complex, 2nd Floor, 1st G Cross, Near Sharada Colony Bus Stop, 3 Stage, Basaveshwaranagar, Bangalore-560 079 on **18-11-2025 at 3.00 P. M.** with all relevant documents falling which the above dispute will be decided as per law, in their absence

Given Under my hand & seal on **28-10-2025**

Nominee of The Deputy Registrar of Chits, 1st Zone, Bangalore

ADVOCATE FOR DISPUTANT
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050. Mob: 94485 39699.

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE
DISPUTE NO. DRB-IZONE/CHITS/67/2025-2020

DISPUTANT : Mis. DHANALAKSHMI SRINIVASAN CHIT FUNDS (KAR) PVT. LTD., Registered Office at # 32, 2nd Floor, 1st 'B' Main Road, 8th 'B' Cross, 'B' Sector, Near Ganapathi Temple, Yelahanka New Town, BENGALURU-560 064.
Branch: BASAVESHWARANAGAR, Represented by its Foreman & Branch Manager, **Mr. J. RAJKUMAR.**

-Vs-

OPPONENTS : Mrs. B. AMULYA & ORS.

1.Mrs. B. AMULYA, W/o Mr. K. L. Manjunath, Major, #1847, 14th Cross, HSR Sector-1, Vanganahalli, Bengaluru-560102.
ALSO AT : Mrs B. AMULYA, W/o Mr. K. L. Manjunath, Major, M/s, Goldman Sachs Ser Pvt. Ltd., Vice President. No. 150, Outer Ring Road, Helios Business Park, Kadubeesanahalli (V), BENGALURU-560 103.

2. Mr. K. S. PARTHASARATHI, S/o Mr. K. L. Srinivasa, Major, No 432, Shankarappa Layout, 3rd Cross, Behind P.M.C. Annapura Holepalya, Tiptur (V), Tumkur (D). KARNATAKA - 572 201
ALSO AT : Mr. K. S. PARTHASARATHI, S/o Mr. K. L. Srinivasa, Major, Olo Tiptur Head Post Office, Postal Assistant, Tiptur Town, Tumkur (D), KARNATAKA - 572 20

3. Mrs. N. K NAGAVENI, W/o Mr. M. Basavaraja, Major, Flat No. 202/B, 2nd Floor, 17th Cross, 22nd Main Road, Saikrupa Apartment, Sarakki Kere (V), Skanda Park, J. P. Nagar, Uttarahalli (H), BENGALURU-560 078.
ALSO AT : Mrs. N. K. NAGAVENI, W/o Mr. M. Basavaraja, Major, M/s. Avigna Hospitality Services, No. 1131, Ground Floor, 17th Cross, H.S.R. Layout B.T.M. Layout. BENGALURU-560102.

4. Mr. K. L. MANJUNATHA, S/o Mr. C. Lakshminarasappa, Major, No.1847, 14th Cross, HSR Sector-1, Vanganahalli, BENGALURU-560 102.
ALSO AT : Mr. K. L. MANJUNATHA, S/o Mr. C. Lakshminarasappa, Major, M/s. M M G Group. Davanagere Benne Dose. No. 1131, Ground Floor, 18th Cross, HSR Layout, BTM Layout, BENGALURU-560 102.

SUIT NOTICE BY PAPER PUBLICATION TO OPPONENT Nos 1 to 4

WHEREAS, the Disputant has filed the above dispute Uls 64 (1) of The Chit Funds Act, 1982 before The Deputy Registrar of Chits, I Zone, Bangalore for recovery of a sum of Rs. **12,72,746/-** along with interest at 24% p.a. and the Court Costs from the Opponents and the above dispute has been referred to me for adjudication and disposal

Notice sent to Opponent Nos. 1 to 4 by R.P.AD have been returned unserved. Therefore, the Opponent Nos. 1 to 4 named above are therefore hereby directed to appear before me at the Disputant Company situated at BASAVESHWARANAGAR at # 172, Suprabha Complex, 2nd Floor, 1st G Cross, Near Sharada Colony Bus Stop, 3 Stage, Basaveshwaranagar, Bangalore-560 079 on **18-11-2025 at 3.00 P. M.** with all relevant documents falling which the above dispute will be decided as per law, in their absence

Given Under my hand & seal on **28-10-2025**

Nominee of The Deputy Registrar of Chits, 1st Zone, Bangalore

ADVOCATE FOR DISPUTANT
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050. Mob: 94485 39699.

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE
DISPUTE NO. DRB-IZONE/CHITS/68/2025-2020

DISPUTANT : M/s. DHANALAKSHMI SRINIVASAN CHIT FUNDS (KAR) PVT. LTD., Registered Office at # 32. 2nd Floor, 1st 'B' Main Road, 8th 'B' Cross, 'B' Sector, Near Ganapathi Temple, Yelahanka New Town, BENGALURU-560 064
Branch : BASAVESHWARANAGAR, Represented by its Foreman & Branch Manager, **Mr. J. RAJKUMAR**

-Vs-

OPPONENTS : Mr. G. RANGANATH & ORS.

1. Mr. G. RANGANATH, S/o Late A. Govindappa, Major, #S 38, SFHS Layout Extension, Near S. G. International School, Nandini Layout, BANGALORE-560 096.
ALSO AT : Mr. G. RANGANATH, S/o Late A. Govindappa, Major, Proprietor, M/s Chandana Enterprises, No. 40/8, Ground Floor, Om Shakthi Temple Road, 9th Cross Road, Sanjeevini Nagar, Hegganahalli Cross, BANGALORE-560 091.

2. Mr. S. N. VINEET GOWDA, S/o Mr. Nanjundaiah, Major, No. 20/28, 1st Floor. 9th Cross Road, Shakambari Nagar, J. P. Nagar 1st Phase, Sarakki, BANGALORE 560 078
ALSO AT : Mr. S. N. VINEET GOWDA, S/o Mr. Nanjundaiah, Major, M/s. Vajrakaaya Venture, #205. 1th Floor, 7th Cross, 1 N Block. Rajajinagar, BANGALORE- 560010

3. Mr. T. G. VINAY KUMAR, S/o Mr. Govinda, Major, #20/28, 80 Feet Road, 9th Cross, Shakambari Nagar, IG Circle, 1 Phase, J. P. Nagar, BANGALORE-560 078.
ALSO AT : M/s, GREEN TECHNOLOGY & ENTERPRISES #1/2, 1 Floor, 4th Cross, Amruthnagar Main Road, Opp. Bank of Baroda, New Bank Colony, Konanakunte, BANGALORE-560 062

4. Mrs. O R. MAMATHA, W/o Mr. G. Ranganath, Major, #S 38, SFHS Layout Extension, Near S. G. International School, Nandini Layout, BANGALORE-560096.
ALSO AT : M/S SRI MANJUNATHA SRI GURU RAGHAVENDRA CREATIONS, No. 40/8, Ground Floor, Hegganahalli Cross, BANGALORE-560 091.

SUIT NOTICE BY PAPER PUBLICATION TO OPPONENT Nos 1 to 4

WHEREAS, the Disputant has filed the above dispute Uls 64 (1) of The Chit Funds Act, 1982 before The Deputy Registrar of Chits, I Zone, Bangalore for recovery of a sum of Rs. **8,86,547/-** along with interest at 24% p.a. and the Court Costs from the Opponents and the above dispute has been referred to me for adjudication and disposal

Notice sent to Opponent Nos. 1 to 4 by R.P.AD have been returned unserved. Therefore, the Opponent Nos. 1 to 4 named above are therefore hereby directed to appear before me at the Disputant Company situated at BASAVESHWARANAGAR at # 172, Suprabha Complex, 2nd Floor, 1st G Cross, Near Sharada Colony Bus Stop, 3 Stage, Basaveshwaranagar, Bangalore-560 079 on **18-11-2025 at 3.00 P. M.** with all relevant documents falling which the above dispute will be decided as per law, in their absence

Given Under my hand & seal on **28-10-2025**

Nominee of The Deputy Registrar of Chits, 1st Zone, Bangalore

ADVOCATE FOR DISPUTANT
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050. Mob: 94485 39699.

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE
DISPUTE NO. DRB-IZONE/CHITS/73/2025-2026

DISPUTANT : Mis. DHANALAKSHMI SRINIVASAN CHIT FUNDS (KAR) PVT. LTD., Registered Office at #32. 2nd Floor, 1st B Main Road, 8th B Cross, B Sector, Near Ganapathi Temple, Yelahanka New Town, BENGALURU-560 084
Branch: BASAVESHWARANAGAR. Represented by its Foreman & Branch Manager, **Mr. J. RAJKUMAR**

OPPONENTS : M/S VAISHNAVI ALLOYS & ORS

1 M/s. VAISHNAVI ALLOYS Partnership Firm, By its Partners, Mr. J. V. Anil Kumar, S/o Mr. J. E Venkataswamy, Major & Mr. J. V. VenuGopal, S/o Mr. J. E Venkataswamy Major. #12-1-142-A J. V. S. Nilayam, Bangalore - Hindupur Road, Ananthapuram District, ANDHRA PRADESH-515.201.

2. Mr.Y.L. SREENIVASULU, S/o Mr. L. Lakshman Murthy, Major, #6-8-20 Kolimi Appaswami Street, Hindupur, Ananthapur ANDHRA PRADESH-515 201
ALSO AT : Mr YL SREENIVASULU, S/o Mr. L. Lakshman Murthy, Major Proprietor: M/s SANGEEHTA BAR & RESTAURANT Penugonda Road, HINDUPUR

3. Mr. X. N. RAMESH, S/o Mr. K. S. Nagaraja Rao. Major Door No. 1056, 27 Main Road, 9 Block, Jayanagar South, BANGALORE-560 069
ALSO AT : Mr. K. N. RAMESH, S/o Mr. K. S. Nagaraja Rao, Major, Mis. International Institute of Information Technology. Adjunct Professor, No: 28/C. Electronic City Hosur Road, BANGALORE-500 100

4. Mrs. A. MALINI, W/o Mr. J. V. Anil Kumar, Major #12-1-142-AJ VS Nilayam, Bangalore-Hindupur Road, Near Chaithanya School, Ananthapuram District ANDHRA PRADESH-515 201
ALSO AT : Mrs. A. MALINI, W/o Mr. J. V. Anil Kumar, Major, Proprietor, M/s Venkatadri Kisan Kendra. #4-146. Manesamudram, Hindupur, Ananthapur (D), ANDHRA PRADESH-515-201

5. Mrs. V. JAYAMMA, W/o Mr. J. E Venkatassamy, Major No. 12-1-142. B. L. Road, Hindupur, Anarithapuram ANDHRA PRADESH-515 201

SUIT NOTICE BY PAPER PUBLICATION TO OPPONENT Nos 1 to 4

WHEREAS, the Disputant has filed the above dispute Uls 64 (1) of The Chit Funds Act, 1982 before The Deputy Registrar of Chits, I Zone, Bangalore for recovery of a sum of Rs. **55,88,846/-** along with interest at 24% p.a. and the Court Costs from the Opponents and the above dispute has been referred to me for adjudication and disposal

Notice sent to Opponent Nos. 1 to 4 by R.P.AD have been returned unserved. Therefore, the Opponent Nos. 1 to 4 named above are therefore hereby directed to appear before me at the Disputant Company situated at BASAVESH WARANAGAR at # 172, Suprabha Complex, 2nd Floor, 1st G Cross, Near Sharada Colony Bus Stop, 3 Stage, Basaveshwaranagar, Bangalore-560 079 on **18-11-2025 at 3.00 P. M.** with all relevant documents falling which the above dispute will be decided as per law, in their absence

Given Under my hand & seal on **28-10-2025**

Nominee of The Deputy Registrar of Chits, 1st Zone, Bangalore

ADVOCATE FOR DISPUTANT
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050. Mob: 94485 39699.

BEFORE THE NOMINEE OF DEPUTY REGISTRAR OF CHITS, I ZONE, MARGOSA ROAD, MALLESWARAM, AT BANGALORE
DISPUTE NO. DRB-IZONE/CHITS/66/2025-2020

DISPUTANT : Mis. DHANALAKSHMI SRINIVASAN CHIT FUNDS (KAR) PVT.LTD Registered Office at # 32, 2nd Floor. 1st 'B' Main Road, 8th 'B' Cross, 'B' Sector, Near Ganapathi Temple, Yelahanka New Town, BENGALURU-560 004
Branch : BASAVESHWARANAGAR, Represented by its Foreman & Branch Manager, **Mr. J. RAJKUMAR.**

-Vs-

OPPONENTS:
Mr. R. MOHANKUMAR & ORS.

1.Mr. R. MOHANKUMAR & ORS. #18/19, 8th Cross Road, Shivananda Nagar, Mr. R. MOHANKUMAR, S/o Mr. Ramachandra, Major, Bangalore-560072. Nagarabhavi Main Road, Near Santhosh Gym, **ALSO AT** BANGALORE -560-100 MOHANKUMAR, S/o Mr. Ramachandra, Major, M/s. Bosch Automotive Electronics (1) Pvt. Ltd.Naganathapura, P. B. No. 10029, Electronic City (P), Mr. R. BANGALORE-560 040.

2. **Mr. SIDDALINGA REDDY,** S/o Mr. Sharanappa, Major, #41, Santrupti Nilaya, 2nd Floor, 2nd Main, 3rd Cross, Nethaji Layout, Attiguppe (V), Vijayanagar BANGALORE -560100.
ALSO AT Mr. Siddalinga Reddy, S/o Mr. Sharanappa, Major, M/s Bosch Automotive Electronics (1) Pvt. Ltd., Naganathapura, P. B. No. 10029. Electronic City (P), Bangalore-560100.

3. Mr. G. JAGADISH, S/o Mr. Govinda Shetty, Major, No. 60, 1st Floor, 4th Main Road, Hosahalli (V), R.P.C. Layout, Vijayanagar, BANGALORE -560040
ALSO AT : Mr. G. JAGADISH, S/o Mr. Govinda Shetty, Major, M/s. Devi Networks, No. 27. 2nd Main Road, Hosahalli,

4. Mr. P. AKASH, S/o Late Puttaramu, Major, No. 535, 4th Main Road: 1st Cross, Near Ganesha Temple, Kamalanagar, Bangalore-560079
ALSO AT : Mr. P. AKASH, S/o Late Puttaramu, Major, M/s. Bosch Automotive Electronics (1) Pvt. Ltd., (Grade -6)-Gate, Naganathapura, P. B. No. 10029, Electronic City (P) BANGALORE 560 100.

5. Mrs. M. S. KRUTHIKA, W/o R. Mohan Kumar, Major, No. 240, Mallikarjuna Nilaya, 9h Main Road, Near Govt. School, Vijayanagar, Bangalore -560 040.

SUIT NOTICE BY PAPER PUBLICATION TO OPPONENT No. 1 to 5

WHEREAS, the Disputant has filed the above dispute U/s 64 (1) of The Chit Funds Act, 1982 before The Deputy Registrar of Chits, I Zone, Bangalore for recovery of a sum of **Rs. 14,21,470/-** along with interest at 24% p.a. and the Court Costs from the Opponents and the above dispute has been referred to me for adjudication and disposal

Notice sent to Opponent Nos. 1 to 5 by R.P.AD have been returned unserved. Therefore, the Opponent Nos. 1 to 5 named above are therefore hereby directed to appear before me at the Disputant Company situated at BASAVESHWARANAGAR at # 172, Suprabha Complex, 2nd Floor, 1st G Cross, Near Sharada Colony Bus Stop, 3 Stage, Basaveshwaranagar, Bangalore-560 079 on **18-11-2025 at 3.00 P. M.** with all relevant documents falling which the above dispute will be decided as per law, in their absence

Given Under my hand & seal on **28-10-2025**

Nominee of The Deputy Registrar of Chits, 1st Zone, Bangalore

ADVOCATE FOR DISPUTANT
K. R. DINAKAR, ADVOCATE
#66, 4th Cross, Ashok Nagar, Near N. R. Colony, BANGALORE-560 050. Mob: 94485 39699.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್

ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಅಗರ ಗ್ರಾಮದ ಸರ್ವೆ ಸಂಖ್ಯೆ 28/P16 ಮತ್ತು ಬಿ.ಎಮ್ ಕಾವಲ್ ಗ್ರಾಮದ ಸರ್ವೆ ಸಂಖ್ಯೆ 85/P6, ಕೆಂಗೇರಿ ಹೋಬಳಿ, ಬೆಂಗಳೂರು 560 082, ಕರ್ನಾಟಕ, ಭಾರತ
ಜಾಲತಾಣ: www.sjsindia.com | **ಇಮೇಲ್:** compliance@sjsindia.com | **ದೂರವಾಣಿ :** +91 80 6194 0777
CIN: L51909KA2005PLC036601

30ನೇ ಸೆಪ್ಟೆಂಬರ್ 2025ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಅರ್ಧ ವರ್ಷಕ್ಕೆ ಪರಿಷ್ಕರಿಸಿರದ ಸಂಯೋಜಿತ ಆರ್ಥಿಕ ಫಲಿತಾಂಶಗಳ ಸಾರ

(ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಅರ್ಧ ವರ್ಷದ ಕೊನೆಗೊಂಡಾಗ		ವರ್ಷ ಮುಗಿದಾಗ
		30.09.2025	30.06.2025	30.09.2024	30.09.2025	30.09.2024	31.03. 2025
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸಲಾಗಿದೆ
1	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	2417.57	2,096.58	1927.88	4514.15	3814.12	7,604.86
2	ನಿವ್ವಳ ಲಾಭ ಅವಧಿಗೆ (ತೆರಿಗೆ ಅಸಾಧಾರಣ ವಸ್ತುಗಳ ಮೊದಲು)	580.46	459.37	387.53	1039.83	764.07	1,528.64
3	ನಿವ್ವಳ ಲಾಭ ತೆರಿಗೆಗೆ ಮುಂಚಿನ ಅವಧಿಗೆ (ಅಸಾಧಾರಣ ವಸ್ತುಗಳ ನಂತರ)	580.46	459.37	387.53	1039.83	764.07	1,528.64
4	ತೆರಿಗೆಯ ನಂತರ ಹಾಗೂ ಅಪವಾದಾತ್ಮಕ (ಅನಾಧಾರಣ) ಐಟಮ್ಗಳ ನಂತರದ ಅವಧಿಗಾಗಿ ನಿವ್ವಳ ಲಾಭ	432.69	346.16	291.47	778.85	573.87	1,188.32
5	ಅವಧಿಗೆ ಒಟ್ಟು ಸಮಗ್ರ ಆದಾಯ ಅವಧಿಯ ಲಾಭ [(ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ))	437.43	337.20	286.25	774.63	562.91	1,178.83
6	ಇಕ್ವಿಟಿ ಶೇರ್ ಕ್ಯಾಪಿಟಲ್ (ತಲಾ - ರೂ.10/- ರ ಮುಖ ಬೆಲೆ)	313.87	313.33	310.38	313.87	310.38	313.26
7	ಇತರ ಇಕ್ವಿಟಿ	-	-		-		6,458.54
8	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 10/- ರಂತೆ)	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿಲ್ಲ	ವಾರ್ಷಿಕಗೊಳಿಸಲಾಗಿದೆ
	1. ಬೇಸಿಕ್ (ವಾರ್ಷಿಕಗೊಳಿಸಲಾಗಿಲ್ಲ)	13.73	11.03	9.34	24.76	18.31	37.82
	2. ಡೈಲ್ಯೂಟೆಡ್ (ವಾರ್ಷಿಕಗೊಳಿಸಲಾಗಿಲ್ಲ)	13.32	10.74	9.06	24.06	17.81	36.88

ಟಿಪ್ಪಣಿಗಳು

1. ಕಂಪನಿಯ ಪ್ರಮುಖ ಸ್ವತಂತ್ರ ಹಣಕಾಸು ಮಾಹಿತಿಯನ್ನು ಕೆಳಗೆ ನೀಡಲಾಗಿದೆ:

(ಮಿಲಿಯನ್‌ಗಳಲ್ಲಿ ರೂಪಾಯಿಗಳು)

ಕ್ರಮ ಸಂಖ್ಯೆ	ವಿವರಗಳು	ತ್ರೈಮಾಸಿಕ ಕೊನೆಗೊಂಡಾಗ			ಅರ್ಧ ವರ್ಷದ ಕೊನೆಗೊಂಡಾಗ		ವರ್ಷ ಮುಗಿದಾಗ
		30.09.2025	30.06.2025	30.09.2024	30.09.2025	30.09.2024	31.03. 2025
		ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಲೆಕ್ಕಪರಿಶೋಧನೆ ಮಾಡದ	ಪರಿಶೋಧಿಸಲಾಗಿದೆ
1	ಒಟ್ಟು ಆದಾಯ / ಕಾರ್ಯಾಚರಣೆಗಳಿಂದ ಆದಾಯ	1453.06	1,237.22	1,055.53	2690.28	2,023.15	3,980.05
2	ತೆರಿಗೆಗೆ ಮುಂಚಿನ ಲಾಭ	434.04	365.25	350.81	799.29	601.68	1128.59
3	ತೆರಿಗೆಯ ನಂತರದ ಲಾಭ	323.19	273.13	277.08	596.32	464.50	919.93
4	ಒಟ್ಟು ಸಮಗ್ರ ಆದಾಯ	327.70	266.19	273.39	593.89	457.52	914.53

2. 30 ಸೆಪ್ಟೆಂಬರ್ 2025ಕ್ಕೆ ಕೊನೆಗೊಳ್ಳುವ ತ್ರೈಮಾಸಿಕ ಮತ್ತು ಅರ್ಧವರ್ಷದ ಸಲುವಾಗಿ ಪರಿಷ್ಕರಿಸಿರದ ಈ ಮೇಲಿನ ಸಂಯೋಜಿತ ಮತ್ತು ಸ್ವತಂತ್ರ ಆರ್ಥಿಕ ಫಲಿತಾಂಶಗಳು ಅಡಿಟ್ ಕಮಿಟಿಯಿಂದ ಪುನರಾವಲೋಕನೆ ಮಾಡಲ್ಪಟ್ಟಿದೆ ಮತ್ತು ಆ ಬಳಿಕ ನಿರ್ದೇಶಕರ ಮಂಡಳಿಯಿಂದ ನವೆಂಬರ್ 03, 2025 ರಂದು ಜರಗಿದ ಅವರ ಸಭೆಯಲ್ಲಿ ಅಂಗೀಕರಿಸಲ್ಪಟ್ಟಿದೆ.
3. ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) ನಿಯಮಗಳು, 2015 ರ ನಿಯಮಾವಳಿ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್ ಗಳಿಗೆ ಸಲ್ಲಿಸಲಾದ ಪರಿಶೋಧಿಸಿರದ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಹಣಕಾಸು ಫಲಿತಾಂಶಗಳ ಸಾರ ಮೇಲೆ ನೀಡಲಾಗಿದೆ. ವಿವರವಾದ ಲೆಕ್ಕಪರಿಶೋಧನೆಯಿಲ್ಲದ ತ್ರೈ ಮಾಸಿಕ ಹಣಕಾಸು ಫಲಿತಾಂಶಗಳು ಬಿಎಸ್‌ಇ ಲಿಮಿಟೆಡ್ ವೆಬ್‌ಸೈಟ್ www.bseindia.com ನಲ್ಲಿ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ವೆಬ್ ಸೈಟ್ www.nseindia.com ನಲ್ಲಿ ಮತ್ತು ಕಂಪೆನಿಯ ವೆಬ್‌ಸೈಟ್ www.sjsindia.com ನಲ್ಲಿಯೂ ಲಭ್ಯವಿದೆ.

ಎಸ್.ಜೆ.ಎಸ್. ಎಂಟರ್‌ಪ್ರೈಸಸ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಕೆ ಎ ಜೋಸೆಫ್
ಮ್ಯಾನೇಜಿಂಗ್ ಡೈರೆಕ್ಟರ್
ಡಿನ್: 00784084

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 03, 2025

CONCEPT

ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಲಿಮಿಟೆಡ್ ಪರವಾಗಿ

BLUESTONE

(ಈ ಹಿಂದೆ ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಪ್ರೈವೇಟ್ ಮಿಟೆಡ್ ಎಂದು ಕರೆಯಲಾಗುತ್ತಿತ್ತು)
CIN: L72900KA2011PLC059678
ನೋಂದಾಯಿತ ಕಚೇರಿ : ಸೈಟ್ ಸಂ. 89/2 ಲವ ಕುಷ ಆರ್ಕೇಡ್, ಮುನ್ನೇಕೊಳಲು ಗ್ರಾಮ, ಹೊರ ವರ್ತುಲ ರಸ್ತೆ, ಮಾರತ್ತಹಳ್ಳಿ, ಬೆಂಗಳೂರು- 560037 **ದೂರವಾಣಿ:** +9122 4515 2729 **ವೆಬ್‌ಸೈಟ್:** www.bluestone.com

2025 ರ ಸೆಪ್ಟೆಂಬರ್ 30 ಕ್ಕೆ ಕೊನೆಗೊಂಡ ತ್ರೈಮಾಸಿಕ ಹಾಗೂ ಅರ್ಧ ವರ್ಷದ ಪ್ರತ್ಯೇಕ ಮತ್ತು ಕ್ರೋಢೀಕರಿಸಿದ ಆಡಿಟ್ ಮಾಡಿಲ್ಲದ ಹಣಕಾಸು ಫಲಿತಾಂಶಗಳ ಸಾರ

(ವಿಭಿನ್ನವಾಗಿ ಉಲ್ಲೇಖಿಸದ ಹೊರತು ಎಲ್ಲ ಮೊತ್ತಗಳು ಮಿಲಿಯನ್ ರೂ. ಯಲ್ಲಿ ಇರುತ್ತದೆ)

ವಿವರಗಳು	ಪ್ರತ್ಯೇಕ ಫಲಿತಾಂಶಗಳು						ಕ್ರೋಢೀಕೃತ ಫಲಿತಾಂಶಗಳು					
	ಮುಕ್ತಾಯಗೊಂಡ ತ್ರೈಮಾಸಿಕ			ಅರ್ಧ ವರ್ಷದ ಮುಕ್ತಾಯಕ್ಕೆ		ಮುಕ್ತಾಯಗೊಂಡ ವರ್ಷ	ಮುಕ್ತಾಯಗೊಂಡ ತ್ರೈಮಾಸಿಕ			ಅರ್ಧ ವರ್ಷದ ಮುಕ್ತಾಯಕ್ಕೆ		ಮುಕ್ತಾಯಗೊಂಡ ವರ್ಷ
	30-09-2025 (ಆಡಿಟ್ ಮಾಡಿಲ್ಲದ)	30-06-2025 (ಆಡಿಟ್ ಮಾಡಿಲ್ಲದ)	30-09-2024 (ಆಡಿಟ್ ಮಾಡಿಲ್ಲದ)	30-09-2025 (ಆಡಿಟ್ ಮಾಡಿಲ್ಲದ)	30-09-2024 (ಆಡಿಟ್ ಮಾಡಿಲ್ಲದ)	31-03-2025 (ಆಡಿಟ್ ಮಾಡಿದ)	30-09-2025 (ಆಡಿಟ್ ಮಾಡಿಲ್ಲದ)	30-06-2025 (ಆಡಿಟ್ ಮಾಡಿಲ್ಲದ)	30-09-2024 (ಆಡಿಟ್ ಮಾಡಿಲ್ಲದ)	30-09-2025 (ಆಡಿಟ್ ಮಾಡಿಲ್ಲದ)	30-09-2024 (ಆಡಿಟ್ ಮಾಡಿಲ್ಲದ)	31-03-2025 (ಆಡಿಟ್ ಮಾಡಿದ)
ಕಾರ್ಯಾಚರಣೆಗಳಿಂದ ಒಟ್ಟು ಆದಾಯ (ಇತರ ಆದಾಯವೂ ಸೇರಿದಂತೆ)	5,246.16	5,044.65	3,840.84	10,290.81	7,432.75	18,299.20	5,252.85	5,047.40	3,840.84	10,300.25	7,432.75	18,300.36
ಅವಧಿಗೆ ನಿವ್ವಳ ಲಾಭ/ (ನಷ್ಟ) (ತೆರಿಗೆ, ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳಿಗೂ ಮೊದಲು)	(491.09)	(327.88)	(844.71)	(818.97)	(1,436.92)	(2,192.14)	(521.02)	(347.45)	(844.71)	(868.47)	(1,436.92)	(2,218.37)
ತೆರಿಗೆಗೂ ಮೊದಲು ಅವಧಿಗೆ ನಿವ್ವಳ ಲಾಭ / (ನಷ್ಟ) (ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳ ನಂತರ)	(491.09)	(327.88)	(844.71)	(818.97)	(1,436.92)	(2,192.14)	(521.02)	(347.45)	(844.71)	(868.47)	(1,436.92)	(2,218.37)
ತೆರಿಗೆ ನಂತರ ಅವಧಿಗೆ ನಿವ್ವಳ ಲಾಭ / (ನಷ್ಟ) (ವಿಶೇಷ ಮತ್ತು/ಅಥವಾ ವಿಶಿಷ್ಟ ಐಟಮ್‌ಗಳ ನಂತರ)	(491.09)	(327.88)	(844.71)	(818.97)	(1,436.92)	(2,192.14)	(521.02)	(347.45)	(844.71)	(868.47)	(1,436.92)	(2,218.37)
ಅವಧಿಗೆ ಒಟ್ಟು ಸಮಗ್ರ ಆದಾಯ [ಅವಧಿಗೆ (ತೆರಿಗೆ ನಂತರ) ಸಂಯೋಜಿತ ಲಾಭ/ (ನಷ್ಟ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	(488.27)	(329.90)	(846.73)	(818.17)	(1,439.49)	(2,200.24)	(518.20)	(349.47)	(846.73)	(867.67)	(1,439.49)	(2,226.47)
ಈಕ್ವಿಟಿ ಷೇರು ಬಂಡವಾಳ	151.32	35.23	32.54	151.32	32.54	35.23	151.32	35.23	32.54	151.32	32.54	35.23
ಈ ಹಿಂದಿನ ವರ್ಷ ಆಡಿಟ್ ಮಾಡಿದ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿದಂತೆ ಮೀಸಲುಗಳು (ಮರುಮೌಲ್ಯಮಾನಪನ ಮೀಸಲು ಹೊರತುಪಡಿಸಿ)						8,836.88						8,771.18
ಪ್ರತಿ ಷೇರಿಗೆ ಗಳಿಕೆ (ತಲಾ ರೂ. 1 ರ ಮುಖ ಮೌಲ್ಯ) (ವಾರ್ಷಿಕಗೊಳಿಸಿಲ್ಲದ)												
1. ಪ್ರಾಥಮಿಕ:	(3.52)	(9.31)	(33.50)	(9.34)	(66.15)	(78.86)	(3.73)	(9.86)	(33.50)	(9.90)	(66.15)	(79.74)
2. ಡಿಲ್ಯೂಟೆಡ್:	(3.52)	(9.31)	(33.50)	(9.34)	(66.15)	(78.86)	(3.73)	(9.86)	(33.50)	(9.90)	(66.15)	(79.74)

ಟಿಪ್ಪಣಿ:

ಎ) ಲೆಕ್ಕಪರಿಶೋಧನೆ ಮಾಡದ ಕ್ರೋಢೀಕೃತ ಮತ್ತು ಪ್ರತ್ಯೇಕಿಸಿದ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದ್ದು, ನಂತರ 2025 ರ ನವೆಂಬರ್ 04 ರಂದು ನಡೆದ ಸಭೆಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯು ಅನುಮೋದಿಸಿದೆ.
ಬಿ) ಕಂಪನಿಯ ಕ್ರೋಢೀಕೃತ ಮತ್ತು ಪ್ರತ್ಯೇಕಿಸಿದ ಆರ್ಥಿಕ ಫಲಿತಾಂಶಗಳನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 133 ರ ಅಡಿಯಲ್ಲಿ ಸೂಚಿಸಲಾದ ಕಂಪನಿಗಳ (ಭಾರತೀಯ ಲೆಕ್ಕಪತ್ರ ಮಾನದಂಡಗಳು) ನಿಯಮಗಳು, 2015 ರ (ತಿದ್ದುಪಡಿ ಮಾಡಿದಂತೆ) (Ind AS) ಮತ್ತು ಅನ್ವಯವಾಗುವ ಮಟ್ಟಿಗೆ ಇತರ ಮಾನ್ಯತೆ ಪಡೆದ ಲೆಕ್ಕಪತ್ರ ಮಾನದಂಡಗಳ ಅಭ್ಯಾಸಗಳು ಮತ್ತು ನೀತಿಗಳ ಪ್ರಕಾರ ಸಿದ್ಧಪಡಿಸಲಾಗಿದೆ.
ಸಿ) ಮೇಲೆ ನೀಡಲಾಗಿರುವ ಮಾಹಿತಿ ಸೆಬಿ (ಲಿಸ್ಟಿಂಗ್ ಮತ್ತು ಇತರ ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳು, 2015 ರ ನಿಯಂತ್ರಣ 33 ರ ಅಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ವಿವರವಾದ ಸ್ವರೂಪದ ಸಾರಾಂಶವಾಗಿದೆ. ತ್ರೈಮಾಸಿಕ ಆರ್ಥಿಕ ಫಲಿತಾಂಶಗಳ ಸಂಪೂರ್ಣ ಸ್ವರೂಪವು ಕಂಪನಿಯ ವೆಬ್‌ಸೈಟ್ www.bluestone.com ನಲ್ಲಿ ಮತ್ತು BSE (www.bseindia.com) ಮತ್ತು NSE (www.nseindia.com) ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ.

ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಲಿಮಿಟೆಡ್ ಪರವಾಗಿ
(ಈ ಹಿಂದೆ ಬ್ಲೂಸ್ಟೋನ್ ಜ್ಯುವೆಲ್ಲರಿ ಅಂಡ್ ಲೈಫ್‌ಸ್ಟೈಲ್ ಪ್ರೈವೇಟ್ ಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸಹಿ/-
ಗೌರವ್ ಸಿಂಗ್ ಕುಶ್ವಾಹ
ವ್ಯವಸ್ಥಾಪಕ ನಿರ್ದೇಶಕ

ಸ್ಥಳ: ಮುಂಬೈ
ದಿನಾಂಕ: 2025 ರ ನವೆಂಬರ್ 04

CONCEPT

ನಿಂತಿದ್ದ ಕಾರಿಗೆ ಕ್ಯಾಂಟರ್ ಡಿಕ್ಕಿ: ಡ್ಯಾನ್ಸರ್ ಸಾವು

ಬೆಂಗಳೂರು: ನಿಂತಿದ್ದ ಕಾರಿಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಡ್ಯಾನ್ಸರ್ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ನೆಲಮಂಗಲ ತಾಲೂಕಿನ ಪೆಮ್ಮನಹಳ್ಳಿ ಬಳಿ ನಡೆದಿದೆ. ಸುಧೀಂದ್ರ ಮೃತ ಡ್ಯಾನ್ಸರ್. ಸುಧೀಂದ್ರ ಸೋಮವಾರವಷ್ಟೇ ಹೊಸ ಮಾರುತಿ ಸುಜುಕಿ ಎಕೋ ಕಾರು ಡೆಲಿವರಿ ಪಡೆದಿದ್ದರು. ಮಂಗಳವಾರ ರಸ್ತೆ ಮಧ್ಯೆ ಕಾರು ಕೆಟ್ಟು ನಿಂತಿದ್ದರಿಂದ ಪರೀಕ್ಷಿಸಲು ಕಾರಿನಿಂದ ಕೆಳಗಿಳಿದ ವೇಳೆ ಕ್ಯಾಂಟರ್ ಲಾರಿ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಸ್ಥಳದಲ್ಲೇ ಸುಧೀಂದ್ರ ಮೃತಪಟ್ಟಿದ್ದಾರೆ. ನೆಲಮಂಗಲ ತಾಲೂಕಿನ ತ್ಯಾಮಗೊಂಡ್ಲು ನಿವಾಸಿ ಸುಧೀಂದ್ರ, ಕನ್ನಡದ ಸೈ ಡ್ಯಾನ್ಸ್ ಶೋ ಸೇರಿದಂತೆ ವಿವಿಧ ರಿಯಾಲಿಟಿ ಶೋಗಳಲ್ಲಿ ಭಾಗಿಯಾಗಿದ್ದರು. ಅಲ್ಲದೇ ಡಾಬಸ್ ಪೇಟೆಯಲ್ಲಿ ಡ್ಯಾನ್ಸ್ ತರಗತಿ ನಡೆಸಿ ನೂರಾರು ಯುವಕ, ಯುವತಿಯರಿಗೆ ಮಕ್ಕಳಿಗೆ ತರಬೇತಿ ನೀಡುತ್ತಿದ್ದರು. ದಾಬಸ್ ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಹಿಳೆಗೆ ಲೈಂಗಿಕ ಕಿರುಕುಳ

ಬೆಂಗಳೂರು: ನಾಯಿಯನ್ನು ವಾಕಿಂಗ್ ಕರೆದೊಯ್ದಿದ್ದ 33 ವರ್ಷದ ಮಹಿಳೆಯೊಬ್ಬರಿಗೆ ಅಪರಿಚಿತ ವ್ಯಕ್ತಿಯೊಬ್ಬ ಸಾರ್ವಜನಿಕವಾಗಿ ಲೈಂಗಿಕ ಕಿರುಕುಳ ನೀಡಿರುವ ಆಘಾತಕಾರಿ ಘಟನೆ ನಡೆದಿದೆ. ನವೆಂಬರ್ 1 ರಂದು, ಬೆಳಿಗ್ಗೆ ಸುಮಾರು 11. 57ಕ್ಕೆ, ಮಹಿಳೆಯು ಇಂದಿರಾನಗರದಂತಹ ಪ್ರತಿಷ್ಠಿತ ಬಡಾವಣೆಯಲ್ಲಿ ತಮ್ಮ ಸಾಕು ನಾಯಿಯೊಂದಿಗೆ ವಾಕಿಂಗ್‌ನಲ್ಲಿದ್ದರು. ಈ ವೇಳೆ, ಸುಮಾರು 30 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯೊಬ್ಬ 'ಮೇಡಂ' ಎಂದು ಕೂಗಿ ಅವರ ಗಮನ ಸೆಳೆದಿದ್ದಾನೆ. ಮಹಿಳೆ ಹಿಂತಿರುಗಿ ನೋಡಿದಾಗ, ಆತ ಸಾರ್ವಜನಿಕವಾಗಿಯೇ ತನ್ನ ಅಸಭ್ಯತನ ಪ್ರದರ್ಶಿಸಿ, ಹಸ್ತಮೈಥುನ ಮಾಡಿಕೊಳ್ಳಲು ಆರಂಭಿಸಿದ್ದಾನೆ. ಈ ಅನಿರೀಕ್ಷಿತ ಘಟನೆಯಿಂದ ಆಘಾತಕ್ಕೊಳಗಾದ ಮಹಿಳೆ ತಕ್ಷಣವೇ ನಾಯಿಯೊಂದಿಗೆ ಮನೆಗೆ ಓಡಿ ಹೋಗಿದ್ದಾರೆ. ನಂತರ, ನಡೆದ ಘಟನೆಯನ್ನು ತಮ್ಮ ಸಹೋದರಿ ಹಾಗೂ ಸ್ನೇಹಿತರಿಗೆ ತಿಳಿಸಿ, ಅವರ ಸಹಾಯದಿಂದ ಪೊಲೀಸರಿಗೆ ದೂರು ನೀಡಿದ್ದಾರೆ. ಆರೋಪಿಯು ಉದ್ದೇಶಪೂರ್ವಕವಾಗಿಯೇ ತನ್ನ ಮಾನಭಂಗ ಮಾಡಲು ಯತ್ನಿಸಿದ್ದಾನೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಆರೋಪಿಗೆ ಶೋಧ: ಸಂತ್ರಸ್ತೆಯ ದೂರಿನ ಅನ್ವಯ, ಇಂದಿರಾನಗರ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 75ರ ಅಡಿಯಲ್ಲಿ ಲೈಂಗಿಕ ಕಿರುಕುಳ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾ ವಳಿಪರಿಶೀ ಲಿಸಲಾಗುತ್ತಿದ್ದು, ಆರೋಪಿಯನ್ನು ಗುರುತಿಸಿ, ಬಂಧಿಸಲು ತನಿಖೆ ಚುರುಕುಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಸಮಾಚಾರ ಸಣ್ಣದಲ್ಲ

ಕಬ್ಬಿಗೆ ಸೂಕ್ತ ಬೆಲೆ ನೀಡಿ: ಛಲವಾದಿ

ಬೆಂಗಳೂರು: ಸರಕಾರದ ಕೆಟ್ಟ ನಡೆ ವಿರೋಧಿಸಲು ಇಡೀ ರಾಜ್ಯದಲ್ಲಿ ರೈತರು ಮುಂದಾಗಿದ್ದು, ರೈತರ ಪರವಾಗಿ ಬಿಜೆಪಿ ನಿಲ್ಲುತ್ತದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಮೊದಲಿನಿಂದಲೂ ರೈತಪರ ನಿಲುವನ್ನು ತೆಗೆದುಕೊಂಡಿದೆ. ಕಾಂಗ್ರೆಸಿನ ರೈತವಿರೋಧಿ ನೀತಿ ಖಂಡಿಸುವುದಲ್ಲದೇ ವಿರೋಧಿಸುತ್ತೇವೆ. ಅತಿವೃಷ್ಟಿ ಆದಾಗ ಎಲ್ಲರಿಗಿಂತ ಮೊದಲು ನಾವೇ ಹೋಗಿದ್ದೇವೆ. ನಾವು ಹೋಗುವ ವರೆಗೆ ಸರಕಾರ ಎಚ್ಚತ್ತುಕೊಂಡಿರಲಿಲ್ಲ ಎಂದರು. ಸರಕಾರ ತಕ್ಷಣ ಕಬ್ಬು ಬೆಳೆಗೆ ಬೆಲೆ ನಿಗದಿಪಡಿಸಬೇಕು. ಹಳೆಯ ಬಾಕಿ ಸಿಗದೇ ರೈತರು ಕಂಗಾಲಾಗಿದ್ದು, ಅದನ್ನು ವಾಪಸ್ ಕೊಡಿಸಬೇಕು. ರೈತರ ಸಮಸ್ಯೆಗಿಂತ ನನ್ನ ಜನ್ಮ ದಿನಾಚರಣೆ ದೊಡ್ಡದಲ್ಲ ಎಂದು ವಿಜಯೇಂದ್ರ ಅವರು ಹೇಳಿದ್ದಾರೆ. ರೈತರ ಸಮಸ್ಯೆ ಪರಿಹಾರವೇ ಮುಖ್ಯ. ಅಂಥದ್ದೇನಾದರೂ ಆದರೆ, ಜನ್ಮ ದಿನಾಚರಣೆ ಮಾಡಿಕೊಳ್ಳದೇ ಇಲ್ಲೇ ಇರುವುದಾಗಿ ಹೇಳಿದ್ದಾರೆ ಎಂದರು.

ಇಂದು ಕಾನೂನು ವಿವಿ ಘಟಿಕೋತ್ಸವ

ಹುಬ್ಬಳ್ಳಿ: ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವವನ್ನು ನ.5ರಂದು ಬೆಳಗ್ಗೆ 11.30ಕ್ಕೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಾಭಿವೃದ್ಧಿ ಕೇಂದ್ರ ದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವಿವಿ ಕುಲಪತಿ ಪ್ರೊ.ಸಿ.ಬಸವರಾಜು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘಟಿಕೋತ್ಸವದಲ್ಲಿ 4,053 ವಿದ್ಯಾರ್ಥಿಗಳು, 3,663 ವಿದ್ಯಾರ್ಥಿನಿಯರು ಸೇರಿ 7,716 ಪದವೀಧರರಿಗೆ ಪದವಿ ಪ್ರಮಾಣ ಪತ್ರ ನೀಡಲಾಗುವುದು. ಪ್ರತಿ ಕೋರ್ಸ್‌ಗೆ ಒಂದರಂತೆ ವಿವಿಯಿಂದ 20 ಮತ್ತು ದಾನಿಗಳಿಂದ 8 ಚಿನ್ನದ ಪದಕ ಪ್ರದಾನ ಮಾಡಲಾಗುವುದು. 29 ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಏಳು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುವುದು. ಇಬ್ಬರಿಗೆ ಪಿಎಚ್.ಡಿ ಪ್ರದಾನ ಮಾಡಲಾಗುವುದು. ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ ಸೇರಿ 150 ವಿದ್ಯಾರ್ಥಿಗಳಿಗೆ ರ‍್ಯಾಂಕ್ ಪ್ರಮಾಣಪತ್ರ ನೀಡಲಾಗುವುದು ಎಂದರು.

ವಿಜಯಪುರದಲ್ಲಿ ಭೂಕಂಪನ

ವಿಜಯಪುರ: ನ.4ರಂದು ಬೆಳಗ್ಗೆ 7:49ರ ಸುಮಾರಿಗೆ ವಿಜಯಪುರದಲ್ಲಿ 3.2 ತೀವ್ರತೆಯ ಭೂಕಂಪ ಸಂಭವಿಸಿದೆ. ಕಳೆದ ಎರಡು ತಿಂಗಳಲ್ಲಿ ಇದು 13ನೇ ಬಾರಿ ಭೂಮಿ ಕಂಪಿಸಿದ್ದು, ಜನರಲ್ಲಿ ಆತಂಕ ಮೂಡಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಪ್ರಕಾರ, ಭೂಕಂಪವು 5 ಕಿ.ಮೀ ಆಳದಲ್ಲಿ ಸಂಭವಿಸಿದೆ. ಅ.21ರಂದು ಯರನಾಳ ಗ್ರಾಮದ ಬಳಿ 2.9 ತೀವ್ರತೆಯ ಭೂಕಂಪ ದಾಖಲಾಗಿತ್ತು. ಆಗಲೂ ಜನರು ಬೆಚ್ಚಿಬಿದ್ದು ಮನೆಯಿಂದ ಹೊರಗೆ ಓಡಿಬಂದಿದ್ದರು. ಆನಂತರ, ನೆಲದಿಂದ ದೊಡ್ಡ ಶಬ್ದ ಕೇಳುವುದು ಮತ್ತು ಭೂಮಿ ನಡುಗುವ ಅನುಭವ ಪದೇ ಪದೇ ಆಗುತ್ತಲೇ ಇದೆ.

ದಲಿತರು ಮುಖ್ಯಮಂತ್ರಿ ಆಗಬೇಕು: ಜಿಗಜಿಣಗಿ

ವಿಜಯಪುರ: ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ದಲಿತರು ಸಿಎಂ ಆಗಿಲ್ಲ, ದಲಿತರೇನು ಕೇವಲ ಕಸ ಹೊಡೆಯುತ್ತಲೇ ಇರಬೇಕಾ? ಎಂದು ಸಂಸದ ರಮೇಶ ಜಿಗಜಿಣಗಿ ಮತ್ತೊಮ್ಮೆ ದಲಿತ ಮುಖ್ಯಮಂತ್ರಿ ಕೂಗನ್ನು ಬಲಗೊಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತ ನಾಡಿ, ದಲಿತರು ಎಂದೋ ಸಿಎಂ ಆಗಬೇಕಿತ್ತು. ಅನೇಕ ರಾಜ್ಯಗಳಲ್ಲಿ ಸಿಎಂ ಸ್ಥಾನವನ್ನು ದಲಿತರು ಅಲಂಕರಿಸಿದ್ದಾರೆ, ನಮ್ಮ ರಾಜ್ಯದಲ್ಲಿ ಇನ್ನೂ ಆಗಿಲ್ಲ, ಈ ಕಾಂಗ್ರೆಸ್‌ನವರಿಗೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಮಾಡಲು ಏನು ಧಾಡಿ? ಎಂದು ಖಾರವಾಗಿಯೇ ಜವಾರಿ ಶೈಲಿಯಲ್ಲಿಯೇ ಪ್ರಶ್ನಿಸಿ ದರು. ಕಾಂಗ್ರೆಸ್ ಆಗಿರಲಿ, ಬಿಜೆಪಿ ಆಗಿರಲಿ ಯಾವ ಪಕ್ಷದಿಂದ ಆಗುತ್ತಾರೋ ಆಗಲಿ, ಬಿಜೆಪಿಯವರು ದಲಿತರನ್ನು ಸಿಎಂ ಮಾಡಲಿ, ಆಗ ಜನ ಪುರಸ್ಕರಿಸು ತ್ತಾರೆ, ಇಲ್ಲವಾದರೆ ತೆಗಳುವುದು ತಪ್ಪುವುದಿಲ್ಲ. ರಾಜ್ಯಕ್ಕೆ ದಲಿತ ಸಿಎಂ ಆಗುವುದು ಶತಸಿದ್ಧ, ಇಂದು ಆಗುತ್ತಾರೋ, ನಾಳೆ ಆಗುತ್ತಾರೋ, ಬಿಜೆಪಿಯಿಂದ ಆಗುತ್ತಾರೋ, ಕಾಂಗ್ರೆಸ್‌ನಿಂದ ಆಗುತ್ತಾರೋ ಒಟ್ಟಾರೆಯಾಗಿ ಆಗುತ್ತಾರೆ ಎಂದು ಭವಿಷ್ಯ ನುಡಿದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
05.11.2025
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ

ಮೇಜರ್ ಗಣಪತಿ ಹೆಗಡೆ
ವಿಷಯ
ಅಗ್ನಿವೀರ್ ತರಬೇತಿ
vishwavani.news

ತೀವ್ರ ಸ್ವರೂಪ ಪಡೆದ ಕಬ್ಬು ಬೆಳೆಗಾರರ ಹೋರಾಟ | ನಡು ರಸ್ತೆಯಲ್ಲೇ ಅಡುಗೆ, ಊಟ, ನಿದ್ರೆ

ಬೆಳಗಾವಿ ಜಿಲ್ಲೆಯಾದ್ಯಂತ ಕಬ್ಬಿನ ಕಿಚ್ಚು

ಮೂಡಲಗಿ: ಗುರ್ಲಾಪುರ ಕ್ರಾಸ್ ನಲ್ಲಿ ಪ್ರಾರಂಭವಾದ ಕಬ್ಬು ಬೆಳೆಗಾರರ ಪ್ರತಿಭಟನೆ ಕಿಚ್ಚು ಬೆಳಗಾವಿ ಜಿಲ್ಲೆಯಾದ್ಯಂತ ವ್ಯಾಪಿಸಿದೆ. ಬೈಲಹೊಂಗಲ, ಅಥಣಿ, ಹುಕ್ಕೇರಿ, ರಾಯಬಾಗ, ಯರಗಟ್ಟಿ, ಬೆಳಗಾವಿ ನಗರ ಸೇರಿದಂತೆ ವಿವಿಧ ತಾಲೂಕುಗಳಲ್ಲಿ ರಸ್ತೆ ತಡೆ ನಡೆಸಿರುವ ರೈತರು ಅಹೋರಾತ್ರಿ ಧರಣಿ ಸತ್ಯಾಗ್ರಹ ಹಮ್ಮಿಕೊಂಡಿದ್ದಾರೆ. ನಡು ರಸ್ತೆಯಲ್ಲಿ ಅಡುಗೆ ಮಾಡುವ ಮೂಲಕ ತಮ್ಮ ಆಕ್ರೋಶ ಹೊರಹಾಕುತ್ತಿದ್ದಾರೆ.

ವಿದ್ಯಾರ್ಥಿಗಳು, ವಕೀಲರ ಬೆಂಬಲ: ಪ್ರತಿ ಟನ್ ಕಬ್ಬಿಗೆ 3,500 ರು. ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ರೈತರು ನಡೆಸುತ್ತಿರುವ ಪ್ರತಿಭಟನೆಗೆ ಮಠಾಧೀಶರು, ವಿದ್ಯಾರ್ಥಿಗಳು, ವಕೀಲರು, ಮಾಜಿ ಸೈನಿಕರು ಬೆಂಬಲ ವ್ಯಕ್ತಪಡಿಸಿದ್ದು, ಪ್ರತಿಭಟನೆಯು ತೀವ್ರ ಸ್ವರೂಪ ಪಡೆದುಕೊಂಡಿದೆ. ಪ್ರತಿ ಟನ್‌ಗೆ 3,200 ರು. ನೀಡುವ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆಯನ್ನು ತಿರಸ್ಕರಿಸಿದ್ದಾರೆ. ಕಳೆದ 6 ದಿನಗಳಿಂದ ರೈತರು ಬಿರುಸಿನ ಗಾಳಿಯಲ್ಲೂ, ಚಳಿಯಲ್ಲೂ ಅಹೋರಾತ್ರಿ ಕುಳಿತು ಹೋರಾಟ ನಡೆಸುತ್ತಿದ್ದಾರೆ. ಕೆಲವರು ಸ್ಥಳದಲ್ಲೇ ಅಡುಗೆ, ಊಟ, ನಿದ್ದೆ ಮಾಡುತ್ತಾ ಹೋರಾಟ ಮುಂದುವರಿಸುತ್ತಿದ್ದಾರೆ. ಗೋಕಾಕ್ ಪಟ್ಟಣದಲ್ಲಿ, ವಿದ್ಯಾರ್ಥಿಗಳು ರೈತರೊಂದಿಗೆ ಸೇರಿ ಪ್ರಮುಖ ರಸ್ತೆಗಳ ತಡೆಹಿಡಿದರು. ಬೆಳಗಾವಿ, ಸವದತ್ತಿ, ಮೂಡಲಗಿ ಮತ್ತು ಯರಗಟ್ಟಿಯನ್ನು ಸಂಪರ್ಕಿಸುವ ಪ್ರಮುಖ ಮಾರ್ಗಗಳಲ್ಲಿ ಸಂಚಾರ ಅಸ್ತವ್ಯಸ್ತಗೊಳ್ಳುವಂತಾಯಿತು. ಹಸಿರು ಬಾವುಟಗಳನ್ನು ಹಿಡಿದಿರುವ ರೈತರು, ರಾಜ್ಯ ಸರಕಾರ ಮತ್ತು ಸಕ್ಕರೆ ಕಾರ್ಖಾನೆ ಮಾಲೀಕರ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದಾರೆ. ಸರ್ಕಾರ ರೈತರ ಹಿತಾಸಕ್ತಿಗಳನ್ನು ನಿರ್ಲಕ್ಷಿಸಿದೆ ಎಂದು ಆರೋಪಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ನಿಪ್ಪಾಣಿ-ಮುಧೋಳ ರಾಜ್ಯ ಹೆದ್ದಾರಿಯ ಮೇಲೆ ನಡೆಯುತ್ತಿರುವ ರೈತರ ಪ್ರತಿಭಟನೆ ಸ್ಥಳಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು.

ವಿಜಯಪುರದಲ್ಲೂ ರೈತರ ಪ್ರತಿಭಟನೆ

ವಿಜಯಪುರ: ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಪಡಿಸುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರು ಬೃಹತ್ ಪ್ರತಿಭಟನೆ ನಡೆಸಿ ಅಹೋರಾತ್ರಿ ಧರಣಿ ಆರಂಭಿಸಿದ್ದಾರೆ. ನಗರದ ಗಾಂಧಿ ವೃತ್ತದಲ್ಲಿ ಜಮಾಯಿಸಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದ ಪ್ರತಿಭಟನಾಕಾರರು ರಸ್ತೆ ಬಂದ್ ಮಾಡಿ ರಸ್ತೆ ಮೇಲೆ ಕಬ್ಬು ಇಟ್ಟು ಆಕ್ರೋಶ ಹೊರಹಾಕಿದ್ದಾರೆ. ಬಸವೇಶ್ವರ ವೃತ್ತದ ಮಾರ್ಗವಾಗಿ ನಗರದ ಗಗನ್ಮಹಲ್ ಮುಂದುಗಡೆ ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸಿದ್ದಾರೆ. ಈ ವೇಳೆ ಮನಗೂಳಿ ಶ್ರೀ ಸಂಗನ ಬಸವ ಸ್ವಾಮೀಜಿ ಮಾತನಾಡಿ, ಪ್ರಕೃತಿ ವಿಕೋಪದ ನಡುವೆಯೂ ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೇ ರೈತರು ಸಾಕಷ್ಟು ನಷ್ಟ ಅನುಭವಿಸಿ ಪ್ರತಿ ಅರ್ಧ ಗಂಟೆಗೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಯಾವ ಜನಪ್ರತಿನಿಧಿಗಳೂ ಈ ಕುರಿತು ಧ್ವನಿ ಎತ್ತುತ್ತಿಲ್ಲ, ರೈತರಿಗೆ ಬೀಜ, ರಸಗೊಬ್ಬರ, ಕ್ರೀಮಿನಾಶಕ, ಕಾರ್ಮಿಕರ ವೇತನ ದಿನೇ ದಿನೆ ಹೆಚ್ಚಾಗಿ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗುತ್ತಿವೆ. ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ಪ್ರತಿ ಟನ್ ಕಬ್ಬಿಗೆ 3,500 ರು. ಘೋಷಣೆ ಮಾಡಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕು ಎಂದು ಆಗ್ರಹಿಸಿದರು.

> ಇಡೀ ದೇಶದಲ್ಲಿ ಎಫ್‌ಆರ್‌ಪಿ ದರ ಇರುವಂತದ್ದು, ಮಹಾರಾಷ್ಟ್ರದಲ್ಲಿ 3,400 ರು. ಕೊಡುತ್ತಾರೆ, ಆದರೆ ಇಲ್ಲಿ ಏನಾಗಿದೆ? ಇದು ಮುಖ್ಯಮಂತ್ರಿಗಳ ಕರ್ತವ್ಯ ಅಲ್ವಾ? ರೈತರ ಮೇಲೆ ಕಾಳಜಿ ಇರುವಂತಹ ಸರಕಾರವಾಗಿದ್ದರೆ ಕಾರ್ಖಾನೆಗಳು ಪ್ರಾರಂಭವಾಗುವಕ್ಕಿಂತ ಮುಂಚಿತವಾಗಿ ರೈತ ಮುಖಂಡರ ಹಾಗೂ ಕಾರ್ಖಾನೆ ಮಾಲೀಕರ ಸಭೆ ನಡೆಸಿ ದರ ನಿಗದಿ ಮಾಡಬೇಕಿತ್ತು.
> **- ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಬೆಂಬಲ: ಪ್ರತಿಭಟನಾ ಸ್ಥಳಕ್ಕೆ ಮಂಗಳವಾರ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ನೀಡಿ ರೈತರಿಗೆ ಬೆಂಬಲ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಅವರು, ಕಬ್ಬು ಬೆಳೆಗೆ ವೈಜ್ಞಾನಿಕ ಬೆಲೆಗೆ ಆಗ್ರಹಿಸಿ ರೈತರು ನಡೆಸುತ್ತಿರುವ ಹೋರಾಟದ ಮುಂದೆ ನನ್ನ ಹುಟ್ಟುಹಬ್ಬ ಆಚರಣೆ ಮುಖ್ಯವಾಗಲ್ಲ. ಈ ಬಾರಿ ಬೆಂಗಳೂರಿನಲ್ಲಿ ನನ್ನ ಹುಟ್ಟುಹಬ್ಬ ಆಚರಿಸಿಕೊಳ್ಳದೆ ರೈತರ ಪರ ನಿಂತು ಹೋರಾಟ ಮಾಡುತ್ತೇನೆ. ರೈತರು ಬೀದಿಗಿಳಿದು ಮಾಡುತ್ತಿರುವ ಹೋರಾಟದ ಕಿಚ್ಚು ಇಲ್ಲೇ ಆರಿಸುವಂತಹ ಕೆಲಸ ರಾಜ್ಯ ಸರಕಾರ ಮಾಡಬೇಕು, ಇಲ್ಲವಾದರೆ ಈ ಕಿಚ್ಚು ಇಡೀ ರಾಜ್ಯಾದ್ಯಂತ ಹರಡುತ್ತದೆ, ಅದಕ್ಕೆ ಅವಕಾಶ ಮಾಡಿಕೊಡದೆ ಈಗಲೇ ಎಚ್ಚೆತ್ತುಕೊಳ್ಳಬೇಕು ಎಂದು ಸರಕಾರಕ್ಕೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ರಾಯಬಾಗ ಶಾಸಕ ದುರ್ಯೋಧನ ಐಹೊಳೆ, ಮಾಜಿ ಶಾಸಕ ಪಿ. ರಾಜು, ವಿಶ್ವನಾಥ್ ಪಾಟೀಲ್, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ ನರೇಂದ್ರಸ್ವಾಮಿ

ಶಕ್ತಿಯಿಂದ ವಾಯು ಮಾಲಿನ್ಯ ನಿಯಂತ್ರಣ

ಬೆಳಗಾವಿಯಲ್ಲಿ ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ - ಪಿ. ಎಂ.ನರೇಂದ್ರಸ್ವಾಮಿ, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಶಾಸಕ ಆಸೀಫ್ ಶೇಠ್ ಸೇರಿದಂತೆ ಹಲವರು ಉದ್ಘಾಟಿಸಿದರು.

ವಿಶ್ವವಾಣಿ ಸುದ್ದಿಮನೆ ಹುಬ್ಬಳ್ಳಿ

ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಕೊಡುಗೆ ನೀಡಿದೆ ಎಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ ನರೇಂದ್ರಸ್ವಾಮಿ ತಿಳಿಸಿದರು.

ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ವಾಯು ಮಾಲಿನ್ಯ ತಡೆಯಲು ಸಾರ್ವಜನಿಕ ಸಾರಿಗೆ ಬಳಸುವುದು ಅನಿವಾರ್ಯ. ಈಗ ರಾಜ್ಯ ಸರಕಾರ ಶಕ್ತಿ ಯೋಜನೆಯಿಂದ ಮಹಿಳೆಯರು ಸಾರ್ವಜನಿಕ ವಾಹನ ಗಳನ್ನು ಬಳಸು ಆರಂಭಿಸಿದ್ದಾರೆ. ಇದರಿಂದ ವಾಯ ಮಾಲಿನ್ಯ ಸ್ವಲ್ಪವಾದರೂ ನಿಯಂತ್ರಣಕ್ಕೆ ಬಂದಿದೆ ಎಂದು ಹೇಳಿದರು.

ಕೈಗಾರಿಕೆಗಳಿಂದಲೂ ವಾಯು ಮಾಲಿನ್ಯ ಉಂಟಾಗುತ್ತಿದೆ. ಕೈಗಾರಿಕೆಗಳಿಂದ ಆಗುತ್ತಿರುವ ವಾಯು ಮಾಲಿನ್ಯದ ಬಗ್ಗೆ ಮಂಡಳಿ ಚಾಟಿ ಬೀಸಿದೆ. ಮಂಡಳಿಯು ಪ್ರತಿದಿನ ವಾಯು ಗುಣಮಟ್ಟ ಮಾಪನ ಮಾಡುತ್ತಿದೆ. ಮಾಲಿನ್ಯ ನಿಯಂತ್ರಣ ಮಾಡುವುದು ಕೇವಲ ಕಾಯಿದೆಯಿಂದ ಸಾಧ್ಯವಾಗುವುದಿಲ್ಲ. ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಾಧ್ಯವಿಲ್ಲ. ಜನರಿಗೆ ಈ ಬಗ್ಗೆ ಜಾಗೃತಿಯಾಗಬೇಕು. ಅದೇ ಕಾರಣಕ್ಕೆ ಸುವರ್ಣ ಮಹೋತ್ಸವವನ್ನು ಎಲ್ಲಾ ಕಾರ್ಯಕ್ರಮಗಳಂತೆ ಬೆಂಗಳೂರಿನಲ್ಲಿ ಮಾತ್ರ ಮಾಡದೆ ರಾಜ್ಯಾದ್ಯಂತ ರೂಪಿಸಲಾಗಿದೆ ಎಂದು ತಿಳಿಸಿದರು.

> ಉತ್ತಮ ಪರಿಸರ ಎಂದು ಪರಿಗಣಿಸಬೇಕಾದರೆ ಶೇ. 33ರಷ್ಟು ಅರಣ್ಯವಿರಬೇಕು. ಆದರೆ ನಮ್ಮ ದೇಶದಲ್ಲಿ ಅಂತ ಪರಿಸ್ಥಿತಿಯಿಲ್ಲ. ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ಮರಗಳ ಸಂಖ್ಯೆ ಕೂಡ ಏರಿಕೆಯಾಗಬೇಕು. ಉತ್ತಮವಾದ ಗಾಳಿ ಮತ್ತು ನೀರನ್ನು ಉಳಿಸದಿದ್ದರೆ ನಮ್ಮ ಮಕ್ಕಳಿಗೆ ನಾವೇ ಮಾರಕವಾಗುತ್ತೇವೆ. ಕೈಗಾರಿಕೆಗಳು ಹೆಚ್ಚಾಗುತ್ತಿವೆ. ಕೈಗಾರಿಕಾ ತ್ಯಾಜ್ಯ ಅಥವಾ ರಾಸಾಯನಿಕ ಯುಕ್ತ ನೀರು ನದಿಗಳನ್ನು ಸೇರುತ್ತಿದೆ. ಇದಲ್ಲದೆ ನಗರ ಮತ್ತು ಪಟ್ಟಣಗಳ ಕೊಳಚೆ ನೀರು ಕೂಡ ಕೆರೆ, ನದಿಗಳನ್ನು ಸೇರುತ್ತಿದೆ. ಇದರಿಂದಾಗುತ್ತಿರುವ ಜಲ ಮಾಲಿನ್ಯ ಅಪಾಯಕಾರಿ.
> - ಪಿ.ಎಂ.ನರೇಂದ್ರಸ್ವಾಮಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಹಾಲಿನ ಪಾಕೆಟ್‌ನಿಂದಲೂ ಪರಿಸರಕ್ಕೆ ಹಾನಿ

ಪ್ರತಿದಿನ 3.5 ಲಕ್ಷದಿಂದ 4 ಲಕ್ಷ ಹಾಲಿನ ಪಾಕೆಟ್ ಬಳಕೆ ಮಾಡಲಾಗುತ್ತದೆ. ಹಾಲಿನ ಪಾಕೆಟ್ ಅನ್ನು ಮೂಲೆಯಲ್ಲಿ ಕತ್ತರಿಸಿ ತುಣಕನ್ನು ಯಾವುದೇ ರೀತಿಯಲ್ಲಿ ಸಂಸ್ಕರಿಸದೆ ಎಸೆಯಲಾಗುತ್ತದೆ. ಅದು ಭೂಮಿ ಅಥವಾ ಪರಿಸರವನ್ನು ಸೇರುತ್ತಿದೆ. ಪ್ಲಾಸ್ಟಿಕ್ ಕೊಳೆಯುವ ಅಥವಾ ಕೊರೆಯುವ ಪದಾರ್ಥವಲ್ಲ. ಪ್ಲಾಸ್ಟಿಕ್ ಪ್ರಪಂಚಕ್ಕೆ ಮಾರಕ. ಈ ಅಪಾಯದಿಂದ ಪಾರಾಗಲು ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಎಂದು ನರೇಂದ್ರ ಸ್ವಾಮಿ ಹೇಳಿದರು.

ಕರ್ನಾಟಕವನ್ನು ವಿಶ್ವದಲ್ಲೇ ಕೌಶಲ್ಯಗಳಿಗೆ ಹೆಸರಾದ ರಾಜ್ಯವನ್ನಾಗಿಸುವ ಗುರಿ

ಸಂಡೂರಲ್ಲಿ ಕೌಶಲ್ಯ ವಿವಿ ಸ್ಥಾಪನೆ: ಸಿಎಂ

ಬೆಂಗಳೂರು: ನೂತನ ಕೌಶಲ್ಯ ವಿಶ್ವವಿದ್ಯಾಲಯವನ್ನು ಸಂಡೂರಿನಲ್ಲಿ ಸ್ಥಾಪಿಸಲಾ ಗುವುದು ಎಂದು ಮುಖ್ಯಮಂತ್ರಿ ಸಿದ್ದ ರಾಮಯ್ಯ ಹೇಳಿದರು.

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಬೆಂಗಳೂರು ಕೌಶಲ್ಯ ಶೃಂಗಸಭೆ ಉದ್ಘಾಟಿಸಿ ಮಾತನಾಡಿ, ಕರ್ನಾಟಕ ಇಂದು ಒಂದು ವಿಶಿಷ್ಟ ಜನ ಸಂಖ್ಯೆಯ ಹೊರಳು ಹಾದಿಯಲ್ಲಿದೆ.ನಮ್ಮ ಜನಸಂಖ್ಯೆಯ ಶೇ. 60 ಕ್ಕಿಂತ ಹೆಚ್ಚು ಜನರು 35 ವಯೋಮಾನದೊಳಗಿದ್ದಾರೆ. ಮುಂದಿನ ದಶಕದಲ್ಲಿ ಸುಮಾರು 1.2 ಕೋಟಿ ಯುವಕರು ಕಾರ್ಯಪಡೆ ಪ್ರವೇಶಿಸುತ್ತಾರೆ.

> 2032ರ ಹೊತ್ತಿಗೆ ಕರ್ನಾಟಕವನ್ನು ಒಂದು ಟ್ರಿಲಿಯನ್ ಡಾಲರ್ ಆರ್ಥಿಕತೆಯ ರಾಜ್ಯವನ್ನಾಗಿಸುವುದು ನಮ್ಮ ಗುರಿ. ಈ ಗುರಿಯನ್ನು ಸಾಧಿಸಲು ನಮಗಿರುವ ಪ್ರಬಲ ಅಸ್ತ್ರವೆಂದರೆ ನಮ್ಮ ಜನ - ಕೌಶಲ್ಯಭರಿತ, ಭವಿಷ್ಯಕ್ಕೆ ತಯಾರಾದ ಹಾಗೂ ನಾವೀನ್ಯತೆವುಳ್ಳ ಕಾರ್ಮಿಕಶಕ್ತಿ.
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

ಈ ಯುವಪೀಳಿಗೆಯನ್ನು ಸರಿಯಾದ ಕೌಶಲ್ಯ, ಮನಸ್ಥಿತಿ ಮತ್ತು ಆತ್ಮವಿಶ್ವಾಸದಿಂದ ಸಜ್ಜುಗೊಳಿಸಿದರೆ ಇದು ಅಸಾಧಾರಣ ಅವಕಾಶ. ಉದ್ಯಾನ ನಗರಿ ಎನ್ನುವ ಹೆಗ್ಗಳಿಕೆಯಿಂದ ಸ್ಟಾರ್ಟ್‌ಅಪ್ ರಾಜಧಾನಿಯಾಗಿ ರೂಪಾಂತರಗೊಂಡಿರುವ ಬೆಂಗಳೂರು ನಗರ ಈಗ ಭಾರತದ ಕೌಶಲ್ಯ ರಾಜಧಾನಿಯಾಗಿರುವುದು ಹೆಮ್ಮೆಯ ವಿಷಯ ಎಂದರು.

ಕರ್ನಾಟಕ ಕೌಶಲ್ಯಾಭಿವೃದ್ಧಿ ನೀತಿ 2025-32: ಕಳೆದ ವರ್ಷದ ಆಯವ್ಯಯ ದಲ್ಲಿ ಘೋಷಿಸಲಾಗಿದ್ದ ಕರ್ನಾಟಕ ಕೌಶಲ್ಯಾಭಿವೃದ್ಧಿ ನೀತಿ 2025-32 ನ್ನು ಇಂದು ಬೆಂಗಳೂರು ಸ್ಕಿಲ್ ಸಮಿಟ್ 2025 ಕಾರ್ಯಕ್ರಮದ ಮೂಲಕ ಕಾರ್ಯರೂಪಕ್ಕೆ ತರಲಾಗುತ್ತಿದೆ. ಈ 7 ವರ್ಷದ ಕಾರ್ಯತಂತ್ರದ ನೀಲನಕ್ಷೆಗೆ 4,432 ಕೋಟಿ ರೂ. ಅನುದಾನದ ಬೆಂಬಲ ನೀಡಲಾಗಿದ್ದು, ಕರ್ನಾಟಕವನ್ನು ಕೌಶಲ್ಯ ಭರಿತ ಹಾಗೂ ಭವಿಷ್ಯದ ಸವಾಲುಗಳಿಗೆ ಸನ್ನದ್ಧರಾಗಿಸುವುದು ಹಾಗೂ ಕಾರ್ಮಿಕ ಶಕ್ತಿಯ ಜಾಗತಿಕ ಕೇಂದ್ರವನ್ನಾಗಿ ರೂಪಿಸು ವುದು ನಮ್ಮ ಉದ್ದೇಶ. 2032 ಕ್ಕೆ ಸುಮಾರು 30 ಲಕ್ಷ ಯುವಕರಿಗೆ ಕೌಶಲ್ಯ ತರಬೇತಿ, ಐಟಿಐ ಗಳಲ್ಲಿ ಮಹಿಳೆಯರ ಪ್ರವೇಶವನ್ನು ಶೇ. 33 ಕ್ಕೆ ಹೆಚ್ಚಳ ಹಾಗೂ ಐಎಂಸಿಕೆ ದ ಮೂಲಕ ಜಾಗತಿಕ ಉದ್ಯೋಗಾವಕಾಶಗಳ ವೃದ್ಧಿಯನ್ನು ಸಾಧಿಸುವ ಗುರಿ ಹೊಂದಿರುವುದಾಗಿ ತಿಳಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾರ ಶರಣ ಪ್ರಕಾಶ್ ಪಾಟೀಲ್, ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು.

ಸಿಎಂ ಸಿದ್ದರಾಮಯ್ಯ ಅವರು ಕೌಶಲ್ಯ ಶೃಂಗಸಭೆ ಉದ್ಘಾಟಿಸಿದರು.

ಜಾಗತಿಕ ಮಟ್ಟಕ್ಕೆ ಕಾರ್ಮಿಕ ಶಕ್ತಿ

ಜಾಗತಿಕ ಮಟ್ಟಕ್ಕೆ ಕಾರ್ಮಿಕ ಶಕ್ತಿಯನ್ನು ಸಿದ್ದಪಡಿಸಲು ಕರ್ನಾಟಕ ಸ್ಕಿಲ್ ಒಲಂಪಿಕ್ಸ್ ಎಂಬ ಯೋಜನೆ ಹಮ್ಮಿಕೊಳ್ಳಲಾಗಿದೆ. ಕೌಶಲ್ಯ ಸ್ಪರ್ಧೆಯಲ್ಲಿ 48 ಪದಕಗಳನ್ನು ಪಡೆದು ಭಾರತದಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದಿದೆ ಹಾಗೂ 4 ಅಂತರಾಷ್ಟ್ರೀಯ ಪದಕ ತನ್ನದಾಗಿಸಿಕೊಂಡಿದೆ. ಐಟಿಐಗಳು ಹಾಗೂ ಜಿಟಿಟಿಸಿಗಳ ಮೂಲಕ ಸುಮಾರು 33,212 ಯುವಕರಿಗೆ ತರಬೇತಿ ನೀಡಲಾಗಿದ್ದು,. ಶಾಲಾ ಮಕ್ಕಳಿಗೆ ನನ್ನ ವೃತ್ತಿ, ನನ್ನ ಆಯ್ಕೆ ಕಾರ್ಯಕ್ರಮದಡಿ, 35000 ಮಕ್ಕಳಿಗೆ ತರಬೇತಿ ನೀಡಲಾಗಿದೆ. ಈ ವರ್ಷ, ಯೋಜನೆಯನ್ನು 500 ಶಾಲೆಗಳಿಗೆ ವಿಸ್ತರಿಸಿ 2.3 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿಯಿದೆ ಎಂದರು.

ಕೌಶಲ್ಯಗಳಿಗೆ ಹೆಸರಾದ ರಾಜ್ಯವನ್ನಾಗಿಸುವ ಗುರಿ

ಬೆಂಗಳೂರು ಕೌಶಲ್ಯ ಶೃಂಗಸಭೆ ಕರ್ನಾಟಕದ ಕೌಶಲ್ಯ ಪಯಣದಲ್ಲಿ ಒಂದು ಮೈಲಿಗಲ್ಲು. ಕರ್ನಾಟಕವನ್ನು ವಿಶ್ವದಲ್ಲೇ ಕೌಶಲ್ಯಗಳಿಗೆ ಹೆಸರಾದ ರಾಜ್ಯವನ್ನಾಗಿಸುವುದು ನಮ್ಮ ಗುರಿ. ಇಎಸ್ ಡಿಎಂಎಐ/ ಎಂಎಲ್ ಏರೋಸ್ಪೇಸ್, ಹಸಿರು ಇಂಧನ, ಒಳಗೊಳ್ಳುವಿಕೆ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಉದ್ಯೋಗಕ್ಕೆ ತಯಾರಾಗಿರುವ ಕಾರ್ಮಿಕಪಡೆಯನ್ನು ಸಿದ್ದಮಾಡುವತ್ತ ಗಮನ ಕೇಂದ್ರೀಕೃತಗೊಳಿಸಿದೆ. ಕೌಶಲ್ಯಾಭಿವೃದ್ಧಿಯಲ್ಲಿ ಕರ್ನಾಟಕ ಸದಾ ಮುಂಚೂಣಿಯ ರಾಜ್ಯವಾಗಿದ್ದು, ದೇಶದಲ್ಲಿ ಪ್ರತ್ಯೇಕವಾಗಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯನ್ನು ಪ್ರಾರಂಭಿಸಿದ ರಾಜ್ಯ ಗಳಲ್ಲಿ ಒಂದಾಗಿದೆ. ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯ ಮೂಲಕ ಕೌಶಲ್ಯವನ್ನು ರಾಜ್ಯದ ಮೂಲೆ ಮೂಲೆಗೂ ಕೊಂಡೊಯ್ದಿದ್ದೇವೆ. 5 ಲಕ್ಷ ಯುವಜನರನ್ನು ತಲುಪುವ ಗುರಿ ಹೊಂದಿದ್ದರೂ ನಾವು ಅದಕ್ಕೂ ಹೆಚ್ಚು ಜನರನ್ನು ತಲುಪಿದ್ದೇವೆ. ಯುವಯುಗ ಯೋಜನೆಯಡಿ ಸುಧಾರಿತ ಡಿಜಿಟಲ್ ಕೌಶಲ್ಯವನ್ನು 1.10 ಲಕ್ಷ ಜನರಿಗೆ ಒದಗಿಸುವ ಮೂಲಕ ಕರ್ನಾಟಕ ಕೈಗಾರಿಕಾ ಕ್ರಾಂತಿ 4 ನೇ ಸ್ಥಾನದಲ್ಲಿದೆ ಎಂದು ವಿವರಿಸಿದರು.

ಒಣದ್ರಾಕ್ಷಿ ಉತ್ಪನ್ನಕ್ಕೆ ವಿಧಿಸುತ್ತಿದ್ದ ಶುಲ್ಕ ಹೆಚ್ಚಳ, ಖರೀದಿಗೆ ಹಿಂದೇಟು

ದ್ರಾಕ್ಷಿ ಬೆಳೆಗಾರರ ಗೋಳು ಕೇಳುವರು ಯಾರು?

ಬೆಳಗಾವಿ: ಫಸಲ್ ಬಿಮಾ ಯೋಜನೆಯಡಿ 2024-25ನೇ ಸಾಲಿನಲ್ಲಿ ದ್ರಾಕ್ಷಿ ಬೆಳೆಗಾರರಿಗೆ ಸಿಗಬೇಕಿದ್ದ ವಿಮಾ ಪರಿಹಾರ ಈವರೆಗೂ ಸಿಕ್ಕಿಲ್ಲ. ಇದರಿಂದ ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಯ ಸಾವಿರಾರು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ವಿಜಯಪುರ, ಬೆಳಗಾವಿ, ಬಾಗಲಕೋಟೆ, ಬೆಂಗ ಳೂರು ಗ್ರಾಮಾಂತರ, ಚಿಕ್ಕ ಬಳ್ಳಾಪುರ, ತುಮಕೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ 42 ಸಾವಿರ ಹೆಕ್ಟೇರ್‌ಗಿಂತ ಅಧಿಕ ದ್ರಾಕ್ಷಿ ಬೆಳೆ ಇದೆ. ಕಳೆದ 2024 ಏಪ್ರಿಲ್ ನಿಂದ 2025ರ ಮಾರ್ಚ್ ಅವಧಿಯಲ್ಲಿ 31, 470 ರೈತರು ವಿಮಾ ನೋಂದಣಿ ಮಾಡಿಸಿದ್ದರೂ ಈವರೆಗೂ ಪರಿಹಾರ ಸಿಕ್ಕಿಲ್ಲ. ದ್ರಾಕ್ಷಿ ಬೆಳೆಗಾರರು ಪ್ರತಿ ಹೆಕ್ಟೇರ್‌ಗೆ 14 ಸಾವಿರ ರು. ಕಂತು ಕಟ್ಟಿದ್ದರು. ಇದರಲ್ಲಿ 27 ಸಾವಿರ ಹೆಕ್ಟೇರ್ ಬೆಳೆ ವಿಮೆ ವ್ಯಾಪ್ತಿಗೆ ಒಳಪಟ್ಟಿತ್ತು. ಬೆಳೆ ಹಾನಿಯಾದ ಪ್ರದೇಶಕ್ಕೆ ಹೆಕ್ಟೇರ್‌ಗೆ 2 ಲಕ್ಷ 80 ಸಾವಿರ ರು. ಪರಿಹಾರ ಬರಬೇಕಾಗಿತ್ತು. ಆದರೆ ಈವರೆಗೂ ಪರಿಹಾರ ರೈತರ ಕೈಸೇರಿಲ್ಲ. ಬೆಳಗಾವಿ ಹಾಗೂ ವಿಜಯಪುರ ಜಿಲ್ಲೆಯ ದ್ರಾಕ್ಷಿ ಬೆಳೆಗಾರರು ಕಳೆದ ಅವಧಿಯಲ್ಲಿ ವಿಪರೀತ ಮಳೆ ಸೇರಿದಂತೆ ಅನೇಕ ಕಾರಣಗಳಿಗೆ ಬೆಳೆ ನಾಶದಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಈ ಕುರಿತು ಅಧಿಕಾರಿಗಳ ಗಮನಕ್ಕೆ ತಂದರೂ ಯುವುದೇ ಪ್ರಯೋಜನವಾಗುತ್ತಿಲ್ಲ ಎನ್ನುತ್ತಿದ್ದಾರೆ ರೈತರು.

ಮಾರುಕಟ್ಟೆ ಶುಲ್ಕ ಇಳಿಸಲು ಆಗ್ರಹ: ಹವಾಮಾನ ವೈಪರೀತ್ಯಗಳಿಂದ ದ್ರಾಕ್ಷಿ ಬೆಳೆಗಾರರು ಸಂಕಷ್ಟ ಅನುಭವಿಸುತ್ತಿರುವ ಸಂದರ್ಭದಲ್ಲಿ ರಾಜ್ಯ ಸರಕಾರ ಒಣದ್ರಾಕ್ಷಿ ಉತ್ಪನ್ನಕ್ಕೆ ವಿಧಿಸುತ್ತಿದ್ದ ಶುಲ್ಕವನ್ನು ಶೇ.0.10 ರ ಬದಲು ಶೇ.0.25ರಷ್ಟು ಹೆಚ್ಚಿಸಿರುವ ಪರಿಣಾಮ ರಾಜ್ಯದಲ್ಲಿ ಒಣದ್ರಾಕ್ಷಿ ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಹೊರ ರಾಜ್ಯದಿಂದ ನಮ್ಮಲ್ಲಿ ಬರಲು ಖರೀದಿ ದಾರರು ಹಿಂದೇಟು ಹಾಕುತ್ತಿದ್ದಾರೆ. ಮಹಾರಾಷ್ಟ್ರ ಮಾದರಿಯಲ್ಲಿ ಶುಲ್ಕ ನಿಗದಿಪಡಿಸುವಂತೆ ರೈತರು ಆಗ್ರಹಿಸುತ್ತಿದ್ದಾರೆ.

ಮಳೆಯಿಂದ ಹಾನಿಗೊಳಗಾದ ದ್ರಾಕ್ಷಿ ಬೆಳೆ.

> ನಾಲ್ಕು ಎಕರೆ ಜಮೀನಿನಲ್ಲಿ ದ್ರಾಕ್ಷಿ ಬೆಳೆದಿದ್ದು ಮಳೆಯಿಂದ ಹಾನಿಗೊಳಗಾಗಿದೆ. ವಿಮೆ ಪರಿಹಾರ ಹಣ ಇನ್ನೂ ಬಂದಿಲ್ಲ. ದ್ರಾಕ್ಷಿ ಬೆಳೆಗಾರರ ಸಮಸ್ಯೆಗೆ ಸರಕಾರ ಕೂಡಲೇ ಸ್ಪಂದಿಸುವ ಕೆಲಸ ಮಾಡಬೇಕು. ಈ ಕುರಿತು ಸಚಿವರು ಸಭೆ ನಡೆಸಬೇಕು.
> **-ರವಿ ಕಾರಿಮನಿ,** ದ್ರಾಕ್ಷಿ ಬೆಳೆಗಾರರು

ನಿದ್ರೆಯಲ್ಲಿ ತೋಟಗಾರಿಕೆ ಇಲಾಖೆ

ನಿರಂತರವಾಗಿ ಸುರಿಯುತ್ತಿರುವ ಮಳೆ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ದ್ರಾಕ್ಷಿ ಬೆಳೆ ಹಾನಿ ಉಂಟಾಗುತ್ತಿದೆ. ಕನಿಷ್ಠಪಕ್ಷ ತೋಟಗಾರಿಕೆ ಇಕಾಖೆ ಅಧಿಕಾರಗಳು ರೈತರ ದ್ರಾಕ್ಷಿ ತೋಟಗಳಿಗೆ ಭೇಟಿ ನೀಡಿ ಮಾಹಿತಿ ನೀಡುವ ಕೆಲಸವನ್ನೂ ಮಾಡುತ್ತಿಲ್ಲ. ರೈತರಿಗೆ ಸಹಕಾರಿಯಾಗಬೇಕಿದ್ದ ಅಧಿಕಾರಿಗಳು ನಿದ್ರೆಗೆ ಜಾರಿದ್ದು, ದ್ರಾಕ್ಷಿ ಬೆಳೆಗಾರರನ್ನು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿಸಿದೆ.

ನೆರೆಯ ರಾಜ್ಯಗಳಿಗೆ ಕಬ್ಬು ಮಾರಾಟ



ಬೆಂಗಳೂರು: ರಾಜ್ಯದಲ್ಲಿ ಕಬ್ಬು ಬೆಲೆ ತೀರಾ ಕಡಿಮೆ ಇರುವುದರಿಂದ ಕಲಬುರಗಿ ಭಾಗದ ಕಬ್ಬು ಮಹಾರಾಷ್ಟ್ರಕ್ಕೂ, ಚಾಮರಾಜನಗರ ಜಿಲ್ಲೆಯ ಕಬ್ಬು ತಮಿಳುನಾಡಿಗೆ ಹೋಗುತ್ತಿದೆ ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ.ರವಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕೇಂದ್ರ ಸರಕಾರ ₹3,550 ಎಫ್‌ಆರ್‌ಪಿ ನಿಗದಿಪಡಿಸಿದೆ. ಆದರೆ, ನಮ್ಮಲ್ಲಿರುವ 81 ಕಾರ್ಖಾನೆಗಳು ಆ ದರ ಕೊಡುತ್ತಿಲ್ಲ. ಹೀಗಾಗಿ ಬೆಳಗಾವಿ, ವಿಜಯಪುರ, ಬಾಗಲಕೋಟೆ ಭಾಗದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದರು. ನಮ್ಮ ರಾಜ್ಯದ ಸಕ್ಕರೆ ಕಾರ್ಖಾನೆಗಳು ಟನ್‌ಗೆ ₹2,700 ರಿಂದ ₹3,100 ನೀಡುತ್ತಿದ್ದಾರೆ. ಒಂದು ಟನ್‌ಗೆ ಸರಾಸರಿ ₹400 ರಿಂದ ₹800 ರಷ್ಟು ಕಡಿಮೆ ಕೊಡುತ್ತಿದ್ದಾರೆ. ಮಹಾರಾಷ್ಟ್ರ ಒಂದು ಟನ್‌ಗೆ₹3,400 ಕೊಡುತ್ತಿದೆ. ಕೇಂದ್ರ ನಿಗದಿಪಡಿಸಿರುವುದನ್ನು ಕೊಡಿ ಎಂದು ರೈತರು ಕೇಳುತ್ತಿದ್ದಾರೆ. ನಾನು ಸಿಎಂ, ನೀನು ಸಿಎಂ ಎಂಬ ಅಧಿಕಾರದ ಗೊಂದಲದಲ್ಲಿ ಜನರ ಸಮಸ್ಯೆ ಮರೆತಿದ್ದಾರೆ. ಇದರ ಕಡೆಗೆ ಗಮನಹರಿಸಬೇಕು. ರೈತರೊಬ್ಬರು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ಅಲ್ಲಿದ್ದವರು ತಡೆದ ಕಾರಣ ಜೀವ ಉಳಿದಿದೆ ಎಂದು ಹೇಳಿದರು.

ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ರೈತ ಯತ್ನ

ಮಂಡ್ಯ: ಜಮೀನು ವಿವಾದ ಬಗೆಹರಿಸಿಕೊಡದ ಹಿನ್ನೆಲೆಯಲ್ಲಿ ಬೇಸತ್ತು ನಗರದ ಜಿಲ್ಲಾಧಿಕಾರಿ ಕಚೇರಿ ಎದುರಿನ ಕಾವೇರಿ ಉದ್ಯಾನದಲ್ಲಿ ಮಂಗಳವಾರ ಬೆಳಗ್ಗೆ ರೈತನೊಬ್ಬ ಪೆಟ್ರೋಲ್ ಸುರಿದುಕೊಂಡು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ಮೂಡನಹಳ್ಳಿ ಗ್ರಾಮದ ಮಂಜೇಗೌಡ (55) ಆತ್ಮಹತ್ಯೆಗೆ ಯತ್ನಿಸಿದ ರೈತ. ಶೇ.60ರಷ್ಟು ದೇಹ ಸುಟ್ಟು ಹೋಗಿರುವುದರಿಂದ ಸಾವು-ಬದುಕಿನ ನಡುವೆ ಹೋರಾಟ ಮಾಡುತ್ತಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಿಖ್ ಗುರು ನಾನಕ್ ಜಯಂತಿ ಇಂದು



ದೆಹಲಿ: ಸಿಖ್ ಧರ್ಮಗುರು ಗುರುನಾನಕ್ ದೇವ್ ಜಿ ಅವರ ಜನ್ಮದಿನ ಬುಧವಾರ ದೇಶ-ವಿದೇಶಗಳಲ್ಲಿ ಆಚರಣೆ ಆಗಲಿದೆ. ಪ್ರಸ್ತುತ ಪಾಕಿಸ್ತಾನದಲ್ಲಿರುವ ಲಾಹೋರ್ ನಗರದ ಸಮೀಪದ ತಾಲ್ವಾಂಡಿ ಗ್ರಾಮದಲಿ 1469ರಲ್ಲಿ ಗುರು ನಾನಕರ ಜನನವಾಯಿತು. ಪ್ರೀತಿ, ಸಮಾನತೆ, ಕರುಣೆ, ಸರಳ ಹಾಗೂ ಪ್ರಾಮಾಣಿಕ ಜೀವನ ಸಾರವನ್ನು ನಾನಕರು ಬೋಧಿಸಿದರು. ಬುಧವಾರ ಕಾರ್ತಿಕ ಪೂರ್ಣಿಮೆ ಮತ್ತು ರಾಹಸ್ ಪೂರ್ಣಿಮೆ ಆಚರಣೆಗೊಳ್ಳುತ್ತಿದೆ. ಹಾಗಾಗಿ, ದಕ್ಷಿಣ ಭಾರತದ ತೆಲಂಗಾಣ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ಬ್ಯಾಂಕ್‌ಗಳಿಗೆ ರಜೆ ಘೋಷಣೆಯಾಗಿದೆ.

ಪಹಲ್ಗಾಮ್ ದಾಳಿ ಬಳಿಕ ಗಡಿಸಂಪರ್ಕ

ಅಟ್ಟಾರಿ: ಸಿಖ್ಖರ ಪರಮೋಚ್ಛ ಧರ್ಮಗುರು 'ಗುರುನಾನಕ್' ಅವರ 556ನೇ ಜನ್ಮ ದಿನಾಚರಣೆ ಪ್ರಯುಕ್ತ ನಡೆಯಲಿರುವ 10 ದಿನಗಳ ಉತ್ಸವದಲ್ಲಿ ಭಾಗವಹಿಸಲು 2,150 ಭಾರತೀಯ ಸಿಖ್ ಭಕ್ತರಿಗೆ ಪಾಕಿಸ್ತಾನ ಸರ್ಕಾರ ವೀಸಾ ನೀಡಿದೆ. ಭಾರತದ ಸಿಖ್ ಯಾತ್ರಿಕರ ಗುಂಪು ಮಂಗಳವಾರ ಅಟ್ಟಾರಿ-ವಾಗಾ ಗಡಿ ಮೂಲಕ ಪಾಕ್‌ಗೆ ಪ್ರವೇಶ ಮಾಡಿತು. ಇದು ಏ.22ರಂದು ಪಾಕ್ ಮೂಲದ ಉಗ್ರರಿಂದ ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ನಂತರ ಭಾರತ ಸೇನಾಪಡೆ ನಡೆಸಿದ 'ಆಪರೇಷನ್ ಸಿಂದೂರ್' ಕಾರ್ಯಾಚರಣೆ ನಂತರದಲ್ಲಿ ಎರಡೂ ದೇಶಗಳ ನಡುವೆ ನಡೆದಿರುವ ಮೊದಲ ಜನ ಸಂಪರ್ಕವಾಗಿದೆ. ಏ.22ರ ಉಗ್ರ ದಾಳಿ ನಂತರ ಎರಡೂ ದೇಶಗಳ ಗಡಿ ಮಾರ್ಗ ಮುಚ್ಚಲಾಗಿತ್ತು. ಲಾಹೋರ್‌ನಿಂದ 80 ಕಿಮೀ ದೂರದಲ್ಲಿರುವ ಗುರುನಾನಕ್ ಜನ್ಮಸ್ಥಳ ನಂಕಾನಾ ಸಾಹಿಬ್‌ನಲ್ಲಿ ಸಿಖ್ ಯಾತ್ರಿಕರು ಬುಧವಾರ ಒಟ್ಟುಗೂಡುತ್ತಾರೆ. ನಂತರ ನ.13ರಂದು ಭಾರತಕ್ಕೆ ಮರಳುತ್ತಾರೆ.

20 ವರ್ಷಗಳಲ್ಲೇ ಎನ್ಡಿಎ ಹೆಚ್ಚು ಸ್ಥಾನ

ಪಟನಾ: ಕಳೆದ 20 ವರ್ಷಗಳಲ್ಲೇ ಅತ್ಯಧಿಕ ದಾಖಲೆ ಮತಗಳಿಂದ ಎನ್‌ಡಿಎ ಮೈತ್ರಿಕೂಟವನ್ನು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲಿಸಲು ಬಿಹಾರ ಮತದಾರರು ನಿರ್ಧರಿಸಿದ್ದಾರೆ. 'ಜಂಗಲ್ ರಾಜ್' ನಾಯಕರು ಹೀನಾಯ ಸೋಲು ಕಾಣಲಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ-ಎನ್‌ಡಿಎದ ಬಿಹಾರದಲ್ಲಿನ ಮಹಿಳಾ ಕಾರ್ಯಕರ್ತರ ಜತೆ 'ನಮೋ ಆಪ್' ಮೂಲಕ ಮಂಗಳವಾರ ಸಂವಾದ ನಡೆಸಿದ ಪ್ರಧಾನಿ, ಹಲವು ಚುನಾವಣಾ ರ್‍ಯಾಲಿಗಳನ್ನುದ್ದೇಶಿಸಿ ಮಾತನಾಡಿದೆ. ಪ್ರತಿ ರ್‍ಯಾಲಿಯಲ್ಲೂ ದಾಖಲೆ ಪ್ರಮಾಣದ ಜನ ಸೇರುತ್ತಿದ್ದರು. ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದರು. ಅಲ್ಲದೇ, ಬಿಹಾರದಲ್ಲಿ ಎನ್‌ಡಿಎ ಪಕ್ಷಗಳ ಕಾರ್ಯಕರ್ತೆಯರು 'ಮೇರಾ ಬೂತ್, ಸಬ್ಸೆ ಮಜ್ಬೂತ್' ಸಂಕಲ್ಪದಲ್ಲಿ ಅದ್ಭುತವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

4 ಕುಕಿ ಉಗ್ರರು ಹತ

ಗುವಾಹಟಿ: ಮಣಿಪುರ ರಾಜ್ಯದ ಚುರಾಚಂದಪುರ ಜಿಲ್ಲೆಯ ಹೆಂಗ್ಲೆಪ್ ಉಪ ವಿಭಾಗದ ಖಾನ್ಪಿ ಗ್ರಾಮದ ಬಳಿ ಮಂಗಳವಾರ ಮುಂಜಾನೆ ಭದ್ರತಾ ಪಡೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ನಿಷೇಧಿತ ಉಗ್ರ ಸಂಘಟನೆ 'ಯುನೈಟೆಡ್ ಕುಕಿ ನ್ಯಾಷನಲ್ ಆರ್ಮಿ'(ಯುಕೆಎನ್‌ಎ)ಯ ನಾಲ್ವರು ಉಗ್ರರನ್ನು ಹೊಡೆದುರುಳಿಸಲಾಗಿದೆ. ಚುರಾಚಂದಾಪುರದಿಂದ ಪಶ್ಚಿಮಕ್ಕೆ 80 ಕಿ.ಮೀ ದೂರದ ಖಾನ್ಪಿ ಗ್ರಾಮದ ಬಳಿ ಭದ್ರತಾ ಪಡೆಗಳ ಮೇಲೆ ಕುಕಿ ಉಗ್ರರು ಅಪ್ರಚೋದಿತ ಗುಂಡಿನ ದಾಳಿ ನಡೆಸಿದಾಗ ಭದ್ರತಾ ಪಡೆಗಳು ಪ್ರತಿದಾಳಿ ನಡೆಸಿವೆ. ಈ ಚಕಮಕಿಯಲ್ಲಿ ನಾಲ್ಕು ಉಗ್ರರು ಹತರಾದರು. ಹತರಾದ ಕುಕಿ ಉಗ್ರರು ಈ ಮೊದಲು ಗ್ರಾಮ ಮುಖ್ಯಸ್ಥನ ಹತ್ಯೆ ನಡೆಸಿದ್ದರು. ಸ್ಥಳೀಯರಿಗೆ ಬೆದರಿಕೆ ಹಾಕಿ ಈ ಭಾಗದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಭಂಗ ತಂದಿದ್ದರು ಎಂದು ರಕ್ಷಣಾ ಸಚಿವಾಲಯ ಪ್ರಕಟಣೆಯಲ್ಲಿ ಮಂಗಳವಾರ ತಿಳಿಸಿದೆ.

ಕಾಶ್ಮೀರದಲ್ಲಿ ಚಿತ್ರೀಕರಣ

ಶ್ರೀನಗರ: ಕಾಶ್ಮೀರದ ಅನಂತನಾಗ್ ಜಿಲ್ಲೆಯ ಪಹಲ್ಗಾಮ್‌ನಲ್ಲಿ ಏ.22ರಂದು ಭಯೋತ್ಪಾದಕ ದಾಳಿ ನಡೆದಿದ್ದು, ಅದಾದ 6 ತಿಂಗಳ ನಂತರ ಕಾಶ್ಮೀರದಲ್ಲಿ ಸಿನಿಮಾ ಚಿತ್ರೀಕರಣ ಪುನಾರಂಭಗೊಂಡಿವೆ. ಶೂಟಿಂಗ್‌ಗೆ ಕಾಶ್ಮೀರ ಈಗ ಶೇ.100ರಷ್ಟು ಸುರಕ್ಷಿತವಾಗಿದೆ ಎಂದು ಹೇಳಬಲ್ಲೆ. ನಾವು ಸುರಕ್ಷಿತ ಭಾವ ಅನುಭವಿ ಸಿದ್ದೇವೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ ಎಂದು ಭಾವಿಸುವೆ ಚಿತ್ರ ನಿರ್ದೇಶಕ ವಿಮಲ್ ಕೃಷ್ಣ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

{ ರಾಹುಲ್ ಗಾಂಧಿ } ಕಾಂಗ್ರೆಸ್ ನಾಯಕ

ಬಿಹಾರ ಚುನಾವಣೆಯಲ್ಲಿ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ 'ಮತ ಕಳವು' ಯತ್ನದಲ್ಲಿದ್ದಾರೆ. ಏಕೆಂದರೆ ಎನ್‌ಡಿಎ ಮೈತ್ರಿ ಕೂಟ ಈ ಚುನಾವಣೆ ಗೆಲ್ಲಲ್ಲ ಎಂಬುದು ಅವರಿಗೆ ಖಚಿತವಾಗಿದೆ. ಅಲ್ಲದೇ, ಯುವಜನರನ್ನು ರೀಲ್ಸ್ ಮಾಡಲು ಹೇಳುವ ಮೂಲಕ ಅವರಿಗೆ ನಿರುದ್ಯೋಗ ಸಮಸ್ಯೆ ಕಾಣದಂತೆ ಮಾಡುವುದೇ ಮೋದಿ ತಂತ್ರವಾಗಿದೆ.



121 ಕ್ಷೇತ್ರಗಳ ಸ್ಪರ್ಧಿಗಳ ಅದೃಷ್ಟ ಪರೀಕ್ಷೆ | ಮಂಗಳವಾರ ಬಹಿರಂಗ ಪ್ರಚಾರ ಅಂತ್ಯ | ಬುಧವಾರ ಮನೆಮನೆ ಪ್ರಚಾರ

ಬಿಹಾರ: ನಾಳೆಯೇ ಮೊದಲ ಹಂತದ ಮತದಾನ

ಪಟನಾ: ಇಡೀ ದೇಶದ ಕುತೂಹಲ ಕೆರಳಿಸಿರುವ 'ಬಿಹಾರ ವಿಧಾನಸಭೆ ಚುನಾವಣೆ'ಯ ಮೊದಲ ಹಂತದ ಮತದಾನ ಗುರುವಾರ ಬೆಳಗ್ಗೆ ಆರಂಭಗೊಳ್ಳಲಿದ್ದು, ಕ್ಷಣಗಣನೆ ಶುರುವಾಗಿದೆ.

243 ಸದಸ್ಯ ಬಲದ ಬಿಹಾರ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಮೊದಲ ಹಂತದಲ್ಲಿ ರಾಜ್ಯದ 18 ಜಿಲ್ಲೆಗಳಲ್ಲಿನ 121 ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಶಾಂತಿಯುತವಾಗಿ ಹಾಗೂ ಸರಾಗವಾಗಿ ಮತದಾನ ಜರಗುವಂತೆ ಮಾಡಲು ಭಾರತೀಯ ಚುನಾವಣಾ ಆಯೋಗ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದೆ.



ರಾಜ್ಯ ಪೊಲೀಸ್ ಇಲಾಖೆಯ ವಿವಿಧ ಘಟಕಗಳ ಪೊಲೀಸ್ ಸಿಬ್ಬಂದಿಗಳು, ಅಧಿಕಾರಿಗಳಷ್ಟೇ ಅಲ್ಲದೇ, ಅರೆಸೇನಾ ಪಡೆ ಯೋಧರನ್ನೂ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಸದ್ಯ, ಬಿಜೆಪಿ-ಸಂಯುಕ್ತ ಜನತಾ ದಳ(ಜೆಡಿಯು) ಮತ್ತು ಎಲ್‌ಜೆಪಿ ಸೇರಿದಂತೆ ಐದು ಪಕ್ಷಗಳನ್ನು ಒಳಗೊಂಡಿರುವ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಹಾಗೂ ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಮತ್ತು ಕಾಂಗ್ರೆಸ್, ಎಡಪಕ್ಷಗಳು ಸೇರಿದ 'ಮಹಾಘಟಬಂಧನ್' ಒಕ್ಕೂಟದ ಮಧ್ಯೆಯೇ ನೇರ ಹಣಾಹಣಿ ನಡೆಯಲಿದೆ. ಚುನಾವಣಾ ತಂತ್ರಗಾರ ಪ್ರಶಾಂತ್ ಕಿಶೋರ್ ನೇತೃತ್ವದಲ್ಲಿ ಹೊಸದಾಗಿ ಜನ್ಮತಾಳಿರುವ 'ಜನ ಸುರಾಜ್ ಪಕ್ಷ'ವೂ ಈ ಬಾರಿ ತನ್ನ ಸಾಮರ್ಥ್ಯ ಬಿಹಾರ ನೆಲದಲ್ಲಿ ಎಷ್ಟಿದೆ ಎಂಬುದನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿದೆ. ಉಳಿದಂತೆ 'ಇಂಡಿಯ' ಬಣದಲ್ಲಿರುವ ಸಮಾಜವಾದಿ ಪಕ್ಷ, ಆಮ್ ಆದ್ಮಿ ಪಾರ್ಟಿ ಕೂಡಾ ಕೆಲವು ಕ್ಷೇತ್ರಗಳಲ್ಲಿ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ.

ಪ್ರಚಾರ ಅಂತ್ಯ: ಮೊದಲ ಹಂತದಲ್ಲಿ ಮತದಾನ ನಡೆಯಲಿರುವ 121 ವಿಧಾನಸಭಾ ಕ್ಷೇತ್ರಗಳಲ್ಲಿನ ಬಹಿರಂಗ ಪ್ರಚಾರ ಮಂಗಳವಾರ ಸಂಜೆಗೆ ಕೊನೆಗೊಂಡಿದೆ. ಬುಧವಾರ ಅಭ್ಯರ್ಥಿಗಳು, ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ಪ್ರಚಾರ ಮಾಡಲಿದ್ದಾರೆ.



ಅಂಕಿ-ಅಂಶ

ಚುನಾವಣೆ ಹಂತ	1
1ನೇ ಹಂತ ಜಿಲ್ಲೆಗಳು	18
ಕ್ಷೇತ್ರಗಳ ಸಂಖ್ಯೆ	121
ಮತಗಟ್ಟೆಗೆ ಮತದಾರ	1200
2ನೇ ಹಂತ ಕ್ಷೇತ್ರ ಸಂಖ್ಯೆ	122
2 ಹಂತ ಒಟ್ಟು ಮತಗಟ್ಟೆ	90712

ಸಂಕ್ರಾಂತಿಗೆ ನಾರಿಯರಿಗೆ ರು.30 ಸಾವಿರ: ತೇಜಸ್ವಿ

ಪಟನಾ: ಈ ಬಾರಿಯ ಚುನಾವಣೆ ಗೆದ್ದು ಬಿಹಾರದಲ್ಲಿ ಆರ್‌ಜೆಡಿ ಸರಕಾರ ರಚಿಸುವುದು ಖಚಿತ ಎಂದು ಭಾರೀ ವಿಶ್ವಾಸ ವ್ಯಕ್ತಪಡಿಸಿರುವ ರಾಷ್ಟ್ರೀಯ ಜನತಾ ದಳದ ನಾಯಕ, 'ಮಹಾಘಟಬಂಧನ್'ನ ಸಿಎಂ ಅಭ್ಯರ್ಥಿ ತೇಜಸ್ವಿ ಯಾದವ್, ತಮ್ಮ ಒಕ್ಕೂಟದ ಅಧಿಕಾರಕ್ಕೆ ಬಂದ ಬಳಿಕ ಸಂಕ್ರಾಂತಿ ಹಬ್ಬದಂದು ರಾಜ್ಯದಲ್ಲಿನ ಮಹಿಳೆಯರಿಗೆ ತಲಾ 30 ಸಾವಿರ ರು. ಆರ್ಥಿಕ ನೆರವು ನೀಡಲಿದೆ ಎಂದು ಮಂಗಳವಾರ ಘೋಷಿಸಿದ್ದಾರೆ.

ಬಿಹಾರದಲ್ಲಿ ಮೊದಲ ಹಂತದ ಚುನಾವಣೆಗೆ 1 ದಿನವಷ್ಟೇ ಬಾಕಿಯಿದೆ. ಮಹಾಘಟಬಂಧನ್-ಎನ್‌ಡಿಎ ನೇರ ಸ್ಪರ್ಧೆಯಲ್ಲಿದ್ದು, ಎರಡೂ ಕಡೆಯಿಂದ ಮತದಾರರನ್ನು ಸೆಳೆಯಲು ಹೊಸ ಹೊಸ ಭರವಸೆಗಳನ್ನು ಪ್ರಕಟಿಸುತ್ತಿವೆ. ಮೊದಲ ಹಂತದ ಚುನಾವಣಾ ಕ್ಷೇತ್ರಗಳಲ್ಲಿನ ಬಹಿರಂಗ ಪ್ರಚಾರಕ್ಕೆ ಮಂಗಳವಾರ ತೆರೆ ಬೀಳಲಿದ್ದ ಹಿನ್ನೆಲೆಯಲ್ಲಿ ತೇಜಸ್ವಿ ಯಾದವ್ ರಾಜ್ಯದ ಮಹಿಳಾ ಮತದಾರರನ್ನು ಸಾರಾಸಗಟಾಗಿ ಮಹಾಘಟಬಂದನ್‌ನತ್ತ ಸೆಳೆಯಲು ಭಾರೀ ನಗದು ಕೊಡುಗೆಯ ಘೋಷಣೆ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಿಹಾರದಲ್ಲಿ ಸರಕಾರ ರಚಿಸಿದ ತಕ್ಷಣ ನಮ್ಮ ಪಕ್ಷ ಜ.14ರಂದು 'ಮಾಯಿ ಬಹಿನ್ ಮಾನ್' ಯೋಜನೆ ಆರಂಭಿಸಲಿದೆ. ಈ ಯೋಜನೆಯಡಿ ಮಹಿಳೆಯರಿಗೆ ವಾರ್ಷಿಕ 30,000 ರು. ಆರ್ಥಿಕ ನೆರವು ನೀಡಲಾಗುತ್ತದೆ.

ಒಂದು ವರ್ಷಕ್ಕೆ ಕೊಡಬೇಕಾದ ಅಷ್ಟೂ ಹಣವನ್ನು ಸಂಕ್ರಾಂತಿ ಹಬ್ಬದಂದು ಒಮ್ಮೆಲೇ ಬಿಡುಗಡೆ ಮಾಡಲಾಗುತ್ತದೆ ಎಂದು ಘೋಷಿಸಿದ್ದಾರೆ. ಪೊಲೀಸ್ ಸೇರಿದಂತೆ ರಾಜ್ಯ ಸರಕಾರದ ಎಲ್ಲಾ ನೌಕರರನ್ನ ಅವರ ತವರು ಜಿಲ್ಲೆಗಳಿಂದ 70 ಕಿಮೀ ಸಮೀಪದ ಸ್ಥಳದಲ್ಲೇ ಕರ್ತವ್ಯಕ್ಕೆ ನಿಯೋಜಿಸಲಾಗುವುದು. ಭತ್ತಕ್ಕೆ ಕ್ವಿಂಟಲ್‌ಗೆ 300 ರು. ಹಾಗೂ ಗೋಧಿಗೆ 400 ರು. ಬೋನಸ್ ಬೆಲೆಯನ್ನು ರಾಜ್ಯ ಸರಕಾರದಿಂದ ನೀಡಲಾಗುತ್ತದೆ ಎಂದೂ ಭರವಸೆ ನೀಡಿದ್ದಾರೆ.

ಜೀವಿಕಾ ದೀದಿ ಖಾತೆಗೆ 5 ವರ್ಷದಲ್ಲಿ 2 ಲಕ್ಷ ರು: ಶಾ

ದರ್ಭಾಂಗ: ಕೇಂದ್ರ ಮತ್ತು ರಾಜ್ಯದಲ್ಲಿರುವ ಪಿಎಂ ಮೋದಿ ಮತ್ತು ಸಿಎಂ ನಿತೀಶ್ ಕುಮಾರ್ ಸರಕಾರಗಳು ವಿಶೇಷವಾಗಿ ಬಿಹಾ ರದ 1.41 ಕೋಟಿ 'ಜೀವಿಕಾ ದೀದಿ' ಫಲಾನುಭವಿಗಳ ಬ್ಯಾಂಕ್ ಖಾತೆಗೆ ಈಗಾ ಗಲೇ ತಲಾ 10,000 ರು. ಜಮಾ ಮಾಡಿ ದ್ದಾರೆಂದು ಹೇಳಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯದಲ್ಲಿ ಎನ್‌ಡಿಎ ಮೈತ್ರಿ ಕೂಟ ಮತ್ತೆ ಸರಕಾರ ರಚಿಸಿದಾಗ ಮುಂದಿನ 5 ವರ್ಷಗಳವರೆಗೂ ಜೀವಿಕಾ ದೀದಿ ಖಾತೆಗ ಳಿಗೆ 2 ಲಕ್ಷ ರು. ಜಮಾ ಮಾಡಲಾಗುತ್ತದೆ ಎಂದು ಭರವಸೆ ನೀಡಿದರು. ದರ್ಭಾಂಗಾ ಜಿಲ್ಲೆಯಲ್ಲಿ ಮಂಗಳವಾರ ಚುನಾವಣಾ ಪ್ರಚಾರ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪ್ರಧಾನಿ ಮೋದಿ ಇತ್ತೀಚೆಗೆ ದರ್ಭಾಂಗದಲ್ಲಿ ಬಿಹಾರದ 2ನೇ ಐಟಿ ಪಾರ್ಕ್ ಉದ್ಘಾಟಿಸಿದರು. ಇದರಿಂದ ಮಿಥಿಲಾ ಯುವಜನರಿಗೆ ಹೊಸ ಉದ್ಯೋಗಾವಕಾಶ ಸೃಷ್ಟಿಸಿಕೊಡಲಿದೆ ಎಂದು ಶಾ ಹೇಳಿದರು. ಬಿಹಾರ ಲಾಲು ಪ್ರಸಾದ್ ಯಾದವ್ ಮತ್ತು ರಾಬ್ರಿ ದೇವಿ ಆಡಳಿತದಲ್ಲಿ 15 ವರ್ಷ ಜಂಗಲ್ ರಾಜ್ ಕಂಡಿದೆ. ರಾಜ್ಯದಲ್ಲಿ ಎಂದಿಗೂ ಆರ್‌ಜೆಡಿ ಆಡಳಿತದ ಜಂಗಲ್ ರಾಜ್ ಆಡಳಿತ ಮರಳಲು ಬಿಡುವುದಿಲ್ಲ ಎಂದು ಗುಡುಗಿದರು. ಎನ್‌ಡಿಎ' ಮೈತ್ರಿಕೂಟ 160ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಜಯ ಸಾಧಿಸಿ ಮತ್ತೆ ಬಿಹಾರದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಹುಲ್ ಗಾಂಧಿ ಎರಡೂವರೆ ತಿಂಗಳ ಹಿಂದೆ ಬಿಹಾರಕ್ಕೆ ಭೇಟಿ ನೀಡಿದ್ದಾಗ ಅಕ್ರಮ ನುಸುಳುಕೋರರನ್ನು ರಕ್ಷಿಸುವ ಯಾತ್ರೆ ನಡೆಸಿದ್ದರು. ಲಾಲು ಯಾದವ್ ಕೂಡಾ ಅಕ್ರಮ ನುಸುಳುಕೋರರನ್ನು ರಕ್ಷಿಸಲು ಬಯಸುತ್ತಾರೆ. ಆದರೆ, ಬಿಜೆಪಿ ದೇಶದಿಂದ ಪ್ರತಿಯೊಬ್ಬ ನುಸುಳುಕೋರರನ್ನು ಗುರುತಿಸಿ ದೇಶದಿಂದಲೇ ಹೊರಹಾಕಲಿದೆ ಎಂದರು.

ಬಿಲಾಸ್‌ಪುರ: ಗೂಡ್ಸ್-ಪ್ಯಾಸೆಂಜರ್ ಡಿಕ್ಕಿ, 6 ಸಾವು

ಬಿಲಾಸ್‌ಪುರ: ಛತ್ತೀಸ್‌ಗಢದ ಬಿಲಾಸ್‌ಪುರ ಜಿಲ್ಲೆಯ ಬಿಲಾಸ್‌ಪುರ-ಕಟ್ನಿ ವಿಭಾಗದ ಲಾಲ್ ಖಾದನ್ ಪ್ರದೇಶದ ಬಳಿ ನಿಲುಗಡೆಯಾಗಿದ್ದ ಸರಕು ಸಾಗಣೆ(ಗೂಡ್ಸ್) ರೈಲಿಗೆ ಅದೇ ಮಾರ್ಗದಲ್ಲಿ ವೇಗವಾಗಿ ಸಾಗಿಬಂದ 'ಕೊಬಾರ್ ಪ್ಯಾಸೆಂಜರ್' ರೈಲು ಮುಖಾಮುಖಿ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಸಾವಿಗೀಡಾಗಿದ್ದಾರೆ. 20 ಕ್ಕೂ ಹೆಚ್ಚು ಮಂದಿಗೆ ಗಾಯಗೊಂಡಿದ್ದಾರೆ ಎಂದು ಬಿಲಾಸ್‌ಪುರ ಪೊಲೀಸ್ ವರಿಷ್ಠಾಧಿಕಾರಿ ರಜನೀಶ್ ಸಿಂಗ್ ದೃಢಪಡಿಸಿದ್ದಾರೆ.

ಎರಡೂ ರೈಲು ಗಾಡಿಗಳ ಮುಖಾಮುಖಿ ಡಿಕ್ಕಿಯ ರಭಸಕ್ಕೆ ಪ್ಯಾಸೆಂಜರ್ ರೈಲಿನ ಮುಂಭಾಗದ 2 ಬೋಗಿಗಳು ಗೂಡ್ಸ್ ರೈಲಿನ ಬೋಗಿಗಳ ಮೇಲೇರಿವೆ. ಪ್ರಯಾಣಿಕ ರೈಲಿನ ಇನ್ನೊಂದೆರಡು ಬೋಗಿಗಳು ಪೂರ್ಣ ನಜ್ಜುಗುಜ್ಜಾಗಿವೆ. ರೈಲ್ವೆ ಅಧಿಕಾರಿಗಳು, ಸ್ಥಳೀಯ ಆಡಳಿತ ಮತ್ತು ಎನ್‌ಡಿಆರ್‌ಎಫ್ ತಂಡಗಳು ತಕ್ಷಣವೇ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿವೆ. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸಲಾಗಿದೆ. ಜಜ್ಜಿಹೋಗಿರುವ ರೈಲು ಬೋಗಿಗಳ ಅವಶೇಷಗಳಡಿ ಸಿಲುಕಿರುವವರಲ್ಲಿ ಬದುಕುಳಿದವರಿದ್ದರೆ ಅವರಿಗಾಗಿ ರಕ್ಷಣಾ ಕಾರ್ಯದ ಸಿಬ್ಬಂದಿ ಹುಡುಕಾಟ ನಡೆಸಿದ್ದಾರೆ. ಒಂದು ಮಗು ಸೇರಿದಂತೆ ಹಲವರನ್ನು ರಕ್ಷಿಸಲಾಗಿದೆ.(ಅಪಘಾತ ಸ್ಥಳದ ಸಹಾಯವಾಣಿ ಸಂಖ್ಯೆ: 9752485499).

ರೈಲು ಸಂಚಾರ ವ್ಯತ್ಯಯ

ಎರಡೂ ರೈಲುಗಾಡಿಗಳ ಡಿಕ್ಕಿಯಿಂದ ರೈಲು ಎಂಜಿನ್‌ಗಳಿಗೆ ಶಕ್ತಿ ನೀಡುವ ವಿದ್ಯುತ್ ಮಾರ್ಗ ಮತ್ತು ಸಿಗ್ನಲಿಂಗ್ ವ್ಯವಸ್ಥೆಗೆ ಭಾರೀ ಹಾನಿಯಾಗಿದೆ. ಅದೇ ಮಾರ್ಗದಲ್ಲಿನ ಬೇರೆ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಹಲವು ಎಕ್ಸ್‌ಪ್ರೆಸ್ ಮತ್ತು ಪ್ಯಾಸೆಂಜರ್ ರೈಲುಗಳ ಸಂಚಾರ ರದ್ದಾಗಿದೆ, ಕೆಲವು ರೈಲುಗಳಿಗೆ ಪರ್ಯಾಯ ಮಾರ್ಗ ತೋರಿಸಲಾಗಿದೆ.

ತರೂರ್ ಲೇಖನಕ್ಕೆ ಬಿಜೆಪಿ ಪ್ರಶಂಸೆ

ದೆಹಲಿ: ಭಾರತೀಯ ರಾಜಕೀಯದಲ್ಲಿ ವಂಶಪಾರಂಪ ರ್ಯದ ಆಡಳಿತ ಮುಂದುವರಿದುಕೊಂಡು ಬಂದಿರು ವುದನ್ನು ಟೀಕಿಸಿ ಬರೆದಿರುವ ಕಾಂಗ್ರೆಸ್‌ನ ಹಿರಿಯ ನಾಯಕ, ಮಾಜಿ ಸಚಿವ ಶಶಿ ತರೂರ್ ಅವರ ಲೇಖನಕ್ಕೆ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರಶಂಸೆ ವ್ಯಕ್ತಪಡಿಸು ವುದರ ಜತೆಗೇ 'ವಿಷಕಾರಿ ಮನಸ್ಥಿತಿಯವರ ಬಗೆಗೆ ಸ್ವಲ್ಪ ಜಾಗ್ರತೆಯಿಂದ ಇರಿ' ಎಂಬ ಎಚ್ಚರಿಕೆ ಸಂದೇಶವನ್ನೂ ನೀಡಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನಲ್ಲಿ ವರಿಷ್ಠರಿಗೆ ಬಹಳ ಹತ್ತಿರವಾಗಿದ್ದು, ಬಳಿಕ ಪಕ್ಷದಿಂದ ಹೊರಬಿದ್ದು ಬಿಜೆಪಿ ಸೇರಿ ರಾಷ್ಟ್ರೀಯ ವಕ್ತಾರ ಹುದ್ದೆ ಗಿಟ್ಟಿಸಿಕೊಂಡ ಶೆಹಜಾದ್ ಪೂನವಾಲಾ ಅವರೇ ಶಶಿತರೂರ್ ಅವರ ಲೇಖನಕ್ಕೆ ಮಂಗಳವಾರ ಹೀಗೆ ಪ್ರತಿಕ್ರಿಯೆ ನೀಡಿದ್ದಾರೆ.

ಶಶಿತರೂರ್ ಅವರನ್ನು 'ಖತ್ರೋಂ ಕೆ ಖಿಲಾಡಿ' (ಅಪಾಯದ ಜತೆಗೇ ಆಟ ಆಡುವ ವ್ಯಕ್ತಿ) ಎಂದು ಕರೆದಿದ್ದಾರೆ. ಕಾಂಗ್ರೆಸ್ ಪಕ್ಷದ ಮೊದಲ ಕುಟುಂಬದ ನಡೆ ಬಗ್ಗೆ ಎಚ್ಚರವಾಗಿರಿ. ನಿಮ್ಮ ಕ್ಷೇಮಕ್ಕಾಗಿ ನಾನು ಪ್ರಾರ್ಥಿಸುವೆ ಎಂದೂ ಪೂನಾವಾಲಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. 'ಭಾರತದ ರಾಜಕೀಯದಲ್ಲಿ ಪರಿವಾರವಾದದ ಪಾತ್ರ' ಶೀರ್ಷಿಕೆಯಡಿ ಶಶಿತರೂರ್ ಪತ್ರಿಕೆಯೊಂದಕ್ಕೆ ವಿಶೇಷ ಲೇಖನ ಬರೆದಿದ್ದಾರೆ. ಆ ಲೇಖನವು ಕಾಂಗ್ರೆಸ್, ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾದಳ, ತೃಣವ 'ೂಲ ಕಾಂಗ್ರೆಸ್, ವೈಎಸ್‌ಆರ್ ಕಾಂಗ್ರೆಸ್, ಡಿಎಂಕೆ, ನ್ಯಾಷನಲ್ ಕಾನ್ಫರೆನ್ಸ್, ಜೆಡಿಎಸ್ ಮೊದಲಾದ ಪಕ್ಷಗಳಲ್ಲಿನ ಕುಟುಂಬ ರಾಜಕಾರಣವನ್ನು ಟೀಕಿಸುವಂತಿದೆ. ವಂಶಪಾರಂಪರ್ಯ ರಾಜಕಾರಣ ಎಂಬುದು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಭೀರ ಬೆದರಿಕೆ ಒಡ್ಡುತ್ತದೆ ಎಂದು ಎಚ್ಚರಿಸಿರುವ ಈ ಲೇಖನ ದೇಶಾದ್ಯಂತ ಚರ್ಚೆಗೆ ಗ್ರಾಸವಾಗಿದೆ.

ಅಣ್ವಸ್ತ್ರ ಪರೀಕ್ಷೆ-ಟ್ರಂಪ್ ಹೇಳಿಕೆ ಸುಳ್ಳು: ಚೀನಾ

ಬೀಜಿಂಗ್: ಚೀನಾ ಮತ್ತು ಪಾಕಿಸ್ತಾನ ರಹಸ್ಯವಾಗಿ ಪರಮಾಣು ಶಸ್ತ್ರಾಸ್ತ್ರಗಳ ಪರೀಕ್ಷೆ ನಡೆಸುತ್ತಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವುದನ್ನು ಚೀನಾ ನಿರಾಕರಿಸಿದೆ. ಅಮೆರಿಕ ಅಧ್ಯಕ್ಷರ ಹೇಳಿಕೆ ಸಂಪೂರ್ಣ ಸುಳ್ಳಿನಿಂದ ಕೂಡಿದೆ ಎಂದು ಕಿಡಿಕಾರಿದೆ.

ಟ್ರಂಪ್ ಭಾನುವಾರ ಸುದ್ದಿವಾಹಿನಿ ಸಂದರ್ಶನದಲ್ಲಿ ಚೀನಾ-ಪಾಕ್ ಅಣ್ವಸ್ತ್ರಗಳ ಪರೀಕ್ಷೆ ನಡೆಸಿವೆ ಎಂದು ಹೇಳಿದ್ದರು. ಅದಕ್ಕೆ ಮಂಗಳವಾರ ಪ್ರತಿಕ್ರಿಯಿಸಿದ ಚೀನಾ ವಿದೇಶಾಂಗ ಸಚಿವಾಲಯ ವಕ್ತಾರ ಮಾವೋ ನಿಂಗ್, ಬೀಜಿಂಗ್ ಸ್ವಯಂ ರಕ್ಷಣಾತ್ಮಕ ಪರಮಾಣು ತಂತ್ರವನ್ನು ಕಾಯ್ದುಕೊಳ್ಳುತ್ತದೆ. ಪರಮಾಣು ಪರೀಕ್ಷೆಯ ಮೇಲಿನ ನಿಷೇಧ ನೀತಿಯನ್ನು ಮುಂದುವರಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಖಾಯಂ ಸದಸ್ಯ ಮತ್ತು ಪರಮಾಣು ಶಸ್ತ್ರಾಸ್ತ್ರ ರಾಷ್ಟ್ರವಾಗಿ ಚೀನಾ ಪರಮಾಣು ಶಸ್ತ್ರಾಸ್ತ್ರಗಳನ್ನು ಮೊದಲಿಗನಾಗಿ ಬಳಸದೇ ಇರುವ ನೀತಿಗೆ ಬದ್ಧವಾಗಿದೆ. ಸ್ವಯಂ ರಕ್ಷಣಾತ್ಮಕ ಪರಮಾಣು ತಂತ್ರವನ್ನು ಕಾಯ್ದುಕೊಳ್ಳುತ್ತದೆ ಮತ್ತು ಪರಮಾಣು ಪರೀಕ್ಷೆಗಳನ್ನು ಸ್ಥಗಿತಗೊಳಿಸುವುದಕ್ಕೆ ಬದ್ಧವಾಗಿದೆ ಎಂದು ಹೇಳಿದ್ದಾರೆ.

ಇತಿಹಾಸ: ಚೀನಾ ಮೊದಲಿಗೆ 1966ರ ಡಿ.28ರಂದು ಥರ್ಮೋನ್ಯೂಕ್ಲಿಯರ್ ಶಸ್ತ್ರದ ಪ್ರಯೋಗ ನಡೆಸಿತು. ಕಡೆಯದಾಗಿ 1996ರ ಜು.29ರಂದು ನಡೆಸಿದೆ. ಅದಕ್ಕೆ ಮುನ್ನ 1976 ನ.17ರಂದು ಮತ್ತು 1992 ಮೇ 21ರಲ್ಲಿ ಪ್ರಬಲ ಅಣ್ವಸ್ತ್ರಗಳ ಪ್ರಯೋಗ ನಡೆಸಿತ್ತು. ಪ್ರಸ್ತುತ ಚೀನಾ ಬಳಿ 600 ಅಣ್ವಸ್ತ್ರಗಳಿವೆ ಎಂಬ ಅಂದಾಜಿದೆ. ಅದರಲ್ಲಿ ಗರಿಷ್ಠ 15 ಸಾವಿರ ಕಿಮೀ ವರೆಗೂ ಸಾಗಬಲ್ಲ ಅಣ್ವಸ್ತ್ರಗಳೂ ಸೇರಿವೆ ಎಂಬ ಮಾಹಿತಿ ಇದೆ.

ಮೂವರೂ ಸಂಬಂಧಿಗಳು | ಇತ್ತೀಚೆಗಷ್ಟೇ ಜಾಮೀನು ಮೇಲೆ ಬಿಡುಗಡೆಯಾಗಿದ್ದರು

ಗುಂಡಿಕ್ಕಿ ಕೊಯಮತ್ತೂರು ವಿದ್ಯಾರ್ಥಿನಿ ಅತ್ಯಾಚಾರಿಗಳ ಸೆರೆ

ಕೊಯಮತ್ತೂರು: ತಮಿಳುನಾಡು ರಾಜ್ಯದ ಕೊಯಮತ್ತೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ವೆಲ್ಲಿಕಿನಾರು ಗ್ರಾಮದ ಬಳಿ ಭಾನುವಾರ ರಾತ್ರಿ 10.40ರಲ್ಲಿ ಕಾರಿನಲ್ಲಿ ಗೆಳೆಯನೊಂದಿಗೆ ಮಾತನಾಡುತ್ತಾ ಕುಳಿತಿದ್ದ ಕಾಲೇಜು ವಿದ್ಯಾರ್ಥಿನಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ ನಡೆಸಿದ ಮೂವರು ಯುವಕರನ್ನು ಪೊಲೀಸರು ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ.

ಸ್ನೇಹಿತ-ಸ್ನೇಹಿತೆ ಇದ್ದ ಕಾರಿನ ಕಿಟಕಿ ಗಾಜನ್ನು ಕಲ್ಲಿನಿಂದ ಹೊಡೆದು, ಬಳಿಕ ಬಾಗಿಲು ತೆರೆದು ಯುವಕನ ತಲೆಗೆ ಸರಳಿನಿಂದ ಪ್ರಜ್ಞೆ ತಪ್ಪುವಂತೆ ಬಾರಿಸಿದ್ದಾರೆ. ನಂತರ ಸಂತ್ರಸ್ತೆಯನ್ನು ಮೋಟಾರ್‌ಬೈಕ್‌ನಲ್ಲಿ ಬಲವಂತವಾಗಿ ಕೂರಿಸಿಕೊಂಡು 1 ಕಿಮೀ ದೂರದ ನಿರ್ಜನ ಪ್ರದೇಶಕ್ಕೆ ಎಳೆದೊಯ್ದು ಅತ್ಯಾಚಾರ ನಡೆಸಿದ್ದರು. ಬಳಿಕ 11.20ರ ವೇಳೆ ಸಂತ್ರಸ್ತೆಯ ಸ್ನೇಹಿತನಿಗೆ ಪ್ರಜ್ಞೆ ಬಂದಿದ್ದು, ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದ. ಪೊಲಿಸರು 7 ತಂಡಗಳಲ್ಲಿ ಶೋಧ ಕಾರ್ಯ ನಡೆಸಲಾರಂಭಿಸಿದರೂ, ಮುಂಜಾನೆ 4.30ರ ವೇಳೆಗಷ್ಟೇ ಸಂತ್ರಸ್ತೆ ಗಾಯಗೊಂಡು ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾದರು. ಕದ್ದು ತಂದಿದ್ದ ಮೋಟಾರ್ ಬೈಕನ್ನು ದುಷ್ಕರ್ಮಿಗಳು ಸ್ಥಳದಲ್ಲೇ ಬಿಟ್ಟು ತೆರಳಿದ್ದರು.

ಹಲವು ಕಡೆ ಪೊಲೀಸರು ಶೋಧ ನಡೆಸಿದಾಗ ಮಂಗಳವಾರ ಮುಂಜಾನೆ ದುಷ್ಕರ್ಮಿಗಳ ಇರುವ ಸ್ಥಳ ಪತ್ತೆಯಾಯಿತು. ಬಂಧನಕ್ಕೆ ಮುಂದಾದ ಪೊಲೀಸರ ಮೇಲೆಯೇ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದರಿಂದ ಪೊಲೀಸರು ಆರೋಪಿಗಳಾದ ಥವಾಸಿ, ಕಾರ್ತಿಕ್ ಮತ್ತು ಕಾಳೀಶ್ವರನ್ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ್ದಾರೆ. ಕೃತ್ಯ ನಡೆಸಿದ ವೇಳೆ ಮೂವರೂ ದುಷ್ಕರ್ಮಿಗಳು ಪಾನಮತ್ತರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ-ಸ್ನೇಹಿತ ಕುಳಿತಿದ್ದ ಕಾರಿನ ಆಸನದಲ್ಲಿ ಯುವತಿಯ ಕೈಚೀಲ, ಶಾಲ್.

ಅತ್ಯಾಚಾರ ನಡೆದ ಸ್ಥಳದಲ್ಲಿ ವಿಧಿವಿಜ್ಞಾನ ತಜ್ಞರಿಂದ ಸಾಕ್ಷ್ಯ ಸಂಗ್ರಹ.

ಜಾಮೀನಿನಲ್ಲಿದ್ದ ಆರೋಪಿಗಳು

ಆರೋಪಿಗಳಲ್ಲಿ ಇಬ್ಬರು ಸೋದರರ, ಮತ್ತೊಬ್ಬ ಸಮೀಪದ ಸಂಬಂಧಿ. ಮೂವರೂ ಈ ಹಿಂದೆ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಬಂಧನಕ್ಕೊಳಗಾಗಿದ್ದರು. ಸದ್ಯ ಜಾಮೀನಿನ ಮೇಲೆ ಹೊರಬಂದಿ ದ್ದರು. ಅಷ್ಟರಲ್ಲೇ ಬೈಕ್ ಕಳವು ಮಾಡಿ, ಯುವತಿಯನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರ, ಕೊಲೆ ಯತ್ನ ನಡೆಸಿದ್ದಾರೆ.

ರಾಜಕೀಯ ಜಟಾಪಟಿ

ತಮಿಳುನಾಡು 2026ರಲ್ಲಿ ವಿಧಾನಸಭಾ ಚುನಾವಣೆ ಎದುರಿಸಲಿದ್ದು, ಈ ಘಟನೆ ರಾಜಕೀಯ ಮೇಲಾಟಕ್ಕೆ ಕಾರಣವಾಗಿದೆ. 'ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಹದಗೆಟ್ಟಿದೆ, ಮಹಿಳೆಗೆ ಸುರಕ್ಷೆಯೇ ಇಲ್ಲವಾಗಿದೆ' ಎಂದು ಸಿಎಂ ಸ್ಟಾಲಿನ್ ಸರಕಾರದ ವಿರುದ್ಧ ಪ್ರತಿಪಕ್ಷಗಳು ವಾಗ್ದಾಳಿ ನಡೆಸಿವೆ. 'ಕೊಯಮತ್ತೂರು ಮತ್ತು ರಾಜ್ಯಾದ್ಯಂತ ಪಕ್ಷ ಪ್ರತಿಭಟನೆ ನಡೆಸಲಿದೆ' ಎಂದು ಪ್ರತಿಪಕ್ಷ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ (ಇಪಿಎಸ್) ಘೋಷಿಸಿದ್ದಾರೆ. ಬಿಜೆಪಿ ಸೋಮವಾರ ಸಂಜೆಯೇ ಕೊಯಮತ್ತೂರಲ್ಲಿ ಪ್ರತಿಭಟನೆ ನಡೆಸಿದೆ. ರಾಜ್ಯದಲ್ಲಿ ಪೊಲೀಸ್ ಸಿಬ್ಬಂದಿಯೇ ಇಲ್ಲವಾಗಿದ್ದಾರೆ ಎಂದು ಬಿಜೆಪಿ ಟೀಕಿಸಿದೆ. 'ನಿದ್ರೆಯಲ್ಲಿರುವ ಸಿಎಂ ಮೊದಲು ಎಚ್ಚರಗೊಳ್ಳಿ' ಎಂದು ಟಿವಿಕೆ ಪಕ್ಷದ ಮುಖಂಡ, ನಟ ವಿಜಯ್ 'ಎಕ್ಸ್' ಸಂದೇಶದಲ್ಲಿ ವ್ಯಂಗ್ಯವಾಡಿದ್ದಾರೆ. 'ಘಟನೆ ಅಮಾನವೀಯ' ಎಂದಿರುವ ಸಿಎಂ ಸ್ಟಾಲಿನ್, ತಿಂಗಳೊಳಗೆ ತನಿಖೆ ಮುಗಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು ಎಂದು ಪೊಲೀಸರಿಗೆ ತಾಕೀತು ಮಾಡಿದ್ದಾರೆ. ಆದರೆ, ಆಘಾತದಲ್ಲಿರುವ ಸಂತ್ರಸ್ತೆ ಸದ್ಯ ಪೊಲೀಸರು ಬಂಧಿಸಿರುವ ಮೂವರು ಆರೋಪಿಗಳ ಫೋಟೊಗಳನ್ನು ನೋಡಿ ಗುರುತಿಸುವುದಕ್ಕೆ ವಿಫಲವಾಗಿದ್ದಾರೆ ಎನ್ನಲಾಗಿದೆ.

ಅಫ್ಘಾನ್ ಭೂಕಂಪ: ಭಾರತದ ನೆರವು

ದೆಹಲಿ: ಇತ್ತೀಚೆಗೆ ಅಫ್ಘಾನಿಸ್ತಾನದಲ್ಲಿ ಪದೇ ಪದೇ ಭೂಕಂಪವಾಗುತ್ತಿದೆ. ಸೋಮವಾರ ಅಫ್ಘಾನಿಸ್ತಾನದ ಉತ್ತರ ಭಾಗದಲ್ಲಿ ರಿಕ್ಟರ್ ಮಾಪಕದಲ್ಲಿ 6.3 ತೀವ್ರತೆ ಭೂಕಂಪವಾಗಿ, 20 ಜನ ಸಾವಿಗೀಡಾಗಿ 500ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಬಡಾಕ್ಷಣ್ ಪ್ರದೇಶದಲ್ಲಿ ಗುಡ್ಡಗಳು ಕುಸಿದು 800ಕ್ಕೂ ಹೆಚ್ಚು ಮನೆಗಳು, ರಸ್ತೆಗಳು ಹಾನಿಗೀಡಾಗಿವೆ. ಪರಿಣಾಮ ರಕ್ಷಣಾ ಕಾರ್ಯಾ ಚರಣೆಗೆ ಅಡ್ಡಿಯಾಗಿದೆ. ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ. ಸೆಪ್ಟೆಂಬರ್‌ನಲ್ಲೂ ಅಫ್ಘಾನಿಸ್ತಾನದಲ್ಲಿ ಭೂಕಂಪವಾಗಿತ್ತು. ಭೂಕಂಪದ ಸುದ್ದಿ ತಿಳಿದ ತಕ್ಷಣವೇ ಭಾರತದಿಂದ ಹಲವು ಟ್ರಕ್‌ಗಳಲ್ಲಿ 15 ಟನ್ ಆಹಾರ ಸಾಮಗ್ರಿ, ಔಷಧ ಮತ್ತಿತರ ಅಗತ್ಯ ಸಾಮಗ್ರಿಗಳನ್ನು ಕಳುಹಿಸಿಕೊಡಲಾಗಿದೆ. ವಿದೇಶಾಂಗ ಸಚಿವ ಎಸ್.ಜೈಶಂಕರ್, ಅಫ್ಘಾನಿಸ್ತಾನದ ಹಂಗಾಮಿ ವಿದೇಶಾಂಗ ಸಚಿವ ಅಮೀರ್ ಖಾನ್ ಮುತ್ತಕಿಗೆ ಕರೆ ಮಾಡಿ ಮಾತನಾಡಿದ್ದಾರೆ. ಮಡಿದವರ ಕುಟುಂಬಕ್ಕೆ ಸಂತಾಪ ಸೂಚಿಸಿ, ಅಗತ್ಯ ನೆರವಿನ ಭರವಸೆ ನೀಡಿದ್ದಾರೆ. ಮತ್ತಷ್ಟು ಔಷಧ ಪದಾರ್ಥಗಳನ್ನು ಕಳುಹಿಸಿಕೊಡಲಾಗು ವುದು ಎಂದು ತಿಳಿಸಿದ್ದಾರೆ.

ಬಾಲಕಿ ಮಾತನಾಡಿಸದ್ದಕ್ಕೇ ಗುಂಡಿಕ್ಕಿ ಯುವಕ ಪರಾರಿ

ಫರೀದಾಬಾದ್: ಹರಿಯಾಣ ರಾಜ್ಯದ ಫರೀದಾಬಾದ್ ನಗರದಲ್ಲಿ ಸೋಮವಾರ ಸಂಜೆ ಗ್ರಂಥಾಲಯದಿಂದ ಮನೆಗೆ ಮರಳುತ್ತಿದ್ದ 17 ವರ್ಷದ ವಿದ್ಯಾರ್ಥಿನಿ ಅಡ್ಡಗಟ್ಟಿದ 19 ವರ್ಷದ ಪರಿಚಿತ ಯುವಕ, ಕಂಟ್ರಿಮೇಡ್ ಪಿಸ್ತೂಲ್‌ನಿಂದ 2 ಬಾರಿ ಗುಂಡು ಹಾರಿಸಿ ಕೊಲ್ಲಲೆತ್ನಿಸಿದ್ದಾನೆ. ಗುಂಡು ವಿದ್ಯಾರ್ಥಿನಿಯ ಎಡಭುಜ ಮತ್ತು ಉದರ ಭಾಗಕ್ಕೆ ತಗುಲಿದೆ. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಾಲಕಿ ಸ್ವಲ್ಪದರಲ್ಲೇ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಈ ಕೊಲೆ ಯತ್ನ ಪ್ರಕರಣದ ಸಿಸಿಟಿವಿ ದೃಶ್ಯಗಳ ವಿಡಿಯೊ ವೈರಲ್ ಆಗಿದೆ. ರಾಷ್ಟ್ರೀಯ ಸುದ್ದಿವಾಹಿನಿಗಳಲ್ಲೂ ಪ್ರಸಾರವಾಗಿದೆ. ಆರೋಪಿ, ಸಂತ್ರಸ್ತೆಗೆ ವರ್ಷದ ಹಿಂದೆ ಅದೇ ಗ್ರಂಥಾಲಯದಲ್ಲಿ ಪರಿಚಯವಾಗಿದ್ದ. ಆತನ ವರ್ತನೆ ಯಿಂದ ಬೇಸರಗೊಂಡ ಆಕೆ 2 ವಾರಗಳಿಂದ ಮಾತನಾಡುವುದನ್ನು ನಿಲ್ಲಿಸಿದ್ದಳು. ಅಷ್ಟಕ್ಕೆ ಸಿಟ್ಟಾದ ಯುವಕ, ಆಕೆ ಮೇಲೆ ಹಾಡಹಗಲೇ, ಸಹಪಾಠಿಗಳ ಮಧ್ಯೆಯೇ ಗುಂಡಿಕ್ಕಿ ಕೊಲ್ಲಲೆತ್ನಿಸಿದ್ದಾನೆ. ಬಳಿಕ ಮೋಟಾರ್ ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ತಂಗಿ 12ನೇ ತರಗತಿ ಬೋರ್ಡ್ ಎಕ್ಸಾಂಗೆ ತಯಾರಿ ನಡೆಸಿದ್ದು, ನಿತ್ಯ ಗ್ರಂಥಾಲಯಕ್ಕೆ ತೆರಳುತ್ತಿದ್ದಳು. ಆರೋಪಿ ಜತಿನ್ ಕೆಲ ದಿನಗಳಿಂದ ನನ್ನ ತಂಗಿಯ ಬೆನ್ನುಬಿದ್ದು ಕಾಡುತ್ತಿದ್ದ. ಮೊನ್ನೆ ಆತನ ಮನೆಗೇ ತೆರಳಿ ದೂರಿದ್ದೆವು. ಜತಿನ್ ತಾಯಿ ಮನವಿ ಮಾಡಿದ್ದರಿಂದ ದೂರು ನೀಡಿರಲಿಲ್ಲ ಎಂದು ಸಂತ್ರಸ್ತೆ ಸೋದರಿ ವಿವರಿಸಿದ್ದಾರೆ.



ಪಾಕ್ ಸುಪ್ರೀಂ ಕಟ್ಟಡದಲ್ಲಿ ಸ್ಫೋಟ: ನಾಲ್ವರಿಗೆ ಗಾಯ

ಇಸ್ಲಾಮಾಬಾದ್: ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿರುವ ಸುಪ್ರೀಂ ಕೋರ್ಟ್ ಕಟ್ಟಡದಲ್ಲೇ ಮಂಗಳವಾರ ಭಾರೀ ಸ್ಫೋಟವಾಗಿದ್ದು, ನಾಲ್ವರು ಗಾಯಗೊಂಡಿದ್ದಾರೆ.



ದೇಶದ ಅತ್ಯುನ್ನತ ನ್ಯಾಯಾಂಗ ಸಂಸ್ಥೆಯಾದ ಸುಪ್ರೀಂ ಕೋರ್ಟ್‌ನ ಕಟ್ಟಡದ ನೆಲಮಾಳಿಗೆಯಲ್ಲೇ ಸ್ಫೋಟವಾಗಿರುವುದರಿಂದ ರಾಜಧಾನಿಯಲ್ಲಿನ ಎಲ್ಲಾ ಸರಕಾರಿ ಕಟ್ಟಡಗಳಲ್ಲಿಯೂ ಕಟ್ಟೆಚ್ಚರ ವಹಿಸಲಾಗಿದೆ. ಪ್ರತ್ಯಕ್ಷದರ್ಶಿಗಳಲ್ಲಿ ಕೆಲವರು, ಸುಪ್ರೀಂ ಕೋರ್ಟ್ ಕಟ್ಟಡದ ನೆಲಮಾಳಿಗೆಯಲ್ಲಿರುವ ಕ್ಯಾಂಟೀನ್‌ನ ಗ್ಯಾಸ್ ಸಿಲಿಂಡರ್ ಸ್ಫೋಟಗೊಂಡಿದೆ ಎಂದು ಹೇಳಿದರು. ಸ್ಫೋಟದ ತೀವ್ರತೆಗೆ ನ್ಯಾಯಾಲಯ ಕಟ್ಟಡ ಸಂಕೀರ್ಣದ ಕೆಲ ಭಾಗಗಳೂ ಹಾನಿಗೀಡಾಗಿವೆ. ಸ್ಫೋಟದ ಶಬ್ದಕ್ಕೆ ಹೆದರಿದ ವಕೀಲರು, ನ್ಯಾಯಾಂಗ ಇಲಾಖೆ ನೌಕರರು, ಭದ್ರತಾ ಸಿಬ್ಬಂದಿ ಭಯಗೊಂಡು ಕಟ್ಟಡದಿಂದ ಹೊರಗೆ ಓಡಿ ಬಂದರು. ಭದ್ರತಾ ಪಡೆಗಳ ಸಿಬ್ಬಂದಿ ತಕ್ಷಣವೇ ನ್ಯಾಯಾಲಯ ಆವರಣವನ್ನು ಬಂದ್ ಮಾಡಿಸಿ ಪರಿಶೀಲನೆ ನಡೆಸಿದರು. ಆದರೆ, ಸ್ಥಳೀಯ ಪೊಲೀಸರು ಮತ್ತು ರಕ್ಷಣಾ ಇಲಾಖೆ ಪ್ರಕಾರ ಸುಪ್ರೀಂ ಕೋರ್ಟ್ ಕಟ್ಟಡದ ನೆಲಮಾಳಿಗೆಯಲ್ಲಿ ಅಳವಡಿಸಿರುವ ಹವಾನಿಯಂತ್ರಣದ ಅನಿಲ ಸ್ಥಾವರದ ಬಳಿ ಸ್ಫೋಟವಾಗಿದೆ.

ಮಹಾದೇವ್ ಆಪ್ ಆರೋಪಿ ರವಿ ನಾಪತ್ತೆ

ದೆಹಲಿ: ಭಾರತದಲ್ಲಿ 'ಮಹಾದೇವ್ ಆಪ್' ಬೆಟ್ಟಿಂಗ್ ಗೇಮ್ ಮೂಲಕ 6 ಸಾವಿರ ಕೋಟಿ ರು.ಗೂ ಅಧಿಕ ವಂಚನೆ ಮಾಡಿ, ಬಳಿಕ ದೇಶದಿಂದ ಪರಾರಿಯಾಗಿ ದುಬೈನಲ್ಲಿ ಅಡಗಿಕೊಂಡಿದ್ದ ರವಿ ಉಪ್ಪಲ್‌ನನ್ನು ಭಾರತ ಸರಕಾರದ (ರೆಡ್ ಕಾರ್ನರ್ ನೋಟಿಸ್) ಕೋರಿಕೆ ಮೇರೆಗೆ 2023ರಲ್ಲಿ ದುಬೈ ಪೊಲೀಸರು ಬಂಧಿಸಿದ್ದರು. ಬಳಿಕ 45 ದಿನಗಳ ನಂತರ ಜೈಲಿನಿಂದ ಬಿಡುಗಡೆ ಮಾಡಿ ದುಬೈ ಪೊಲೀಸರ ಕಣ್ಗಾವಲಿನಲ್ಲಿರಸಲಾಗಿತ್ತು. ಭಾರತಕ್ಕೆ ಗಡಿಪಾರು ಮಾಡುವುದಕ್ಕೆ ಸಿದ್ಧತೆ ನಡೆದಿದ್ದಾಗಲೇ, ಬೆಟ್ಟಿಂಗ್ ಆಪ್ ಪ್ರಕರಣದ ಮುಖ್ಯ ಆರೋಪಿ ರವಿ ಉಪ್ಪಲ್ ತಪ್ಪಿಸಿಕೊಂಡು ಪರಾರಿಯಾಗಿದ್ದಾನೆ ಎಂಬ ಸುದ್ದಿ ಹೊರಬಿದ್ದಿದೆ. ಪರಿಣಾಮ ರವಿ ಉಪ್ಪಲ್ ಗಡಿಪಾರು ಪ್ರಕ್ರಿಯೆಗೆ ಹಿನ್ನಡೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರವಿ ಉಪ್ಪಲ್, ಭಾರತಕ್ಕೆ ಗಡಿಪಾರಾಗುವುದನ್ನು ತಪ್ಪಿಸಿಕೊಳ್ಳಲೆಂದೇ ಯುನೈಟೆಡ್ ಅರಬ್ ಎಮಿರೇಟ್ಸ್ ತೊರೆದು ಬೇರೆಡೆ ರಹಸ್ಯ ಸ್ಥಳಕ್ಕೆ ತೆರಳಿದ್ದಾನೆ. ಆದರೆ, ಆತ ಇರುವ ಸ್ಥಳ ಯಾರಿಗೂ ಸದ್ಯ ತಿಳಿದಿಲ್ಲ ಎಂದು ಕೆಲವು ಮೂಲಗಳು ಭಾರತದ ಮಾಧ್ಯಮಗಳಿಗೆ ಮಂಗಳವಾರ ತಿಳಿಸಿವೆ.

ಸಮಾಚಾರ ಸಣ್ಣದಲ್ಲ

ರಾಷ್ಟ್ರೀಯ ಈಜು ಸ್ಪರ್ಧೆ 8ರಿಂದ

ಬೆಂಗಳೂರು: ನೆಟ್ಟಕಲ್ಲಪ್ಪ ಈಜು ಕೇಂದ್ರದ ವತಿಯಿಂದ ನಾಲ್ಕನೇ ಆವೃತ್ತಿಯ ರಾಷ್ಟ್ರೀಯ ಈಜು ಸ್ಪರ್ಧೆಯನ್ನು ನ.8, 9 ರಂದು ಪದ್ಮನಾಭನಗರದ ನೆಟ್ಟಕಲ್ಲಪ್ಪ ಅಕ್ವಾಟಿಕ್ ಈಜು ಕೇಂದ್ರದಲ್ಲಿ ಆಯೋಜಿಸಲಾಗಿದೆ. ದ್ರೋಣಾಚಾರ್ಯ ಪ್ರಶಸ್ತಿ ಪುರಸ್ಕೃತ ಪ್ರದೀಪ್ ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಈ ವೇಳೆ ಅಂತಾರಾಷ್ಟ್ರೀಯ ಈಜು ಪಟುಗಳಾದ ಶ್ರೀಹರಿ ನಟರಾಜ್, ನಿಶಾ ಮಿಲ್ಲೆಟ್ ಸೇರಿದಂತೆ 300ಕ್ಕೂ ಹೆಚ್ಚು ಭಾರತದ ಅಗ್ರಮಾನ್ಯ ಒಲಿಪಿಂಕ್ ಈಜುಸ್ಪರ್ಧೆಗಳು ಭಾಗಿಯಾಗಲಿದ್ದಾರೆ. ಪ್ರತಿ ವರ್ಷದಂತೆ ನಡೆಯುವ ವಿವಿಧ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿದ್ದು, ನಾಕೌಟ್ ಮಾದರಿಯ ರೇಸ್ ನಡೆಯಲಿದೆ ಎಂದು ನೆಟ್ಟಕಲ್ಲಪ್ಪ ಈಜು ಕೇಂದ್ರದ ಮುಖ್ಯಸ್ಥ ಡಾ.ವರುಣ್ ನಿಜವಾನ್ ಪ್ರಕಟಣೆಗೆ ತಿಳಿಸಿದ್ದಾರೆ.

37 ಕೋಟಿ ಡ್ರಗ್ಸ್ ವಶ

ಬೆಂಗಳೂರು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾರೀ ಪ್ರಮಾಣದ ಮಾದಕ ವಸ್ತು ಸಾಗಾಟ ಜಾಲ ಭೇದಿಸಿದ ಬೆಂಗಳೂರು ಕಸ್ಟಮ್ಸ್ ಗುಪ್ತಚರ ಘಟಕ, ಬರೋಬ್ಬರಿ 37.88 ಕೋಟಿ ರು. ಮೌಲ್ಯದ ಹೈಡ್ರೋಪೋನಿಕ್ ಗಾಂಜಾ ವಶಪಡಿಸಿಕೊಂಡಿದೆ. ಅಕ್ಟೋಬರ್ 29ರಂದು ಕೆಐಎಯ ಟರ್ಮಿನಲ್ 2ರಲ್ಲಿ ಬ್ಯಾಂಕಾಕ್‌ನಿಂದ ದುಬೈ ಮೂಲಕ ಆಗಮಿಸುತ್ತಿದ್ದ ಓರ್ವ ಪ್ರಯಾಣಿಕನನ್ನು ವಾಯು ಗುಪ್ತಚರ ಘಟಕ ತಡೆದು ಪರಿಶೀಲನೆ ನಡೆಸಿದೆ. ಈ ವೇಳೆ ಆತ ಬಚ್ಚಿಟ್ಟಿದ್ದ 37.88 ಕೆ.ಜಿ ತೂಕದ ಹೈಡ್ರೋಪೋನಿಕ್ ಗಾಂಜಾ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಯಾಣಿಕನನ್ನು ಕೂಡಲೇ ವಶಕ್ಕೆ ಪಡೆಯಲಾಗಿದ್ದು, ಮಾದಕ ದ್ರವ್ಯಗಳು ಮತ್ತು ಮನೋವಿಕೃತ ವಸ್ತುಗಳ ಕಾಯಿದೆಯಡಿಯಲ್ಲಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ. ಈ ಮಾದಕವಸ್ತು ಕಳ್ಳಸಾಗಣೆಯ ಹಿಂದಿನ ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಜಾಜ್ ಫೈನಾನ್ಸ್ ಸಾಲ ವಿಲೇವಾರಿಯಲ್ಲಿ ಶೇ.27ರಷ್ಟು ಹೆಚ್ಚಳ

ಬೆಂಗಳೂರು: ಭಾರತದ ಅತಿದೊಡ್ಡ ಖಾಸಗಿ ವಲಯದ ಬ್ಯಾಂಕಿಂಗ್‌ಯೇತರ ಸಾಲ ಪೂರೈಕೆ ಸಂಸ್ಥೆಯಾಗಿರುವ ಬಜಾಜ್ ಫೈನಾನ್ಸ್ ಲಿಮಿಟೆಡ್ ಕಳೆದ ಹಬ್ಬದ ಋತುವಿನಲ್ಲಿ ಕಂಪನಿ ಗ್ರಾಹಕ ಸಾಲದ ಪ್ರಮಾಣದಲ್ಲಿ ಶೇ.27ರಷ್ಟು ಹೆಚ್ಚಳವಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ.29 ರಷ್ಟು ಏರಿಕೆ ದಾಖಲಾಗಿತ್ತು. ಕಳೆದ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 26ರ ನಡುವೆ ಬಜಾಜ್ ಫೈನಾನ್ಸ್ ಸುಮಾರು 63 ಲಕ್ಷ ರು. ಸಾಲ ವಿಲೇವಾರಿ ಮಾಡಿದೆ. ಈ ಅವಧಿಯಲ್ಲಿ ಕಂಪನಿ 23 ಲಕ್ಷ ಹೊಸ ಗ್ರಾಹಕ ರನ್ನು ಪಡೆದಿದೆ. ಈ ಪೈಕಿ ಶೇ.53ರಷ್ಟು ಮಂದಿ ಮೊದಲ ಬಾರಿಗೆ ಸಾಲ ಪಡೆಯುತ್ತಿರುವವರಾಗಿ ದ್ದಾರೆ. ಇದು ಆರ್ಥಿಕ ಸಮಗ್ರತೆಯ ವಿಸ್ತರಣೆ ಯನ್ನು ಸೂಚಿಸುತ್ತದೆ ಎಂದು ಕಂಪನಿ ಹೇಳಿದೆ. ಸರಕಾರದ ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾ ರಣೆಗಳು ಮತ್ತು ವೈಯಕ್ತಿಕ ಆದಾಯ ತೆರಿಗೆ ಯಲ್ಲಿ ಮಾಡಲಾದ ಬದಲಾವಣೆಗಳು ಭಾರತದ ಬಳಕೆ ಕ್ಷೇತ್ರದ ಬೆಳವಣಿಗೆಗೆ ಮುನ್ನುಡಿ ಬರೆದಿವೆ. ದಿನ ನಿತ್ಯದ ಬಳಕೆಯ ಉತ್ಪನ್ನಗಳು ಕೈಗೆಟಕುವಂತೆ ಮಾಡಿ ರುವ ಈ ಕ್ರಮಗಳು ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಕುಟುಂಬಗಳಲ್ಲಿ ಶಕ್ತಿ ತುಂಬಿವೆ. ಹಬ್ಬದ ಸಂದರ್ಭದಲ್ಲಿ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿವೆ ಎಂದು ಬಜಾಜ್ ಫೈನಾನ್ಸ್‌ನ ಅಧ್ಯಕ್ಷ ಸಂಜೀವ್ ಬಜಾಜ್ ತಿಳಿಸಿದರು.

ನಟಿಗೆ ಕಿರುಕುಳ: ಆರೋಪಿ ಬಂಧನ

ಬೆಂಗಳೂರು: ಕನ್ನಡ ಮತ್ತು ತೆಲುಗು ಧಾರಾವಾಹಿಗಳ ಕಿರುತೆರೆ ನಟಿಯೊಬ್ಬರಿಗೆ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಲೈಂಗಿಕ ಕಿರುಕುಳ ನೀಡುತ್ತಿದ್ದ ಆರೋಪಿಯನ್ನು ಅನ್ನಪೂರ್ಣೇಶ್ವರಿ ನಗರ ಪೊಲೀಸರು ಬಂಧಿಸಿದ್ದಾರೆ. ವೈಟ್‌ಫೀಲ್ಡ್‌ನ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಡೆಲಿವರಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಕೇರಳ ಮೂಲದ ನವೀನ್ ಕೆ. ಮೋನ್ ಬಂಧಿತ ಆರೋಪಿ. ಈತ 'ನವೀನ್ಜ್' ಎಂಬ ಹೆಸರಿನಲ್ಲಿ ಹಲವು ನಕಲಿ ಫೇಸ್‌ಬುಕ್ ಖಾತೆಗಳನ್ನು ಸೃಷ್ಟಿಸಿ, ಕಳೆದ ಹಲವಾರು ತಿಂಗಳುಗಳಿಂದ ನಟಿಗೆ ಅಶ್ಲೀಲ ಸಂದೇಶಗಳು, ಫೋಟೋಗಳು ಮತ್ತು ಖಾಸಗಿ ವೀಡಿಯೊಗಳನ್ನು ಕಳುಹಿಸುತ್ತಿದ್ದನು ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ಉತ್ತರ ನಗರ ಪಾಲಿಕೆ ವ್ಯಾಪ್ತಿಯ ಸ್ಥಳಗಳಲ್ಲಿ ಪರಿಶೀಲನೆ | ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಸಂಚಾರ ದಟ್ಟಣೆ ನಿವಾರಣೆ ಪರಿಹಾರವಾಗಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಪ್ರಮುಖ ಪ್ರದೇಶಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಪಾಲಿಕೆ, ಮೆಟ್ರೋ ಹಾಗೂ ಎನ್‌ಎಚ್‌ಎಐ ಅಧಿಕಾರಿಗಳು ಸಮನ್ವಯದಿಂದ ಪರಿಹಾರೋಪಾಯಗಳನ್ನು ರೂಪಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಬೆಂಗಳೂರಿನ ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿ, ಬಳ್ಳಾರಿ ರಸ್ತೆಯ ಮೆಟ್ರೋ ಕಾಮಗಾರಿ ಪೂರ್ಣಗೊಂಡ ಪ್ರದೇಶಗಳಲ್ಲಿ ಇರುವ ಭಗ್ನಾವಶೇಷಗಳು ಮತ್ತು ಅನುಪಯುಕ್ತ ಕಬ್ಬಿಣ ವಸ್ತುಗಳನ್ನು ತೆರವುಗೊಳಿಸಿ ಸ್ವಚ್ಛತೆ ಕಾಪಾಡಬೇಕು. ಹೆಬ್ಬಾಳ ಮೇಲ್ಸೇತುವೆಯ ಮೇಲ್ಭಾಗ ಹಾಳಾಗಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದೆ. ಆದ್ದರಿಂದ ತಕ್ಷಣವೇ ಸಂಪೂರ್ಣ ಮೇಲ್ಸೇತುವೆಗೆ ಡಾಂಬರೀಕರಣ ಮಾಡಿ ವಾಹನ ಸಂಚಾರ ಸುಗಮಗೊಳಿಸಬೇಕು. ಹೆಬ್ಬಾಳದಿಂದ ಕೊಡಿಗೆಹಳ್ಳಿ ಕಡೆಗೆ ಸಂಪರ್ಕ ನೀಡುವ ಹಯಾತ್ ಸೆಂಟರ್ ಮುಂಭಾಗದ ರಸ್ತೆಯ ಮಧ್ಯಭಾಗದಲ್ಲಿರುವ ಸ್ಲ್ಯಾಬ್ ಸರಿಯಾಗಿ ಅಳವಡಿಸದಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಅದನ್ನು ಸರಿಪಡಿಸಬೇಕು. ಅಲ್ಲದೇ ಕೊಡಿಗೆಹಳ್ಳಿ ಸಿಗ್ನಲ್‌ನಲ್ಲಿ ಕ್ರಾಸ್ ಕಲ್ವರ್ಟ್ ಬಳಿ ಮಳೆಗಾಲದಲ್ಲಿ ರಸ್ತೆಯಲ್ಲಿ ನೀರು ನಿಂತು ಸಮಸ್ಯೆ ಉಂಟಾಗುತ್ತದೆ. ಕಲ್ವರ್ಟ್‌ನ ಹೂಳನ್ನು ತೆಗೆದು, ನೀರು ನಿಲ್ಲದಂತೆ ಶಾಶ್ವತ ಪರಿಹಾರ ಕಂಡುಹಿಡಿಯುವಂತೆ ಎನ್‌ಎಚ್‌ಎಐ ಅಧಿಕಾರಿ ಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಬೆಂಗಳೂರಿನ ಉತ್ತರ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಸ್ಥಳಗಳನ್ನು ಪರಿಶೀಲಿಸಿದರು.

ಸರ್ವೀಸ್ ರಸ್ತೆಯಿಂದ ಮುಖ್ಯ ರಸ್ತೆಗೆ ಸಂಪರ್ಕ ನೀಡಿ: ಬಳ್ಳಾರಿ ರಸ್ತೆಯ ಸಂಚಾರ ದಟ್ಟಣೆ ನಿವಾರಣೆಗೆ ಸರ್ವೀಸ್ ರಸ್ತೆಯಿಂದ ಮುಖ್ಯ ರಸ್ತೆಗೆ ಒಳಹೊಕ್ಕು-ಹೊರಹೊಮ್ಮುವ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಬ್ಯಾಟರಾಯನಪುರದಲ್ಲಿ ಅನುಷ್ಠಾನಗೊಂಡಿದೆ. ಇದೇ ಮಾದರಿಯಲ್ಲಿ ಅಗತ್ಯವಿರುವ ಕಡೆಗಳಲ್ಲಿಯೂ ಇದೇ ರೀತಿಯ ಸಂಪರ್ಕ ಕಲ್ಪಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಅನುಷ್ಠಾನ ಮಾಡುವುದಕ್ಕೆ ಹೇಳಲಾಗಿದೆ.

ಬ್ಯಾಟರಾಯನಪುರ ಜಂಕ್ಷನ್‌ನಲ್ಲಿ ಸರ್ವೀಸ್ ರಸ್ತೆ ಮತ್ತು ಮುಖ್ಯ ರಸ್ತೆ ನಡುವೆ ಬ್ಯಾರಿಕೇಡ್ ಇರುವುದರಿಂದ ಪಾದಚಾರಿಗಳ ಓಡಾಟಕ್ಕೆ ತೊಂದರೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ, ಅಲ್ಲಿ ಸ್ಕೈವಾಕ್ ನಿರ್ಮಿಸಲು ಸಾಧ್ಯತೆ ಪರಿಶೀಲನೆ ಹಾಗೂ ಮುಖ್ಯ ರಸ್ತೆ ಮತ್ತು ಸರ್ವೀಸ್ ರಸ್ತೆಯ ಮಧ್ಯದಲ್ಲಿರುವ ಚರಂಡಿಯ ಬಹುತೇಕ ಭಾಗದಲ್ಲಿ ಸ್ಲ್ಯಾಬ್‌ಗಳು ಹಾಳಾಗಿವೆ. ಅವುಗಳನ್ನು ದುರಸ್ತಿ ಮಾಡಿ, ಚರಂಡಿಯಲ್ಲಿರುವ ಹೂಳನ್ನು ಸಂಪೂರ್ಣವಾಗಿ ತೆರವುಗೊಳಿಸಲು ಹೇಳಿದ್ದಾರೆ.

ಪರಿಶೀಲನೆಯ ವೇಳೆ ನೀಡಿದ ಪ್ರಮುಖ ನಿರ್ದೇಶನಗಳು

- ಯಲಹಂಕ ರೈತರ ಸಂತೆ ಬಳಿ ಸೈಡ್ ಡ್ರೈನ್ ನಿರ್ಮಿಸಲು ಸೂಚನೆ
- ಬಾಗಲೂರು ಕ್ರಾಸ್‌ನಲ್ಲಿ ಜಲಾವೃತ, ರಸ್ತೆ ದುರಸ್ತಿ ಹಾಗೂ ಡ್ರೈನ್ ಸ್ವಚ್ಛತೆಗೆ ಸೂಚನೆ
- ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ಸೂಚನೆ
- ಅಲ್ಲಾಳಸಂದ್ರ ಗೇಟ್ ಬಳಿ ಎನ್‌ಎಚ್‌ಎಐ ಮೇಲ್ಸೇತುವೆ ಕೆಳಭಾಗದ ಖಾಲಿ ಜಾಗವನ್ನು ಸುಂದರೀಕರಣಗೊಳಿಸಲು ಸೂಚನೆ
- ಬ್ಯಾಟರಾಯನಪುರ ಸಿಗ್ನಲ್‌ನಿಂದ ಕೊಡಿಗೆಹಳ್ಳಿ ಸಿಗ್ನಲ್‌ವರೆಗೆ ರಸ್ತೆ ದುರಸ್ತಿ ಮತ್ತು ಸ್ವಚ್ಛತೆ ಕಾಪಾಡಲು ನಿರ್ದೇಶನ
- ಯಲಹಂಕ ರೈಲ್ವೆ ಸೇತುವೆ ಬಳಿ ಸೈಡ್ ಡ್ರೈನ್ ರಸ್ತೆ ಮಟ್ಟಕ್ಕಿಂತ ಎತ್ತರದಲ್ಲಿರುವುದರಿಂದ ಮಳೆ ಬಂದಾಗ ನೀರು ರಸ್ತೆಯಲ್ಲಿ ನಿಂತುಕೊಳ್ಳುತ್ತದೆ. ಈ ಸಮಸ್ಯೆಗೆ ಶೀಘ್ರ ಪರಿಹಾರ.

ನಾಳೆ ಹ್ಯಾಕಥಾನ್ ಕಾರ್ಯಕ್ರಮ



ಬೆಂಗಳೂರು: ವೈಟ್‌ಫೀಲ್ಡ್‌ನ ಗೋಪಾಲನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ (ಜಿಸಿಇಎಂ) ನಲ್ಲಿರುವ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ವಿಭಾಗ (ಸಿಎಸ್‌ಇ) ಮತ್ತು ಸಿಎಸ್‌ಇ (ಎಐ ಎಂಎಲ್) ತನ್ನ ಪ್ರಮುಖ ಹ್ಯಾಕಥಾನ್ ಜಿಸಿಇಎಂ ಹ್ಯಾಕ್ಸ್ 3.0ನ ಮೂರನೇ ಆವೃತ್ತಿಯನ್ನು ನವೆಂಬರ್ 6 ಮತ್ತು 7 ಆಯೋಜಿಸಿದೆ.

24-ಗಂಟೆಗಳ ನಾವೀನ್ಯತೆ ಸವಾಲು ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಮಸ್ಯೆ ಪರಿಹಾರ ಮತ್ತು ಉದ್ಯಮಶೀಲತಾ ಚಿಂತನೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. 2-3 ಭಾಗವಹಿಸುವವರ ತಂಡಗಳು ತಜ್ಞ ಮಾರ್ಗದರ್ಶಕರು ಮತ್ತು ಅಧ್ಯಾಪಕರ ಮಾರ್ಗದರ್ಶನದಲ್ಲಿ ನೈಜ-ಪ್ರಪಂಚದ ಸವಾಲುಗಳನ್ನು ಎದುರಿಸುವ ಕಾರ್ಯನಿರತ ಮೂಲ ಮಾದರಿಗಳನ್ನು ಅಭಿವೃದ್ಧಿಪಡಿಸುತ್ತವೆ.

ಗೋಪಾಲನ್ ಫೌಂಡೇಶನ್ ನಿರ್ದೇಶಕಿ ಸುನೀತಾ ಪ್ರಭಾಕರ್, ಜಿಸಿಇಎಂ ಹ್ಯಾಕ್ಸ್ 3.0 ಯುವ ಮನಸ್ಸುಗಳನ್ನು ಉತ್ತಮ ನಾಳೆಗಾಗಿ ನಾವೀನ್ಯತೆ ಮಾಡಲು ಮತ್ತು ಅರ್ಥಪೂರ್ಣ ಬದಲಾವಣೆಗೆ ಕಾರಣವಾಗುವ ಪರಿಹಾರಗಳನ್ನು ವಿನ್ಯಾಸಗೊಳಿಸಲು ಸಬಲೀಕರಣಗೊಳಿಸುತ್ತದೆ ಎಂದು ಹೇಳಿದರು.

ಮಂತ್ರಾಲಯದಲ್ಲಿ ತೆಪ್ಪೋತ್ಸವ

ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದಲ್ಲಿ ಕಾರ್ತಿಕ ಮಾಸದ ನಿಮಿತ್ತ ಮಂಗಳವಾರ ಸಂಜೆ ತೆಪ್ಪೋತ್ಸವ ವಿಜೃಂಭಣೆಯಿಂದ ಜರುಗಿತು. ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರು ಪ್ರಹ್ಲಾದರಾಜರ ಉತ್ಸವ ಮೂರ್ತಿಗೆ ವಿಶೇಷ ಪೂಜೆ ನೆರವೇರಿಸಿದರು.

ನ.10ರ ವರೆಗೆ ಆನ್‌ಲೈನ್ ಸಮೀಕ್ಷೆ

ಬೆಂಗಳೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಸಮೀಕ್ಷೆಗೆ ಒಂದಷ್ಟು ಜನರು ಮಾಹಿತಿ ನೀಡಲು ನಿರಾಕರಿಸಿರುವುದರಿಂದ ಮಾಹಿತಿ ಪಡೆಯಲು ಖಾಸಗಿ ವಲಯ ಹಾಗೂ ಸರಕಾರಿ ವಲಯದಲ್ಲಿರುವವರಿಂದ ಮಾಹಿತಿ ಪಡೆಯಲು ನಿರ್ಧರಿಸಿದೆ. ಆನ್‌ಲೈನ್ ಮೂಲಕ ಮಾಹಿತಿ ತುಂಬಲು ನವೆಂಬರ್ 10ರ ವರೆಗೆ ಅವಕಾಶ ನೀಡಲಾಗಿದ್ದು, ಮಾಹಿತಿ ನೀಡದವರ ಮಾಹಿತಿ ಪಡೆಯಲು ಸರಕಾರ ಬೇರೆ ವಿಧಾನಕ್ಕೆ ಮುಂದಾಗಿದೆ. ಮನೆ ಮನೆ ಸಮೀಕ್ಷೆ ವೇಳೆ ಸಾಕಷ್ಟು ಮಂದಿ ಗೊಂದಲ ಹಾಗೂ ಇನ್ನಿತರೆ ಕಾರಣಗಳಿಂದ ಮಾಹಿತಿ ನೀಡಲು ನಿರಾಕರಿಸಿದ್ದರು. ಆದರೂ 1.46 ಕೋಟಿ ಕುಟುಂಬಗಳ 6 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಸಮೀಕ್ಷೆ ಪೂರ್ಣಗೊಂಡಿದ್ದು, ಮನೆ ಮನೆ ಸಮೀಕ್ಷೆಯಿಂದ ಹೊರಗುಳಿದವರ ಮಾಹಿತಿ ಸಂಗ್ರಹಣೆಗೆ ಸರಕಾರ ಸಿದ್ಧತೆ ನಡೆಸಿದೆ. ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರ ಮಾಹಿತಿ ಪ್ರಕಾರ, ವದಂತಿ, ಊಹಾಪೋಹ, ಹಲವರು ದಿಕ್ಕು ತಪ್ಪಿಸುವ ಹೇಳಿಕೆಗಳನ್ನು ನೀಡಿದ್ದರಿಂದ ಮನೆ ಮನೆ ಸಮೀಕ್ಷೆ ವೇಳೆ ಸಾಕಷ್ಟು ಮಂದಿ ಮಾಹಿತಿ ನೀಡಿಲ್ಲ. ಆದರೆ ಇದು ಸಮೀಕ್ಷೆಗೆ ಯಾವುದೇ ಹಿನ್ನಡೆ ಆಗಿಲ್ಲ. ಈ ಮಾಹಿತಿ ಸಂಗ್ರಹದ ಬಳಿಕ ನಾವು ಕ್ರಾಸ್ ವೆರಿಫೈ ಮಾಡಿಕೊಳ್ಳಲು ಸಾಧ್ಯವಿದೆ ಎಂದು ಹೇಳಲಾಗುತ್ತಿದೆ.

ಬದುಕುಳಿದ ಏಕೈಕ ಪ್ರಯಾಣಿಕ ರಮೇಶ್ ವಿಶ್ವಾಸ್ ಕುಮಾರ್‌ಗೆ ನಿತ್ಯನೋವು

ಎಐ ಅಪಘಾತ ಸಂತ್ರಸ್ತ ಕುಮಾರ್‌ಗೆ ಖಿನ್ನತೆ ಸಮಸ್ಯೆ

ಲೀಸೆಸ್ಟರ್: ಏರ್ ಇಂಡಿಯ ಸಂಸ್ಥೆಯ ಬೋಯಿಂಗ್ ವಿಮಾನ ಅಹಮದಾಬಾದ್‌ನಲ್ಲಿ ಪತನವಾಗಿ ಭಸ್ಮವಾದಾಗ 241 ಮಂದಿ ಸಾವಿಗೀಡಾದರು. ವಿಮಾನದಲ್ಲಿದ್ದವರಲ್ಲಿ ಬದುಕುಳಿದ ಏಕೈಕ ವ್ಯಕ್ತಿ ಎನಿಸಿಕೊಂಡ, ಪ್ರಯಾಣಿಕ ವಿಶ್ವಾಸ್ ಕುಮಾರ್ ರಮೇಶ್, ತಾವು ಈಗಲೂ ದೈಹಿಕವಾಗಿ ಮತ್ತು ಮಾನಸಿಕವಾಗಿ ಬಳಲುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾರೆ.

ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದ ರಮೇಶ್, ಆ ಅಪಘಾತದಲ್ಲಿ ಎಲ್ಲರೂ ಜೀವಂತ ದಹಿಸಿಹೋದರು. ನಾನೊಬ್ಬನೇ ಜೀವಂತವಾಗಿ, ಸಣ್ಣ ಪುಟ್ಟ ಗಾಯಗಳೊಂದಿಗೆ ಬದುಕುಳಿದ ವ್ಯಕ್ತಿ. ಅತ್ಯಂತ ಅದೃಷ್ಟಶಾಲಿ ವ್ಯಕ್ತಿ ನಾನೇ ಎಂದು ಹೇಳಿಕೊಂಡಿದ್ದಾರೆ.

ಆದರೆ ಆ ಅಪಘಾತದಲ್ಲೇ ರಮೇಶ್ ತಮ್ಮ ಸಹೋದರ ಅಜಯ್ ಅವರನ್ನು ಕಳೆದುಕೊಂಡರು. ಅಲ್ಲದೇ ಅಕ್ಕಪಕ್ಕದಲ್ಲಿದ್ದವರು ಜೀವಂತ ದಹಿಸಿಹೋದ ಘಟನೆ ತಮ್ಮನ್ನು ತೀವ್ರವಾಗಿ ಬಾಧಿಸುತ್ತಿದೆ ಎಂದು ಕುಮಾರ್ ನೋವು ತೋಡಿಕೊಂಡಿದ್ದಾರೆ. ವಿಮಾನ ಅಪಘಾತ ಸಂಭವಿಸಿದ ನಂತರದ 'ಆಘಾತಕಾರಿ ಒತ್ತಡದ ಅಸ್ವಸ್ಥತೆ'(ಪಿಟಿಎಸ್‌ಡಿ) ಮಾನಸಿಕ ಸಮಸ್ಯೆಯಲ್ಲಿ ಸಿಲುಕಿದ್ದು, ನೆಮ್ಮದಿಯ ಬದುಕಿಗಾಗಿ ಹೋರಾಡುತ್ತಿರುವೆ ಎಂದಿದ್ದಾರೆ.

ಭಾರತದಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದ ಬಳಿಕ ಲೀಸೆಸ್ಟರ್‌ನಲ್ಲಿರುವ ತಮ್ಮ ಮನೆಗೆ ಹಿಂದಿರುಗಿದಾಗಿನಿಂದ ಪತ್ನಿ ಮತ್ತು 4 ವರ್ಷದ ಮಗನ ಜತೆ ಮೊದಲಿನಂತೆ ಮಾತನಾಡುವುದಕ್ಕೇ ಆಗುತ್ತಿಲ್ಲ. ಮಾತನಾಡುವುದೇ ಕಷ್ಟವಾಗಿದೆ ಎಂದು ಹೇಳಿಕೊಂಡಿದ್ದಾರೆ. ಕುಮಾರ್ ಅವರಲ್ಲಿನ ಈ ಮಾನಸಿಕ ಸ್ಥಿತಿ ಬಗ್ಗೆ ಅವರ ಆಪ್ತಸಲಹೆಗಾರರು ದೃಢಪಡಿಸಿದ್ದಾರೆ.

ರಮೇಶ್ ಮತ್ತು ಅಜಯ್ ಸೋದರರಿಬ್ಬರೂ ಭಾರತದ ಡಿಯುನಲ್ಲಿ ಮೀನುಗಾರಿಕೆ ವ್ಯವಹಾರ ನಡೆಸುತ್ತಿದ್ದರು. ಅಪಘಾತದ ಬಳಿಕ ಆ ವ್ಯವಹಾರದತ್ತಲೂ ರಮೇಶ್ ಅವರಿಗೆ ಗಮನ ಕೊಡಲಾಗುತ್ತಿಲ್ಲ. ಹಾಗಾಗಿ ಅದರ ವಹಿವಾಟು ಕೂಡಾ ಕುಸಿದಿದೆ.

> ಈಗ ನಾನು ಒಬ್ಬಂಟಿಯಾಗಿದ್ದೇನೆ ಎನಿಸುತ್ತಿದೆ. ಕೋಣೆ ಯಲ್ಲಿ ಒಬ್ಬನೇ ಕುಳಿತುಕೊಳ್ಳು ತ್ತೇನೆ. ಪತ್ನಿ-ಮಗನ ಜತೆ ಮಾತನಾ ಡಲು ಆಗುತ್ತಿಲ್ಲ. ಒಂಟಿಯಾಗಿಯೇ ಇರಲು ಇಷ್ಟಪಡುತ್ತೇನೆ. ದೈಹಿಕವಾಗಿ, ಮಾನಸಿಕವಾಗಿ ಬಳಲಿದ್ದೇನೆ. ನನ್ನ ಕುಟುಂಬಕ್ಕೆ ನಾನು ಈ ರೀತಿಯಾಗಿ ದಿನ ದೂಡುತ್ತಿರುವುದು ತುಂಬಾ ಕಷ್ಟವಾಗುತ್ತಿದೆ. ನನ್ನ ತಾಯಿಯ ಜತೆಗೂ ಹಲವು ತಿಂಗಳುಗಳಿಂದ ಮಾತನಾಡಿಲ್ಲ. ಪ್ರತಿದಿನ ನಮಗೆಲ್ಲರಿಗೂ ನೋವಿನಿಂದ ಕೂಡಿದೆ.
>
> -ರಮೇಶ್ ವಿಶ್ವಾಸ್ ಕುಮಾರ್
> ಎಐ ವಿಮಾನ ದುರಂತ ಸಂತ್ರಸ್ತ

ಸಾಮಾನ್ಯ ಜನರು ಚಿಂತಿಸುವ ಬೆಂಗಳೂರು ಬೇಕಿದೆ: ಪ್ರತಿಪಕ್ಷ ನಾಯಕ ಅಶೋಕ

ಕಸ ವಿಲೇವಾರಿ, ರಸ್ತೆಗುಂಡಿ ಸಮಸ್ಯೆ ವಿರುದ್ಧ ಅಭಿಯಾನ

ಬೆಂಗಳೂರು: ಬೆಂಗಳೂರಿನ ಕಸ ವಿಲೇವಾರಿ ಸಮಸ್ಯೆ ಹಾಗೂ ರಸ್ತೆಗುಂಡಿ ಸಮಸ್ಯೆ ವಿರುದ್ಧ ಒಂದು ವಾರ ಸರಕಾರದ ವಿರುದ್ಧ ಅಭಿಯಾನ ನಡೆಸಲಾಗುವುದು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಶಾಸಕರು, ಸಂಸದರೊಂದಿಗಿನ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನ ಸಮಸ್ಯೆಗಳ ಕುರಿತು ಚರ್ಚಿಸಲು ಎಲ್ಲ ಜನಪ್ರತಿನಿಧಿಗಳ ಸಭೆ ಮಾಡಿದ್ದೇವೆ. ಕಾಂಗ್ರೆಸ್ ಸರಕಾರದ ದುರಾಡಳಿತದಿಂದಾಗಿ ಬೆಂಗಳೂರು ಗಾರ್ಬೇಜ್ ಸಿಟಿಯಾಗಿ ಬದಲಾಗಿದೆ. ಎಲ್ಲ ರಸ್ತೆಗಳಲ್ಲಿ ಗುಂಡಿಗಳು ಹಾಗೂ ಕಸದ ರಾಶಿ ಕಂಡುಬರುತ್ತಿದೆ. ನಗರಕ್ಕೆ ದ್ರೋಹ ಬಗೆದ ಸರಕಾರದ ವಿರುದ್ಧ ಹೋರಾಟ ಮಾಡಬೇಕು ಹಾಗೂ ಒಂದು ವಾರ ಕಾಲ ಪರಿಶೀಲನೆ ನಡೆಸಲು ನಿರ್ಧರಿಸಲಾಗಿದೆ. ಇದರ ಜೊತೆಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ನವೆಂಬರ್ 6 ರಿಂದ 15 ರವರೆಗೆ ಸಹಿ ಸಂಗ್ರಹ ಅಭಿಯಾನ ಮಾಡಲಾಗುವುದು ಎಂದರು.

ಎ ಖಾತಾ, ಬಿ ಖಾತಾ ವಿಚಾರವಾಗಿ ಜನರ ಅಭಿಪ್ರಾಯ ಸಂಗ್ರಹಿಸಲಾಗುವುದು. ಇದರಲ್ಲಿ ಸರಕಾರ ದುಡ್ಡು ಹೊಡೆಯುವ ಸ್ಕೀಮು ಮಾಡಿದೆ. ಬೆಂಗಳೂರಿನ ಅಭಿವೃದ್ಧಿಗೆ ಸರಕಾರದ ಬಳಿ ಹಣವಿಲ್ಲ. ಆ ಹಣವನ್ನು ಹೊಂದಿಸಲು ಈ ಕ್ರಮ ತರಬೇಕಿಲ್ಲ. ಇಷ್ಟೊಂದು ಹಣವನ್ನು ಜನರು ಪಾವತಿಸಲು ಸಾಧ್ಯವಿಲ್ಲ. ನೋಂದಣಿ ಮೇಲೆ ಶೇ.5 ಹೆಚ್ಚಿಸಿ ಕಮಿಶನ್ ಹೊಡೆಯಲು ಪ್ರಯತ್ನ ಮಾಡಲಾಗಿದೆ. ಕಸದ ಸೆಸ್ ತಂದು ಜನರ ಮೇಲೆ ಹೊರೆ ಹಾಕಲಾಗಿದೆ. ಬೆಸ್ಕಾಂನಲ್ಲಿ ಒಸಿ, ಸಿಸಿ ಮೂಲಕ ಹಣ ಸಂಗ್ರಹಿಸಲಾಗುತ್ತಿದೆ. ತಾತ್ಕಾಲಿಕವಾಗಿ ವಿದ್ಯುತ್ ಪಡೆದರೆ ಮೂರು ಪಟ್ಟು ಶುಲ್ಕ ನೀಡಬೇಕಿದ್ದು, ಇದನ್ನೇ ಬೆಸ್ಕಾಂನಿಂದ ಪ್ರೋತ್ಸಾಹಿಸಲಾಗುತ್ತಿದೆ. ಜನರಿಗೆ ಇಂತಹ ದುಬಾರಿ ಬ್ರ್ಯಾಂಡ್ ಬೆಂಗಳೂರು ಬೇಕಿಲ್ಲ. ಸಾಮಾನ್ಯ ಜನರ ಬಗ್ಗೆ ಚಿಂತಿಸುವ ಬೆಂಗಳೂರು ಬೇಕಿದೆ ಎಂದರು.

ಈಗಲೂ ಸುರಂಗ ರಸ್ತೆ ಬೇಡವೆಂದು ಹೇಳುತ್ತಿಲ್ಲ. ಆದರೆ ದೆಹಲಿ ನಾಯಕರಿಗೆ ಅನುಕೂಲ ಮಾಡಿಕೊಡಲು ಸುರಂಗ ಕೊರೆಯುವುದು ಬೇಕಿಲ್ಲ. ಈಗಾಗಲೇ 150 ಬಗೆಯ ದರ ಏರಿಕೆಗಳನ್ನು ಮಾಡಲಾಗಿದೆ. ಇದನ್ನು ನಾವು ವಿರೋಧಿಸುತ್ತೇವೆ ಎಂದರು.

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲ ಮಂಡಳಿ ವತಿಯಿಂದ ನವೆಂಬರ್ 6ರ ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್ ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ ವಿವಿಧ ಉಪ ವಿಭಾಗಗಳಾದ ಪೂರ್ವ-1-1, ಪೂರ್ವ-2-1, ಆಗ್ನೇಯ -1, ಆಗ್ನೇಯ -4, ಪಶ್ಚಿಮ -1-1, ಪಶ್ಚಿಮ -2-1, ವಾಯುವ್ಯ - 1, ವಾಯುವ್ಯ - 3, ಕೇಂದ್ರ-1-1 ಈಶಾನ್ಯ - 1 ಮತ್ತು ಉತ್ತರ-1-1, ಉಪ ವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಅಥವಾ ವಾಟ್ಸ್ ಆಫ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನ.6, 7ರಂದು ನೀತಿ ಆಯೋಗದಿಂದ ಶುದ್ಧೀಕರಿಸಿದ ತ್ಯಾಜ್ಯ ನೀರಿನ ಮರುಬಳಕೆ ಕುರಿತು ಕಾರ್ಯಾಗಾರ

ನೀರಿನ ಮರುಬಳಕೆ: ರಾಷ್ಟ್ರೀಯ ಕಾರ್ಯಾಗಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನವೆಂಬರ್ 6 ಹಾಗೂ 7 ರಂದು ಬೆಂಗಳೂರಿನಲ್ಲಿ ಶುದ್ಧೀಕರಿಸಿದ ನೀರಿನ ಮರುಬಳಕೆಯ ಬಗ್ಗೆ ನೀತಿ ಆಯೋಗದ ರಾಷ್ಟ್ರೀಯ ಕಾರ್ಯಾಗಾರ ನಡೆಯಲಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮಪ್ರಸಾತ್ ಮನೋಹರ್ ಹೇಳಿದರು.

ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ನೀಡಿ, ದೇಶದ ಪ್ರಮುಖ ನೀತಿ ನಿರೂಪಣಾ ಸಂಸ್ಥೆಯಾದ ನೀತಿ ಆಯೋಗವು, ಕರ್ನಾಟಕ ಸರಕಾರ ಹಾಗೂ ಬೆಂಗಳೂರು ಜಲಮಂಡಳಿ ಸಹಯೋಗದಲ್ಲಿ 'ಶುದ್ಧೀಕರಿಸಿದ ತ್ಯಾಜ್ಯ ನೀರಿನ ಮರುಬಳಕೆ' ಕುರಿತು ನ.6 ಹಾಗೂ 7ರಂದು ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಆಯೋಜಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಕಾರ್ಯಾಗಾರಕ್ಕೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದ್ದಾರೆ.

ಈ ಮಹತ್ವದ ಕಾರ್ಯಾಗಾರದಲ್ಲಿ ದೇಶದ ವಿವಿಧ ರಾಜ್ಯಗಳ ಉನ್ನತ ಅಧಿಕಾರಿಗಳು, ಜಲ ತಜ್ಞರು ಮತ್ತು ಕೈಗಾರಿಕಾ ಮುಖಂಡರು ಭಾಗವಹಿಸಲಿದ್ದು, ಶುದ್ಧೀಕರಿಸಿದ ನೀರನ್ನು ಗರಿಷ್ಠ ಪ್ರಮಾಣದಲ್ಲಿ ಮರುಬಳಕೆ ಮಾಡಲು ರಾಷ್ಟ್ರೀಯ ಯೋಜನೆಯನ್ನು ರೂಪಿಸುವ ನಿಟ್ಟಿನಲ್ಲಿ ಚರ್ಚೆ ನಡೆಯಲಿದೆ. ಬ್ರಾಂಡ್ ಬೆಂಗಳೂರು ಅಭಿಯಾನದ ಅಡಿಯಲ್ಲಿ ತ್ಯಾಜ್ಯ ನೀರಿನ ಸಮರ್ಪಕ ಬಳಕೆಗೆ ಒತ್ತು ನೀಡಲಾಗಿದೆ. ಈ ಮೂಲಕ ತ್ಯಾಜ್ಯ ನೀರಿನ ಬಳಕೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಏಷ್ಯಾ ಖಂಡಕ್ಕೆ ಬೆಂಗಳೂರು ಜಲಮಂಡಳಿ ಮಾದರಿಯಾಗಿದೆ. ಸರ್ಕ್ಯೂಲರ್ ವಾಟರ್ ಎಕಾಮನಿಯನ್ನು ಅಳವಡಿಸಿಕೊಂಡಿರುವ ಮಹಾನಗರಗಳ ಪೈಕಿ ಬೆಂಗಳೂರು ನಗರ ಮುಂಚೂಣಿಯಲ್ಲಿದೆ. ಬೆಂಗಳೂರು ನಗರದಲ್ಲಿ ಶೇ.90ರಷ್ಟು ಒಳಚರಂಡಿ ಶುದ್ಧೀಕರಣ ಸಾಮರ್ಥ್ಯವನ್ನು ಹೊಂದಿದ್ದು, 1,348 ಎಂ.ಎಲ್.ಡಿ ಯಷ್ಟು ನೀರನ್ನು ಶುದ್ಧೀಕರಿ ಸಲಾಗುತ್ತಿದೆ. ಈ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕೆರೆಗಳನ್ನು ತುಂಬಿಸಲಾಗುತ್ತಿದೆ. ಅಲ್ಲದೇ, ಪಾರ್ಕ್ ಮತ್ತು ಉದ್ಯಾನವನಗಳ ನಿರ್ವಹಣೆ ಜತೆಯಲ್ಲಿಯೇ ಕೈಗಾರಿಕೆಗಳಿಗೂ ಪೂರೈಸಲಾಗುತ್ತಿದೆ ಎಂದರು.

ಕಾರ್ಯಾಗಾರದ ಮುಖ್ಯ ಗುರಿ

ಶುದ್ಧೀಕರಿಸಿದ ತ್ಯಾಜ್ಯ ನೀರಿನ ಮರುಬಳಕೆಯನ್ನು ಭಾರತದಾದ್ಯಂತ ಕಡ್ಡಾಯಗೊಳಿಸಲು ಒಂದು ಸಮಗ್ರ ರಾಷ್ಟ್ರೀಯ ಯೋಜನೆಯನ್ನು ರೂಪಿಸುವುದು ರಾಷ್ಟ್ರೀಯ ಕಾರ್ಯಾಗಾರದ ಮುಖ್ಯ ಗುರಿಯಾಗಿದೆ. ನವೆಂಬರ್ 7ರಂದು ಈ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಭಾಗವಹಿಸುವ ಸದಸ್ಯರಿಗಾಗಿ ತ್ಯಾಜ್ಯ ನೀರನ್ನು ತೃತೀಯ ಹಂತದ ಶುದ್ಧೀಕರಣ ಮಾಡಿ ವಿಧಾನಸೌಧ ಹಾಗೂ ಇತರೆ ಸರಕಾರಿ ಕಟ್ಟಡಗಳಿಗೆ ಸರಬರಾಜು ಮಾಡುತ್ತಿರುವ ಕಬ್ಬನ್ ಪಾರ್ಕ್ ತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ಆಯೋಜಿಸಲಾಗಿದೆ. ಬಯಲು ಸೀಮೆಯ ಜಿಲ್ಲೆಗಳಿಗೆ ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಹರಿಸುವಂತಹ ಯೋಜನೆಯಾದ ಕೆ.ಸಿ.ವ್ಯಾಲಿ ಎಸ್.ಟಿ.ಪಿ.ಗೂ ಸದಸ್ಯರು ಭೇಟಿ ನೀಡಲಿದ್ದಾರೆ ಎಂದು ತಿಳಿಸಿದರು.

ಸಹಾಯಕ ಮತದಾರರ ನೋಂದಣಾಧಿಕಾರಿಗಳೊಂದಿಗೆ ಸಭೆ

ನಮೂನೆ 19 ಅರ್ಜಿ ಪಡೆಯಲು ಸೂಚನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಗಾಗಿ ಮತದಾರರ ಪಟ್ಟಿ ತಯಾರಿಕೆಯಲ್ಲಿ ಪ್ರಗತಿ ಸಾಧಿಸಲು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಪಾಲಿಕೆಯ ವ್ಯಾಪ್ತಿಯ ಎಲ್ಲಾ ಸಹಾಯಕ ಮತದಾರರ ನೋಂದಣಾಧಿಕಾರಿಗಳೊಂದಿಗೆ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಸಭೆ ನಡೆಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಇದುವರೆಗೂ ಒಟ್ಟು 583 ಅರ್ಜಿಗಳನ್ನು ಸ್ವೀಕೃತಗೊಂಡಿದ್ದು, ನಮೂನೆ-19 ಅರ್ಜಿಗಳನ್ನು ಪಡೆಯಲು ನ.6 ಕೊನೆಯ ದಿನಾಂಕವಾಗಿರುವುದರಿಂದ ಹೆಚ್ಚಿನ ಮಟ್ಟದಲ್ಲಿ ಶಿಕ್ಷಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳ್ಳುವಂತೆ ಮಾಡಲು ವಿಧಾನ ಸಭಾವಾರು ಸಹಾಯಕ ಮತದಾರರ ನೋಂದಣಾಧಿಕಾರಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ಸಂಸ್ಥೆಗಳಿಗೆ ಖುದ್ದಾಗಿ ಭೇಟಿ ನೀಡಿ, ನಮೂನೆ 19 ನೀಡಿ ಭರ್ತಿ ಮಾಡಿದ ಶಿಕ್ಷಕರ ಅರ್ಜಿಗಳನ್ನು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಂದ ಪಡೆಯಲು ತುರ್ತಾಗಿ ಕ್ರಮವಹಿಸಬೇಕು ಹಾಗೂ ಮತದಾರರ ನೊಂದಣಿ ಪ್ರಕ್ರಿಯೆಗೆ ಶಿಕ್ಷಣ ಸಂಸ್ಥೆಗಳಿಂದ ಸಕರಾತ್ಮಕ ಸ್ಪಂದನೆಗಾಗಿ ಬ್ಲಾಕ್ ಶಿಕ್ಷಣ ಅಧಿಕಾರಿಗಳ ಮೂಲಕ ಪ್ರಯತ್ನಿಸುವಂತೆ ಸಹಾಯಕ ಮತದಾರರ ನೋಂದಣಾಧಿಕಾರಿಗಳಿಗೆ ಸೂಚಿಸಿದರು

ಸಭೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಾದ ಕರ್ನಾಟಕ ಪ್ರದೇಶ ಕಾಂಗ್ರೆಸ್, ಜನತಾದಳ, ಬಹುಜನ ಸಮಾಜ ಪಕ್ಷ, ಆಮ್ ಆದ್ಮಿ ಪಕ್ಷ, ನ್ಯಾಷನಲ್ ಪೀಪಲ್ ಪಾರ್ಟಿಗಳ ಪ್ರತಿನಿಧಿಗಳು ಭಾಗವಹಿಸಿ, ಪಾಲಿಕೆ ವ್ಯಾಪ್ತಿಯಲ್ಲಿರುವ ಪ್ರತಿಯೊಂದು ವಿದ್ಯಾಸಂಸ್ಥೆಗಳ ಶಿಕ್ಷಕರ ಮಾಹಿತಿಯನ್ನು ಪಡೆಯುವಂತೆ ಆಯುಕ್ತರನ್ನು ಕೋರಿದರು. ಅದರಂತೆ ಮತದಾರರ ಪಟ್ಟಿ ತಯಾರಿಕೆ ಪ್ರಗತಿಸಾಧಿಸಲು ಎಲ್ಲಾ ರಾಜಕೀಯ ಪ್ರತಿನಿಧಿಗಳ ಅಗತ್ಯ ಸಹಕಾರ ನೀಡುವಂತೆ ತಿಳಿಸಿದರು.

ಈ ವೇಳೆ ಕಂದಾಯ ವಿಭಾಗದ ವಿಶೇಷ ಆಯುಕ್ತ ಎಂ. ರಾಚಪ್ಪ, ಜಂಟಿ ಆಯುಕ್ತರಾದ ಡಾ.ಮಧು ಎನ್.ಎನ್, ಸತೀಶ್ ಬಾಬು, ಹಾಗೂ ಅಧಿಕಾರಿಗಳು ಇದ್ದರು.

ಕೊಲೆಯಾದ ಟೆಕ್ಕಿಯ ಜನ್ಮದಿನವೇ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಮೂತ್ರ ವಿಸರ್ಜನೆಗಾಗಿ ಕಾರಿನಿಂದ ಇಳಿದು ನಡೆದುಕೊಂಡು ಹೋಗುತ್ತಿದ್ದ ಟೆಕ್ಕಿಗೆ ಬೈಕ್‌ನಿಂದ ಗುದ್ದಿದ್ದಲ್ಲದೇ, ಪ್ರಶ್ನಿಸಿದಕ್ಕೆ ಆತನಿಗೆ ದೊಣ್ಣೆಯಿಂದ ಹೊಡೆದು ಹತ್ಯೆ ಮಾಡಿದ್ದ ಇಬ್ಬರು ಹಂತಕರಿಗೆ 59ನೇ ಸಿಸಿಎಚ್ ನ್ಯಾಯಾಲಯ ಜೀವಾವಧಿ ಶಿಕ್ಷೆ ಪ್ರಕಟಿಸಿದೆ.

ಬಿಹಾರ ಮೂಲದ ಸಿದ್ದಾರ್ಥ್ ಕೌಶಲ್ ಹತ್ಯೆಯಾದವರು. ಈತನನ್ನು ಹತ್ಯೆ ಮಾಡಿದ ಹಂತಕರಾದ ಗಿರೀಶ್ ಹಾಗೂ ಮಹೇಶ್ ಎಂಬುವರಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ಪ್ರಕಟಿಸಿ 10 ಸಾವಿರ ರು.ದಂಡ ವಿಧಿಸಿದೆ. ಹತ್ಯೆಯಾದ ಸಿದ್ದಾರ್ಥ್ ಹುಟ್ಟುಹಬ್ಬ ದಿನವಾದ ಅಕ್ಟೋಬರ್ 24ರಂದೇ ಅಪರಾಧಿಗಳಿಗೆ ಶಿಕ್ಷೆ ವಿಧಿಸಿರುವುದು ಸಂತೋಷ ತಂದಿರುವುದಾಗಿ ಮೃತನ ತಂದೆ ಕೌಶಲೇಂದ್ರ ಪಾಂಡೆ ಹರ್ಷ ವ್ಯಕ್ತಪಡಿಸಿದ್ದಾರೆ.

ಬಿಹಾರದ ಪಾಟ್ನಾ ಮೂಲದ ಸಿದ್ದಾರ್ಥ್ ನಗರದ ಬಿಟಿಎಂ ಲೇಔಟ್‌ನಲ್ಲಿ ವಾಸವಾಗಿದ್ದ. ಇನ್ಫೋಸಿಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಿದ್ದಾರ್ಥ್, 2018 ಜೂನ್ 26ರಂದು ಸ್ನೇಹಿತನ ಕಾರಿನಲ್ಲಿ ಮನೆಗೆ ಬರುವಾಗ ಮಾರ್ಗ ಮಧ್ಯೆ ಮೂತ್ರ ವಿಸರ್ಜನೆಗಾಗಿ ಕಾರು ನಿಲ್ಲಿಸಲಾಗಿತ್ತು. ಕಾರಿನಿಂದ ಇಳಿಯುತ್ತಿದ್ದಂತೆ ಆರೋಪಿಗಳ ಬೈಕ್ ಸಿದ್ದಾರ್ಥ್ ಭುಜಕ್ಕೆ ತಾಗಿತ್ತು. ಇದನ್ನ ಪ್ರಶ್ನಿಸಿದಕ್ಕೆ ಬೈಕ್ ನಿಲ್ಲಿಸಿದ ಗಿರೀಶ್ ಹಾಗೂ ಮಹೇಶ್ ಅಲ್ಲೇ ಇದ್ದ ಮರದ ದೊಣ್ಣೆಯಿಂದ ಸಿದ್ದಾರ್ಥ್ ತಲೆಗೆ ಹೊಡೆದು ಪರಾರಿಯಾಗಿದ್ದರು. ತೀವ್ರವಾಗಿ ಗಾಯಗೊಂಡು ಕುಸಿದು ಬಿದ್ದ ಸಿದ್ದಾರ್ಥ್‌ನನ್ನು ಖಾಸಗಿ ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದರು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 775/2025

ಅರ್ಜಿದಾರರು: ಶ್ರೀ. ರಾಮಣ್ಣ ಬಿನ್ ಲೇಟ್ ಕೆಂಚಪ್ಪ ವಯಸ್ಸು 72 ವರ್ಷ ವಾಸ: ಕೆ. ಗೊಲ್ಲಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು ಕೋಡಿಹಳ್ಳಿ ವೃತ್ತ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ ಅರ್ಜಿದಾರರ ತಂದೆಯವರಾದ ಶ್ರೀ. ಕೆಂಚಪ್ಪ ಬಿನ್ ಲೇಟ್ ಸಿದ್ದೇಗೌಡರವರು ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕೋಡಿಹಳ್ಳಿ ಹೋಬಳಿ, ಕೆಬ್ಬರೆ ಗ್ರಾಮದಲ್ಲಿ ದಿನಾಂಕ:08.06.1987 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ-ದರೆ ದಿನಾಂಕ: 12.12.2025 ಬೆಳಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025ರ ಅಕ್ಟೋಬರ್ 29ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸೇನಯ್ಯ ವಕೀಲರು, ಕನಕಪುರ
ಸ್ಥಳ : ಕನಕಪುರ

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 746/2025

ಅರ್ಜಿದಾರರು: ಶ್ರೀಮತಿ ಭಾಗ್ಯಮ್ಮ ಕೋಂ ಲೇಟ್ ಶಿವಣ್ಣ ಬಿನ್ ಲೇಟ್ ಮರಿಗೌಡ @ ಕೆಂಪೇಗೌಡ ವಯಸ್ಸು 40 ವರ್ಷ ವಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಅತ್ತಿಹಳ್ಳಿ ಹೊನ್ನಹಳ್ಳಿ ಸರ್ಕಲ್ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಈ ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡನ ಅಜ್ಜಿ, 2 ರಿಂದ 4ನೇ ಅರ್ಜಿದಾರರ ಅಜ್ಜಿಯವರಾದ ಮುದ್ದಮ್ಮ ಕೋಂ ಲೇಟ್ ವರದಪ್ಪ ರವರು ಬೆಂಗಳೂರು ದಕ್ಷಿಣ ಜಿಲ್ಲೆ. ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ:30.06.1992 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 28.11.2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025 ರ ನವಂಬರ್ 03 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಶ್ರೀ ಕಿರಣ್ ಕುಮಾರ್ ಬಿ.ಎನ್
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 747/2025

ಅರ್ಜಿದಾರರು: ಶ್ರೀಮತಿ ಭಾಗ್ಯಮ್ಮ ಕೋಂ ಲೇಟ್ ಶಿವಣ್ಣ ಬಿನ್ ಲೇಟ್ ಮರಿಗೌಡ @ ಕೆಂಪೇಗೌಡ ವಯಸ್ಸು 40 ವರ್ಷ ವಾಸ: ಗೇರಹಳ್ಳಿ ಗ್ರಾಮ, ಸಾತನೂರು ಹೋಬಳಿ ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು. 2. ಗ್ರಾಮ ಲೆಕ್ಕಾಧಿಕಾರಿಗಳು, ಅತ್ತಿಹಳ್ಳಿ ಹೊನ್ನಹಳ್ಳಿ ಸರ್ಕಲ್ ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಈ ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡನ ತಾತ, 2 ರಿಂದ 4ನೇ ಅರ್ಜಿದಾರರ ತಾತನವರಾದ ವರದಪ್ಪ ಬಿನ್ ಲೇಟ್ ದಾಸೇಗೌಡ ರವರು ಬೆಂಗಳೂರು ದಕ್ಷಿಣ ಜಿಲ್ಲೆ. ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಗೇರಹಳ್ಳಿ ಗ್ರಾಮದಲ್ಲಿ ದಿನಾಂಕ:30.07.1990 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ: 28.11.2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.

2025 ರ ನವಂಬರ್ 03 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಶ್ರೀ ಕಿರಣ್ ಕುಮಾರ್ ಬಿ.ಎನ್
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ:

ಬಿಹಾರ ಗೆಲ್ಲಬೇಕೆಂದರೆ ಎನ್‌ಡಿಎ ಮೈತ್ರಿಕೂಟಕ್ಕಿಂತ ಮಹಾಘಟಬಂಧನ ಗಟ್ಟಿಯಾಗಿದೆ ಎಂಬುದನ್ನು ಮತದಾರರಿಗೆ ಮನದಟ್ಟು ಮಾಡುವ ಅಗತ್ಯವಿದೆ. ಅದಕ್ಕಾಗಿ ರಾಹುಲ್-ತೇಜಸ್ವಿ ಯಾದವ್ ಹಲವು ಜಂಟಿಸಭೆ, ರ‍್ಯಾಲಿಗಳನ್ನು ನಡೆಸಬೇಕಿತ್ತು. ಬಹುಶಃ ತಾಳಮೇಳದ ಕೊರತೆಯಿಂದ ಈ ಇಬ್ಬರು ನಾಯಕರೂ ಒಟ್ಟಾಗಿ ಕಾಣಿಸಿಕೊಂಡಿಲ್ಲ ಎಂಬ ಭಾವನೆ ಅನೇಕರದ್ದಾಗಿದೆ.

ಬಿಹಾರದಲ್ಲಿ ತೇಜಸ್ವಿಗೆ ಹೊರೆಯಾಗಿದೆಯೇ ಕಾಂಗ್ರೆಸ್?

ಬಿಹಾರದಾದ್ಯಂತ ಪ್ರವಾಸ ಮಾಡುತ್ತಿರುವಾಗ ಅಲ್ಲಿನ ಸಿ.ಎಂ ನಿತೀಶ್ ಕುಮಾರ್, ಪ್ರಧಾನಿ ನರೇಂದ್ರ ಮೋದಿ, ಆರ್.ಜೆ.ಡಿ.ಯ ತೇಜಸ್ವಿ ಯಾದವ್ ಮತ್ತು ಜನ ಸುರಾಜ್ ಪಕ್ಷದ ಪ್ರಶಾಂತ್ ಕಿಶೋರ್ ಬಗ್ಗೆ ಜನ ಮಾತನಾಡಿಕೊಳ್ಳುತ್ತಿರುವುದು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಆದರೆ ಕಾಂಗ್ರೆಸ್‌ನ ರಾಹುಲ್ ಗಾಂಧಿ ಪ್ರಸ್ತಾಪಿಸುತ್ತಿರುವ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಷಯಗಳು, ಬಂಡವಾಳಶಾಹಿ, ಮತಗಳವು ಮತ್ತಿತರ ವಿಚಾರಗಳನ್ನು ಬಿಹಾರ ಜನರು ಹೆಚ್ಚು ಗಂಭೀರವಾಗಿ ತೆಗೆದುಕೊಂಡಂತೆ ಕಾಣುತ್ತಿಲ್ಲ ಮತ್ತು ಅವರ ನಾಯಕತ್ವದ ಪ್ರಭಾ ವಲಯವೂ ಆ ಭಾಗದಲ್ಲಿ ಕಾಣುತ್ತಿಲ್ಲ.

ಆರ್.ಜೆ.ಡಿ. ನಾಯಕ ತೇಜಸ್ವಿ ಯಾದವ್ ಬಗ್ಗೆ ಜನ ಚರ್ಚಿಸುತ್ತಾರೆ ಮತ್ತು ಅವರು ಸಿಎಂ ಆಗಬೇಕು ಎಂದು ವಾದಿಸುವ ದೊಡ್ಡ ವರ್ಗವಿದೆ. ಆದರೆ ಇಂಥದ್ದೇ ಮಾತುಗಳು ಕಾಂಗ್ರೆಸ್ ವಿಷಯದಲ್ಲಿ ಕೇಳುತ್ತಿಲ್ಲ, ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕಡಿಮೆ ಸೀಟು ಬಂದಿದ್ದರಿಂದಲೇ ಮಹಾಮೈತ್ರಿಗೆ ಅಧಿಕಾರ ಕೈತಪ್ಪಿತ್ತು. 70ರಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 19ನ್ನು ಮಾತ್ರ ಗೆದ್ದಿತ್ತು. ಈ ಬಾರಿ 61ರಲ್ಲಿ ಕೈ ಅಭ್ಯರ್ಥಿಗಳಿದ್ದು, ಬಿರುಗಾಳಿ ಎಬ್ಬಿಸುವ ಲಕ್ಷಣವಂತೂ ಇಲ್ಲ.

ಆಗಸ್ಟ್ ತಿಂಗಳಲ್ಲಿ ರಾಹುಲ್ ಗಾಂಧಿ ನೇತೃತ್ವದ 16 ದಿನಗಳ 'ಬಿಹಾರ ವೋಟ್ ಅಧಿಕಾರ ಯಾತ್ರೆ'ಗೆ ಜನ ಸೇರಿದ್ದರಲ್ಲದೆ ತಕ್ಕ ಮಟ್ಟಿಗೆ ಅದು ಹವಾ ಎಬ್ಬಿಸಿತ್ತು, ಆದರೆ ಚುನಾವಣಾ ಅಖಾಡದಲ್ಲಿ ಆ ಬಗ್ಗೆ ಚರ್ಚೆಗಳೇ ಆಗದಿರುವುದು ಅಚ್ಚರಿ ಮೂಡಿಸಿದೆ. ತೇಜಸ್ವಿ ಯಾದವ್ ಯುವಕರಿಗೆ ಉದ್ಯೋಗ ಕೊಡಿಸುವ, ವಿಧವಾ ಪಿಂಚಣಿ ಏರಿಕೆಯಂತಹ ಸ್ಥಳೀಯ ವಿಷಯಗಳನ್ನು ಪ್ರಸ್ತಾಪಿಸುತ್ತಾ ಮತಸೆಳೆಯಲು ಯತ್ನಿಸುತ್ತಿದ್ದಾರೆ.

ಎನ್‌ಡಿಎ ಮೈತ್ರಿಕೂಟದಲ್ಲಿ ಒಗ್ಗಟ್ಟಿನ ಧ್ವನಿ ಇದ್ದರೆ, ಜೆಡಿಯು-ಕಾಂಗ್ರೆಸ್ ನಡುವಿನ ಅಪನಂಬಿಕೆಗಳೇ ಫಲಿತಾಂಶದ ಮೇಲೆ ಹಾನಿ ಮಾಡುತ್ತದೆಯೇನೋ ಎಂದು ಭಾಸವಾಗುತ್ತಿದೆ. 12 ಕ್ಷೇತ್ರಗಳಲ್ಲಿ ಆರ್.ಜೆ.ಡಿ-ಕಾಂಗ್ರೆಸ್ ಅಭ್ಯರ್ಥಿಗಳು ಪರಸ್ಪರ ವಿರುದ್ಧ ಸ್ಪರ್ಧಿಸುತ್ತಿರುವುದರಿಂದ ಈ ಕ್ಷೇತ್ರಗಳಲ್ಲಿ ಮತಗಳ ವಿಭಜನೆಯಾಗುವುದು ಇಂಡಿ ಒಕ್ಕೂಟಕ್ಕೆ ಒಳ್ಳೆಯ ಲಕ್ಷಣವೇನಲ್ಲ. ಇದನ್ನು ಫ್ರೆಂಡ್ಲಿ ಫೈಟ್ ಎಂದು ವ್ಯಾಖ್ಯಾನಿಸುವುದು ವಾಸ್ತವ ಮರೆಮಾಚುವ ಯತ್ನವಷ್ಟೇ.

ಬಿಹಾರದ ವೈಶಾಲಿ ಜಿಲ್ಲೆಯ ವೈಶಾಲಿ ವಿಧಾನಸಭೆಯನ್ನೇ ತೆಗೆದುಕೊಳ್ಳಿ. ಆರ್.ಜೆ.ಡಿ. ಅಲ್ಲಿಂದ ಕುಶ್ವಾಹ ಸಮುದಾಯದ ಅಜಯ್ ಕುಶ್ವಾಹಗೆ

ತೇಜಸ್ವಿ ಯಾದವ್ ಚುನಾವಣಾ ಪೋಸ್ಟರ್

ಟಿಕೆಟ್ ನೀಡಬೇಕೆಂದು ಉದ್ದೇಶಿಸಿತ್ತು. ಅಜಯ್ ಕುಶ್ವಾಹ ಎಲ್‌ಜೆಪಿ ತೊರೆದು ಬಂದರೆ ಟಿಕೆಟ್ ನೀಡುವುದಾಗಿ ಭರವಸೆ ನೀಡಿದ್ದರಿಂದ ಮಾತು ಉಳಿಸಿಕೊಳ್ಳುವುದು ತೇಜಸ್ವಿಯ ಕರ್ತವ್ಯವಾಗಿತ್ತು. ಆದರೆ ಈ ವಿಷಯ ಗೊತ್ತಾಗಿ ಕಾಂಗ್ರೆಸ್ ಆಕಾಂಕ್ಷಿ, ಭೂಮಿಹಾರ್ ಸಮುದಾಯದ ಸಂಜೀವ್ ಕುಮಾರ್, ಮಹಾಘಟನಬಂಧನದ ಅಭ್ಯರ್ಥಿ ಘೋಷಣೆಗೆ ಮುನ್ನವೇ ತಾವೇ ಅಭ್ಯರ್ಥಿ ಎಂದು ನಾಮಪತ್ರ ಸಲ್ಲಿಸಿದ್ದರು. ತೇಜಸ್ವಿಗೆ ಪ್ರತಿಷ್ಠೆ ಪ್ರಶ್ನೆಯಾದ್ದರಿಂದ ಅಜಯ್ ಕುಶ್ವಾಹಗೆ ಸ್ಪರ್ಧೆ ಮಾಡುವಂತೆ ಸೂಚಿಸಿ, ಟಿಕೆಟ್ ಘೋಷಿಸಿದರು. ಈ ಇಬ್ಬರ ಜಗಳ ಕೊನೆಗೆ ಎನ್‌ಡಿಎಗೆ ಲಾಭ ಮಾಡಿದರೂ ಅಚ್ಚರಿ ಇಲ್ಲ. ಇಂಥದ್ದೇ ಪರಿಸ್ಥಿತಿ ಡಜನ್‌ಗಿಂತಲೂ ಹೆಚ್ಚು ಕ್ಷೇತ್ರಗಳಲ್ಲಿದೆ.

ಅ.28ರಂದು ಇಂಡಿ ಒಕ್ಕೂಟ ತನ್ನ ಚುನಾವಣಾ ಪ್ರಣಾಳಿಕೆಯನ್ನು ಪಟನಾದಲ್ಲಿ ಬಿಡುಗಡೆಗೊಳಿಸಿತು. ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಬಿಹಾರ ಚುನಾವಣಾ ಉಸ್ತುವಾರಿ ಕೃಷ್ಣ ಅಲ್ಲವರು ಮತ್ತು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಕುಮಾರ್ ಕಾಣಿಸಿಕೊಳ್ಳಲಿಲ್ಲ. ಇದು ಮಹಾಮೈತ್ರಿಯ ಮಧ್ಯೆ ಎಲ್ಲವೂ ಸರಿ ಇಲ್ಲ ಎಂಬ ಸಂದೇಶ ರವಾನಿಸಿತು. ಇಂಡಿ ಒಕ್ಕೂಟದ ಒಗ್ಗಟ್ಟಿಗೆ ಮತ್ತು ಜನರ ಮುಂದೆ ತಾವು ಪ್ರಸ್ತಾಪಿಸುವ ವಿಚಾರಗಳನ್ನು ಪರಿಣಾಮಕಾರಿಯಾಗಿ ತಲುಪಿಸಲು ಅವರ ಹಾಜರಾತಿ ಅಗತ್ಯವಿತ್ತು, ಆದರೆ ಹಾಗಾಗಲಿಲ್ಲ.

ಕನ್ಹಯ್ಯಗೆ ಭಯವಿತ್ತೇ?

ಬಿಹಾರದ ಬೇಗುಸರಾಯ್ ಮೂಲದ ಭೂಮಿಹಾರ್ ಸಮುದಾಯದ ಕನ್ಹಯ್ಯ ಕುಮಾರ್ ವಿಧಾನಸಭೆ ಚುನಾವಣೆ ಸ್ಪರ್ಧೆಯಿಂದ ದೂರ ಉಳಿಯಲು ಅವರಿಗೆ ಭವಿಷ್ಯದ ಬಗೆಗಿನ ಭಯವೇ ಕಾರಣ ಎಂಬ ಮಾತುಗಳಿವೆ. 2019ರ ಲೋಕಸಭೆ ಚುನಾವಣೆಯಲ್ಲಿ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ವಿರುದ್ಧ ಸ್ಪರ್ಧಿಸಿ ಸೋತಿದ್ದ ಕನ್ಹಯ್ಯ ಕುಮಾರ್, 2024ರ ದಿಲ್ಲಿ ವಿಧಾನಸಭೆ ಚುನಾವಣೆಯಲ್ಲಿ ಕೂಡ ಸೋಲನುಭವಿಸಿದರು. ಬಿಹಾರ ರಾಜ್ಯ ಕಾಂಗ್ರೆಸ್‌ನಲ್ಲಿ ಅಡ್ಡಗಾಲು ಹಾಕುವ ಮಂದಿ ಅನೇಕರು ಇರುವಾಗ ಮತ್ತೆ ಚುನಾವಣೆ ಸ್ಪರ್ಧಿಸಿದರೆ, ನಮ್ಮವರೇ ಸೋಲಿಸುವ ಕೆಲಸ ಮಾಡುತ್ತಾರೆ. ಮೂರು ಬಾರಿ ಚುನಾವಣೆ ಸೋತರೆ ಅದನ್ನೇ ನರೇಟಿವ್ ಮಾಡಿ, ರಾಜಕೀಯ ಭವಿಷ್ಯ ಹಾಳು ಮಾಡುತ್ತಾರೆ ಎಂಬ ಆತಂಕ ಅವರದ್ದಾಗಿತ್ತು ಎಂಬ ಮಾತುಗಳಿವೆ. ತೇಜಸ್ವಿ ಯಾದವ್ ಕೂಡ ಕನ್ಹಯ್ಯ ಸೋಲನ್ನೇ ಬಯಸುತ್ತಾರೆ ಎನ್ನುವುದು ಕಾಂಗ್ರೆಸ್ ಒಳಗಿನ ಚರ್ಚೆ. ಕೆಲ ದಿನಗಳ ಹಿಂದೆ ಬಿಹಾರ ಚುನಾವಣೆಯಲ್ಲೇಕೆ ಸ್ಪರ್ಧಿಸುತ್ತಿಲ್ಲ ಎಂಬ ಪ್ರಶ್ನೆಗೆ ಕನ್ಹಯ್ಯ ಅವರು, 'ಪಾರ್ಟಿ ಹೇಳಿದರೆ ಅಂಡಮಾನ್‌ನಲ್ಲೂ ಸ್ಪರ್ಧೆ ಮಾಡುವೆ' ಎಂದಿದ್ದರು.

ರಾಘವ ಶರ್ಮ ನಿಡ್ಲೆ
ವಿಶ್ವವಾಣಿ ಸಾಕ್ಷಾತ್ ವರದಿ ಬಿಹಾರ ಯಾತ್ರೆ

ಇಂಡಿ ಒಕ್ಕೂಟದ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಆರ್.ಜೆ.ಡಿ.ಯ ತೇಜಸ್ವಿ ಯಾದವ್‌ರನ್ನು ಅಧಿಕೃತವಾಗಿ ಘೋಷಿಸಿದರೂ, ರಾಹುಲ್ ಗಾಂಧಿ ಮಾತ್ರ ಮಾತ್ರ 'ತೇಜಸ್ವಿ ಬಿಹಾರದ ನಾಯಕ ಆಗಲಿದ್ದಾರೆ. ಅವರನ್ನು ಗೆಲ್ಲಿಸಲು ಮತ್ತು ವರ್ಚಸ್ವೀ ನಾಯಕತ್ವ ರಾಜ್ಯಕ್ಕೆ ಸಿಗಲು ನೀವು ಮಹಾಘಟಬಂಧನಕ್ಕೆ ಮತ ನೀಡಬೇಕು ಎಂದು ತಮ್ಮ ಜನಸಭೆಗಳಲ್ಲಿ ಏಕೆ ಹೇಳುತ್ತಿಲ್ಲ?' ಎಂಬ ಚರ್ಚೆಗಳು ಸಹಜವಾಗಿಯೇ ಆರ್.ಜೆ.ಡಿ. ಕ್ಯಾಂಪ್‌ಗಳಲ್ಲಿ ನಡೆಯುತ್ತಿವೆ.

ವೋಟ್ ಚೋರಿ ಯಾತ್ರೆ ನಡೆಸಿದ್ದಾಗ ತೇಜಸ್ವಿ ಯಾದವರು ರಾಹುಲ್ ಗಾಂಧಿ ತಮ್ಮ ಭಡೇ ಭಾಯ್ ಎಂದು ಹೇಳಿದ್ದರು. ಈ ಯಾತ್ರೆಯಲ್ಲಿ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ಸಿನ ಪೋಸ್ಟರ್‌ಗಳೇ ಕಾಣಿಸಿಕೊಂಡಿದ್ದವು. ಯಾತ್ರೆಗೆ ಸಹಕಾರ ನೀಡುತ್ತಿರುವ ಆರ್.ಜೆ.ಡಿ ಅಥವಾ ತೇಜಸ್ವಿಯವರ ಒಂದೇ ಒಂದು ಪೋಸ್ಟರ್ ಇರಲಿಲ್ಲ, ಅಂದರೆ ಇದು ಕೇವಲ ರಾಹುಲ್ ನಾಯಕತ್ವ ಪ್ರೊಜೆಕ್ಟ್ ಮಾಡುವ ಯಾತ್ರೆಯೆ? ನಮ್ಮ ಅಸ್ತಿತ್ವಕ್ಕೆ ಯಾವುದೇ ಬೆಲೆ ಇಲ್ಲವೇ ಎಂದು ತೇಜಸ್ವಿಗೆ ಅನಿಸಿತ್ತು. ಇಂಥಾ ಚರ್ಚೆಗಳು ಆರ್.ಜೆ.ಡಿ ವಲಯದಲ್ಲೇ ಕೇಳಿಸುತ್ತಿವೆ.

ಬಿಹಾರ ಗೆಲ್ಲಬೇಕೆಂದರೆ ಎನ್‌ಡಿಎ ಮೈತ್ರಿಕೂಟಕ್ಕಿಂತ ಮಹಾಘಟಬಂಧನ ಮಜಬೂತಾಗಿದೆ ಎಂಬುದನ್ನು ಮತದಾರರಿಗೆ ಮನದಟ್ಟು ಮಾಡುವ ಅಗತ್ಯವಿದೆ. ಇದಕ್ಕಾಗಿ ರಾಹುಲ್-ತೇಜಸ್ವಿ ಯಾದವ್ ಹಲವು ಜಂಟಿ ಜನಸಭೆ, ರಾಲಿಗಳನ್ನು ನಡೆಸಬೇಕಿತ್ತು.

ತಂದೆ ಲಾಲೂ ಪ್ರಸಾದ್ ಯಾದವ್ ಜತೆ ತೇಜಸ್ವಿ

ರಾಹುಲ್ ಗಾಂಧಿ ಜೊತೆ ತೇಜಸ್ವಿ ಯಾದವ್

ಪಟನಾ ಕಾಂಗ್ರೆಸ್ ಕಚೇರಿ

ಬಹುಶಃ ತಾಳಮೇಳದ ಕೊರತೆಯಿಂದ ಈ ಇಬ್ಬರು ನಾಯಕರು ಒಟ್ಟಾಗಿ ಕಾಣಿಸಿಕೊಂಡಿಲ್ಲ ಎಂಬ ಭಾವನೆ ಅನೇಕರದ್ದಾಗಿದೆ. ಬಿಹಾರದಲ್ಲಿ ತನ್ನ ಪ್ರಭಾ ವಲಯ ವಿಸ್ತರಣೆಯಾಗಬೇಕೇ ವಿನಃ ರಾಹುಲ್ ಗಾಂಧಿಯದ್ದಲ್ಲ, ಹೀಗಾಗಿ ಚುನಾವಣೆ ಪ್ರಚಾರದಲ್ಲಿ ತಾನು ಹೆಚ್ಚು ಕಾಣಿಸಿಕೊಳ್ಳಬೇಕು ಮತ್ತು ತನ್ನ ನಾಯಕತ್ವಕ್ಕೆ ಜನ ಮತ ಹಾಕಿದ್ದಾರೆ ಎಂಬ ಸಂದೇಶ ರವಾನಿಸುವುದೂ ತೇಜಸ್ವಿ ಮನಸ್ಸಿನೊಳಗಿದ್ದಂತಿದೆ. ಅದಕ್ಕಾಗಿ ರಾಹುಲ್‌ರನ್ನು ಕಡೆಗಣಿಸಿರುವ ಸಾಧ್ಯತೆಗಳಿವೆ.

ಅದೇ ರೀತಿ ರಾಹುಲ್ ಗಾಂಧಿ ಕೂಡ 'ತೇಜಸ್ವಿ ಯಾದವ್‌ರ ಬಗ್ಗೆ ಹೆಚ್ಚು ಗಮನ ಕೊಡದೆ, ಕಾಂಗ್ರೆಸ್ ಮತ್ತು ಪಕ್ಷದ ವಿಚಾರಗಳನ್ನು ಮುಂದೆ ಮಾಡಿ ಮತ ಕೇಳಿ.. ಆರ್.ಜೆ.ಡಿ.ಯನ್ನೇ ಅವಲಂಬಿಸಿ, ಅವರಿಂದ ನಾವು ಎಂಬಂತೆ ತೋರಿಸಿಕೊಳ್ಳಬೇಡಿ' ಎಂದು ಸ್ಪಷ್ಟವಾಗಿ ಪಕ್ಷದ ಕೇಡರ್‌ಗೆ ತಿಳಿಸಿದ್ದಾರೆನ್ನಲಾಗಿದೆ. 6 ತಿಂಗಳ ಹಿಂದೆ ಬಿಹಾರ ಕಾಂಗ್ರೆಸ್ ಅಖಿಲೇಶ್ ಪ್ರತಾಪ್ ಸಿಂಗ್ ಅವರನ್ನು ಹುದ್ದೆಯಿಂದ ಕೆಳಗಿಳಿಸಿ, ರಾಜೇಶ್ ಕುಮಾರ್‌ರನ್ನು ಪ್ರದೇಶ ಅಧ್ಯಕ್ಷ ಮಾಡಿದ್ದೂ ಇದೇ ಕಾರಣಕ್ಕೆ. ಅಖಿಲೇಶ್, ಪ್ರತಾಪ್ ಆರ್.ಜೆ.ಡಿ.ಗೆ ಹತ್ತಿರವಾಗುತ್ತಿದ್ದಾರೆ ಮತ್ತು ಲಾಲೂ ಪ್ರಸಾದ್ ಯಾದವ್‌ರನ್ನು ನೆಚ್ಚಿಕೊಂಡು ಪಕ್ಷ ನಡೆಸುತ್ತಿದ್ದಾರೆ ಎಂಬ ದೂರುಗಳು ದಿಲ್ಲಿಗೆ ತಲುಪಿದ್ದವು. ಸೀಟು ಹಂಚಿಕೆ ವಿಷಯದಲ್ಲಿ ಸ್ಥಳೀಯ ಕಾರ್ಯಕರ್ತರು ದಿಲ್ಲಿಯಿಂದ ಬಂದವರೊಂದಿಗೆ ಗಲಾಟೆ ಎಬ್ಬಿಸಿದ್ದಕ್ಕೆ ಈ ಆಂತರಿಕ ಬಿಕ್ಕಟ್ಟುಗಳೇ ಕಾರಣ ಎಂದು ಕಾಂಗ್ರೆಸ್ ಪಕ್ಷದವರೇ ಹೇಳುತ್ತಾರೆ.

ಈ ನಡುವೆ ಆಗಸ್ಟ್ ತಿಂಗಳ ವೋಟ್ ಚೋರಿ ಯಾತ್ರೆ ಮುಗಿದು, ಚುನಾವಣೆ ಹೊಸ್ತಿಲಲ್ಲಿದ್ದರೂ ಸುಮಾರು 55 ದಿನ ರಾಹುಲ್ ಗಾಂಧಿ ಬಿಹಾರ ಕಡೆ ಮುಖ ಮಾಡಲಿಲ್ಲ. ಪ್ರಚಾರ ಆರಂಭಗೊಂಡ ಹಲವು ದಿನಗಳ ಬಳಿಕ ಬಿಹಾರಕ್ಕೆ ಬಂದರು. ಈ 55 ದಿನಗಳ ಗೈರು ಯಾಕೆ ಎನ್ನುವುದು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಕಲ್ಪನೆಗೆ ಮೀರಿದ್ದು ಎಂದು ಪಕ್ಷದ ಮುಖಂಡರೊಬ್ಬರು ಬೇಸರ ವ್ಯಕ್ತಪಡಿಸುತ್ತಾರೆ. ಕಾಂಗ್ರೆಸ್-ಆರ್.ಜೆ.ಡಿ. ನಡುವಿನ ಆಂತರಿಕ ಬಿಕ್ಕಟ್ಟು, ಟಿಕೆಟ್ ಹಂಚಿಕೆ ಗಲಾಟೆಗಳಿಂದಾಗಿ ಆಗಸ್ಟ್‌ನಲ್ಲಿ ಹವಾ ಎಬ್ಬಿಸಿದ್ದ ವೋಟ್ ಚೋರಿ ಯಾತ್ರೆಯ ಪ್ರಭಾವಳಿ ಅಕ್ಟೋಬರ್ ವೇಳೆ ಮರೆಯಾಗಿ ಹೋಗಿತ್ತು..!

ಸಹಾನಿ ಪಲ್ಟಿ ಹೊಡೆದರೆ..?!

ಮಹಾಘಟಬಂಧನ ಮಿತ್ರಪಕ್ಷ ವಿಕಾಸ್‌ಶೀಲ್ ಇನ್ಸಾನ್ ಪಾರ್ಟಿಯ ನಾಯಕ ಮಲ್ಲಾ (ಬೆಸ್ತ) ಸಮುದಾಯದ ಮುಖೇಶ್ ಸಹಾನಿ ಹಿಂದೆ ಎನ್‌ಡಿಎ ಮೈತ್ರಿಕೂಟದಲ್ಲಿದ್ದವರು, ಈ ಬಾರಿ ಇಂಡಿ ಒಕ್ಕೂಟದಲ್ಲಿದ್ದಾರೆ. ಇವರು ಯಾವಾಗ ಯಾವ ಬಣಕ್ಕೂ ಹಾರಬಲ್ಲರು. ಹೀಗಾಗಿ ಚುನಾವಣೋತ್ತರ ಸನ್ನಿವೇಶದಲ್ಲಿ ಮುಖೇಶ್ ಸಹಾನಿ ಎಲ್ಲಿರುತ್ತಾರೆ ಎಂದು ಈಗ ಊಹಿಸಲು ಸಾಧ್ಯವೇ ಇಲ್ಲ. ಮುಖೇಶ್ ಸಹಾನಿ ಮೈತ್ರಿಕೂಟದ ಡಿಸಿಎಂ ಅಭ್ಯರ್ಥಿ ಎಂದು ಘೋಷಿಸಿ, ನಂತರ ನಾಮಪತ್ರ ಸಲ್ಲಿಕೆಯ ಒಂದು ದಿನಕ್ಕೆ ಮುನ್ನ ಸಹಾನಿಗೆ ಬಿಜೆಪಿ ನಾಯಕರೊಬ್ಬರಿಂದ ಕರೆ ಬಂದು ಅವರ ಮಾತು, ಭರವಸೆಗಳಿಂದ ಸಂತುಷ್ಟರಾಗಿ, ಪಕ್ಷೇತರ ಸ್ಪರ್ಧೆಗೂ ಒಪ್ಪಿಗೆ ಸೂಚಿಸಿದ್ದರಂತೆ. ಇದಕ್ಕಾಗಿ ಮಾರನೇ ದಿನವೇ ಪಟ್ನಾದ ಮೌರ್ಯ ಹೊಟೇಲ್‌ನಲ್ಲಿ 12 ಗಂಟೆಗೆ ಪತ್ರಿಕಾಗೋಷ್ಠಿ ಕರೆದಿದ್ದ ಮುಖೇಶ್ ಸಹಾನಿಗೆ, ತಕ್ಷಣವೇ ತೇಜಸ್ವಿ ಯಾದವ್ ಕರೆ ಮಾಡಿ, ಮೈತ್ರಿಕೂಟ ಬಿಡದಂತೆ ಮನದಟ್ಟು ಮಾಡಿದ್ದರು. ಹಾಗಾಗಿ ಪತ್ರಿಕಾಗೋಷ್ಠಿ ಸಂಜೆ 4 ಗಂಟೆಗೆ ಮುಂದೂಡಲಾಯಿತು. ಸಹಾನಿ ನಿರಂತರ ದೂರವಾಣಿಯಲ್ಲಿ ಕರೆಯಲ್ಲಿದ್ದರು. ಕೊನೆಗೆ ಲಾಲೂ ಪ್ರಸಾದ್‌ಯಾದವ್ ಕಡೆಯಿಂದ ಫೋನ್ ಬಂತು ಮತ್ತು ಅವರ ಎಚ್ಚರಿಕೆಗೆ ಸಹಾನಿ ತಣ್ಣಗಾದರು ಎನ್ನುವುದು ಆರ್.ಜೆ.ಡಿ. ಮೂಲಗಳಿಂದ ಬಂದ ಮಾಹಿತಿ.

ಕೆರೊಲೈನಾ ಕನ್ನಡ ಬಳಗ, ಶಾರ್ಲೆಟ್, ನಾರ್ತ್ ಕೆರೊಲೈನಾ

ತವರು ದೇಶದಿಂದ ದೂರ ಹೋದ ಮಾತ್ರಕ್ಕೆ ತವರು ಭಾಷೆ ಸಂಸ್ಕೃತಿ ಆಚಾರ ವಿಚಾರಗಳಿಂದ ದೂರ ಉಳಿಯಬೇಕೇ? ಎನ್ನುವ ಪ್ರಶ್ನೆಯೊಂದಿಗೆ ಆರಂಭವಾಗಿದ್ದೆ ಕೆರೊಲೈನಾ ಕನ್ನಡ ಬಳಗ. 2008ರಲ್ಲಿ ಶಾರ್ಲೆಟ್‌ನಲ್ಲಿರುವ ಎಲ್ಲಾ ಕನ್ನಡಿಗರನ್ನು ಒಂದುಗೂಡಿಸುವ ಸಲುವಾಗಿ ಸಿಕೆಬಿ ಬಳಗ ಸ್ಥಾಪನೆಯಾಯಿತು. ಈ ರೀತಿ ಸರಳ ಕಲ್ಪನೆಯಿಂದ ಶುರುವಾದ ಈ ಬಳಗವು ಇಂದು ಹೆಮ್ಮರವಾಗಿ ಬೆಳೆದು ನಿಂತಿದೆ.

ಈ ಸಂಘದ ಮೂಲ ಉದ್ದೇಶವೆಂದರೆರ, ಅಮೆರಿಕದಲ್ಲಿ ಹುಟ್ಟಿ ಬೆಳೆದ ಕನ್ನಡ ನಾಡ ಕಂದಮ್ಮಗಳಿಗೆ ಕನ್ನಡ ನಾಡು-ನುಡಿ,ಆಚಾರ-ವಿಚಾರದ ಪರಿಚಯ, ಹಾಗೂ ಆಗಲೇ ಅದರ ಸವಿ ಉಂಡವರಿಗೆ ಅದನ್ನು ಮುಂದುವರಿಸುವ ಬಾಧ್ಯತೆ. ಈ ಉದ್ದೇಶವನ್ನು ಸಾಕಾರಗೊಳಿಸಲು ಸಿಕೆಬಿ ಬಳಗ ಸತತ ಕಾರ್ಯ ನಿರ್ವಹಿಸುತ್ತದೆ. ಹಲವು ಕಾರ್ಯಕ್ರಮಗಳ ಆಲೋಚನೆ ಹಾಗೂ ಆಯೋಜನೆ ಮಾಡಲಾಗುತ್ತಿದೆ. ಪ್ರಮುಖವಾಗಿ 'ನಾಡೋತ್ಸವ'ದ ಮೂಲಕ ಕನ್ನಡನಾಡು ಭವ್ಯ ಪರಂಪರೆ ಹಾಗೂ ಸಂಸ್ಕೃತಿಯಿಂದ ಒಡಗೂಡಿದೆ. ಇದರಲ್ಲಿ ಹಲವು ಹಬ್ಬಗಳ ಆಚರಣೆ ವಿಶೇಷವಾದದ್ದು. ಸಿಕೆಬಿ ಬಳಗವು ಪ್ರತಿ ವರ್ಷ ಕೆಲವು ಹಬ್ಬಗಳ ಆಚರಣೆಯನ್ನು ಆಯೋಜಿಸುತ್ತದೆ. ಇದರಲ್ಲಿ ಯುಗಾದಿ, ಕನ್ನಡ ರಾಜ್ಯೋತ್ಸವ, ದೀಪಾವಳಿ, ಮಹಿಳಾ ದಿನಾಚರಣೆಗಳು ಪ್ರಮುಖವಾದದ್ದು. ಈ ಕಾರ್ಯಕ್ರಮಗಳಲ್ಲಿ ಹಬ್ಬಕ್ಕೆ ತಕ್ಕನಾದ ಭರ್ಜರಿಯಾದ ಬಾಳೆ ಎಲೆ ಊಟ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ, ಸಿಕೆಬಿ ಬಳಗದ ಸದಸ್ಯರಿಂದ ಹಾಗೂ ಅವರ ಮಕ್ಕಳಿಂದ ಪ್ರತಿಭಾ ಪ್ರದರ್ಶನ, ಕನ್ನಡ ನಾಡಿನ ಪ್ರಸಿದ್ಧ ಕಲಾವಿದರಿಂದ ಕಾರ್ಯಕ್ರಮಗಳು (ಸಂಗೀತ ಸಂಜೆ, ಹಾಸ್ಯ ಸಂಜೆ ಇತ್ಯಾದಿ) ಇದಕ್ಕಾಗಿ ನಮ್ಮ ಕರ್ನಾಟಕದಿಂದ ಕಲಾವಿದರನ್ನು ಕರೆಸಲಾಗುತ್ತದೆ.

ಯುವ ಸಮಿತಿಯ ಮೂಲಕ ಸೇವೋತ್ಸವ ಎನ್ನುವ ಪರಿಕಲ್ಪನೆಯಲ್ಲಿ, ಕರ್ನಾಟಕದ ಕೆಲವು ಹಿಂದುಳಿದ ಗ್ರಾಮದ ಶಾಲೆಯ ಶೌಚಾಲಯಗಳನ್ನು ಜೀರ್ಣೋದ್ಧಾರ ಮಾಡಿರುವುದು. ಇದಕ್ಕೆಬೇಕಾದ ಇಚ್ಛಾ ಶಕ್ತಿ, ಧನ ಸಂಗ್ರಹಣೆ ಮಾಡುವ ಚಾಕಚಕ್ಯತೆ, ಸಮನ್ವಯದ ತಂತ್ರ ಹೇರಳವಾಗಿದೆ. ಒಟ್ಟಾರೆ ಹೇಳುವುದಾದರೆ ಈ ಯುವ ಸಮಿತಿ ಸಿಕೆಬಿಯ ಕಳಶಪ್ರಾಯ. ಇದರೊಂದಿಗೆ ಅಮೆರಿಕಾದಲ್ಲಿ ಹುಟ್ಟಿ ಬೆಳೆದ ಕನ್ನಡ ನಾಡಿನ ಕಂದಮ್ಮಗಳಿಗೆ ಕನ್ನಡ ನುಡಿ ಸಂಸ್ಕೃತಿಯ ಪರಿಚಯ ಅಷ್ಟಾಗಿ ಇರದು. ಹಾಗಾಗಿ ಸಿಕೆಬಿ ಬಳಗವು ಆಟ ಪಾಠ ಕನ್ನಡ ಶಾಲೆ ಎಂಬ ಕಾರ್ಯಕ್ರಮದ ಅಡಿಯಲ್ಲಿ ಕನ್ನಡವನ್ನು ಕಲಿಸಲಾಗುತ್ತದೆ. ಕರ್ನಾಟಕ ಸರಕಾರದ ಅಂಗೀಕೃತ ಪಠ್ಯಕ್ರಮದ ಪ್ರಕಾರ ಸ್ವರಬಲ್ಲ, ಅಕ್ಷರಬಲ್ಲ, ಹಾಗೂ ಪದ ಬಲ್ಲ ಎಂಬ ಮೂರು ಮಟ್ಟಗಳಲ್ಲಿ ಕನ್ನಡ ಭಾಷೆಯನ್ನು ಮಕ್ಕಳಿಗೆ ಕಲಿಸಿಕೊಡಲಾಗುವುದು. ಇದನ್ನು ಹೇಳಿಕೊಡುವವರು ಸಿಕೆಬಿ ಬಳಗದ ಸ್ವಯಂಸೇವಕರು, ತಾಂತ್ರಿಕವಾಗಿ ಹೇಳುವುದಾದರೆ ವಿದೇಶಿಯರಾದ ಈ ಕಂದಮ್ಮಗಳ ಬಾಯಿಯಲ್ಲಿ ಕನ್ನಡ ಕೇಳುವುದೇ ಒಂದು ಸೌಭಾಗ್ಯ. ಈ ಮಹೋನ್ನತ ಕಾರ್ಯಕ್ರಮವನ್ನು ಯಾವುದೇ ಧನಾಪೇಕ್ಷೆ ಇಲ್ಲದೆ ಸೇವೆ ಸಲ್ಲಿಸುವ ಶಿಕ್ಷಕರಿಗೆ ಸಿಕೆಬಿ ಬಳಗ ಅವರ ಶ್ರಮವನ್ನು ಗುರುತಿಸಿ ಸಭೆ ಸಮಾರಂಭಗಳಲ್ಲಿ ಅವರನ್ನು ಅಭಿನಂದಿಸುವ ಒಂದು ಕಾರ್ಯಕ್ರಮವನ್ನು ಮಾಡುತ್ತದೆ.

ಕ್ರೀಡೋತ್ಸವದ ಮೂಲಕ ಸಿಕೆಬಿ ಬಳಗವು ಹಲವು ಕ್ರೀಡಾ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಇದರಲ್ಲಿ ಪ್ರಮುಖವಾದದ್ದು ವಾಲಿಬಾಲ್, ತ್ರೋಬಾಲ್, ಇತ್ಯಾದಿ. ಇದನ್ನು ಯಾವ ರಾಜ್ಯಮಟ್ಟದ ಸ್ಪರ್ಧೆಗೆ ಕಮ್ಮಿ ಇಲ್ಲದಂತೆ ಆಯೋಜಿಸುತ್ತಾರೆ. ತಂಡಗಳ ರಚನೆ, ಸ್ಪರ್ಧೆಗೆ ಸತತ ಅಭ್ಯಾಸ, ಸ್ಪರ್ಧೆ ದಿವಸ ಬಿರುಸಿನ ಹೋರಾಟ, ಅಬ್ಬ ಅದನ್ನು ನೋಡಿಯೇ ಅನುಭವಿಸಬೇಕು. ಇದರೊಂದಿಗೆ ವಿನೋದೋತ್ಸವವನ್ನು ಪ್ರತಿವರ್ಷ ಬೇಸಿಗೆಯಲ್ಲಿ ಒಂದು ಇಡೀ ದಿನ ವಿಹಾರ ಕಾರ್ಯಕ್ರಮವನ್ನು ಆಯೋಜನೆಗೊಳಿಸಲಾಗುತ್ತದೆ. ಇದರ ವಿಶೇಷವೆಂದರೆ ಭಾರತದಿಂದ ಬಂದಿರುವ ತಂದೆ-ತಾಯಿ, ಬಂಧು-ಬಳಗದವರಿಗೂ ಆಹ್ವಾನವಿರುತ್ತದೆ. ಈ ವಿಹಾರದಲ್ಲಿ ಎರಡು ಪ್ರಮುಖ ಆಕರ್ಷಣೆಗಳು. ಒಂದು ವನ ಭೋಜನ ಚಹಾ, ಹಾಗೂ ಲಘು ಉಪಹಾರ. ಮತ್ತೊಂದು ಎಲ್ಲಾ ವಯೋ ವರ್ಗದವರಿಗೂ ವಿವಿಧ ರೀತಿಯ ಕ್ರೀಡೆ ಹಾಗೂ ಚಟುವಟಿಕೆ. ಉದಾಹರಣೆಗೆ ಲಗೋರಿ, ಬುಗುರಿ, ಟಗ್ ಆಫ್ ವಾರ್, ಓಟದ ಆಟ, ಒಂದು ನಿಮಿಷದ ಆಟಗಳು, ಇತ್ಯಾದಿ.

ಸಂಗಮ ಕನ್ನಡ ಸಂಘ, ಸೈಂಟ್ ಲೂಯಿಸ್, ಮಿಸ್ಸೋರಿ

ಬೆಂಕಿ ಬಸಣ್ಣ, ನ್ಯೂಯಾರ್ಕ್

ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಎಂಬ ಕುವೆಂಪು ಅವರ ಕವನದ ಸಾಲಿನಂತೆ ತಾಯಿನಾಡಿನಿಂದ ಹೊರಗೆ ಇದ್ದು, ತಮ್ಮ ಕಸ್ತೂರಿ ಕನ್ನಡ ಭಾಷೆ, ಕರ್ನಾಟಕ ಸಂಸ್ಕೃತಿ, ಕಲೆಗಳು, ಆಟ ಪಾಠ, ಆಚರಣೆ, ವಿಚಾರಣೆ ಹಾಗೂಮುಂದಿನ ಪೀಳಿಗೆಗೆ ಕಲಿಸುವ ಉದ್ದೇಶದಿಂದ ಸೈಂಟ್ ಲೂಯಿಸ್ ಕನ್ನಡಾಭಿಮಾನಿ ಮಿತ್ರರ ಸಮಾಲೋಚನೆಯಿಂದ ಸಂಗಮದ ಉಗಮ. ಇದು ಮಿಸ್ಸರಿ ಮತ್ತು ಮಿಸ್ಸಿಸ್ಸಿಪ್ಪಿ ನದಿಗಳ ಸಂಗಮ ಸ್ಥಾನ, ಸಂಗಮ ಕನ್ನಡ ಜನರ ಮಿಲನ ಸ್ಥಾನ. ಹಾಗಾಗಿ ಸಂಗಮದ ನಾಮಕರಣ ಈ ಕಾರಣಗಳಿಂದ. 1985ರ ಯುಗಾದಿಯ ಸಡಗರದೊಂದಿಗೆ ಸಂಗಮದ ಮೊತ್ತ ಮೊದಲ ಕಾರ್ಯಕ್ರಮ ನಡೆಯಿತು.

ಅಂದಿನಿಂದ ಇಂದಿನವರೆಗೂ ಪ್ರತಿವರ್ಷ ಸಂಗಮ ಯುಗಾದಿ, ತಂದೆಯರ ದಿನಾಚರಣೆ ಹಾಗೂ ವನಭೋಜನ, ಗಣೇಶಹಬ್ಬ ಹಾಗೂ ರಾಜ್ಯೋತ್ಸವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಡಾ. ಶಂಕರ್ ಶಾಸ್ತ್ರಿ ಅವರು 40 ವರ್ಷಗಳಿಂದ ಗಣೇಶ ಹಬ್ಬವನ್ನು ಶಾಸ್ತ್ರೋಕ್ತವಾಗಿ, ಮಕ್ಕಳಿಗೆ ಮನ ಮುಟ್ಟುವಂತೆ ನಡೆಸಿಕೊಡುತ್ತಿರುವುದು ಹಾಗೆಯೇ ಗಣೇಶ ಭಜನೆಗಳನ್ನು ಯುವ ಕಲಾವಿದರು ಪುಟಾಣಿ ಮಕ್ಕಳಿಗೆ ಕಲಿಸಿ ಹಾಡಿಸುತ್ತಿರುವ ಕ್ರಮ, ಅಂಬೊಡೆ ಕಡುಬುಗಳನ್ನು ಸದಸ್ಯರು ಒಂದೇ ಮನೆಯವರಂತೆ ಸೇರಿ ಮಾಡುತ್ತಿರುವುದು ವಿಶೇಷ ಸಂಗತಿ. 80-90ರ ದಶಕಗಳಲ್ಲಿ ಬಹಳ ಸಂಪನ್ಮೂಲಗಳ

ಕೊರತೆ ಇದ್ದರೂ ಎಲ್ಲಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿ ಕೊಟ್ಟು ಸದಸ್ಯರು ಮನೆಯಲ್ಲೇ ತಯಾರಿಸಿದ ಊಟ ಉಪಹಾರ ತಂದು ಹಂಚಿ ತಿನ್ನುವ ಪದ್ಧತಿಯಿತ್ತು. ಸಂಗಮ ಸದಸ್ಯರು ಕಥೆ, ಕವಿತೆ, ಚಿತ್ರ ವಿನ್ಯಾಸಗಳನ್ನು ತಮ್ಮ ಕೈಯಲ್ಲೇ ಮುದ್ದಾಗಿ ಬರೆದು ಸಂಗಮ ವಾರ್ಷಿಕ ಪತ್ರಿಕೆಯನ್ನು ದಿವಂಗತ ಡಾ.ಅಶ್ವಥ್ ರಾವ್ ಅವರ ನೇತೃತ್ವದಲ್ಲಿ ಬಿಡುಗಡೆ ಮಾಡಿ ಪ್ರತೀ ಸದಸ್ಯರೊಡನೆ ಹಂಚಿಕೊಂಡಿರುವುದು ಸಂತಸದ ಸಂಗತಿ.

ವರ್ಷದಿಂದ ವರ್ಷಕ್ಕೆ ಮಕ್ಕಳು ಉತ್ಸಾಹದಿಂದ ಸಂಗಮದ ನೃತ್ಯ, ಸಂಗೀತ, ನಾಟಕಗಳಲ್ಲಿ ಭಾಗವಹಿಸಿ ಕಳೆ ಹೆಚ್ಚಿಸುತ್ತಿರುವುದು ನಮಗೆಲ್ಲಾ ಸಾರ್ಥಕ ಭಾವನೆ ನೀಡಿದೆ. ಅಷ್ಟೇ ಅಲ್ಲದೆ ಸಂಗಮ ಚದುರಂಗ, ಕ್ರಿಕೆಟ್, ಕರ್ನಾಟಕದ ಕ್ರೀಡೆಗಳಾದ ಲಗೋರಿ, ಚಿನ್ನಿದಾಂಡು, ಕಬಡ್ಡಿ ಮುಂತಾದ ಆಟಗಳನ್ನು ಯುವ ಪೀಳಿಗೆಗೆ ಪರಿಚಯಿಸಿ, ಪ್ರೋತ್ಸಾಹಿಸಿ, ಉಳಿಸಿ ಬೆಳೆಸುವ ಅವಕಾಶಗಳನ್ನು, ಕಲಿಸುತಿದೆ. ಸಂಗಮದ ಸದಸ್ಯರು ಹಿಂದೂ ದೇವಾಲಯ ಮತ್ತು ಅದಕೆ ಸೇರಿದ ಯೂತ್ ಗ್ರೂಪ್, ಬಾಲವಿಹಾರ್, ಸೈಂಟ್ ಲೂಯಿಸ್ ಏರಿಯ ಫುಡ್ ಬ್ಯಾಂಕ್ ಸೇರಿದಂತೆ ವಿವಿಧ ಸಂಸ್ಥೆಗಳಲ್ಲಿ ಸ್ವಯಂ ಸೇವಕರಾಗಿ ಸೇವೆ ಸಲ್ಲಿಸುವ ಅವಕಾಶ ಕಲ್ಪಿಸಿಕೊಟ್ಟು, ನಿಸ್ವಾರ್ಥ ಸೇವೆಯ ಮಹತ್ವವನ್ನು ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಿರುವ ಕೆಲಸ ನಿರಂತರ.

80ರ ದಶಕದಲ್ಲಿ, ಮಧ್ಯಮವಲಯ ಕನ್ನಡ ಸಮ್ಮೇಳನ ಸೈಂಟ್ ಲೂಯಿಸ್‌ನಲ್ಲಿ ವಿಜೃಂಭಣೆಯಿಂದ ನಡೆಯಿತು. ಇದಕ್ಕೆ ಮಿಸ್ಸೋರಿ ಆಸುಪಾಸಿನ ರಾಜ್ಯಗಳ ಕನ್ನಡಿಗರೂ ಭಾಗವಹಿಸಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕವಿಗೋಷ್ಠಿ, ವಿವಿಧ ಕನ್ನಡ ಕೂಟಗಳ ನಾಟಕ, ಜಾನಪದ ನೃತ್ಯ, ಭಾವ ಗೀತೆಗಳು ನಡೆಸಲ್ಪಟ್ಟು ಕನ್ನಡ ಕೋಗಿಲೆ ಹಾಡಿ ನಲಿಯಿತು. ಆ ಸಮಯದಲ್ಲಿ ಸಂಗಮ ಕನ್ನಡ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಅಮೆರಿಕ ಕನ್ನಡ ಪತ್ರಿಕೆಯ ಹರಿಹರೇಶ್ವರ ದಂಪತಿಗಳು ಆ ಸಮಯದಲ್ಲಿ ಸೈಂಟ್ ಲೂಯಿಸ್ ನಲ್ಲಿ ನೆಲೆಸಿದ್ದರು. ಅವರು ಸಂಗಮದ ಮಕ್ಕಳಿಗೆ ಕನ್ನಡ ಶಾಲೆಯನ್ನು ಸಾರ್ವಜನಿಕ ಗ್ರಂಥಾಲಯದಲ್ಲಿ ಪ್ರಾರಂಭಿಸಿದರು. ಹೀಗಾಗಿ ನಮ್ಮ ಮಕ್ಕಳಿಗೆ ಕನ್ನಡ ಅಕ್ಷರ ಹಾಗೂ ವ್ಯಾಕರಣ ಪರಿಚಯ ಆಯ್ತು. ಹರಿಹರೇಶ್ವರ ದಂಪತಿಗಳಿಗೆ ಸಂಗಮ ಚಿರಋಣಿ, ಕನ್ನಡ ಶಾಲೆ ಮುಂದುವರೆದು ಈಗ ಶಾಲೆಯ ಮಕ್ಕಳು ಕನ್ನಡ ನಿರರ್ಗಳವಾಗಿ ಮಾತನ್ನಾಡುತ್ತಿರುವುದು ಶ್ಲಾಘನೀಯ.

ಹಲವಾರು ವರ್ಷಗಳಿಂದ ಸಂಗಮ ಕಾರ್ಯಕಾರಿ ಸಮಿತಿಗಳು ನಮ್ಮ ಕನ್ನಡಿಗರೇ ಆದ ಮೈಸೂರು ಅನಂತ ಸ್ವಾಮಿ ಮತ್ತು ಅವರ ಮಕ್ಕಳು. ಡಾ. ವಿಧ್ಯಾಭೂಷಣ, ಶ್ಯಾಮಲಾ ಭಾವೆ. ಶಂಭು, ಶಿವಾನಂದ ಹೆಗ್ಗಡೆ ಮತ್ತು ಪಟ್ಲ ಸತೀಶ್ ಶೆಟ್ಟಿ ಯಕ್ಷಗಾನ ತಂಡಗಳು, ಸಿ.ಆರ್. ಸಿಂಹ ನಾಟಕಗಳು, ಕವಿಗಳಾದ ಲಕ್ಷ್ಮೀನಾರಾಯಣ ಭಟ್ಟ ಹಾಗೂ ನಿಸ್ಸಾರ್ ಅಹ್ಮದ್, ಕಣ್ಣನ್ ಅವರ ಹಾಸ್ಯ, ಉತ್ಸವ, ವರ್ಮಾ (ಆಶು ಚಿತ್ರ) ಹಾಗೂ ಶತವಧಾನಿ ಗಣೇಶ್ (ಆಶು ಕವಿತೆ), ಚಿತ್ರ ನಿರ್ದೇಶಕ ಟಿ. ಎಸ್. ನಾಗಭೂಷಣ. ಹೀಗೆ ಇನ್ನೂ ವಿವಿಧ ಕಲಾವಿದರ ತಂಡಗಳನ್ನು ಬರಮಾಡಿಕೊಂಡು ಅವರ ಕಾರ್ಯಕ್ರಮಗಳನ್ನು ಮಕ್ಕಳೊಂದಿಗೆ ಕುಳಿತು, ಸವಿದು ಕಲಾವಿದರನ್ನು ಆದರಿಸಿ ಗೌರವಿಸುತ್ತಿರುವುದು ಸಂಗಮದ ಬೆಳವಣಿಗೆಗೆ ರೆಕ್ಕೆ ಕೊಟ್ಟಂತಿದೆ.

ಸಂಪಿಗೆ ಕನ್ನಡ ಕೂಟ, ರಾಲೆ, ಉತ್ತರ ಕೆರೆಲಿನಾ

ಡಾ.ಎಚ್.ಎನ್ ರಾಮಸ್ವಾಮಿಯವರ ನೇತೃತ್ವದಲ್ಲಿ ಉತ್ತರ ಕೆರೊಲಿನಾದಲ್ಲಿ 1980/90ರ ದಶಕಗಳಲ್ಲಿ ಕಾರ್ಯಾಚರಣೆ ನಡೆಸಿತ್ತು. ಕನ್ನಡಿಗರು ವರ್ಷಕ್ಕೆರಡು ಬಾರಿ ಸೇರಿ ಹಾಡು, ನಾಟಕ, ಇನ್ನಿತರ ಕಾರ್ಯಕ್ರಮ ಆಯೋಜಿಸಿ ಸಂಭ್ರಮಿಸುತ್ತಿದ್ದಾರೆ.

ಕಾರ್ಯಕ್ರಮಗಳಿಗೆ ಸುಮಾರು 50 ರಿಂದ ನೂರು ಮಂದಿ ಸೇರಿ ಒಂದೇ ಕುಟುಂಬದವರಂತೆ ಕೆಲಸ ಮಾಡಿ ಸಂಭ್ರಮಿಸುತ್ತಿದ್ದರು. ಮುಂದೆ ವೈ2ಕೆ ತಯಾರಿ ನಡೆಸುವ ನಿಟ್ಟಿನಲ್ಲಿ ಹೆಚ್ಚಿನ ಎಂಜಿನಿಯರುಗಳು ಬರುತ್ತಿದ್ದಂತೆ, ರಾಜಧಾನಿಯ ಸುತ್ತ ಕನ್ನಡಿಗರ ಸಂಖ್ಯೆ ಬೆಳೆಯಿತು. ಆಗ ಹುಟ್ಟಿದುದೇ ಸಂಪಿಗೆ ಕನ್ನಡ ಸಂಘ. ಉತ್ತರ ಕೆರೊಲಿನಾ ರಾಜ್ಯದ ರಾಜಧಾನಿಯ ಸುತ್ತ ಸುಮಾರು 600 ಚದರ ಕಿಲೊಮೀಟನಲ್ಲಿರುವ ಹಲವಾರು ಪಟ್ಟಣಗಳ ಈ ಸಂಗಮ ಸ್ಥಾನದ ಹೆಸರು ಆರ್‌ಟಿಪಿ. ಭಾರತದಿಂದ ಬಂದ ಹೆಚ್ಚಿನವರಿಗೆ ಕೆಲಸ ಕಾರು ಕಾರುಗಳ ಅವಕಾಶ ಈ ಕಂಪನಿಯಲ್ಲಿಯೇ. ಹಾಗೆಂದೇ 2000 ಇಸವಿಯ ಅತ್ತಿತ್ತ ಬಂದ ಹಲವಾರು ಕನ್ನಡಿಗರ ಕುಟುಂಬಗಳಿವೆ. 1995ಕ್ಕಾಗಲೇ 100 ಕ್ಕೂ ಹೆಚ್ಚು ಕನ್ನಡಿಗ ಕುಟುಂಬಗಳು ಸುತ್ತಮುತ್ತ ನೆಲೆಸಿ ದ್ದರು. ಹಾಗಾಗಿ 1995/96 ವರ್ಷ ಸಂಪಿಗೆ ಕನ್ನಡ ಕೂಟ ಎಂದು ಗುರುತಿಸಿಕೊಂಡು ಕಾರ್ಯಾಚರಣೆ ಆರಂಭಿಸಿತು. ಕಲಾಶ್ರೀ ಸುಪ್ರಿಯಾ ದೇಸಾಯಿ ಅವರ ನೇತೃತ್ವದಲ್ಲಿ ಹಲವಾರು ಸ್ನೇಹಿತರ ಬಳಗವನ್ನು ಕಟ್ಟಿ ರಾಮಾಯಣ ನೃತ್ಯ ರೂಪಕವನ್ನು ಪ್ರದರ್ಶಿಸಿದ್ದು ಕನ್ನಡಿಗರ ಪ್ರಥಮ ಮಹತ್ವದ ಹೆಜ್ಜೆ. ಹೀಗೆ ಹೆಜ್ಜೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಬಂದ ಸಂಪಿಗೆ 2001/2002 ವರ್ಷಗಳಲ್ಲಿ 501 ಎನ್‌ಜಿಒ ಆಯಿತು. 2003 ರಲ್ಲಿ ಅಧ್ಯಕ್ಷ ಪ್ರಸಾದ್ ಕಶ್ಯಪರ ಕೋರಿಕೆಯಂತೆ, ಹಿಂದಿನ ನಾಲ್ಕು ಸಂಪಿಗೆಯ ಅಧ್ಯಕ್ಷರುಗಳಾದ, ಲಕ್ಷ್ಮೀನಾರಾಯಣ ಗಣಪತಿ (2002), ಸವಿತಾ ರವಿಶಂಕರ್ (2000), ವಿಶ್ವತೇಜ ತರುವೇಸಂಚಿ (1998) ಹಾಗೂ ಸುಪ್ರಿಯಾ ದೇಸಾಯಿ (1996) ಅವರುಗಳ ಸಮಿತಿ ಸಂಪಿಗೆಯ ಸಂವಿಧಾನದ ಕರಡು ತಯಾರಿಸಿತು. ಆ ವರ್ಷದ (2003) ಸರ್ವ ಸದಸ್ಯರ ಸಮಾರಂಭದಲ್ಲಿ ಸಂಪಿಗೆಯ ಸಂವಿಧಾನವನ್ನು ಅಂಗೀಕರಿಸಲಾಯಿತು. ಸರಳವಾದ ಈ ಸಂವಿಧಾನದ ಮುಖ್ಯ ಉದ್ದೇಶ ಸುಸೂತ್ರವಾದ ಕಾರ್ಯಾಚರಣೆ ಆಗಿದ್ದು, ಯಾವುದೇ ಕಾರಣಕ್ಕೆ ಸಂಘವನ್ನು ಕೊನೆಗೊಳಿಸಿದರೆ, ಉಳಿದ ಸಂಪನ್ಮೂಲಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ' ಕೊಡಬೇಕೆಂಬ ನಿರ್ಣಯ ಬಹುಷ ಸಂಪಿಗೆ ಸಂಘದ ಹೆಮ್ಮೆಯ, ಕನ್ನಡ ಪ್ರೀತಿಯ ದ್ಯೋತಕವಾಗಿದೆ.

2015ರ ಹೊತ್ತಿಗೆ ಅಧ್ಯಕ್ಷ ಚಂದ್ರಶೇಖರ್ ನಾಯಕತ್ವದಲ್ಲಿ ನಾವಿಕ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸುವ ಧೈರ್ಯ ಬಂದಿತು. 2013ರ ಅಧ್ಯಕ್ಷರಾದ ಹರ್ಷ ಗೋಪಾಲ ಮತ್ತಿತರ ಹಿರಿಯ ಮುಖಂಡರುಗಳು ಸಮ್ಮೇಳನದ ಪ್ರಮುಖ ರೂವಾರಿಗಳಾಗಿದ್ದರು. ಮುಂದೆ ಹುಮ್ಮಸ್ಸಿನಿಂದ ನಡೆದು ಬಂದ ಸಂಪಿಗೆಯ ಕಾರ್ಯವೈಖರಿಯಲ್ಲಿ ಪ್ರತಿ ವರ್ಷ ಹೊಸಬರಿಗೆ ಅವಕಾಶ. ಈವರೆಗೆ ಕೇವಲ ಎರಡು ಬಾರಿಯಷ್ಟೇ ಹಳಬರಿಗೆ ಮತ್ತೆ ಅಧ್ಯಕ್ಷರಾಗುವ ಅವಕಾಶ. ಕರೋನಾ ಸಮಯದಲಿಯೂ ಆನ್‌ಲೈನ್ ಮೂಲಕವೇ ಅಧ್ಯಕ್ಷ ಶ್ರೀಕಾಂತ ಮಾನ್ವಿಯವರ ನೇತೃತ್ವದಲ್ಲಿ ಕಾರ್ಯಾಚರಣೆ ಮುಂದುವರಿಸಿತು.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 05-11-2025 ಬುಧವಾರ

ಸತ್ತವನು ಎದ್ದು ಉಸಿರಾಡಿದಾಗ!...

ಬದುಕಿದ್ದಾಗ ಜನರ ಪ್ರೀತಿಗೆ ಪಾತ್ರವಾಗುವ ಈ ದೇಹ, ಸತ್ತ ಕೂಡಲೇ ಪರಕೀಯವಾಗಿಬಿಡುತ್ತದೆ. ಅನೇಕರು ಶವವನ್ನು ಮುಟ್ಟುವುದಂತಿರಲಿ, ನೋಡುವುದಕ್ಕೂ ಬಯಸುವುದಿಲ್ಲ. ನಮ್ಮಲ್ಲಿ ಶವವನ್ನು ಮುಟ್ಟುವುದು ಎಂದರೆ ಅದು ಸೂತಕ. 18ನೆಯ ಶತಮಾನದ ಯುರೋಪಿಯನ್ನರು ಶವವನ್ನು ಅಪವಿತ್ರ ಎಂದು ಪರಿಗಣಿಸುತ್ತಿದ್ದ ಕಾರಣ, ಅವರೂ ಶವವನ್ನು ಮುಟ್ಟುತ್ತಿರಲಿಲ್ಲ.

ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
naasomeswara@gmail.com

18ನೆಯ ಶತಮಾನದ ಯುರೋಪ್ ಖಂಡ! ಮಧ್ಯಯುಗದ ಕತ್ತಲೆಯ ಕರಾಳ ಅಧ್ಯಾಯವು ಮುಗಿದು, ನವೋದಯವಾಗಿ (ರೆನೈಸಾನ್) ಎಲ್ಲೆಡೆ ಜ್ಞಾನದ ಬೆಳಕು ಪಸರಿಸುತ್ತಿದ್ದ ಕಾಲ! ನಿಜವಾದ ಅರ್ಥದಲ್ಲಿ ಎಲ್ಲ ಜ್ಞಾನಶಾಖೆಗಳಲ್ಲಿ ಹೊಸ ಹೊಸ ಸಂಶೋಧನೆಗಳು ನಡೆದವು. ಹೊಸ ಹೊಸ ವಿಚಾರಗಳು ಬೆಳಕಿಗೆ ಬಂದವು. ಹೊಸ ಹೊಸ ಯಂತ್ರಗಳ ಅನ್ವೇಷಣೆ ಯಾದವು. ವೈದ್ಯವಿಜ್ಞಾನದಲ್ಲಂತೂ ಕ್ರಾಂತಿಕಾರಕ ಸಂಶೋಧನೆಗಳು ನಡೆದವು. ಸೂಕ್ಷ್ಮದರ್ಶಕವು, ಅದೃಶ್ಯ ಲೋಕದ ಅಗೋಚರ ಜೀವಿಗಳನ್ನು ಅನಾವರಣ ಮಾಡಿತು. ಫ್ಲೆಮಿಂಗ್ ಆರಂಭಿಸಿದ ಪ್ರತಿಜೈವಿಕಗಳ ಹೊಸ ಮನ್ವಂತರದಿಂದಾಗಿ ಸೋಂಕು ರೋಗಗಳನ್ನು ಬಗ್ಗುಬಡಿಯಲು ಸಾಧ್ಯವಾಯಿತು. ಜೆನರ್ ರೂಪಿಸಿದ ಲಸಿಕೆಯ ಕಾರಣ, ಸಿಡುಬುಗಳನ್ನು ಸುಲಭವಾಗಿ ನಿಯಂತ್ರಿಸಲು ಸಾಧ್ಯವಾಯಿತು. ಸಿಡುಬನ್ನಂತೂ ಭೂಮಿಯಿಂದಲೇ ನಿವಾರಿಸಿದವು. ಇಷ್ಟೆಲ್ಲ ಸಂಶೋಧನೆಗಳು ಆದರೂ, ಸಾವಿನ ಬಗ್ಗೆ, ಸಾವಿನ ಲಕ್ಷಣಗಳ ಬಗ್ಗೆ, ಸಾವು ಸಂಭವಿಸಿರುವುದನ್ನು ತೀರ್ಮಾನಿಸುವುದರ ಬಗ್ಗೆ ಅಪಾರ ಗೊಂದಲಗಳಿದ್ದವು. ಅದರಲ್ಲೂ ಸತ್ತವರ ಹಾಗೆ, ಉದಾಹರಣೆಗೆ ಕೋಮಾದಲ್ಲಿ ಇರುವವರ ಬಗ್ಗೆ ಯಾವ ತೀರ್ಮಾನವನ್ನು ಯಾವ ಯಾವ ಲಕ್ಷಣಗಳ ಮೇಲೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಗೊಂದಲಗಳಿದ್ದವು. ಹಾಗಾಗಿ ಅನೇಕ ಜನರನ್ನು, ಅವರು ವಾಸ್ತವದಲ್ಲಿ ಸತ್ತಿಲ್ಲದಿದ್ದರೂ, ಸತ್ತಿದ್ದಾರೆ ಎಂದು ತೀರ್ಮಾನಿಸಿ, ಅವರನ್ನು ಶವಪೆಟ್ಟಿಗೆಯಲ್ಲಿಟ್ಟು ಹೂತುಹಾಕುತ್ತಿದ್ದರು. ಒಂದು ಘಟ್ಟದಲ್ಲಿ ಬದುಕಿರುವವರನ್ನೇ ಸತ್ತಿದ್ದಾರೆ ಎಂದು ಹೂತುಹಾಕಿದ ಪ್ರಕರಣಗಳು ವರದಿಯಾದ ಕೂಡಲೇ ಒಂದು ಹೊಸ ಪದ್ಧತಿಯು ಆರಂಭವಾಯಿತು. ಪ್ರತಿಯೊಂದು ಶವಪೆಟ್ಟಿಗೆಯ ಒಳಗೆ ಒಂದು ಗಂಟೆಯನ್ನು ಇಡುತ್ತಿದ್ದರು. ಶವಪೆಟ್ಟಿಗೆಯಲ್ಲಿ ಇರುವವನು ನಿಜಕ್ಕೂ ಸತ್ತಿಲ್ಲದಿದ್ದರೆ, ಅವನು ಗಂಟೆಯನ್ನು ನಿರಂತರವಾಗಿ ಬಾರಿಸುತ್ತಿದ್ದನು. ಆಗ ಸ್ಮಶಾನದಲ್ಲಿ ನಿತ್ಯ ಕಾವಲಿರುವ ಯಾರಾದರೊಬ್ಬರು ಅವನನ್ನು ಕಾಪಾಡುತ್ತಿದ್ದರು. ಆಗ ಒಂದು ಪ್ರಶ್ನೆಯು ವೈದ್ಯ ವಿಜ್ಞಾನಿಗಳನ್ನು ಕಾಡಿತು. ಅದೇನದು?

● **ಸತ್ತವರನ್ನು ಮತ್ತೆ ಬದುಕಿಸಲು ಸಾಧ್ಯವೆ?:** ಈ ವಿಚಿತ್ರ ಪ್ರಶ್ನೆಯ ಫಲವಾಗಿ ವೈದ್ಯಲೋಕದ ಮತ್ತೊಂದು ಮಹಾನ್ ನಾಟಕೀಯ ಆವಿಷ್ಕಾರವಾಯಿತು. ಅದುವೇ ಸಿಪಿಆರ್! ಸಿ = ಕಾರ್ಡಿಯೋ (ಹೃದಯ) ಪಿ = ಪಲ್ಮನರಿ (ಶ್ವಾಸಕೋಶಗಳು) ಆರ್ = ರಿಸಸಿಟೇಷನ್ (ಪುನಶ್ಚೇತನ). ಕನ್ನಡದಲ್ಲಿಯೂ ಈ ಪ್ರಥಮ ಚಿಕಿತ್ಸೆಯನ್ನು ಸಿಪಿಆರ್ ಎಂದೇ ಕರೆಯುವುದು ಸೂಕ್ತ. ಸಿಪಿಆರ್ ಎಂದರೆ ಏನು? ಸ್ಥಗಿತವಾಗಿರುವ ಹೃದಯವನ್ನು ಹಾಗೂ ಉಸಿರಿಲ್ಲದ ಶ್ವಾಸಕೋಶಗಳನ್ನು ಚೇತನಗೊಳಿಸಿ, ಹೃದಯವನ್ನು ಮಿಡಿಯುವಂತೆ ಮಾಡುವುದು ಹಾಗೂ ಶ್ವಾಸಕೋಶಗಳನ್ನು ಮತ್ತೆ ಗಾಳಿಯನ್ನು ಪೂರೈಸುವಂತೆ ಅಣಿಗೊಳಿಸುವುದು. ಇದುವೇ ಸಿಪಿಆರ್‌ನ ಸಾರಾಂಶ! ಸಿಪಿಆರ್ ಅನ್ನು ಒಬ್ಬರು ಕಂಡುಹಿಡಿದಿಲ್ಲ. ಹಲವು ಜನರು ಹಲವು ರೀತಿಯಲ್ಲಿ ಈ ಕಾರ್ಯವಿಧಾನವನ್ನು ರೂಪಿಸಿದರು ಹಾಗೂ ಸುಧಾರಿಸಲು ಕಾರಣರಾಗಿದ್ದಾರೆ. ಕೆಲವರಂತೂ ಅನಿರೀಕ್ಷಿತವಾಗಿ ತಮಗರಿವಿಲ್ಲದಂತೆಯೇ ಈ ಕಾರ್ಯವಿಧಾನದ ಸುಧಾರಣೆಯಲ್ಲಿ ಭಾಗಿಗಳಾಗಿದ್ದಾರೆ. ಇವರೆಲ್ಲರೂ ಎಲ್ಲ 'ಸಾವು'ಗಳು ಸಾವುಗಳಾಗಬಾರದು ಎಂಬ ದಿಟ್ಟ ನಿರ್ಧಾರವನ್ನು ಕೈಗೊಂಡು, ಕುತ್ತಿಗೆಯಲ್ಲಿ ಬಿದ್ದಿರುವ ಯಮನ ಕುಣಿಕೆಯನ್ನು ಕತ್ತರಿಸಲೆತ್ನಿಸಿ, ಮತ್ತೆ ಬದುಕಿಗೆ ತಂದ ಆಧುನಿಕ 'ಸಾವಿತ್ರಿ'ಗಳಾಗಿದ್ದಾರೆ.

● **ಸತ್ತವನು ಉಸಿರಾಡಿದಾಗ:** ಬದುಕಿದ್ದಾಗ ಎಲ್ಲ ಜನರ ಪ್ರೀತಿಗೆ ಪಾತ್ರವಾಗುವ ಈ ದೇಹ, ಸತ್ತ ಕೂಡಲೇ ಪರಕೀಯವಾಗಿಬಿಡುತ್ತದೆ. ಅನೇಕ ಜನರು ಶವವನ್ನು ಮುಟ್ಟುವುದಂತಿರಲಿ, ನೋಡುವುದಕ್ಕೂ ಬಯಸುವುದಿಲ್ಲ. ನಮ್ಮಲ್ಲಿ ಶವವನ್ನು ಮುಟ್ಟುವುದು ಎಂದರೆ ಅದು ಸೂತಕ. 18ನೆಯ ಶತಮಾನದ ಯುರೋಪಿಯನ್ನರು ಶವವನ್ನು 'ಅಪವಿತ್ರ' (ಅನ್-ಹೋಲಿ) ಎಂದು ಪರಿಗಣಿಸುತ್ತಿದ್ದ ಕಾರಣ, ಅವರೂ ಶವವನ್ನು ಮುಟ್ಟುತ್ತಿರಲಿಲ್ಲ. ಹಾಲೆಂಡ್ ದೇಶದ ಆಮ್‌ಸ್ಟರ್‌ಡ್ಯಾಮ್ ನಗರ. ನದಿ ಹಾಗೂ ಅದರ ಅಸಂಖ್ಯ ಕಾಲುವೆಗಳು ಈ ನಗರದಾದ್ಯಂತ ವ್ಯಾಪಿಸಿವೆ. ಹಾಗಾಗಿ ಆಕಸ್ಮಾತ್ತಾಗಿ ಕಾಲು ಜಾರಿ ನದಿಯಲ್ಲಿ ಬೀಳುವವರ ಸಂಖ್ಯೆಯು ಸಾಕಷ್ಟಿತ್ತು. ನೀರಿನಲ್ಲಿ ಮುಳುಗಿದವರನ್ನು ಯಾವರೊಬ್ಬರು ದಡಕ್ಕೆ ಎಳೆದು ಹಾಕುತ್ತಿದ್ದರು. ಹಾಗೆ ದಡವನ್ನು ಮುಟ್ಟಿದ ಕೆಲವರಲ್ಲಾದರೂ ಪ್ರಜ್ಞೆಯು ಇರುತ್ತಿರಲಿಲ್ಲ. ಆಗ ಅವರು ಸತ್ತಿದ್ದಾರೋ ಇಲ್ಲ ಬದುಕಿದ್ದಾರೋ ಎಂದು ತೀರ್ಮಾನಿಸುವುದು ಕಷ್ಟವಾಗುತ್ತಿತ್ತು. ಆಕಸ್ಮಾತ್ ಅವರು ಸತ್ತಿರಬಹುದು ಎಂದು ಅನುಮಾನ ಬಂದರೆ, ಯಾರೂ ಆ ಶರೀರವನ್ನು ಮುಟ್ಟಲು ಹೋಗುತ್ತಿರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಜೆನ್ ಬ್ಯಾಪ್ಟಿಸ್ಟ್ ಪಿ ಮ್ಯಾಸನ್ ಎಂಬ ಓರ್ವ ಡಚ್ ವೈದ್ಯನು ಒಂದು ದಿಟ್ಟ ಹೆಜ್ಜೆಯನ್ನಿಟ್ಟ. ಮುಳುಗುತ್ತಿದ್ದವನನ್ನು ನೀರಿನಿಂದ ಹೊರಗೆ ಎಳೆದು ಹಾಕಿದ ಮೇಲೆ, ಅವನಿಗೆ ಪ್ರಜ್ಞೆ ಇರದಿದ್ದರೆ, ತಕ್ಷಣವೇ ಅವನ ಎದೆಯನ್ನು ಒತ್ತಬೇಕೆಂದು ಹಾಗೂ ಬಾಯಿಂದ ಬಾಯಿಗೆ ಉಸಿರನ್ನು ತುಂಬಬೇಕು ಎಂದ. ಹಾಗೆಯೇ ಮಾಡಿದ. ಹಾಗೆ ಮಾಡಿದಾಗ, ಕೆಲವು ಸಲ ಅವರಿಗೆ ಪ್ರಜ್ಞೆಯು ಬಂದು, ಉಸಿರನ್ನು ದೀರ್ಘವಾಗಿ ಎಳೆದುಕೊಳ್ಳುತ್ತಾ, ಕೆಮ್ಮುತ್ತಾ ಎದ್ದು ಕುಳಿತುಕೊಳ್ಳುತ್ತಿದ್ದರು. ನೋಡುಗರ ಪಾಲಿಗೆ ಇದೊಂದು ಪವಾಡವೆನಿಸಿತು. ಈ ಸುದ್ದಿಯು ಕೂಡಲೇ ಜನಪ್ರಿಯವಾಯಿತು.



1740. ಪ್ಯಾರಿಸ್ ಅಕಾಡೆಮಿ ಆಫ್ ಸೈನ್ಸಸ್, 'ನೀರಿನಲ್ಲಿ ಮುಳುಗಿರುವವರನ್ನು ಬದುಕಿಸಲು ಬಾಯಿಂದ ಬಾಯಿಗೆ ಉಸಿರನ್ನು ತುಂಬಿ ಪುನಃಶ್ಚೇತನವನ್ನು ತುಂಬಬೇಕೆಂದು ಶಿಫಾರಸನ್ನು ಮಾಡುತ್ತಿದ್ದೇವೆ' ಎಂಬ ದಿಟ್ಟ ಘೋಷಣೆಯನ್ನು ಹೊರಡಿಸಿತು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ವಿಜ್ಞಾನಿಗಳಲ್ಲಿ ನೀರಿನಲ್ಲಿ ಮುಳುಗಿ ಸಾವಿನಂಚಿಗೆ ಹೋಗಿರುವವರನ್ನು ಬದುಕಿಸಲು ಕೆಲವು ಕಾರ್ಯವಿಧಾನಗಳನ್ನು ಅದು ರೂಪಿಸಿತು. 1767ರ ಹೊತ್ತಿಗೆ 'ಮುಳುಗಿದವರ ಪುನಃಶ್ಚೇತನಕ್ಕಾಗಿರುವ ಆಮ್‌ಸ್ಟರ್‌ಡ್ಯಾಮ್ ಮಂಡಳಿ'ಯನ್ನು (ಆಮ್‌ಸ್ಟರ್‌ಡ್ಯಾಮ್ ಸೊಸೈಟಿ ಫಾರ್ ದಿ ರಿಕವರಿ ಆಫ್ ದಿ ಡ್ರೌನ್ಡ್) ಸ್ಥಾಪಿಸಲಾಯಿತು. ಇದರ ಕಾರ್ಯವಿಧಾನವು ಇಂದು ನಮಗೆ ಬಹಳ ವಿಚಿತ್ರವಾಗಿ ಕಾಣಿಸಬಹುದು. ನದಿ ಹಾಗೂ ಕಾಲುವೆಗಳ ಹಾದಿಯುದ್ದಕ್ಕೂ, ಅಲ್ಲಲ್ಲಿ ಪುನಃಶ್ಚೇತನ ಕೇಂದ್ರಗಳನ್ನು ಸ್ಥಾಪಿಸಿದರು. ಕೇಂದ್ರದಲ್ಲಿ ದೊಡ್ಡ ತಿದಿಗಳಿದ್ದವು. ಆ ತಿದಿಗಳ ಮೂಲಕ ತಂಬಾಕಿನ ಹೊಗೆಯನ್ನು ವ್ಯಕ್ತಿಯ ಗುದನಾಳದ ಮೂಲಕ ಕರುಳಿನೊಳಗೆ ತುಂಬುತ್ತಿದ್ದರು. ತಂಬಾಕಿನ ಹೊಗೆಯು ಮಿದುಳಿನ ಉಸಿರಾಟ ಕೇಂದ್ರವನ್ನು ಚುರುಕುಗೊಳಿಸುತ್ತದೆ ಎಂದು ನಂಬಿದ್ದರು. ಕಂಬಳಿಯನ್ನು ಹೊದೆಸಿ ಮೈಯನ್ನು ಬೆಚ್ಚಗೆ ಇಡಲು ಪ್ರಯತ್ನಿಸುತ್ತಿದ್ದರು ಹಾಗೂ ಎದೆಯನ್ನು ಒತ್ತಿ ಬಾಯಿಂದ ಬಾಯಿಗೆ ಗಾಳಿಯನ್ನು ತುಂಬುತ್ತಿದ್ದರು. ಹೀಗೆ ವಿಜ್ಞಾನ, ಮೌಢ್ಯ ಹಾಗೂ ಅಸಾಧಾರಣ ಧೈರ್ಯವೆಲ್ಲ ಸಮ್ಮಿಳಿತವಾಗಿ ಸಿಪಿಆರ್‌ನ ಆದಿರೂಪವು ಹುಟ್ಟಿಕೊಂಡಿತು.

● **ಮೃತ ನರ್ತನ:** 1780. ಇಟಲಿಯ ವಿಜ್ಞಾನಿ ಲೂಗಿ ಗ್ಯಾಲ್ವನಿ (1737–1798), ನರಗಳು ಹೇಗೆ ಸ್ನಾಯುಗಳನ್ನು ನಿಯಂತ್ರಿಸುತ್ತವೆ ಎಂಬ ವಿಚಾರವಾಗಿ ಪ್ರಯೋಗಗಳನ್ನು ನಡೆಸುತ್ತಿದ್ದ. ಕಪ್ಪೆಗಳನ್ನು ವಿಚ್ಛೇದಿಸಿ ಪ್ರಯೋಗಗಳನ್ನು ಮಾಡುವಾಗ, ಕೆಲವು ಸಲ ಲೋಹದ ಉಪಕರಣಗಳು ಅನೈಚ್ಛಿಕವಾಗಿ ಕಪ್ಪೆಯ ಕಾಲಿಗೆ ತಾಗುತ್ತಿದ್ದವು. ಆಗ ಕಪ್ಪೆಯಕಾಲು ಇದ್ದಲ್ಲಿಯೇ ಎದ್ದು 'ಕುಣಿಯುತ್ತಿತ್ತು'. ಇದನ್ನು ಗಮನಿಸಿದ ಗ್ಯಾಲ್ವನಿ, ಕಪ್ಪೆಯ ಕಾಲನ್ನು ಲೋಹದ ಕೊಕ್ಕೆಗೆ ಸೇರಿಸಿ, ವಿವಿಧ ಲೋಹಗಳಿಂದ ಕಾಲನ್ನು ಮುಟ್ಟಿದಾಗ, ಕಾಲು ತುಡಿಯಲಾರಂಭಿಸಿತು. ವಿದ್ಯುತ್ತನ್ನು ಹಾಯಿಸಿದಾಗಲೂ ಹೀಗೆ ಕಪ್ಪೆಯ ಕಾಲು ತುಡಿಯುವುದನ್ನು ನೋಡಿ, ಆ ಬಗ್ಗೆ ಒಂದು ವಿಸ್ತೃತವಾದ ಪ್ರಬಂಧವನ್ನೇ ಬರೆದ. ಇಟಲಿಯ ಹಾಗೂ ಯುರೋಪಿನ ಸಾರ್ವಜನಿಕರು ಜೀವವಿಲ್ಲದ ಕಪ್ಪೆಯ ಕಾಲು ಎದ್ದೆದ್ದು 'ಕುಣಿಯುವುದನ್ನು' ನೋಡಿ ಆಶ್ಚರ್ಯಚಕಿತರಾದರು. ಲಂಡನ್ನಿನ 'ರಾಯಲ್ ಕಾಲೇಜ್ ಆಫ್ ಸರ್ಜನ್ಸ್', ವೈದ್ಯರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಗ್ಯಾಲ್ವನಿಯ ಪ್ರಯೋಗವನ್ನು ಪುನರಾವರ್ತಿಸಿತು. ಕಪ್ಪೆಯ ಕಾಲು ಚಲಿಸುವುದನ್ನು ನೋಡಿ ಎಲ್ಲರೂ ಹೌಹಾರಿದರು. ಮೇರಿ ಶೆಲ್ಲಿ ಈ ಘಟನೆಯಿಂದ ಪ್ರೇರಿತಳಾಗಿ 'ಫ್ರಾಂಕೆನ್‌ಸ್ಟೈನ್' ಕಾದಂಬರಿಯನ್ನು ಬರೆದಳು. ಜೀವ ಎನ್ನುವುದು 'ವಿದ್ಯುತ್ತಿನ ಲೀಲೆ' ಎಂದು ಭಾವಿಸಿದರು. ಹಾಗಾಗಿ ವಿದ್ಯುತ್ತನ್ನು ಹಾಯಿಸಿ ಮೃತದೇಹವನ್ನು ಜಾಗೃತಗೊಳಿಸಬಹುದು ಎಂಬ ಹೊಸ ನಂಬಿಕೆಯು ಬೆಳೆಯಿತು. ಮುಂದಾನೊಂದು ಕಾಲದಲ್ಲಿ ಇದೇ ನಂಬಿಕೆಯನ್ನು ವಿಜ್ಞಾನಿಗಳು ಕಾರ್ಯರೂಪಕ್ಕೆ ತಂದರು. ಇದೇ ವಿದ್ಯುತ್ತನ್ನು ಬಳಸಿ, ಸಾವಿನ ದವಡೆಯಲ್ಲಿದ್ದ ಜೀವವನ್ನು ಮರಳಿ ದೇಹಕ್ಕೆ ತರುವ ಅದ್ಭುತ ಯಂತ್ರ 'ತತ್ತರಿಕೆ ನಿವಾರಕ' (ಡಿಫಿಬ್ರಿಲ್ಲೇಟರ್) ವನ್ನು ರೂಪಿಸಿದರು.

ಸಾವು ಎನ್ನುವುದು ಹಠಾತ್ತನೆ ಸಂಭವಿಸುವುದಿಲ್ಲ. ಸಾವು ಎನ್ನುವುದು ನಿಧಾನವಾಗಿ ನಮ್ಮನ್ನು ಆಕ್ರಮಿಸಿಕೊಳ್ಳುತ್ತಾ ಹೋಗುತ್ತದೆ. 'ಜೀವ ಹೋಗಿದೆ' ಎಂದು ವೈದ್ಯರು ತೀರ್ಮಾನಿಸಿದ ಮೇಲೂ ನಮ್ಮ ಶರೀರದಲ್ಲಿರುವ ಜೀವಕೋಶಗಳು ಸಾಕಷ್ಟು ಕಾಲ ಬದುಕಿರುತ್ತವೆ. ಜೀವ ಹೋದ 4–6 ನಿಮಿಷಗಳಲ್ಲಿ ಮಿದುಳಿನ ನರಕೋಶಗಳು ಸಾಯುತ್ತವೆ. ಹೃದಯ ಮತ್ತು ಶ್ವಾಸಕೋಶಗಳ ಜೀವಕೋಶಗಳು 4–6 ಗಂಟೆಗಳ ಕಾಲ ಬದುಕಿರುತ್ತವೆ. ಯಕೃತ್ತು 6–12 ಗಂಟೆಗಳವರೆಗೆ ಬದುಕಿದ್ದರೆ, ಮೂತ್ರಪಿಂಡಕೋಶಗಳು 30 ಗಂಟೆಗಳವರೆಗೆ ಬದುಕಿರುತ್ತವೆ. ವೀರ್ಯಾಣುಗಳು 36 ಗಂಟೆಗಳವರೆಗೆ ಬದುಕಿದ್ದರೆ, ಬಿಳಿ ರಕ್ತ ಕಣಗಳು 70 ಗಂಟೆಗಳವರೆಗೆ ಬದುಕಿರಬಲ್ಲವು. ಈ ತಿಳಿವು ಮನುಷ್ಯನಿಗೆ ಬರಲು ಅಪಾರ ಸಮಯವು ಬೇಕಾಯಿತು. ಹಾಗಾಗಿ ವ್ಯಕ್ತಿಯು 'ಸತ್ತ' ಎಂದ ಕೂಡಲೇ, ಅವನ ದೇಹದ ಎಲ್ಲಾ ಜೀವಕೋಶಗಳೂ ಸಾಯುವುದಿಲ್ಲ, ಸಾಕಷ್ಟು ಬದುಕಿರುತ್ತವೆ, ಹಾಗಾಗಿ ಅವನ್ನು ಪುನಃಶ್ಚೇತನಗೊಳಿಸಬಹುದು ಎಂಬ ತಿಳಿವು ಮನುಷ್ಯನಿಗೆ ದೊರೆತ ಮೇಲೆ, ಅವನು ಸಿಪಿಆರ್ ಕಾರ್ಯವಿಧಾನವನ್ನು ಸುಧಾರಿಸುವ ಬಗ್ಗೆ ಯೋಚಿಸಲಾರಂಭಿಸಿದ.

● **ಶ್ವಾಸಕೋಶ ಪುನಃಶ್ಚೇತನ:** ಆಕ್ಸಿಜನ್ ಅನ್ನು ವಿಲ್ಹೆಮ್ ಶೀಲೆ 1773ರಲ್ಲಿ ಹಾಗೂ ಜೋಸೆಫ್ ಪ್ರೀಸ್ಟ್ಲೆ 1774ರಲ್ಲಿ ಕಂಡುಹಿಡಿದರು. ಆಂಟಾಯ್ನ್ ಲವಾಸಿಯೇರ್, 1777ರಲ್ಲಿ ಈ ಹೊಸ ಅನಿಲಕ್ಕೆ 'ಆಕ್ಸಿಜನ್' ಎಂದು ನಾಮಕರಣವನ್ನು ಮಾಡಿದ. ಇವರಲ್ಲಿ ಜೋಸೆಫ್ ಪ್ರೀಸ್ಟ್ಲೆ ನಾವು

ಬದುಕುವುದಕ್ಕೆ ಆಕ್ಸಿಜನ್ ಅಗತ್ಯ ಎಂದು ಸಾರಿದ. 1837. ಇಂಗ್ಲಿಷ್ ಸರ್ಜನ್ 'ಮಾರ್ಷಲ್ ಹಾಲ್' ಮೊದಲ ಬಾರಿಗೆ ಮೃತ್ಯುಮುಖದಲ್ಲಿ ವ್ಯಕ್ತಿಗೆ ಕೃತಕ ಉಸಿರಾಟದ ಕಾರ್ಯವಿಧಾನವನ್ನು ರೂಪಿಸಿದ. ಬೆನ್ನಿನ ಮೇಲಿರುವ ಒಬ್ಬ ವ್ಯಕ್ತಿಯನ್ನು ತಕ್ಷಣವೇ ಹೊಟ್ಟೆಯ ಮೇಲೆ ಮಲಗಿಸುವುದು, ತಕ್ಷಣವೇ ಮತ್ತೆ ಹೊರಳಿಸಿ ಬೆನ್ನಿನ ಮೇಲೆ ಮಲಗಿಸುವುದು, ಮತ್ತೆ ಹೊಟ್ಟೆ ಮೇಲೆ... ಹೀಗೆ ಸತತವಾಗಿ ಪುನರಾವರ್ತಿಸಿದರೆ ಶ್ವಾಸಕೋಶಗಳ ಒಳಗೆ ಗಾಳಿಯು ಪ್ರವೇಶಿಸುತ್ತದೆ ಎನ್ನುವುದನ್ನು ತೋರಿಸಿಕೊಟ್ಟ. ಆನಂತರ ಹೆನ್ರಿ ಸಿಲ್ವೆಸ್ಟರ್ 1858ರಲ್ಲಿ ಮತ್ತೊಂದು ಸೌಮ್ಯ ಸ್ವರೂಪದ ಕಾರ್ಯವಿಧಾನವನ್ನು ರೂಪಿಸಿದ. ಮೃತ್ಯುಮುಖದಲ್ಲಿರುವ ವ್ಯಕ್ತಿಯನ್ನು ಅವನ ಬೆನ್ನಿನ ಮೇಲೆ ಮಲಗಿಸಬೇಕು. ಅವನ ಎರಡೂ ತೋಳುಗಳನ್ನು ಒಟ್ಟಿಗೆ ಸಾಧ್ಯವಾದಷ್ಟು ಮೇಲಕ್ಕೆ ಎತ್ತಬೇಕು. ನಂತರ ಮೂಲ ಸ್ಥಿತಿಗೆ ತರಬೇಕು. ಮತ್ತೆ ಎರಡೂ ತೋಳುಗಳನ್ನು ಮೇಲಕ್ಕೆ ಎತ್ತಬೇಕು. ಹೀಗೆ ತುಂಬಾ ವೇಗವಾಗಿಯೂ ಅಲ್ಲದೆ, ತುಂಬಾ ನಿಧಾನವಾಗಿಯೂ ಅಲ್ಲದೆ, ನಿಯಂತ್ರಿತವಾಗಿ ತೋಳುಗಳನ್ನು ಮೇಲಕ್ಕೆತ್ತುವ ಹಾಗೂ ಕೆಳಗೆ ಇಳಿಸುವ ಕೆಲಸವನ್ನು ಮಾಡಿದರೆ, ಶ್ವಾಸಕೋಶಗಳ ಒಳಗೆ ಗಾಳಿಯು ತುಂಬುತ್ತದೆ ಎನ್ನುವುದನ್ನು ತೋರಿಸಿಕೊಟ್ಟ. ಇದು 'ಸಿಲ್ವೆಸ್ಟರ್ ವಿಧಾನ' ಎಂದು ಜನಪ್ರಿಯವಾಯಿತು. ಆಗ ಕೃತಕ ಉಸಿರಾಟದ ಈ ಪ್ರಥಮ ಚಿಕಿತ್ಸೆಯ ತಂತ್ರವನ್ನು ಮೊದಲು ಸೈನಿಕರಿಗೆ ಕಲಿಸಿದರು. ಸೈನಿಕರು ಯುದ್ಧದಲ್ಲಿ ಪ್ರಜ್ಞೆ ತಪ್ಪಿದವರಿಗೆ ಈ ಪ್ರಥಮ ಚಿಕಿತ್ಸೆಯನ್ನು ನೀಡುತ್ತಿದ್ದರು. ಅವರಲ್ಲಿ ಕೆಲವರು ಬದುಕುತ್ತಿದ್ದವರು, ಹಲವರು ಸಾಯುತ್ತಿದ್ದರು. 'ಯಾಕೆ' ಎಂದು ಅವರಿಗೆ ಅಂದು ತಿಳಿದಿರಲಿಲ್ಲ. ಏಕೆಂದರೆ ಅವರು ಶ್ವಾಸಕೋಶಗಳನ್ನು ಮಾತ್ರ ಪುನಃಶ್ಚೇತನಗೊಳಿಸುವ ಪ್ರಯತ್ನವನ್ನು ಮಾಡುತ್ತಿದ್ದರು. ಹೃದಯದ ತಂಟೆಗೇ ಹೋಗಲಿಲ್ಲ.

● **ಎದೆಯನ್ನು ಒತ್ತುವಿಕೆ:** 1891. ಜರ್ಮನಿಯ ಗಾಟಿಂಜೆನ್. ಒಂಬತ್ತು ವರ್ಷದ ಹುಡುಗ. ಕ್ಲೋರೋಫಾರಂ ಬಳಸಿ ಅರಿವಳಿಕೆಯನ್ನು ನೀಡುವಾಗ ಅವನಿಗೆ ಹೃದಯ ಸ್ತಂಭನವು (ಕಾರ್ಡಿಯಾಕ್ ಅರೆಸ್ಟ್) ಆಯಿತು. ಫ್ರಾಂಜ಼್ ಕೋನಿಗ್ ಎಂಬ ಶಸ್ತ್ರವೈದ್ಯನ ಸಹಾಯಕ ಫ್ರೆಡ್ರಿಕ್ ಮಾಸ್. ಅಂದಿನ ದಿನಗಳಲ್ಲಿ ಹೀಗೆ ಹೃದಯ ಸ್ತಂಭನವಾದರೆ, ಶ್ವಾಸಕೋಶಗಳ ಪುನಃಶ್ಚೇತನಕ್ಕೆ ಆದ್ಯತೆಯನ್ನು ನೀಡುವುದು ಅಂದಿನ ಪ್ರಮಾಣಬದ್ಧ ಚಿಕಿತ್ಸೆಯಾಗಿತ್ತು. ಆದರೆ ಮಾಸ್, ಸ್ಥಗಿತವಾಗಿರುವ ಹೃದಯವನ್ನು ಪುನಃಶ್ಚೇತನಗೊಳಿಸಲು ನಿಶ್ಚಯಿಸಿದ. ಮಾನವನ ಇತಿಹಾಸದಲ್ಲಿ ಹಿಂದೆ ಯಾರೂ ಮಾಡದೇ ಇದ್ದ ಸಾಹಸಕ್ಕೆ ಮುಂದಾಗಿದ್ದ. ಎದೆಯ ಮೇಲೆ ಒತ್ತಡ ಹಾಕಿ, ನಿಯಮಿತವಾಗಿ ಒತ್ತಿದರೆ, ನಿಂತು ಹೋಗಿರುವ ಹೃದಯವು ಮತ್ತೆ ಕಾರ್ಯಾರಂಭ ಮಾಡಿ, ಮಿದುಳಿಗೆ ರಕ್ತವನ್ನು ಪೂರೈಸುತ್ತದೆ ಎನ್ನುವುದು ಅವನ ತರ್ಕ. ಹಾಗಾಗಿ ಆ ಹುಡುಗನ ಎದೆಗೂಡಿನ ಮೇಲೆ ತನ್ನ ಎರಡೂ ಅಂಗೈಯನ್ನು ಇಟ್ಟುಕೊಂಡು ತಾಳಬದ್ಧವಾಗಿ ಒತ್ತಲಾರಂಭಿಸಿದ. ಆರಂಭದಲ್ಲಿ ನಿಮಿಷಕ್ಕೆ 30–40 ಸಲ ಒತ್ತಿದ. ಮಾಸ್‌ನಲ್ಲಿ ಆತಂಕವು ತುಂಬಿತ್ತು. ಯಾರೂ ಮಾಡದ ಹೊಸ ಪ್ರಯೋಗವನ್ನು ತಾನು ಮಾಡುತ್ತಿದ್ದೇನೆ; ಒಂದು ವೇಳೆ ಇದರಲ್ಲಿ ವಿಫಲನಾದರೆ, ತನ್ನನ್ನು ವೈದ್ಯವೃತ್ತಿಯಿಂದ ಉಚ್ಚಾಟಿಸುವುದು ಖಂಡಿತ ಎಂಬ ಭಯವು ಅವನಲ್ಲಿ ತೀವ್ರವಾಯಿತು. ಆ ಭಯದಲ್ಲಿ ಎದೆ ಒತ್ತುವುದನ್ನು 30–40ರಿಂದ 120ವರೆಗೆ ಏರಿಸಿದ. ಬಿಡದೆ ಒಂದು ಗಂಟೆಯವರೆಗೆ ಎದೆ ಒತ್ತುವುದನ್ನು ಮುಂದುವರಿಸಿದ. ಅದರ ಫಲವಾಗಿ ಹೃದಯ ಸ್ತಂಭನಕ್ಕೆ ಒಳಗಾಗಿದ್ದ ಆ ಹುಡುಗ ಚೇತರಿಸಿಕೊಂಡ. ಸ್ವಸ್ಥನಾಗಿ ಆಸ್ಪತ್ರೆಯಿಂದ ಮನೆಗೆ ಮರಳಿದ. ಮಾಸ್, ತನ್ನ ಪ್ರಯೋಗದ ಬಗ್ಗೆ ಒಂದು ಪ್ರಬಂಧವನ್ನು ಬರೆದು ಪ್ರಕಟಿಸಿದ. ಆದರೆ ಅವನ ಈ ಹೊಸ ತಿಳಿವು ಜರ್ಮನಿಯಲ್ಲಿ ಮಾತ್ರ ಬಳಕೆಗೆ ಬಂದಿತು. ಜರ್ಮನಿಯ ಹೊರಗಿನ ದೇಶಗಳ ವೈದ್ಯರು ಈ ಬಗ್ಗೆ ಹೆಚ್ಚಿನ ಗಮನವನ್ನು ನೀಡಲೇ ಇಲ್ಲ. ಹಾಗಾಗಿ ಅವರು 1950ರಲ್ಲಿ ಮತ್ತೆ ಹೃದಯವನ್ನು ಒತ್ತುವುದರ ಮೂಲಕ ಪುನಃಶ್ಚೇತನಗೊಳಿಸುವ ಕಾರ್ಯವಿಧಾನವನ್ನು ಹೊಸದಾಗಿ 'ಕಂಡುಹಿಡಿದರು'.

ತಿತಿಕ್ಷೆ ಎಂಬ ರಾಮಬಾಣ

● ವಿದ್ಯಾಶಂಕರ ಶರ್ಮ, ಬೆಂಗಳೂರು

ನಾವು ಎದುರಿಸುವ ಅನೇಕ ಸವಾಲುಗಳಲ್ಲಿ ಶೋಕ ಅಥವಾ ದುಃಖ ನಮಗೆ ಅತಿ ಕಠಿಣವಾಗಿ ಗೋಚರಿಸುತ್ತದೆ. ಸಹಯೋಗ, ಸಮಾಧಾನ, ಸಾಂತ್ವನ ಇವೆಲ್ಲ ತಾತ್ಕಾಲಿಕವಾಗಿ ನಮಗೆ ಆಧಾರವಾಗಬಲ್ಲವು. ನಮ್ಮ ದುಃಖಕ್ಕೆ, ಶೋಕಕ್ಕೆ ಕಾರಣವಾದ ಸಂಗತಿಯು ಕಾಲನ ಚಕ್ರದಲ್ಲಿ ಕೊಚ್ಚಿಹೋಗುತ್ತಿರುವಾಗ, ನಮಗೆ ನಾವೇ ಜತೆಗಾರರಾಗುವ ಅನಿವಾರ್ಯತೆಯು ಬದುಕಿನ ಕಟುಸತ್ಯವಾಗಿದೆ. ಮನಸ್ಸಿಗೆ ಆಘಾತವಾಗುವಂಥ ಪರಿಸ್ಥಿತಿಗಳು ನಮ್ಮೆದುರು ಬಂದು ನಿಂತಾಗ, ನಮ್ಮಿಂದ ಪ್ರತಿಕ್ರಿಯೆ ಸಹಜ. ಮಾನಸಿಕವಾಗಿ ಕುಗ್ಗುವುದು, ಖಿನ್ನತೆ, ಅನಾರೋಗ್ಯ, ಚಿಂತೆ ಇವೆಲ್ಲ ನಮ್ಮ ಪ್ರತಿಕ್ರಿಯೆಗಳ ವಿವಿಧ ರೂಪಗಳೇ. ಇವು ನಮ್ಮನ್ನು ಇನ್ನಷ್ಟು ದುರ್ಬಲರನ್ನಾಗಿ ಮಾಡಿ ನಿಸ್ತೇಜಗೊಳಿಸುತ್ತವೆ. ಇದರಿಂದ ನಮಗೂ ಮತ್ತು ನಮ್ಮ ಕುಟುಂಬದವರಿಗೂ, ಬಂಧುವರ್ಗದವರಿಗೂ ಇರಿಸುಮುರಿಸಾಗುವ ಸಾಧ್ಯತೆಗಳಿವೆ. ಅವರ ದಿನನಿತ್ಯದ ಜೀವನವೂ ನಮ್ಮಿಂದ ಇಕ್ಕಟ್ಟಿಗೆ ಸಿಲುಕಬಹುದು.

ಶೋಕವನ್ನು ಎದುರಿಸುವುದು ಮಾನವನಿಗೆ ಬಹು ದೊಡ್ಡ ಪರೀಕ್ಷೆಯಾಗಿದೆ. ಸಂಭವಿಸಿದ ಸನ್ನಿವೇಶಗಳಿಂದ ನಿರಾಶೆಯ ಕೂಪಕ್ಕೆ ಬೀಳುವುದು ಬಹು ಸಹಜ ಪ್ರತಿಕ್ರಿಯೆಯಾಗಿದೆ. ಆದರೆ ಇದು ನಮಗಾದ ನೋವನ್ನು ನಿವಾರಿಸಬಲ್ಲದೇ? ಸಂಕಷ್ಟವನ್ನು ಎದುರಿಸುವ ಮನೋಸ್ಥೈರ್ಯವನ್ನು ನೀಡಬಲ್ಲದೇ? ಈ ರೀತಿಯಲ್ಲಿ ನಾವು ಯೋಚಿಸಿದಾಗ, ದುಃಖವನ್ನು ಸಹಿಸುವ ಉತ್ತಮ ಮಾರ್ಗವೇನಾದರೂ ಇದೆಯೇ ಎಂಬುದರ ಕಡೆಗೆ ನಾವು ನಮ್ಮ ಆಲೋಚನೆಗಳನ್ನು ಹರಿಯಬಿಡುತ್ತೇವೆ. ಇಂಥ ಸಂದಿಗ್ಧದಲ್ಲಿ ನಮ್ಮ ನೆರವಿಗೆ ಬರುವುದು

ಅಧ್ಯಾತ್ಮದ ದೃಷ್ಟಿಕೋನ. ಅಧ್ಯಾತ್ಮವು ಹೇಳುವುದು ನಮ್ಮ ಕುರಿತಾಗಿಯೇ. ಅದಿರುವುದು ಅನ್ಯಗ್ರಹಗಳಲ್ಲಿರುವ ಜೀವಿಗಳಿಗಾಗಿ ಅಲ್ಲ! ನಮ್ಮ ಎದೆಯಲ್ಲಿ ಮಡುಗಟ್ಟಿದ ತೀವ್ರವಾದ ನೋವನ್ನು ಎದುರಿಸಲು ಶ್ರೀ ಶಂಕರ ಭಗವತ್ಪಾದರು ತಮ್ಮ 'ವಿವೇಕ ಚೂಡಾಮಣಿ' ಗ್ರಂಥದಲ್ಲಿ ಹೇಳಿರುವ ಈ ಮಾತುಗಳು ಬಹು ಪ್ರಸ್ತುತವಾಗಿವೆ: 'ಸಹನಂ ಸರ್ವದುಃಖಾನಾಮಪ್ರತೀಕಾರಪೂರ್ವಕಮ್ । ಚಿಂತಾವಿಲಾಪರಹಿತಂ ಸಾ ತಿತಿಕ್ಷಾ ನಿಗದ್ಯತೇ'. ಶ್ರೀ ಶಂಕರರು 'ತಿತಿಕ್ಷೆ' ಎಂಬ ಬಹು ದೊಡ್ಡ ಗುಣವನ್ನು ನಮಗೆ ವಿವರಿಸುತ್ತಾರೆ. ಎಲ್ಲ ದುಃಖಗಳಲ್ಲೂ ಸಹನಶೀಲರಾಗಿರುವುದು, ಅದಕ್ಕೆ ಪ್ರತೀಕಾರವನ್ನು ಮಾಡದಿರುವುದು, ಚಿಂತೆ ಮತ್ತು ವಿಲಾಪ ಮಾಡದಿರುವುದು, ಇಂಥ ಗುಣಗಳಿಗೆ 'ತಿತಿಕ್ಷೆ' ಎಂದು ಕರೆಯುತ್ತಾರೆ.

ಶ್ರೀ ಶಂಕರರು ಅಧ್ಯಾತ್ಮ ಸಾಧನೆಗೆ ಇರಬೇಕಾದ ಅರ್ಹತೆಗಳನ್ನು ಹೇಳುವಾಗ ಈ ಗುಣವನ್ನು ವಿವರಿಸಿದ್ದರೂ, ಇದು ಲೌಕಿಕ ಜೀವನಕ್ಕೂ ನೂರಕ್ಕೆ ನೂರರಷ್ಟು ಅನ್ವಯವಾಗುತ್ತದೆ. ಏಕೆಂದರೆ ಅಧ್ಯಾತ್ಮ ಪ್ರಯಾಣವು ಶುರುವಾಗುವುದು ಲೌಕಿಕ ಜೀವನದಿಂದಲೇ.

ಸಹನೆಯ ಮಹತ್ವವನ್ನು ನಾವೆಲ್ಲ ಬಲ್ಲೆವು. ನಾವು ದುಃಖ ಪರವಶರಾದಾಗ, ತಾಳ್ಮೆ ನಮಗೆ ವರವಾಗಬಲ್ಲದು. ತಾಳ್ಮೆಯು ನಮ್ಮನ್ನು ಯಾವುದೇ ರೀತಿಯ ಆತುರದ ನಿರ್ಧಾರವನ್ನು ತೆಗೆದುಕೊಳ್ಳುವುದರಿಂದ ತಡೆಯುತ್ತದೆ. ಇಲ್ಲಿ ಬಳಸಿರುವ ಇನ್ನೊಂದು ಶಬ್ದ– 'ಅಪ್ರತೀಕಾರ' ಅಂದರೆ ನಮ್ಮ ನೋವಿಗೆ ಯಾರನ್ನೋ ದೂಷಿಸುವುದು, ಕಿಡಿಕಾರುವುದು ಇವುಗಳನ್ನು ಮಾಡದಿರುವುದು. ಅಂದರೆ, ನಮಗಾದ ಅನುಭವಗಳನ್ನು ದೃಢಚಿತ್ತದಿಂದ ಒಪ್ಪಿಕೊಳ್ಳುವುದು, ಅಂಥ ಸನ್ನಿವೇಶವು ನಮಗಾಗಿಯೇ ಯಾರೋ ಮಾಡಿದರು, ಅದಕ್ಕೆ ಕಾರಣಗಳನ್ನು ಹುಡುಕುವುದು ಇವುಗಳಿಂದ ದೂರವಿರುವುದನ್ನೇ ಇಲ್ಲಿ 'ಅಪ್ರತೀಕಾರ' ಎಂದಿದ್ದಾರೆ. ಇನ್ನು ಚಿಂತಾ ವಿಲಾಪಗಳನ್ನು ಮಾಡದೆ ಇರಬೇಕು ಎಂಬುದು ಮೂರನೆಯ ಅಂಶವಾಗಿದೆ. ಅಂದರೆ ಆಗಿಹೋದ ಘಟನೆಗಳನ್ನು ಮತ್ತೆ ಮತ್ತೆ ಕೆದಕದೆ, ಪ್ರಸ್ತುತದಲ್ಲಿ ಬದುಕಬೇಕು ಎಂಬ ಅರ್ಥ.

'ತಿತಿಕ್ಷೆ' ಈ ಹೊತ್ತಿನಲ್ಲಿ ನಮಗೆಲ್ಲ ಬೇಕಾದ ಬಲು ದೊಡ್ಡ ಮನದ ಸಾಧನವಾಗಿದೆ. ಯುದ್ಧಾಸ್ತ್ರಗಳಲ್ಲಿ ರಾಮಬಾಣ ಹೇಗೋ ಹಾಗೆಯೇ 'ತಿತಿಕ್ಷೆ'ಯು ಬದುಕೆಂಬ ಸಮರದಲ್ಲಿ ರಾಮಬಾಣ. ಬದುಕಿನ ಏರುಪೇರುಗಳನ್ನು ಸಮಚಿತ್ತದಿಂದ ಕಾಣಲು ನಾವು ಬಹುವಾಗಿ ವಿಫಲರಾಗುತ್ತಿದ್ದೇವೆ. ಹಾಗಾಗಿ 'ತಿತಿಕ್ಷೆ'ಯಂಥ ಮೇರುಮೌಲ್ಯ ನಮಗೆ ವರವಾಗಬಲ್ಲದು...

ಮಿನಿ ಕಥೆಗಳು

ಯಾವ ನ್ಯಾಯ?

ಆ ದಾರಿಯು ಹತ್ತು ಮನೆಯ ಜನರಿಗೆ, ವಾಹನಗಳಿಗೆ ಅನುಕೂಲವಾಗಿತ್ತು. ತುಂಬಾ ದಿನಗಳಿಂದ ಚರಂಡಿಯ ಮೇಲಿನ ಕಲ್ಲುಗಳು ಸರಿದುಹೋಗಿ ಚರಂಡಿಯ ಗಬ್ಬುವಾಸನೆ ಸಹಿಸಲಸಾಧ್ಯವಾಗಿತ್ತು. ಕೊನೆಗೆ ಸ್ಥಳೀಯ ಆಡಳಿತದವರು ಮನಸ್ಸು ಮಾಡಿ, ಆ ಗಟಾರದ ಮೇಲೆ ನಾಲ್ಕೈದು ಕಲ್ಲು ಚಪ್ಪಡಿ ಹಾಕಿ, ಅತ್ತಿತ್ತ ಒಂದಿಷ್ಟು ಸಿಮೆಂಟ್ ಲೇಪಿಸಿದ್ದು ದೊಡ್ಡ ಅನುಕೂಲವಾಗಿತ್ತು. ಆದರೆ ಆ ಹತ್ತು ಮನೆಯವರು ಆ ಸಿಮೆಂಟ್‌ಗೆ ಒಂದು ದಿನವೂ ಒಂದು ಚೊಂಬು ನೀರನ್ನು ಹಾಕಲಿಲ್ಲ. ಬಟ್ಟೆ ಒಗೆದ ನಂತರದ ನೀರನ್ನು ಚೆಲ್ಲಿದರೂ ಸಾಕಿತ್ತು, ಪಾಪ ಸಿಮೆಂಟ್‌ನ ದಾಹ ತಣಿಯಲೇ ಇಲ್ಲ. 'ಇದನ್ನು ಮಾಡಿಸಿದವರೇ ನೀರನ್ನೂ ಹಾಕಲಿ' ಅಂತ ಅವರೆಲ್ಲರೂ ಅಂದುಕೊಂಡಿದ್ದರು. ಆದರೆ ಅವರೂ ಹಾಕಲಿಲ್ಲ. ಕೆಲ ದಿನಗಳಲ್ಲಿ ಅದು ಮತ್ತೆ ಕಿತ್ತುಹೋಯಿತು, ಜನರು ಸ್ಥಳೀಯ ಆಡಳಿತದವರನ್ನು ದೂಷಿಸತೊಡಗಿ ದರು. ಇದ್ಯಾವ ನ್ಯಾಯ?!

ಪಾಪು ಬರಲಿಲ್ಲ, ಪಾಪ!

ಮದುವೆಯಾಗಿ ಎರಡು ವರ್ಷದಲ್ಲಿ 'ಗುಡ್ ನ್ಯೂಸ್' ಕೇಳಿ ಎರಡು ಹಕ್ಕಿಗಳು ಮುದ್ದು ಬೊಂಬೆಯ ಆಗಮನದ ನಿರೀಕ್ಷೆಯಲ್ಲಿದ್ದವು. ಆದರೆ ಆ ಹುಡುಗಿ ಅವನೆದೆಗೆ ಒರಗಿ, ''ನನಗೆ ಮಗು ಬೇಕು... ಬೇಕು ಕಣೋ'' ಎಂದು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಆದರೆ ಹುಡುಗ, ''ನನಗೆ ಬೇಡವೇನು? ನನಗೂ ಬೇಕು. ಆದರೆ 'ಬೇಬಿ ಅನ್‌ಹೆಲ್ದಿ' ಅಂತ ಡಾಕ್ಟರ್ ಹೇಳಿದ್ರಲ್ಲಾ?'' ಅಂತ ಸಮಜಾಯಿಷಿ ಕೊಡುತ್ತಿದ್ದ. ಅವನ ಮಾತು ಅವಳಿಗೆ ಕೇಳಿಸುತ್ತಿರಲಿಲ್ಲ. ''ಇದು ನಮ್ಮ ಪ್ರೇಮದ ಕುಡಿ ಕಣೋ, ನೋಡಿಲ್ಲಿ ಮಿಸುಕಾಡುತ್ತಿದೆ... ನೋಡು, ನಾವು ತೆಗೆಸುತ್ತೇವೆ ಎಂಬ ಮಾತುಗಳು ಅದಕ್ಕೂ ಕೇಳುತ್ತಿವೆಯಾ? ಅದೂ ಅಳುತ್ತಿರಬಹುದೇ?'' ಎಂದು ಆಕೆ ಕೇಳಿದಳು.

ಆಕೆಯ ಮಾತುಗಳಿಗೆ ಹುಡುಗನಿಗೆ ಉತ್ತರಿಸಲಾಗಲಿಲ್ಲ. ಏನೂ ತೋಚದೆ ಇಬ್ಬರೂ ಅಪ್ಪಿಕೊಂಡು ಜೋರಾಗಿ ಅಳುತ್ತಿದ್ದರು. ಅದನ್ನು ನೋಡಿ ರೂಮಿನ ಗೋಡೆ–ಕಿಟಕಿಗಳೆಲ್ಲ ಅಳುತ್ತಿರುವಂತೆ ಭಾಸವಾಯಿತು...

● ನಿಂಗಮ್ಮ ಭಾವಿಕಟ್ಟಿ, ಹುನಗುಂದ

ಸುಕೃತ ಫಲ

● ಸುಪ್ರೀತಾ ಕೆ.ಆರ್., ಬೆಂಗಳೂರು

ಏಸು ಜನ್ಮದ ಸುಕೃತ ಫಲವು ಬಂದೊದಗಿತೋ
ಕನ್ನಡಮ್ಮನ ಮಡಿಲೊಳಾಡುತಿಹೆವು;
ಯಾರ ತಪಸಿನ ವರವು ನಮ್ಮ ಕೈ ಸೇರಿತೋ
ಕನ್ನಡದ ಜೋಲಾಲಿ ಕೇಳುತಿಹೆವು.
ಓದಿ ಸಂಭ್ರಮಪಡುವ ಕಾವ್ಯ ಕಥನಗಳಲ್ಲಿ
ಮುಡಿದ ಮಲ್ಲಿಗೆ ಮಾಲೆ ಗಂಧವಿಹುದು;
ಅಕ್ಕರೆಯ ಅಕ್ಕರವ ತೀಡುತಿಹ ಕೈಗಳಲಿ
ತಾಯ ಪುಣ್ಯದ ಕೈಯ ಸ್ಪರ್ಶವಿಹುದು.

ತಾಯಿ ಭಾರತಿ ನಿನ್ನ ಭವ್ಯರೂಪದ ಸೊಬಗು
ಕನ್ನಡದ ಹಣತೆಯಲಿ ಬೆಳಗುತಿಹುದು
ಕರುನಾಡ ಶಿಲ್ಪಕಲೆ, ಜ್ಞಾನ ವಿಜ್ಞಾನಗಳು
ಹೊನ್ನ ಮಣಿ ಮುಕುಟದಲಿ
ಹೊಳೆಯುತಿಹುದು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ

1	■	■	2	3		■	■	4
5		6	■		■	7		
	■	8	9		■		■	
■	10	■		■	11		12	■
13		■	14			■	15	
■	16	17		■		■		■
18	■		■	19		20	■	21
22			■		■	23		
	■	■	24			■	■	

ಎಡದಿಂದ ಬಲಕ್ಕೆ

2. ಪರಸ್ಪರ ಬೀಳ್ಕೊಡುಗೆ (3)
5. ಮೇಲೆ ನೋಡಿದಾಗ ಕಂಡ ಆಕಾಶ (3)
7. ಸಂಗ್ರಹ ಅಥವಾ ಶೇಖರಣೆ (3)
8. ಮಳೆಯ ದೇವರು (3)
11. ಅತಿಯಾದ ಆತುರವಿದು (3)
13. ನೀರೂ ಆಗಬಲ್ಲ ಬಾಣ (2)
14. ಇವನು ಬರಿಯ ನೋಡುಗ (3)
15. ಇದೊಂದು ಧಾನ್ಯ (2)
16. ನವರಸಗಳಲ್ಲಿ ಒಂದಾದ ಮರುಕ (3)
19. ಸೂರ್ಯದೇವನ ಸಾರಥಿ (3)
22. ಸರದ ನಡುವೆಯೇ ಸಿಲುಕಿದ ಗಾಳಿ (3)
23. ಭಾರವಿಲ್ಲದ್ದು (3)
24. ನಾಕ ತೋರಿಸಿದ ಮುಖಂಡ (3)

ಮೇಲಿಂದ ಕೆಳಕ್ಕೆ

1. ಜನಗಳ ಕಲಹ (3)
3. ಭಯಂಕರವಾದುದು ಎಂದರ್ಥ (3)
4. ಕಿರಿಯ ಸಹೋದರ (3)
6. ಕಾಡು ತಲೆಕೆಳಗಾದರೆ ಹೊಸದು (2)
7. ಮತ್ತೊಬ್ಬ ರಾಕ್ಷಸ (3)
9. ಶಿವನ ಹೆಸರಿಂದ ಆರಂಭವಾಗುವ ಒಂದು ಬಗೆಯ ವೀಣೆ (4)
10. ತುಟಿಯ ಕೆಳಭಾಗ (3)
11. ಕರಾರು ಮಾಡಿಕೊಳ್ಳುವಾಗ ಉಂಟಾದ ಅಡ್ಡಿ, ಆಕ್ಷೇಪ (4)
12. ಯಾರು ಯಾರು ಮಾಡಿಕೊಂಡಿದ್ದೀರಿ ಒಪ್ಪಂದ (3)
17. ರಕ್ತಕ್ಕೆ ಇನ್ನೊಂದು ಹೆಸರು (3)
18. ಮನಸ್ಸಿನ ನಿರುತ್ಸಾಹ (3)
19. ಕೇಡು ಅಥವಾ ಹಾನಿ (3)
20. ತಲೆಕೆಳಗಾಗಿರುವ ಸಂಪತ್ತು (2)
21. ಕಾಣದಿರುವ ನೆಪ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2.ವಿದಾಯ 5.ಗಗನ 7.ದಾಸ್ತಾನು
8.ವರುಣ 11.ತವಕ 13.ಅಂಬು
14.ವೀಕ್ಷಕ 15.ರಾಗಿ 16.ಕರುಣೆ
19.ಅರುಣ 22.ಸಮೀರ
23.ಹಗುರ 24.ನಾಯಕ

ಮೇಲಿಂದ ಕೆಳಕ್ಕೆ
1.ಜಗಳ 3.ದಾರುಣ 4.ಅನುಜ
6.ನವ 7.ದಾನವ 9.ರುದ್ರವೀಣೆ
10.ಚಿಬುಕ 11.ತಕರಾರು 12.ಕರಾರು
17.ರುಧಿರ 18.ಬೇಸರ 19.ಅಪಾಯ
20.ಣಹ 21.ಕಾರಣ

ಒಂದೊಳ್ಳೆ ಮಾತು
ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಭಗವದ್ಗೀತೆಯ ಸಾರ ತಿಳಿದವರು

ಒಬ್ಬ ರಾಜ ತನಗೆ ಭಗವದ್ಗೀತೆಯನ್ನು ಯಾರು ಅರ್ಥ ಮಾಡಿಸುವರೋ ಅವರಿಗೆ ಅರ್ಧ ರಾಜ್ಯ ಕೊಡುವುದಾಗಿ ಘೋಷಣೆ ಮಾಡಿದ. ಇದನ್ನು ಕೇಳಿ ಅನೇಕ ಪಂಡಿತರು ರಾಜನಿಗೆ ಗೀತೆ ಕಲಿಸಲು ಬಂದರು. ಆದರೆ ರಾಜನ ಒಂದೆರಡು ಪ್ರಶ್ನೆಗಳಿಗೆ ಹೆದರಿ ಹಿಂದಿರುಗಿದರು. ಒಬ್ಬ ಮಹಾಪಂಡಿತ ಬಂದು ರಾಜನ ಪ್ರಶ್ನೆಗಳಿಗೆ ಉತ್ತರ ಹೇಳಿ ಗೀತೆಯನ್ನು ಕಲಿಸಿದ. ರಾಜ ಆತನ ವಿದ್ವತ್ತನ್ನು ಮೆಚ್ಚಿ ದಕ್ಷಿಣೆಯನ್ನು ನೀಡಿ ಗೌರವಿಸಿದ. ಆದರೆ ಅರ್ಧ ರಾಜ್ಯ ಕೊಡಲಿಲ್ಲ.

ಪಂಡಿತ ಪಟ್ಟು ಹಿಡಿದ. ಗೀತೆಯು ತನಗೆ ಸರಿಯಾಗಿ ಅರ್ಥವಾಗಿಲ್ಲವೆಂದು ರಾಜ ಜಾರಿಕೊಂಡ. ಪಂಡಿತ ಬಿಡಲಿಲ್ಲ. ತೀರ್ಮಾನಕ್ಕೆ ವಿಂಧ್ಯಾಚಲದ ತಪೋವನದಲ್ಲಿರುವ ಮುನಿಯ ಬಳಿಗೆ ಕರೆದೊಯ್ದ.

ಮುನಿಗಳು, ''ನೀನು ರಾಜನಿಗೆ ಗೀತೆ ಕಲಿಸಿದ್ದು ನಿಜವೇ?'' ಎಂದು ಪ್ರಶ್ನಿಸಿದರು. ''ಪ್ರತಿ ಪದದ ಪ್ರಕೃತಿ ಪ್ರತ್ಯಯ, ಭಿನ್ನ ಭಿನ್ನ ಅರ್ಥ ಎಲ್ಲಾ ತಿಳಿಸಿದ್ದೇನೆ'' ಎಂದ ಪಂಡಿತ. ರಾಜನಿಗೆ ಪ್ರಶ್ನಿಸಿದಾಗ ಹೌದೆಂದು ಒಪ್ಪಿದ. ಆಗ ಮುನಿಗಳು, ''ನೀನು ಕಲಿಸಿಯೂ ಇಲ್ಲ, ರಾಜ ಅದನ್ನು ಕಲಿತೂ ಇಲ್ಲ. ಗೀತೆಯನ್ನು ನೀನು ತಿಳಿದವನಾದರೆ ನಿನಗೆ ರಾಜ್ಯದ ಲೋಭವೇಕೆ? ರಾಜನು ಗೀತೆಯನ್ನು ಅರ್ಥ ಮಾಡಿಕೊಂಡಿದ್ದರೆ ಕೊಟ್ಟ ಮಾತು ಉಳಿಸಿಕೊಳ್ಳಲು ಹಿಂಜರಿಕೆ ಏಕೆ? ನಾಲಿಗೆ –ಹೃದಯದಲ್ಲಿ ಶುದ್ಧಿ ಇಲ್ಲದ ಮೇಲೆ ಗೀತೆ ಕಲಿತರೇನು?'' ಎಂದರು. ರಾಜ, ಪಂಡಿತ ಇಬ್ಬರಿಗೂ ಮುನಿಗಳ ಮಾತು ಅರ್ಥವಾಗಿ ತಲೆತಗ್ಗಿಸಿದರು.

ನಿಜ ಜೀವನದಲ್ಲೂ ನಮ್ಮ ಸುತ್ತಲೂ ಅನೇಕ ವಿದ್ಯಾವಂತರನ್ನು ನೋಡುತ್ತೇವೆ. ಹೆಸರಿಗೆ ಡಿಗ್ರಿ, ಡಬಲ್ ಡಿಗ್ರಿ ಮಾಡಿಕೊಂಡಿರುತ್ತಾರೆ. ಆದರೆ ಅವರ ಓದಿಗೂ ಅವರ ಸಂಸ್ಕಾರಕ್ಕೂ ಸಂಬಂಧವೇ ಇರುವುದಿಲ್ಲ. ಹೆಚ್ಚು ಓದಿದವರಿಗೂ ಕೆಲವೊಮ್ಮೆ ಸಾಮಾನ್ಯ ಜ್ಞಾನ ಕಡಿಮೆ ಇರುವುದನ್ನು ನೋಡುತ್ತೇವೆ. ವಿದ್ಯಾರ್ಜನೆ ಮಾಡಿದ ಕ್ಷಣ ಜೀವನ ಮೌಲ್ಯಗಳು ಮನವರಿಕೆ ಆಗಿರುತ್ತವೆ ಎಂದು ಯಾವ ಗ್ಯಾರಂಟಿಯೂ ಇಲ್ಲ. ತಂದೆ ತಾಯಿಗಳು ಮಕ್ಕಳನ್ನು ಬೆಳೆಸುವಾಗ ಬದುಕಿಗೆ ಬೇಕಾದಂಥ ಅನೇಕ ವಿಷಯಗಳನ್ನು ಅವರಿಗೆ ತಿದ್ದಿ ತೀಡಿ ಕಲಿಸಿ, ಬೆಳೆಸಬೇಕಾಗುತ್ತದೆ. ಬದುಕು ನಡೆಸಲು ವಿದ್ಯಾರ್ಜನೆ ಒಂದೇ ಸಾಲದು, ಜೀವನ ಕೌಶಲ, ಸಾಮಾನ್ಯ ಜ್ಞಾನ, ಹತ್ತು ಜನರೊಡನೆ ಬೆರೆತು ಬದುಕುವ ಕಲೆ ಎಲ್ಲವೂ ಗೊತ್ತಿರಬೇಕಾಗುತ್ತದೆ. ಅದಿಲ್ಲದೆ ಹೋದರೆ ಅವರು ಅದೆಂಥ ಮೇಧಾವಿ ಗಳಾದಾರು? ಹತ್ತು ಜನರೊಡನೆ ಬೆರೆತು ಹೇಗೆ ನಡೆದುಕೊಳ್ಳಬೇಕು ಎನ್ನುವ ಸಾಮಾನ್ಯ ಜ್ಞಾನವೂ ಇಲ್ಲದೆ ಎಲ್ಲರ ಹತ್ತಿರ ನಿಷ್ಠುರವಾಗಬೇಕಾಗುತ್ತದೆ.

ಜೀವನದಲ್ಲಿ ಅನೇಕ ಸಂದರ್ಭಗಳಲ್ಲಿ, ಕಷ್ಟದಲ್ಲಿ ರುವವರನ್ನು ನೋಡಿದಾಗ ಅವರಿಗೆ ಏನಾದರೂ ಮಾಡಬೇಕು ಅನ್ನುವ ತುಡಿತ, ಮಾನವೀಯ ಮೌಲ್ಯ, ವೈಚಾರಿಕತೆ ಇವೆಲ್ಲವನ್ನೂ ರೂಢಿಸಿ ಕೊಂಡಾಗ ನಾವು ಗಳಿಸಿದ ವಿದ್ಯೆಗೂ ಒಂದು ಮೌಲ್ಯ. ಅದಿಲ್ಲದೆ 'ನಾನು ಮಾತ್ರ ಉದ್ಧಾರವಾಗ ಬೇಕು, ನನ್ನ ಕುಟುಂಬ ಚೆನ್ನಾಗಿದ್ದರೆ ಸಾಕು, ನಾನು ನನ್ನದು' ಎನ್ನುವ ಸ್ವಾರ್ಥದ ಆಲೋಚನೆಗಳಲ್ಲೇ ಬಂದಿಯಾದವರು ಸಮಾಜಕ್ಕೆ ಒಂದು ಹೊರೆ ಎಂತಲೇ ಹೇಳಬೇಕು. ಅವರಿಂದ ಯಾರಿಗೂ ಕಿಂಚಿತ್ತೂ ಸಹಾಯ ಆಗುವುದಿಲ್ಲ, ಅವರು ಬೆಳೆಸುವ ಮಕ್ಕಳು ಕೂಡ ಸಮಾಜಕ್ಕೆ ಹೊರೆಯಾಗುತ್ತಾರೆ. ಆದ್ದರಿಂದಲೇ ವಿದ್ಯಾರ್ಜನೆಯ ಜತೆಗೆ ಜೀವನ ಕೌಶಲ, ಮಾನವೀಯ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಕೂಡ ಬಹಳ ಮುಖ್ಯವಾಗುತ್ತದೆ. ಇವುಗಳಿಂದ ನಮಗೆ ಯಾವುದೇ ರೀತಿಯ ಆರ್ಥಿಕ ಸಹಾಯ ಆಗದೆ ಹೋದರೂ, ಬೌದ್ಧಿಕವಾಗಿ ಇವು ನಮ್ಮನ್ನು ಸಮಾಜದಲ್ಲಿ ಬಹಳ ಎತ್ತರಕ್ಕೆ ಕೊಂಡೊಯ್ಯುವ ಸಾಮರ್ಥ್ಯವಿರುವ ಗುಣಗಳಾಗಿರುತ್ತವೆ. ನಾವು ಇವನ್ನು ಅಳವಡಿಸಿ ಕೊಂಡಾಗ ನಮ್ಮ ಸುತ್ತಲೂ ಇರುವ ಅನೇಕರನ್ನು ನಾವು ಚೆನ್ನಾಗಿ ನೋಡಿಕೊಂಡು ನೂರಾರು ಜನರಿಗೆ ಮಾದರಿಯಾಗಿ ಬದುಕುವ ಜೀವವಾಗುತ್ತೇವೆ. ಇಂಥ ಸಮಾಜ ಮುಖಿ ಜೀವನ ನಮ್ಮೆಲ್ಲರದೂ ಆಗಲಿ ಎನ್ನುವ ಶುಭ ಹಾರೈಕೆ ಮಾತ್ರ ನನ್ನದು...

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಟ್ರಾವಿಸ್ ಹೆಡ್ ಅಲಭ್ಯ



ಸಿಡ್ನಿ: ಆಸ್ಟ್ರೇಲಿಯಾ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಟ್ರಾವಿಸ್ ಹೆಡ್ ಅವರು ಟಿ20 ಸರಣಿಯ ಇನ್ನುಳಿದ ಎರಡು ಪಂದ್ಯಗಳಿಂದ ಹೊರ ಗುಳಿಯಲಿದ್ದಾರೆ. ಇಂಗ್ಲೆಂಡ್ ವಿರುದ್ಧ ಮುಂಬರುವ ಆ್ಯಷಸ್ ಟ್ರೋಫಿ ಟೆಸ್ಟ್ ಸರಣಿಗೆ ತಯಾರಿ ನಡೆಸುವ ಸಲುವಾಗಿ ಆಸ್ಟ್ರೇಲಿಯಾ ಕ್ರಿಕೆಟ್ ಈ ನಿರ್ಧಾರವನ್ನು ತೆಗೆದು ಕೊಂಡಿದೆ. ಪರ್ತ್‌ನಲ್ಲಿ ನವೆಂಬರ್ 21ರಂದು ಆರಂಭವಾಗಲಿರುವ ಮೊದಲನೇ ಟೆಸ್ಟ್‌ನಲ್ಲಿ ಇಂಗ್ಲೆಂಡ್ ತಂಡವನ್ನು ಆಸ್ಟ್ರೇಲಿಯಾ ಎದುರಿಸಲಿದೆ. ಕಳೆದ ಜುಲೈನಲ್ಲಿ ಮುಗಿದಿದ್ದ ವೆಸ್ಟ್ ಇಂಡೀಸ್ ಪ್ರವಾಸದ ಬಳಿಕ ಇದು ಟ್ರಾವಿಸ್ ಹೆಡ್ ಅವರಿಗೆ ಮೊದಲ ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯವಾಗಿದೆ. ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ನಿಯಮಿತವಾಗಿ ರನ್ ಗಳಿಸುವಲ್ಲಿ ವಿಫಲರಾಗುತ್ತಿರುವ ಹೆಡ್, ಕಳೆದ ಎಂಟು ಇನ್ನಿಂಗ್ಸ್‌ಗಳಿಂದ ಕೇವಲ 31 ರನ್ ಕಲೆ ಹಾಕಿದ್ದರು.

ರಾಜಸ್ಥಾನ-ಮುಂಬೈ ರಣಜಿ ಪಂದ್ಯ ಡ್ರಾ

ಜೈಪುರ: ಭಾರತ ಹಾಗೂ ದಕ್ಷಿಣ ಆಫ್ರಿಕಾ ವಿರುದ್ಧದ ಎರಡು ಪಂದ್ಯಗಳ ಟೆಸ್ಟ್ ಸರಣಿಗೂ ಮುನ್ನ ಆರಂಭಿಕ ಬ್ಯಾಟ್ಸ್‌ಮನ್ ಯಶಸ್ವಿ ಜೈಸ್ವಾಲ್ ಅವರು ಭರ್ಜರಿ ಫಾರ್ಮ್‌ಗೆ ಮರಳಿದ್ದಾರೆ. ಅವರು ರಾಜಸ್ಥಾನದ ವಿರುದ್ಧದ ರಣಜಿ ಟ್ರೋಫಿ ಪಂದ್ಯದಲ್ಲಿ ಶತಕ ಬಾರಿಸಿದ್ದಾರೆ. ಎಡಗೈ ಆಟಗಾರನ ಶತಕದ ಹೊರತಾಗಿಯೂ ಮುಂಬೈ ತಂಡ, ರಾಜಸ್ಥಾನದ ಎದುರು ಪಂದ್ಯವನ್ನು ಡ್ರಾ ವನ್ನು ಸಾಧಿಸಿತು. ಇಲ್ಲಿನ ಸವಾಯ್ ಮಾನ್ ಸಿಂಗ್ ಕ್ರೀಡಾಂಗಣದಲ್ಲಿ ಮಂಗಳವಾರ ಅಂತ್ಯವಾದ ರಾಜಸ್ಥಾನ ವಿರುದ್ಧದ ಪಂದ್ಯದ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ ಯಶಸ್ವಿ ಜೈಸ್ವಾಲ್ 120 ಎಸೆತಗಳಲ್ಲಿ 11 ಬೌಂಡರಿಗಳೊಂದಿಗೆ ಶತಕವನ್ನು ಪೂರ್ಣಗೊಳಿಸಿದರು. ಅಂತಿಮವಾಗಿ ಅವರು ಆಡಿದ 174 ಎಸೆತಗಳಲ್ಲಿ ಒಂದು ಸಿಕ್ಸರ್ ಹಾಗೂ 18 ಬೌಂಡರಿಗಳೊಂದಿಗೆ 156 ರನ್‌ಗಳನ್ನು ಕಲೆ ಹಾಕಿದರು. ಇದು ಅವರ 17ನೇ ಪ್ರಥಮ ದರ್ಜೆ ಕ್ರಿಕೆಟ್ ಶತಕವಾಗಿದೆ. ಇದಕ್ಕೂ ಮುನ್ನ ಪ್ರಥಮ ಇನ್ನಿಂಗ್ಸ್‌ನಲ್ಲಿ ಜೈಸ್ವಾಲ್ 67 ರನ್ ಕಲೆ ಹಾಕಿದ್ದರು. ಭಾರತ ಪರ ಆಡಿರುವ ದೀಪಕ್ ಹೂಡಾ ರಾಜಸ್ಥಾನ ತಂಡದ ಪ್ರಥಮ ಇನ್ನಿಂಗ್ಸ್‌ನಲ್ಲಿ 4ನೇ ಸ್ಥಾನದಲ್ಲಿ ಬ್ಯಾಟ್ ಮಾಡಿ ದ್ವಿಶತಕ ಗಳಿಸಿದರು. ಹೂಡಾ 335 ಎಸೆತಗಳನ್ನು ಎದುರಿಸಿ 248 ರನ್ ಗಳಿಸಿದರು. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ 22 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನೂ ಸಹ ಗಳಿಸಿದ್ದರು, ಹಾಗಾಗಿ ರಾಜಸ್ಥಾನ ತಂಡ ಪ್ರಥಮ ಇನ್ನಿಂಗ್ಸ್‌ನಲ್ಲಿ 617 ರನ್ ಗಳಿಸಿ ಮುನ್ನಡೆ ಪಡೆಯುವ ಮೂಲಕ ಮೂರು ಅಂಕಗಳನ್ನು ಕಲೆ ಹಾಕಿದೆ.

ಮೊಹ್ಸಿನ್ ಖಾನ್ ಸ್ಪಿನ್ ಮೋಡಿಗೆ ಕೇರಳ ತತ್ತರ | ರಾಜ್ಯಕ್ಕೆ ಈ ರಣಜಿ ಋತುವಿನ ಮೊದಲ ಜಯ

ರಣಜಿ: ಕರ್ನಾಟಕಕ್ಕೆ ಇನ್ನಿಂಗ್ಸ್ ಗೆಲುವು

ತಿರುವನಂತಪುರಂ: ಕರುಣ್ ನಾಯರ್ (233 ರನ್) ಮತ್ತು ಸ್ಮರಣ್ ರವಿಚಂದ್ರನ್ (220 ರನ್) ಅವರ ದ್ವಿಶತಕಗಳು ಹಾಗೂ ಮೊಹ್ಸಿನ್ ಖಾನ್ (29 ರನ್‌ಗೆ 6 ವಿಕೆಟ್) ಅವರ ಸ್ಪಿನ್ ಮೋಡಿಯ ನೆರವಿನಿಂದ ಕರ್ನಾಟಕ ತಂಡವು ಕೇರಳ ವಿರುದ್ಧ 2025-26ರ ರಣಜಿ ಟ್ರೋಫಿ ಟೂರ್ನಿಯ ಎಲೈಟ್ ಬಿ ಪಂದ್ಯದಲ್ಲಿ ಇನ್ನಿಂಗ್ಸ್ ಹಾಗೂ 164 ರನ್‌ಗಳ ಭರ್ಜರಿ ಗೆಲುವು ಪಡೆದಿದೆ. ಈ ಗೆಲುವಿನ ಮೂಲಕ ಮಯಾಂಕ್ ಅಗರ್ವಾಲ್ ಅವರ ನಾಯಕತ್ವದ ಕರ್ನಾಟಕ ತಂಡವು 11 ಅಂಕಗಳ ಮೂಲಕ ಎರಡನೇ ಸ್ಥಾನಕ್ಕೆ ಲಗ್ಗೆ ಇಟ್ಟಿದೆ. ಆಡಿದ ಮೂರು ಪಂದ್ಯಗಳಿಂದ ಎರಡು ಅಂಕ ಕಲೆ ಹಾಕಿರುವ ಆತಿಥೇಯ ಕೇರಳ ತಂಡ ಅಂಕಪಟ್ಟಿಯಲ್ಲಿ 7ನೇ ಸ್ಥಾನಕ್ಕೆ ಕುಸಿದಿದೆ.

ಮಂಗಳವಾರ ಇಲ್ಲಿನ ಕೇರಳ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ವಿಕೆಟ್ ನಷ್ಟವಿಲ್ಲದೆ 10 ರನ್‌ಗಳಿಂದ ದ್ವಿತೀಯ ಇನ್ನಿಂಗ್ಸ್ ಮುಂದುವರಿಸಿದ ಕೇರಳ ತಂಡಕ್ಕೆ ಆರಂಭದಲ್ಲಿ ಕರ್ನಾಟಕದ ಬೌಲರ್ ವಿದ್ವತ್ ಕಾವೇರಪ್ಪ ಅವರು ಎಂ.ಡಿ ನಿಧೀಶ್ ಹಾಗೂ ಅಕ್ಷಯ್ ಚಂದ್ರನ್ ಅವರನ್ನು ಬಹುಬೇಗ ಔಟ್ ಮಾಡುವ ಮೂಲಕ ಕೇರಳ ತಂಡಕ್ಕೆ ಆರಂಭಿಕ ಆಘಾತವನ್ನು ನೀಡಿದ್ದರು. ನಂತರ ನಾಯಕ ಮೊಹಮ್ಮದ್ ಅಜರುದ್ದೀನ್ ಅವರನ್ನು ಶಿಖರ್ ಶೆಟ್ಟಿ ಔಟ್ ಮಾಡಿದರು, ಆ ಮೂಲಕ ಕೇರಳ ತಂಡ 40 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಆರಂಭಿಕ ಸಂಕಷ್ಟಕ್ಕೆ ಸಿಲುಕಿತ್ತು. ನಂತರ ಕೃಷ್ಣ ಪ್ರಸಾದ್ ಹಾಗೂ ಅಹ್ಮದ್ ಇಮ್ರಾನ್ ಅವರು ಕೆಲಕಾಲ ಕರ್ನಾಟಕ ತಂಡದ ಬೌಲರ್‌ಗಳನ್ನು ಸಮರ್ಥವಾಗಿ ಎದುರಿಸಿ ನಾಲ್ಕನೇ ವಿಕೆಟ್‌ಗೆ 57 ರನ್‌ಗಳನ್ನು ಕಲೆ ಹಾಕಿ ತಂಡಕ್ಕೆ ಭರವಸೆ ಮೂಡಿಸಿದ್ದರು. ಆದರೆ ಬಳಿಕ ಬೌಲಿಂಗ್‌ಗೆ ಬಂದ ಮೊಹ್ಸಿನ್ ಖಾನ್ ಅವರು ಸ್ಪಿನ್ ಮೋಡಿಯ ಮೂಲಕ ಕೇರಳ ತಂಡದ ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿ ಹಾಕಿದರು.

ಖಾನ್ ಮೋಡಿಗೆ ಕೇರಳ ತತ್ತರ: ಕ್ರೀಸ್‌ನಲ್ಲಿ ನೆಲೆವೂರಿ 33 ರನ್ ಗಳಿಸಿದ್ದ ಕೃಷ್ಣ ಪ್ರಸಾದ್ ಹಾಗೂ 23 ರನ್ ಗಳಿಸಿ ಆಡುತ್ತಿದ್ದ ಅಹ್ಮದ್ ಇಮ್ರಾನ್ ಅವರಿಬ್ಬರೂ ಮೊಹ್ಸಿನ್ ಖಾನ್ ಸ್ಪಿನ್ ಮೋಡಿಯಿಂದಾಗಿ ಔಟ್ ಮಾಡಿದರು. ಸಚಿನ್ ಬೇಬಿ, ಶಾನ್ ರೋಜರ್, ಬಾಬಾ ಅಪರಿಜಿತ್ ಹಾಗೂ ಹರಿಕೃಷ್ಣ ಅವರನ್ನು ಖಾನ್ ಔಟ್ ಮಾಡಿದರು. ಆದರೆ ಈಡನ್ ಆಪಲ್ ಟಾಮ್ ಅವರು 68 ಎಸೆತಗಳಲ್ಲಿ 39 ರನ್‌ಗಳನ್ನು ಕಲೆ ಹಾಕಿದ್ದರು. ಅಂತಿಮವಾಗಿ ಕೇರಳ ತಂಡ 79.3 ಓವರ್‌ಗಳಿಗೆ 184 ರನ್‌ಗಳಿಗೆ ಆಲ್‌ಔಟ್ ಆಯಿತು. ಆತಿಥೇಯರು ಎರಡೂ ಇನಿಂಗ್ಸ್‌ಗಳನ್ನು ಆಡಿದರೂ ಕರ್ನಾಟಕ ತಂಡ ಪ್ರಥಮ ಇನಿಂಗ್ಸ್‌ನಲ್ಲಿ ಕಲೆ ಹಾಕಿದ್ದ ಮೊತ್ತವನ್ನು ಸರಿದೂಗಿಸಲು ಸಾಧ್ಯವಾಗದ ಕಾರಣ ಅಂತಿಮವಾಗಿ ಇನ್ನಿಂಗ್ಸ್ ಹಾಗೂ 164 ರನ್‌ಗಳ ಸೋಲು ಅನುಭವಿಸಿತು.

ಕರ್ನಾಟಕ ತಂಡದ ಪರ ದ್ವಿತೀಯ ಇನ್ನಿಂಗ್ಸ್‌ನಲ್ಲಿ ಸ್ಪಿನ್ ಮೋಡಿ ಮಾಡಿದ್ದ ಮೊಹ್ಸಿನ್ ಖಾನ್, 23.3 ಓವರ್‌ಗಳಲ್ಲಿ 29 ರನ್ ನೀಡಿ 6 ವಿಕೆಟ್ ಸಾಧನೆ ಮಾಡಿದರು.

ಗೆಲುವಿನ ಸಂಭ್ರಮದಲ್ಲಿ ಕರ್ನಾಟಕ ರಣಜಿ ತಂಡ.

ಅಗ್ರಸ್ಥಾನಕ್ಕೇರಿದ ಕರ್ನಾಟಕ

ಇನ್ನಿಂಗ್ಸ್ ಜಯ ಸಾಧಿಸಿದ ಕರ್ನಾಟಕಕ್ಕೆ ಬೋನಸ್ ಪಾಯಿಂಟ್ ಸೇರಿ 7 ಅಂಕಗಳು ಸಿಕ್ಕರೆ, ಕೇರಳಕ್ಕೆ ಯಾವುದೇ ಅಂಕ ಸಿಗಲಿಲ್ಲ. ಋತುವಿನ ಮೊದಲ ಎರಡು ಪಂದ್ಯಗಳಲ್ಲಿ ಮುನ್ನಡೆ ಬಿಟ್ಟು ಕೊಟ್ಟು ಡ್ರಾ ಮಾಡಿಕೊಂಡಿದ್ದ ಕೇರಳಕ್ಕೆ ಇದುವರೆಗೆ ಕೇವಲ ಎರಡು ಅಂಕಗಳಿವೆ. ಒಟ್ಟು ಎಂಟು ತಂಡಗಳಿರುವ ಎಲೈಟ್ ಗ್ರೂಪ್ 'ಬಿ'ಯಲ್ಲಿ ಹಾಲಿ ರನ್ನರ್ ಅಪ್ ಕೇರಳ ಸದ್ಯ ಏಳನೇ ಸ್ಥಾನದಲ್ಲಿದೆ.

ಕರುಣ್ ಪಂದ್ಯಶ್ರೇಷ್ಠ

ಪಂದ್ಯದ ಪ್ರಥಮ ಇನ್ನಿಂಗ್ಸ್‌ನಲ್ಲಿ ಅತ್ಯುತ್ತಮ ಬ್ಯಾಟ್ ಮಾಡಿದ್ದ ಕರ್ನಾಟಕದ ಕರುಣ್ ನಾಯರ್ 233 ರನ್‌ಗಳನ್ನು ಕಲೆ ಹಾಕಿದ್ದರು. ಹಾಗಾಗಿ ಅವರು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಗ್ರಸ್ಥಾನ ಕಳೆದುಕೊಂಡ ಮಂಧಾನಾ

ಲಾರಾ ವೋಲ್ವಾರ್ಡ್ಟ್ ನಂ.1 ಬ್ಯಾಟರ್

ದುಬೈ: ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಭಾರತ ಮಹಿಳಾ ತಂಡದ ಉಪ ನಾಯಕಿ ಸ್ಮೃತಿ ಮಂಧಾನಾ ಅವರು ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಅಮೋಘ ಬ್ಯಾಟಿಂಗ್ ಮೂಲಕ ಟಾಪ್ ಸ್ಕೋರರ್ ಆಗಿದ್ದ, ದಕ್ಷಿಣ ಆಫ್ರಿಕಾ ನಾಯಕಿ ಲಾರಾ ವೋಲ್ವಾರ್ಡ್ಟ್ ನಂ.1 ಸ್ಥಾನಕ್ಕೆ ಏರಿದ್ದಾರೆ.



ಟಾಪ್ 5 ಬ್ಯಾಟರ್‌ಗಳು

- ಲಾರಾ ವೋಲ್ವಾರ್ಡ್ಟ್-ದ.ಆಫ್ರಿಕಾ
- ಸ್ಮೃತಿ ಮಂಧಾನ-ಭಾರತ
- ಆಶ್ಲಿ ಗಾರ್ಡ್ನರ್-ಆಸ್ಟ್ರೇಲಿಯಾ
- ನ್ಯಾಟ್ ಸ್ಕಿವರ್ ಬ್ರಂಟ್-ಇಂಗ್ಲೆಂಡ್
- ಬೆಥ್ ಮೂನಿ-ಆಸ್ಟ್ರೇಲಿಯಾ

ವೋಲ್ವಾರ್ಡ್ಟ್ ವಿಶ್ವಕಪ್ ಟೂರ್ನಮೆಂಟ್‌ನ ಸೆಮಿಫೈನಲ್ ಮತ್ತು ಫೈನಲ್ ಎರಡರಲ್ಲೂ ಶತಕಗಳನ್ನು ಗಳಿಸಿದ್ದರು. ಒಟ್ಟು 571 ರನ್ ಬಾರಿಸುವ ಮೂಲಕ ಮಹಿಳಾ ವಿಶ್ವಕಪ್‌ನ ಒಂದೇ ಆವೃತ್ತಿಯಲ್ಲಿ ಅತ್ಯಧಿಕ ರನ್ ಕಲೆಹಾಕಿದ ಆಟಗಾರ್ತಿ ಎಂಬ ಕೀರ್ತಿಗೂ ಪಾತ್ರರಾಗಿದ್ದರು. ಈ ಸಾಧನೆಯು ಅವರ ವೃತ್ತಿಜೀವನದ ಅತ್ಯುತ್ತಮ ರೇಟಿಂಗ್‌ಗೆ ಏರಿತು. ಮಂಧಾನ 811 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ನವಿ ಮುಂಬೈನಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಶತಕ ಬಾರಿಸಿ ತಂಡವನ್ನು ಫೈನಲ್ ತಲುಪಿಸಿದ ಜೆಮಿಮಾ ರೊಡ್ರಿಗಸ್ ಮೊದಲ ಬಾರಿಗೆ ಅಗ್ರ ಹತ್ತರೊಳಗೆ ಸ್ಥಾನ ಪಡೆದರು. ಜೆಮಿಮಾ 9 ಸ್ಥಾನಗಳ ಪ್ರಗತಿ ಸಾಧಿಸಿದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ನಾಲ್ಕು ಸ್ಥಾನಗಳ ಜಿಗಿತದೊಂದಿಗೆ 14ನೇ ಸ್ಥಾನಕ್ಕೇರಿದ್ದಾರೆ. ಆಲ್‌ರೌಂಡರ್ ದೀಪ್ತಿ ಶರ್ಮಾ, ಆಸ್ಟ್ರೇಲಿಯಾದ ಅನ್ನಾಬೆಲ್ ಸದರ್ಲ್ಯಾಂಡ್ ಅವರನ್ನು ಹಿಂದಿಕ್ಕಿ ಆಲ್-ರೌಂಡರ್ ಶ್ರೇಯಾಂಕದಲ್ಲಿ ನಾಲ್ಕನೇ ಸ್ಥಾನಕ್ಕೆ ಏರಿದರು.

ನ.12ರಿಂದ 15ರ ವರೆಗೆ ನಾಮಪತ್ರ ಸಲ್ಲಿಸಲು ಅವಕಾಶ

30ರಂದು ಕೆಎಸ್‌ಸಿಎ ಚುನಾವಣೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) 2025-28ರ ಸಾಲಿನ ಆಡಳಿತ ಮಂಡಳಿಯ ಚುನಾವಣೆಯ ದಿನಾಂಕ ಘೋಷಣೆ ಆಗಿದ್ದು, ನವೆಂಬರ್ 30ರಂದು ನಿಗದಿಯಾಗಿರುವ ಚುನಾವಣೆಗೆ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ನವೆಂಬರ್ 12ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಆರಂಭವಾಗಲಿದೆ. ಬಿಸಿಸಿಐಯಲ್ಲಿ ಪ್ರಸ್ತುತ ಖಜಾಂಚಿಯಾಗಿರುವ ರಘುರಾಮ್ ಭಟ್ ನೇತೃತ್ವದ ಆಡಳಿತ ಮಂಡಳಿಯ ಅಧಿಕಾರಾವಧಿ ಸೆ.30ರಂದು ಕೊನೆಗೊಂಡಿದ್ದು, ಇದೀಗ ಕೊನೆಗೂ ದಿನಾಂಕ ಘೋಷಣೆಯಾಗಿದೆ.

ನಾಮಪತ್ರ ಸಲ್ಲಿಕೆಗೆ ನವೆಂಬರ್ 15 ಅಂತಿಮ ದಿನವಾಗಿದ್ದು, ಅಭ್ಯರ್ಥಿಗಳು ಮಧ್ಯಾಹ್ನ 12ರಿಂದ ಸಂಜೆ 5 ಗಂಟೆಯವರೆಗೆ ಉಮೇದುವಾರಿಕೆ ಸಲ್ಲಿಸಬಹುದಾಗಿದೆ. ಸ್ವೀಕೃತ ನಾಮಪತ್ರಗಳ ಪರಿಶೀಲನೆ ನವೆಂಬರ್ 17ರ ಬೆಳಗ್ಗೆ 11ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆಯಲಿದ್ದು, ಸಂಜೆ 5 ಗಂಟೆಗೆ ಮಾನ್ಯತೆ ಹೊಂದಿರುವ ನಾಮಪತ್ರಗಳ ಪಟ್ಟಿ ಪ್ರಕಟವಾಗಲಿದೆ.

ಅಭ್ಯರ್ಥಿಗಳು ನಾಮಪತ್ರ ಹಿಂಪಡೆಯಲು ನವೆಂಬರ್ 18 ಅಂತಿಮ ದಿನವಾಗಿದೆ. 19ರ ಸಂಜೆ 5 ಗಂಟೆಗೆ ಚುನಾವಣೆಯ ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ. ನವೆಂಬರ್ 30ರಂದು ಬೆಳಗ್ಗೆ 11ರಿಂದ ಸಂಜೆ 7ರವರೆಗೆ ಮತದಾನ ಪ್ರಕ್ರಿಯೆ ಬಳಿಕ ಅದೇ ದಿನ ಫಲಿತಾಂಶ ಪ್ರಕಟವಾಗಲಿದೆ.

ಟೀಮ್ ಇಂಡಿಯಾದ ಮಾಜಿ ವೇಗಿ ಹಾಗೂ ಕೆಎಸ್‌ಸಿಎ ಮಾಜಿ ಉಪಾಧ್ಯಕ್ಷ ವೆಂಕಟೇಶ್ ಪ್ರಸಾದ್ ಮತ್ತು ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಬಣ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. 12 ವರ್ಷ ಬಳಿಕ ವೆಂಕಟೇಶ್ ಮತ್ತೆ ಕೆಎಸ್‌ಸಿಎಗೆ ಆಗಮಿಸುವ ನಿರೀಕ್ಷೆಯಲ್ಲಿದ್ದಾರೆ. ವೆಂಕಟೇಶ್ ಈ ಹಿಂದೆ 2010ರಿಂದ 2013ರ ವರೆಗೆ ಕೆಎಸ್‌ಸಿಎ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು, ಆಗ ಅನಿಲ್ ಕುಂಬ್ಳೆ ಅಧ್ಯಕ್ಷರಾಗಿದ್ದರು. ಜಾವಗಲ್ ಶ್ರೀನಾಥ್ ಕಾರ್ಯದರ್ಶಿಯಾಗಿದ್ದರು. ಭಾರತದ ಪರ 33 ಟೆಸ್ಟ್, 161 ಏಕದಿನ ಪಂದ್ಯಗಳನ್ನಾಡಿರುವ ವೆಂಕಟೇಶ್ ಕ್ರಮವಾಗಿ 96 ಮತ್ತು196 ವಿಕೆಟ್ ಗಳಿಸಿದ್ದಾರೆ. ವಿನಯ್ ಮೃತ್ಯುಂಜಯ 2019ರಿಂದ 2022ರ ವರೆಗೆ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದರು. ಅವರು ಬಿಸಿಸಿಐ ಆರ್ಥಿಕ ಸಮಿತಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

550 ಜಿಲ್ಲೆಗಳಲ್ಲಿ 1400 ಪಂದ್ಯ | 36000 ಆಟಗಾರರು ಭಾಗಿ

ದೇಶಾದ್ಯಂತ ಹಾಕಿ ಶತಮಾನೋತ್ಸವ

ದೆಹಲಿ: 1925, ನ.7ರಂದು ಮಧ್ಯ ಪ್ರದೇಶದ ಗ್ವಾಲಿಯರ್‌ನಲ್ಲಿ ಭಾರತ ಹಾಕಿ ಒಕ್ಕೂಟ (ಐಎಚ್‌ಎಫ್) ಆರಂಭವಾಗಿ, ಇದೇ ಶುಕ್ರವಾರಕ್ಕೆ 100 ವರ್ಷವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಹಾಕಿ ಇಂಡಿಯಾ ಸಂಸ್ಥೆಯೊಂದಿಗೆ ಸೇರಿ ದೇಶಾದ್ಯಂತ ಹಾಕಿ ಶತಮಾನೋತ್ಸವ ಆಚರಿಸಲಿದೆ. ದೆಹಲಿಯ ಮೇಜರ್ ಧ್ಯಾನ್‌ಚಂದ್ ಹಾಕಿ ಮೈದಾನದಲ್ಲಿ ದಿನಪೂರ್ತಿ ಕಾರ್ಯಕ್ರಮಗಳು ನಡೆ ಯಲಿವೆ. ಕೇಂದ್ರ ಸಚಿವರ ತಂಡ ಹಾಗೂ ಭಾರತ ಪುರುಷ-ಮಹಿಳೆಯರ ಮಿಶ್ರ ತಂಡಗಳ ನಡುವೆ ಪ್ರದರ್ಶನ ಪಂದ್ಯವೂ ನಡೆಯಲಿದೆ. ಭಾರತ ಹಾಕಿ ಕಂಡ ಎಲ್ಲ ತಲೆಮಾರಿನ ದಿಗ್ಗಜರನ್ನು ಅಂದು ಸನ್ಮಾನಿಸಲಾ ಗುತ್ತದೆ ಎಂದು ಕೇಂದ್ರ ಕ್ರೀಡಾ ಸಚಿವ ಮನಸುಖ್ ಮಾಂಡವೀಯ ಹೇಳಿದ್ದಾರೆ.

ದೇಶದ 550ಕ್ಕೂ ಅಧಿಕ ಜಿಲ್ಲೆಗಳಲ್ಲಿ ಅಂದು ಪುರುಷ ಹಾಗೂ ಮಹಿಳಾ ತಂಡಗಳು ಪ್ರತ್ಯೇಕವಾಗಿ ಹಾಕಿ ಪಂದ್ಯಗಳಲ್ಲಿ ಆಡಲಿವೆ. ಒಟ್ಟು 1400 ಅಧಿಕ ಪಂದ್ಯಗಳು ನಡೆಯಲಿವೆ. 36000ಕ್ಕೂ ಅಧಿಕ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಇಡೀ ದೇಶದಲ್ಲಿ ಹಬ್ಬದ ವಾತಾವರಣ ಇರಲಿದೆ ಎಂದು ಸಚಿವ ಮಾಂಡವೀಯ ಹೇಳಿದ್ದಾರೆ.

ದೆಹಲಿಯಲ್ಲಿ ಚಿತ್ರ ಪ್ರದರ್ಶನ: ದೆಹಲಿಯ ಧ್ಯಾನ್‌ಚಂದ್ ಮೈದಾನ ದಲ್ಲಿ ಭಾರತ ಹಾಕಿಯ ಬೆಳವಣಿಗೆ ಕುರಿತು ಅಮೂಲ್ಯ ಚಿತ್ರಗಳನ್ನು ಪ್ರಕಟಿಸಲಾಗುತ್ತದೆ. ಬೆಳಗ್ಗೆ 8.30ರಿಂದ ಆರಂಭವಾಗುವ ಕಾರ್ಯಕ್ರಮಗಳು ದಿನ ಪೂರ್ತಿ ನಡೆಯಲಿವೆ. ಆ ದಿನವನ್ನು ಹಬ್ಬದಂತೆ ಆಚರಿಸಲಾಗುವುದು. 2036ರ ಹೊತ್ತಿಗೆ ಭಾರತ ವಿಶ್ವದ ಬಲಿಷ್ಠ ಕ್ರೀಡಾ ದೇಶವಾಗಿ ಹೊರಹೊಮ್ಮ ಬೇಕೆನ್ನುವುದು ನಮ್ಮ ಗುರಿ ಎಂದು ಮಾಂಡವೀಯ ಹೇಳಿದ್ದಾರೆ.

ಮಧುರ ಪ್ರೇಮದ ಕಥೆ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ಸಿದ್ದಪಡಿಸಿರುವ ಪ್ರೇಮಂ ಮಧುರಂ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಬಿಡುಗಡೆಯಾಗಿವೆ. ರೂಬಿ ಕ್ರಿಯೇಶನ್ಸ್‌ನಲ್ಲಿ ಅರಗೊಂಡ ಶೇಖರ್‌ರೆಡ್ಡಿ ನಿರ್ಮಾಣ ಮಾಡಿರುವ ಈ ಚಿತ್ರವನ್ನು ಎ.ಬಿ.ಗಾಂಧಿ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಚಿತ್ರದಲ್ಲಿ ಮೂರು ಹಾಡುಗಳಿದ್ದು, ವಿಶಾಲ್ ಆಲಾಪ ಸಂಗೀತ ಸಂಯೋಜಿಸಿದ್ದಾರೆ. ನಿರ್ದೇಶಕ ಗಾಂಧಿ ಅವರೇ ನಾಯಕನಾಗಿ ನಟಿಸಿದ್ದು, ಐಶ್ವರ್ಯಾ ದಿನೇಶ್, ಅನುಷಾ ಜೈನ್ ನಾಯಕಿಯರಾಗಿ ಬಣ್ಣಹಚ್ಚಿದ್ದಾರೆ. ಸಿಹಿಕಹಿ ಚಂದ್ರು, ರಾಜೇಶ್ವರಿ, ರಾಜ, ಅನೂಪ್ ಅಗಸ್ತ್ಯ ಮುಂತಾದವರು ತಾರಾಗಣದಲ್ಲಿದ್ದಾರೆ.

ಎಲ್ಲರ ಬಾಳಲ್ಲಿಯೂ ಪ್ರೀತಿ ಇದ್ದೇ ಇರುತ್ತದೆ, ಕೆಲವರು ಪ್ರೀತಿಯನ್ನು ಉಳಿಸಿಕೊಂಡರೆ ಕೆಲವರು ಕಳೆದುಕೊಂಡಿರುತ್ತಾರೆ. ಹೀಗೆ ಜೀವನದ ಪ್ರೀತಿಯ ಕುರಿತ ಕಥೆ ಚಿತ್ರದಲ್ಲಿ ಸಾಗುತ್ತದೆ. ಇಂದಿನ ಯುವ ಸಮೂಹಕ್ಕೆ ಹೇಳಿ ಮಾಡಿಸಿದ ಕಥೆ ಇದಾಗಿದೆ. ಹಾಗಂತ ಯುವ ಸಮೂಹಕ್ಕೆ ಸಿನಿಮಾ ಸೀಮಿತವಾಗಿಲ್ಲ, ಇಡೀ ಕುಟುಂಬ ಸಮೇತ ಕುಳಿತು ವೀಕ್ಷಿಸುವ ಚಿತ್ರ ಇದಾಗಿದ್ದು, ಒಳ್ಳೆಯ ಸಂದೇಶವೂ ಅಡಕವಾಗಿದೆ ಎಂದು ನಿರ್ದೇಶಕ ಗಾಂಧಿ ಹೇಳಿದರು. ಹೊಸಬರ ಪ್ರತಿಭೆಗೆ ವೇದಿಕೆ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದೇನೆ, ಸಿನಿಮಾದಲ್ಲಿ ಎಲ್ಲರಿಗೂ ಹೊಂದುವ ಒಳ್ಳೆಯ ಕಥೆಯಿದ್ದು, ಚಿತ್ರ ಖಂಡಿತಾ ಎಲ್ಲರಿಗೂ ಇಷ್ಟವಾಗಲಿದೆ ಎಂದು ನಿರ್ಮಾಪಕ ಅರಗೊಂಡ ಶೇಖರ್‌ರೆಡ್ಡಿ ಹೇಳಿದರು. ಮಂಜುನಾಥ ಹೆಗಡೆ ಛಾಯಾಗ್ರಹಣ, ಸಂಜೀವ್ ಜಾಗಿರ್‌ದಾರ್ ಸಂಕಲನ, ಮನೀಷ್ ಕೇಶವ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರು, ಬೈಂದೂರು, ಉಡುಪಿ, ಮಲ್ಪೆ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.

ಮರಳಿ ಬರುತ್ತಿದೆ ಯಜಮಾನ

ಇಪ್ಪತ್ತೈದು ವರ್ಷಗಳ ಹಿಂದೆ ತೆರೆಗೆ ಬಂದ ಸಾಸಹ ಸಿಂಹ ವಿಷ್ಣುವರ್ಧನ್ ಅಭಿನಯದ, ಚಂದನವನದ ಗೋಲ್ಡನ್ ಸಿನಿಮಾ ಯಜಮಾನ ಮತ್ತೆ ಬಿಡುಗಡೆಯಾಗುತ್ತಿದೆ. ಜನಮೆಚ್ಚಿದ ಈ ಚಿತ್ರ ಆಧುನಿಕ ತಂತ್ರಜ್ಞಾನದಿಂದ ಸಿಂಗಾರಗೊಂಡಿದೆ. ಮೆಹರುನ್ನಿಸಾ ರೆಹಮಾನ್ ನಿರ್ಮಾಣದ ಆರ್.ಶೇಷಾದ್ರಿ ಹಾಗೂ ರಾಧಾ ಭಾರತಿ ನಿರ್ದೇಶನದ ಯಜಮಾನ ಇದೇ ವಾರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ನೂರ ಮೂವತ್ತಕ್ಕೂ ಹೆಚ್ಚು ಕಡೆ ಶತದಿನೋತ್ಸವ ಆಚರಿಸಿ, ಹಲವು ಕಡೆಗಳಲ್ಲಿ ಒಂದು ವರ್ಷಗಳ ಕಾಲ ಈ ಸಿನಿಮಾ ಪ್ರದರ್ಶನ ಕಂಡಿದೆ. ಇಪ್ಪತ್ತೈದು ವರ್ಷಗಳ ಹಿಂದೆಯೇ ಮೂವತ್ತೈದು ಕೋಟಿ ಕಲೆಕ್ಷನ್ ಮಾಡಿ ದಾಖಲೆ ಬರೆದಿದೆ. ಈಗ ಯಜಮಾನ ಚಿತ್ರವನ್ನು ಮರು ಬಿಡುಗಡೆ ಮಾಡುತ್ತಿರುವುದು ಖುಷಿಕೊಟ್ಟಿದೆ ಎಂದು ನಿರ್ಮಾಪಕ ಮೆಹರುನ್ನಿಸಾ ರೆಹಮಾನ್ ಹೇಳಿದರು.

ಯಜಮಾನ ಚಿತ್ರವನ್ನು ಡಿಐ ಬಳಸಿ 4ಕೆ ಡಿಜಿಟಲ್ ಪ್ರೊಜೆಕ್ಷನ್‌ಗೆ ತಯಾರು ಮಾಡಲಾಗಿದೆ. ಇಂದಿನ ಆಧುನಿಕ ತಂತ್ರಜ್ಞಾನಗಳನ್ನೊಳಗೊಂಡಿರುವ ಚಿತ್ರಮಂದಿರಗಳಲ್ಲಿ ವೀಕ್ಷಿಸಬಹುದು. ಇನ್ನು, ಮೋನೊ ಟ್ರ್ಯಾಕ್‌ನಲ್ಲಿದ್ದ ಈ ಚಿತ್ರದ ಕಲಾವಿದರ ಧ್ವನಿಗಳನ್ನು ಡಿಜಿಟಲ್ ಸೌಂಡ್‌ಗೆ ವರ್ಗಾಯಿಸಲಾಗಿದೆ. ಹಾಡುಗಳಿಗೂ ಸಹ ಇದೇ ರೀತಿ ನೂತನ ತಂತ್ರಜ್ಞಾನ ಅಳವಡಿಸಲಾಗಿದೆ ಎಂದು ಸಂಗೀತ ನಿರ್ದೇಶಕ ರಾಜೇಶ್ ರಾಮನಾಥ್ ತಿಳಿಸಿದರು. ಚಿತ್ರದಲ್ಲಿ ನಟಿಸಿರುವ ಶಶಿಕುಮಾರ್, ಅಭಿಜಿತ್, ರಮೇಶ್ ಭಟ್, ಟೆನ್ನಿಸ್ ಕೃಷ್ಣ ಮುಂತಾದವರು ಚಿತ್ರ ಮರು ಬಿಡುಗಡೆಯಾಗುತ್ತಿರುವುದಕ್ಕೆ ಸಂಸತ ವ್ಯಕ್ತಪಡಿಸಿದರು.

ಬಾಹುಬಲಿಯ ಶಿವಗಾಮಿ ಯಾರಿಗೆ ಗೊತ್ತಿಲ್ಲ, ಶಿವಗಾಮಿ ಎಂಬ ಹೆಸರು ಕೇಳಿದಾಕ್ಷಣ ನಮ್ಮ ಮುಂದೆ ರಮ್ಯಾ ಕೃಷ್ಣ ಪ್ರತ್ಯಕ್ಷವಾಗುತ್ತಾರೆ. ಆ ಪಾತ್ರ ಅಷ್ಟರ ಮಟ್ಟಿಗೆ ಸಿನಿಪ್ರಿಯರ ಮನದಲ್ಲಿ ಉಳಿದಿದೆ. ಗಂಭೀರ ವದನೆ ಶಿವಗಾಮಿ ಈಗ ಹೊಸ ಅವತಾರದಲ್ಲಿ ಪ್ರೇಕ್ಷಕರ ಮುಂದೆ ಬರಲು ಸಿದ್ಧವಾಗಿದ್ದಾರೆ. ಹೌದು, ರಮ್ಯಾ ಕೃಷ್ಣ, ರಾಮ್ ಗೋಪಾಲ್ ವರ್ಮಾ ನಿರ್ದೇಶನದ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಕಾಮಿಡಿ ಹಾರರ್ ಶೈಲಿಯಲ್ಲಿ ಮೂಡಿಬರುತ್ತಿರುವ ಪೊಲೀಸ್ ಸ್ಟೇಷನ್ ಮೇ ಭೂತ್ ಸಿನಿಮಾದಲ್ಲಿ ರಮ್ಯಾ ಕೃಷ್ಣ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಅವರ ಪಾತ್ರದ ಲುಕ್ ರಿಲೀಸ್ ಆಗಿದ್ದು, ಗಮನ ಸೆಳೆಯುತ್ತಿದೆ. ರಮ್ಯಾ ಕೃಷ್ಣ ಗೆಟಪ್ ಸಂಪೂರ್ಣವಾಗಿ ವಿಭಿನ್ನವಾಗಿದೆ. ರಗಡ್ ಆಗಿ ಕಾಣಿಸಿಕೊಂಡಿರುವ ರಮ್ಯಾ, ಕೈಯಲ್ಲಿ ಸಿಗರೇಟ್ ಹಿಡಿದು ನಿಂತಿದ್ದಾರೆ. ರಾಜ್‌ದೂತ್ ಬೈಕ್‌ನಲ್ಲಿ ಕುಳಿತಿರುವ ಅವರ ಲುಕ್ ಇನ್ನೂ ಭಿನ್ನವಾಗಿದ್ದು, ರಮ್ಯಾ ಹೊಸ ಅವತಾರ ನೋಡಿ ಅಭಿಮಾನಿಗಳು ಫಿದಾ ಆಗಿದ್ದಾರೆ. ಪೊಲೀಸ್ ಸ್ಟೇಷನ್ ಮೇ ಭೂತ್‌ನಲ್ಲಿ ಹಾರರ್ ಹೆಚ್ಚಾಗಿ ಬೆರೆತ್ತಿದ್ದು, ಪೊಲೀಸ್ ಸ್ಟೇಷನ್‌ನಲ್ಲಿ ನಡೆಯುವ ಗುಂಡಿನ ದಾಳಿಯ ಬಳಿಕ ತೆರೆದುಕೊಳ್ಳುವ ನಿಗೂಢ ಕಥನ ಇಲ್ಲಿದೆ. ಮನೋಜ್ ಭಾಜಪೇಯಿ, ಜೆನೀಲಿಯಾ ಸೇರಿದಂತೆ ಹಲವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಪೊಲೀಸ್ ಸ್ಟೇಷನ್ ಮೇ ಭೂತ್ ಹಿಂದಿಯಲ್ಲಿ ನಿರ್ಮಾಣವಾಗಿದೆ. ರಾಮ್ ಗೋಪಾಲ್ ವರ್ಮಾ ನಿರ್ದೇಶನದ ಸಿನಿಮಾಗಳು ಎಂದರೆ ಅದು ರಾ ಸ್ಟೈಲ್‌ನಲ್ಲಿ ಮೂಡಿಬಂದಿರುತ್ತದೆ. ಅಂತೆಯೇ ಇಲ್ಲಿಯೂ ರಾ ಶೈಲಿಯ ಮೇಕಿಂಗ್ ಇರುವುದು ಪೋಸ್ಟರ್ ನೋಡಿದರೆ ಸ್ಪಷ್ಟವಾಗುತ್ತದೆ.



ದಿ ಟಾಸ್ಕ್ ಸಿನಿಮಾ ಟೈಟಲ್ ಮೂಲಕವೇ ಗಮನಸೆಳೆದಿದ್ದು, ಟೀಸರ್ ಮೂಲಕ ಕುತೂಹಲ ಹೆಚ್ಚಿಸಿದೆ. ಚಿತ್ರದ ರ್‍ಯಾಪ್ ಸಾಂಗ್ ರಿಲೀಸ್ ಆಗಿದೆ. ನಟ ಧ್ರುವ ಸರ್ಜಾ ಹಾಡು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಸಾಂಗ್ ತುಂಬಾ ಅದ್ಭುತವಾಗಿ ಮೂಡಿಬಂದಿದೆ. ಟಾಸ್ಕ್ ಟೀಸರ್ ನೋಡಿದ್ರೆ, ಇದು ಆ್ಯಕ್ಷನ್ ಥ್ರಿಲ್ಲರ್ ಸಿನಿಮಾ ಅನ್ನಿಸುತ್ತದೆ. ಸಿನಿಮಾ ನೋಡಬೇಕು ಎಂಬ ನಿರೀಕ್ಷೆ ಹುಟ್ಟುಹಾಕುತ್ತದೆ. ನಾನು ಸಿನಿಮಾ ನೋಡಲು ಕಾತರನಾಗಿದ್ದೇನೆ ಎಂದು ಧ್ರುವ ಸರ್ಜಾ ಹೇಳಿದರು. ಸಾಗುವ ದಾರಿಯ ತುಂಬಾ.. ಹಾಡು ರ್‍ಯಾಪ್ ಶೈಲಿಯಲ್ಲಿ ಮೂಡಿಬಂದಿದೆ. ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ ಬರೆದಿದ್ದು, ಜೂಡಾ ಸ್ಯಾಂಡಿ ಸಂಗೀತ ಸಂಯೋಜಿಸಿದ್ದಾರೆ. ರಾಘು ಶಿವಮೊಗ್ಗ, ಚೇತನ್ ನಾಯಕ್ ದನಿಯಲ್ಲಿ ಹಾಡು ಮೂಡಿಬಂದಿದೆ.

ಚೂರಿಕಟ್ಟೆ ಖ್ಯಾತಿಯ ರಾಘು ಶಿವಮೊಗ್ಗ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಭೀಮ ಸಿನಿಮಾ ಖ್ಯಾತಿಯ ಜಯ ಸೂರ್ಯ.ಆರ್.ಅಜಾದ್, ಪೆಂಟಗನ್ ಸಿನಿಮಾ ಖ್ಯಾತಿಯ ಸಾಗರ್ ರಾಮ್ ಹಾಗೂ ಬಾಲ ನಟಿ ಬೇಬಿ ಲಕ್ಷ್ಮಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ರಾಘು ಶಿವಮೊಗ್ಗ ನಿರ್ದೇಶನದ ಜತೆಗೆ ಮುಖ್ಯ ಪಾತ್ರವನ್ನು ಸಹ ನಿರ್ವಹಿಸಿದ್ದಾರೆ.

ಉಳಿದಂತೆ ಅಚ್ಯುತ್ ಕುಮಾರ್, ಶ್ರೀಲಕ್ಷ್ಮೀ, ಗೋಪಾಲಕೃಷ್ಣ ದೇಶಪಾಂಡೆ, ಅರವಿಂದ್ ಕುಪ್ಳಿಕರ್, ಹರಿಣಿ ಶ್ರೀಕಾಂತ್, ಸಂಪತ್ ಮೈತ್ರಿಯಾ, ಬಾಲಾಜಿ ಮನೋಹರ್, ಬಿ.ಎಂ. ಗಿರಿರಾಜ್ ತಾರಾಬಳಗದಲ್ಲಿದ್ದಾರೆ. ಲೋಕಪೂಜ್ಯ ಪಿಕ್ಚರ್ ಹೌಸ್ ಸಂಸ್ಥೆಯಲ್ಲಿ ವಿಜಯ್ ಕುಮಾರ್ ಹಾಗೂ ರಾಮಣ್ಣ ಒಟ್ಟಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ಇದೇ ತಿಂಗಳು ಟಾಸ್ಕ್ ತೆರೆಗೆ ಬರಲಿದೆ.

ಆರ್ ಎಕ್ಸ್ ಸೂರಿ ಮತ್ತು ಭೈರಾದೇವಿ ಚಿತ್ರವನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದ ಶ್ರೀಜೈ ಮತ್ತೊಂದು ಹೊಸ ಚಿತ್ರವನ್ನು ಘೋಷಿಸಿದ್ದಾರೆ. ಈ ಬಾರಿ ಮಾಸ್ ಸ್ಟೋರಿಯನ್ನು ಹೊತ್ತು ಬರುತ್ತಿದ್ದಾರೆ. ಈ ಚಿತ್ರದ ಸ್ಕ್ರಿಪ್ಟ್ ಪೂಜೆ ಸರಳವಾಗಿ ನೆರವೇರಿದೆ. ಶ್ರೀಜೈ ಹೊಸ ಪ್ರಯತ್ನದಲ್ಲಿ ನಾಯಕನಾಗಿ ಸಂದೀಪ್ ನಾಗರಾಜ್ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಸಂದೀಪ್ ಗೂಗ್ಲಿ ಅನಂತು ವರ್ಸಸ್ ನುಸ್ರುತ್, ಪ್ರಭುತ್ವ ಸಿನಿಮಾಗಳಲ್ಲಿ ನಟಿಸಿದ್ದು, ಇದೀಗ ಶ್ರೀಜೈ ಕಥೆಯಲ್ಲಿ ಕಂಪ್ಲೀಟ್ ಮಾಸ್ ಹಾಗೂ ರಗಡ್ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ಪ್ರೊಡಕ್ಷನ್ ನಂಬರ್ 1 ಟೈಟಲ್‌ನಲ್ಲಿ ಚಿತ್ರತಂಡ ಪೋಸ್ಟರ್ ರಿಲೀಸ್ ಮಾಡಿದೆ. ಪೋಸ್ಟರ್ ನೋಡಿದರೆ ಇದು ರೌಡಿಸಂ ಕಥೆ ಎನ್ನುವುದು ತಿಳಿಯುತ್ತದೆ. ರಕ್ತ, ಮಚ್ಚು, ಹಣ, ಹಗ್ಗ ಎಲ್ಲವನ್ನೂ ನೋಡ್ತಿದ್ರೆ ಶ್ರೀಜೈ ರೌಡಿಸಂ ಕಥೆಯನ್ನು ಪ್ರೇಕ್ಷಕರ ಮುಂದಿಡಲು ಸಿದ್ಧವಾಗುತ್ತಿದ್ದಾರೆ. ಡ್ರೀಮ್ ವರ್ಲ್ಡ್ ಸಿನಿಮಾಸ್ ಹಾಗೂ ರಾಧಾಕೃಷ್ಣ ಆರ್ಟ್ಸ್ ಬ್ಯಾನರ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗಲಿದೆ. ಸೋಲೋಮನ್ ಛಾಯಾಗ್ರಹಣದ ಜವಾಬ್ದಾರಿ ಹೊತ್ತಿದ್ದು, ಕೆಜಿಎಫ್ ಸಿನಿಮಾ ಖ್ಯಾತಿಯ ಶ್ರೀಕಾಂತ್ ಸಂಕಲನ ಮಾಡಲಿದ್ದಾರೆ. ಭೈರಾದೇವಿ ಸಿನಿಮಾಗೆ ಸಂಗೀತ ನಿರ್ದೇಶನ ಮಾಡಿದ್ದ ಸೆಂಥಿಲ್ ಪ್ರಶಾಂತ್ ಈ ಚಿತ್ರಕ್ಕೂ ಸಂಗೀತ ಸಂಯೋಜಿಸುತ್ತಿದ್ದಾರೆ.